ಹತ್ತನೇ ವರ್ಷದಲ್ಲಿ

ಸಂವಾದ

ಡಿಸೆಂಬರ್ 2011 ರೂ. 20

ನೆನಪು:
ರಂಗನಾಥ್



ಭ್ರಷ್ಟಾಚಾರ ವಿರೋಧಿ ಠಿಕ್ಕು!
ಕೋಮುವಾದ ಕಿಕ್ಕು!!

ಸಂವಾದ

ಮಾಸ ಪತ್ರಿಕೆ

ಸಂಪುಟ ೧೦ ಸಂಚಿಕೆ ೨
ಡಿಸೆಂಬರ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080-23480278,
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೩
- ಅಂತರಂಗ:
  ಕನ್ನಡ ಅನ್ನ ಕೊಡುವ ಭಾಷೆ
  ಆಗುತ್ತಿಲ್ಲವೇಕೆ? ೦೪
- ಸಂಪಾದಕರೊಂದಿಗೆ ಸಂವಾದ:
  - ಡಾ. ಎಸ್. ನರೇಂದ್ರಕುಮಾರ್ ೦೮
  - ರಘೋತ್ತಮ ಹೊ. ಬ ೧೦
  - ಮಾರುತಿ. ಹೆಚ್ ೧೧
  - ಸನತ್‌ಕುಮಾರ ಬೆಳಗಲಿ ೧೨
- ಭ್ರಷ್ಟಾಚಾರ ವಿರೋಧಿ ಲಿರಿಕ್ಕು,
  ಹಿಂದೂ ಕೋಮುವಾದದ ಕಿರಿಕ್ಕು
  - ಸಂಡೂರು ಕುಮಾರಸ್ವಾಮಿ ೧೪
- ಜಡತ್ವದಿಂದ ಮಸುಕಾದ ನಾಯಕರು!
  - ಬಿ. ಶ್ರೀಪಾದ ಭಟ್ ೧೩



- ಹೆಸರಿಗೆ 'ಭಯೋತ್ಪಾದನೆ ವಿರುದ್ಧ ಸಮರ',
  ನಿಜವಾಗಿ ದಗಲ್ಬಾಜಿ, ಜನರಿಗೆ ಮಂಕುಬೂದಿ?
  - ಪೌಲ್ ಕ್ರೇಗ್ ರಾಬರ್ಟ್ಸ್
    ಅನು: ಸುರೇಶ್ ಭಟ್ ಬಾಕ್ರಬೈಲು ೧೮
- ಕನ್ನಡ ಕನ್ನಡತನ ಕನ್ನಡಿಗರು
  - ನಾ ದಿವಾಕರ ೨೨
- ವ್ಯವಸ್ಥೆಯ ಗರ್ಭದೊಳಗೆ ಲೀನವಾಗುವ
  ಧ್ವನಿಗಳು
  - ರಾಜೇಶ್ ಸಾಲುಮರ ೨೬
- ನಿಷ್ಠುರ ರಾಜಕಾರಣಿ ರಂಗನಾಥ್
  - ಎಂ.ಜಿ. ರಂಗಸ್ವಾಮಿ ೨೮
- ಪರಿಸರ ಸಂರಕ್ಷಣೆ ಯಾರ ಹೊಣೆ?
  - ರವಿ ಯು.ಎಂ ೩೦
- ಉತ್ತರಪ್ರದೇಶದ ನೈಜ ಮಾಯಾಲೋಕ
  - ವಿ.ಆರ್. ಮೌರ್ಯ ೩೨
- ಕಾಲಮಾನ -೧೮
  - ಡಾ. ಮುಜಾಫ್ಫರ್ ಅಸ್ಸಾದಿ ೩೪
- ಬತ್ತದ ಬಯಲು -೧
  - ಡಾ. ಬಿ. ಎಂ. ಪುಟ್ಟಯ್ಯ ೩೮
- ನೋಯುವ ಹಲ್ಲಿಗೆ
  ಹೊರಳುವ ನಾಲಿಗೆ-೨
  - ಡಾ॥ ಎಚ್.ಎಸ್ ಅನುಪಮಾ ೩೮
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/
    ಎಸ್. ಮರಿಸ್ವಾಮಿ ೪೬
- ಮುಲ್ಲಾ ನಸ್ರುದ್ದೀನ್ ಕಥೆಗಳು
  - ಸಂಗ್ರಹ-ಅನು: ಡಾ. ಜೆ ಬಾಲಕೃಷ್ಣ ೫೦

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಹೊಣೆಗೇಡಿಗಳನ್ನು ಎಚ್ಚರಿಸಿದ್ದರಲ್ಲಿ ತಪ್ಪೇನಿದೆ?

ಪ್ರಿಯ ಸಂಪಾದಕರೇ,

ಅಣ್ಣಾ ಹಜಾರೆಯವರು ಸರ್ಕಾರದ ಮತ್ತು ನಮ್ಮ ಪಾರ್ಲಿಮೆಂಟ್ ಸದಸ್ಯರ ಹೊಣೆಗೇಡಿತನದ ವಿರುದ್ಧವಾಗಿ ಹೂಡಿದ ಆಂದೋಲನ ಭಾರತಾದ್ಯಂತ ಜನರನ್ನು ಜಾಗೃತಿಗೊಳಿಸಿದ್ದು ಒಂದು ಒಳ್ಳೆಯ ಬೆಳವಣಿಗೆ. ನಮ್ಮ ಸರ್ಕಾರ, ನಮ್ಮ ಪ್ರತಿನಿಧಿಗಳು ಭ್ರಷ್ಟಾಚಾರ ಚೇಚರಕ್ಕೇರುತ್ತಿದ್ದರೂ ಲೋಕಪಾಲ್ ಮಸೂದೆಯನ್ನು ಲೋಕಸಭೆಯ ಮುಂದೆ ತರಲು ಮೀನ ಮೇಷ ನೋಡುವಾಗ, ಪ್ರಜೆಯಾದವನು ಅಸಹಾಯಕನಂತೆ ಕೈ ಕಟ್ಟಿಕೊಂಡು ಕೂಡಬೇಕೇ. ಇಲ್ಲವೇ ಆ ಹೊಣೆಗೇಡಿ ಪ್ರತಿನಿಧಿಗಳ ವಿರುದ್ಧವಾಗಿ ಸಮರ ಸಾರಬೇಕೇ ಎಂಬುದು ಮುಖ್ಯ ಪ್ರಶ್ನೆ.

ರಾಜ್ಯಾಂಗದ ರೀತ್ಯಾ ಭಾರತೀಯ ಪ್ರಜೆ ತನ್ನ ಚುನಾಯಿತ ಪ್ರತಿನಿಧಿಗಳ ಮೂಲಕ ಆಡಳಿತ ನಡೆಸಲು ಒಪ್ಪಿಕೊಂಡಿರುವಾಗ ಅಣ್ಣಾ ಹಜಾರೆಯವರು ಅವೊಂದು ಜನಲೋಕಪಾಲ್ ಮಸೂದೆಯನ್ನು ಸಿದ್ಧಪಡಿಸಿ ಅದನ್ನು ಸರ್ಕಾರ ನಡೆಸುವವರು ಲೋಕಸಭೆಯ ಮುಂದೆ ಮಂಡಿಸಲು ಒತ್ತಾಯ ತಂದದ್ದು ಸರಿಯೋ ಎಂಬ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ನಮ್ಮ ಸರ್ಕಾರ ಮತ್ತು ನಮ್ಮ ಪ್ರತಿನಿಧಿಗಳು ಈ ಮಸೂದೆಯನ್ನು ತರಲು 40 ವರ್ಷಗಳ ಹಿಂದೆಯೇ ವಿಚಾರ ಮಾಡಿದ್ದರೂ, ಇಂದಿನವರೆಗೂ ಅದನ್ನು ನೆನೆಗುದಿಗೆ ಹಾಕಿದ್ದು ಎಷ್ಟರ ಮಟ್ಟಿಗೆ ಸಮಂಜಸ ಎಂದು ಪ್ರಶ್ನಿಸುವ ಅಧಿಕಾರ ರಾಜ್ಯಾಂಗದತ್ತವಾಗಿ ಪ್ರಜೆಗಿದೆ ಎಂಬುದನ್ನು ಸರ್ಕಾರ ಒಪ್ಪುವಂತೆ ಮಾಡಿದ್ದು ಪ್ರಜಾಪ್ರಭುತ್ವಕ್ಕೆ ಸಂದ ಜಯ ಎಂದು ನಾನು ಭಾವಿಸುತ್ತೇನೆ. ನಾವು ಸ್ವಾತಂತ್ರ್ಯ ಬಂದು 64 ವರ್ಷಗಳೇ ಸಂದರೂ ನಮಗಿಂತಹ ಅಧಿಕಾರವಿದೆ ಎಂಬುದು ನಮಗೆ ತಿಳಿದೇ ಇರಲಿಲ್ಲ. ಅಣ್ಣಾ ಹಜಾರೆಯವರ ಈ ಹೋರಾಟದಿಂದ ನಮಗೆ ಪ್ರಜೆಗಿರುವ ಅಧಿಕಾರದ ಅರಿವಾಯಿತು.

ಪತ್ರಾಗಾರ

ಅಲ್ಲದೆ ನಮ್ಮದು ಕುಂಭಕರ್ಣ ಪ್ರಜಾಪ್ರಭುತ್ವವಾಗಿತ್ತು. ನಾವು 5 ವರ್ಷಕ್ಕೊಮ್ಮೆ ಎದ್ದು ಮತಹಾಕಿ ಮಲಗುತ್ತಿದ್ದೆವು. ಲಂಕಾಪಟ್ಟಣದಲ್ಲಿ ಒಬ್ಬ ಕುಂಭಕರ್ಣನಿದ್ದರೆ, ಭಾರತದ ಮತದಾರರೆಲ್ಲ ಕುಂಭಕರ್ಣರು. ಆಡಳಿತ ನಡೆಸುವವರಿಗೆ ಆಡಳಿತದ ಪಾಂಚ್‌ಸಾಲ್ ಗುತ್ತಿಗೆ ಕೊಟ್ಟು, ಬೇಕಾದ್ದು ಮಾಡಿಕೊಳ್ಳಿ ಎಂದು ಹೇಳಿ ಮತ್ತೆ ಮಲಗುತ್ತಿದ್ದೆವು. ಇದರಿಂದಲೇ ಭ್ರಷ್ಟಾಚಾರ ಹೆಚ್ಚುತ್ತಾ ಹೋಗಿ, ಈಗ ಅದು ಪರಾಕಾಷ್ಟೆ ಮುಟ್ಟಿರುವುದು.

ಅಣ್ಣಾ ಹಜಾರೆ, ಜಯಪ್ರಕಾಶರಂತೆ, ಜನರನ್ನು ಒಮ್ಮೆ ಎಬ್ಬಿಸಿದ್ದಾರೆ. ಈಗ ಜನ ಮತ್ತೆ ಹೊಣೆಗೇಡಿಗಳಾಗಿ ಮಲಗದಂತೆ ಎಚ್ಚರಿಸುವುದು ನಮ್ಮೆಲ್ಲರ ಕೆಲಸ.

ಸರ್ಕಾರದ ಭ್ರಷ್ಟಾಚಾರ ತಡೆಗಟ್ಟುವ ಶಾಸನ ಜಾರಿಗೊಳಿಸಿದ ಮಾತ್ರಕ್ಕೆ ದೇಶದಲ್ಲಿ ಭ್ರಷ್ಟಾಚಾರ ಸಂಪೂರ್ಣವಾಗಿ ತೊಲಗಿಹೋಗುವುದೇ? ಈ ಮಸೂದೆ ಜಾರಿಗೆ ಬಂದ ಮಾತ್ರದಿಂದ ದೇಶದ ಎಲ್ಲ ಸಮಸ್ಯೆಗಳೂ ಪರಿಹಾರವಾಗುವವೇ? ಎಂದು ಪ್ರಶ್ನಿಸಲಾಗುತ್ತಿದೆ. ಬಡತನ, ಶೋಷಣೆ, ಜಾತೀಯತೆ ಇವೆಲ್ಲ ಸಮಸ್ಯೆಗಳೇ ಅಲ್ಲವೇ? ಚುನಾವಣಾ ಪದ್ಧತಿಯಲ್ಲಿ ತೀವ್ರವಾದ ಸುಧಾರಣೆಗಳು ಆಗಬೇಕಲ್ಲವೇ? ದಲಿತರು ದಮನಕ್ಕೀಡಾಗಿರುವುದು ಸಮಸ್ಯೆ ಅಲ್ಲವೇ? ಅಣ್ಣಾ ಹಜಾರೆ ಈ ಪ್ರಶ್ನೆಗಳನ್ನು ತೆಗೆದುಕೊಂಡು ಏಕೆ ಹೋರಾಡುತ್ತಿಲ್ಲ ಎಂದು ಟೀಕಾ ಪ್ರಹಾರಗಳೂ ನೂರಾರು ಕೇಳಿ ಬರುತ್ತಿವೆ.

ಅಣ್ಣಾ ಹಜಾರೆಯವರಿಗೆ ಭ್ರಷ್ಟಾಚಾರ ನಿರ್ಮೂಲನ ಆಗಬೇಕು ಎಂದು ಅನ್ನಿಸಿತು. ಅವರು ಅದನ್ನು ಕೈಗೆತ್ತಿಕೊಂಡರು. ನಮ್ಮ ಇತರೆ ಸಂಘಟನೆಯವರಿಗೆ ತಮಗೆ ಮುಖ್ಯ ಎನಿಸಿದ್ದನ್ನ ಕೈಗೆತ್ತಿಕೊಳ್ಳಲು ಯಾರು ಅಡ್ಡಿಪಡಿಸುತ್ತಿದ್ದಾರೆ? ನಿಮಗೆ ಮುಖ್ಯ ಎನಿಸಿದ್ದನ್ನು ನೀವು ಎತ್ತಿಕೊಂಡು ಜನಸಂಘಟನೆ ಮಾಡಿ ಹೋರಾಟಕ್ಕೆ ಜನರನ್ನೂ ಅಣಿಮಾಡಿ. ಅಣ್ಣಾ ಹಜಾರೆ ಈ ದೇಶದ ಸಮಸ್ಯೆಗಳನ್ನೆಲ್ಲ ತಮ್ಮದಾಗಿಸಿಕೊಳ್ಳುವ, ತಾವೇ ಅವುಗಳನ್ನೆಲ್ಲ ಬಗೆಹರಿಸುವ ಗುತ್ತಿಗೆಯನ್ನು ತೆಗೆದುಕೊಂಡಿಲ್ಲವಲ್ಲಾ?

ಒಂದು ಒಳ್ಳೆಯ ಚಿತ್ರವನ್ನು ಬರೆದಿಟ್ಟು ಇದರಲ್ಲಿ ಇರಬಹುದಾದ ದೋಷಗಳನ್ನು ತಿದ್ದಿ ಎಂದು ಒಂದು ಸಾರ್ವಜನಿಕ ಸ್ಥಳದಲ್ಲಿ ಅದನ್ನು ಇಟ್ಟರಂತೆ. ಆ ದಾರಿಯಲ್ಲಿ ಹೋಗುವ ಅನೇಕರು ಅದನ್ನು ಸುಧಾರಿಸಲು ಹೊರಟು ಕುಂಚವನ್ನು ಚಿತ್ರದ ಮೇಲೆ ಆಡಿಸಿದರಂತೆ. ಸಂಜೆಯ ವೇಳೆಗೆ ಆ ಚಿತ್ರವೇ ಅಳಿಸಿಹೋಗಿ, ಅದು ಬಣ್ಣದ ಮುದ್ದೆಯಾಗಿತ್ತಂತೆ.

ಹಾಗೆ ಬೇರೆ ಬೇರೆ ISOM ನವರು, ಬೇರೆ ಬೇರೆ ಚಳವಳಿಯವರು, ಬೇರೆ ಬೇರೆ ವಿಚಾರಪರರು, ಅಣ್ಣಾ ಹಜಾರೆಯವರ ಚಳವಳಿಯನ್ನು ಭಿನ್ನ ಭಿನ್ನ ರೀತಿಯಲ್ಲಿ ನೋಡಿ, ಗೊಂದಲವನ್ನು ಸೃಷ್ಟಿಸುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ.

ಅಣ್ಣಾ ಹಜಾರೆಯವರಿಗೆ ಅನೇಕ ಬಗೆಯ ಇತಿಮಿತಿ ಇದೆ. ಆದ್ದರಿಂದ ಆ ಪರಿಮಿತಿಯೊಳಗೆ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ನಾವು ಮಾಡಬೇಕಾದ್ದಿಷ್ಟೆ, ಅಣ್ಣಾ ಅವರಿಗೆ ತಮ್ಮ ಚಳವಳಿಯನ್ನು ನಡೆಸಲು ಅವಕಾಶ ಕೊಟ್ಟು ನಮಗೆ ಯಾವುದು ಆದ್ಯತೆಯ ಮೇಲೆ ಆಗಬೇಕು ಎನಿಸುತ್ತದೆಯೋ ಅದನ್ನು ತೆಗೆದುಕೊಂಡು ನಾವು ಕಾರ್ಯ ಪ್ರವೃತ್ತರಾಗೋಣ.

ಅಣ್ಣಾ ಒಂದು ದೊಡ್ಡ ಕೆಲಸ ಮಾಡಿದ್ದಾರೆ. ಭಾರತದ ಎಲ್ಲ ಜನರನ್ನೂ ಜಾಗೃತಿಗೊಳಿಸಿದ್ದಾರೆ. ಈ ಅವಕಾಶವನ್ನು ನಾವೆಲ್ಲ ಸದುಪಯೋಗ ಪಡಿಸಿಕೊಳ್ಳೋಣ. ಜನ ಮತ್ತೆ ನಿದ್ದೆ ಮಾಡುತ್ತಾ ಹೊಣೆಗೇಡಿಗಳಾಗುವುದನ್ನು ತಪ್ಪಿಸೋಣ. ಭಾರತಕ್ಕೆ ಅಂಟಿರುವ ರೋಗಗಳನ್ನು ಒಂದೊಂದಾಗಿ ಪರಿಹರಿಸೋಣ.

ಎಚ್. ಎಸ್. ದೊರೆಸ್ವಾಮಿ
ಬೆಂಗಳೂರು



ನಾಡಿನ ಸಾಕ್ಷಿಪ್ರಜ್ಞೆಯ ಸಂಕೇತ

ಪ್ರಿಯ ಸಂಪಾದಕರೇ,

'ಸಂವಾದ'ಕ್ಕೆ ಹತ್ತು! ನಂಬಲಾಗುತ್ತಿಲ್ಲ. ಆರ್ಥಿಕ ಸಂಕಷ್ಟಗಳಿಗೆ ಸಿಲುಕಿ ಪ್ರಕಟಿಸಲಾಗದೆ ಎಷ್ಟೋ ಕಮರ್ಷಿಯಲ್ ಮತ್ತು ಫ್ಯಾನ್ಸಿ ಪತ್ರಿಕೆಗಳು ನಿಂತಿವೆ. ಮತ್ತಷ್ಟು ಪತ್ರಿಕೆಗಳು ಅವಸಾನದತ್ತ ಸಾಗಿರುವ ಈ ಹೊತ್ತಿನಲ್ಲಿ ಗಂಭೀರ ಸ್ವರೂಪದ 'ಸಂವಾದ' ಹತ್ತನೇ ವರ್ಷಕ್ಕೆ ದಾಪುಗಾಲಿಟ್ಟದ್ದು ಕಡಿಮೆ ಸಾಧನೆಯೇನಲ್ಲ!

ಈ ದಶಕದ ಅವಧಿಯಲ್ಲಿ ನಾಡಿನ ಎಲ್ಲಾ ಪಲ್ಲಟಗಳಿಗೆ ಸಾಕ್ಷಿಯಾಗಿ, ನಾಡಿಗರ ತಲ್ಲಣ-ತಳಮಳಗಳಿಗೆ ಸಂವಾದಿಯಾಗಿ, ಶೋಷಿತರೆಲ್ಲರ ನೋವು ತನ್ನದೇ ಎಂಬಂತೆ ಸತತವಾಗಿ ಪ್ರತಿಕ್ರಿಯಿಸುತ್ತಾ ಬರುತ್ತಿರುವ 'ಸಂವಾದ'ದ ಜನಪರ ನಿಲುವು ಅಭಿನಂದನೀಯ ಹಾಗೂ ಅನುಕರಣೀಯ.

'ಸಂವಾದ'ದಲ್ಲಿ ಪ್ರಕಟಗೊಳ್ಳುವ ಪ್ರತಿಯೊಂದು ಲೇಖನ ಹಾಗೂ ಅಂಕಣ ಬರಹಗಳು ಓದುಗರ ವೈಚಾರಿಕ ಮಟ್ಟವನ್ನು ಎತ್ತರಿಸುವಲ್ಲಿ ಸಫಲವಾಗಿವೆ. ಶೋಷಿತರನ್ನು ಜಾಗೃತಗೊಳಿಸಿ ಹಾಗೂ ತಳಸಮುದಾಯಗಳವರ ಹೋರಾಟಗಳನ್ನು ಬೆಂಬಲಿಸುತ್ತಲೇ, ಹಾದಿ ತಪ್ಪುವ ಆ ಸಮುದಾಯಗಳ ನಾಯಕರ ನಿಲುವನ್ನು ಖಂಡಿಸುವ ಕೆಲಸವನ್ನೂ ಮಾಡುತ್ತಿರುವ ಕಾರ್ಯ ಶ್ಲಾಘನೀಯ.

ಹೊಸ ಸವಾಲುಗಳು ದುತ್ತನೆ ಎದುರಾಗುತ್ತಿರುವ ಈ ಹೊತ್ತಿನಲ್ಲಿ 'ಸಂವಾದ'ದ ಮುಂದಿನ ನಡೆ ಮಹತ್ವದ್ದು. ಜವಾಬ್ದಾರಿಯುತವಾದದ್ದು. ಎಂದಿನಂತೆ ಪ್ರತಿ ತಿಂಗಳು 'ಸಂವಾದ'ದ ನಿರೀಕ್ಷೆಯಲ್ಲಿ...

ಪ್ರಕಾಶಚಂದ್ರ
ಯಲಹಂಕ ಉಪನಗರ,
ಬೆಂಗಳೂರು

ಚಂದಾ ವಿವರ.

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಸಂಪಾದಕೀಯ

ಅಂತರಂಗ

ಇಂದೂಧರ ಹೊನ್ನಾಪುರ

ಅಗತ್ಯವಿರುವಷ್ಟು ವಿದ್ಯಾರ್ಥಿಗಳಿಲ್ಲದ ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರ ರಾಜ್ಯದ ಸಾಂಸ್ಕೃತಿಕ ವಲಯದಲ್ಲಿ ತಲ್ಲಣವನ್ನು ಹುಟ್ಟಿಹಾಕಿದೆ. ಅದಕ್ಕೆ, ಸರ್ಕಾರಿ ಶಾಲೆಗಳನ್ನು ಮುಚ್ಚಿದರೆ ಗ್ರಾಮೀಣ ಬಡ ಮಕ್ಕಳಿಗೆ ಅನ್ಯಾಯವಾಗುತ್ತದೆ ಎಂಬುದು ಒಂದು ಕಾರಣವಾದರೆ, ಹಾಗೆ ಮುಚ್ಚುತ್ತಿರುವ ಎಲ್ಲ ಶಾಲೆಗಳೂ ಕನ್ನಡ ಮಾಧ್ಯಮ ಶಾಲೆಗಳೆಂಬುದು ಮತ್ತೊಂದು ಕಾರಣ.

ಪ್ರಾಥಮಿಕ ಶಿಕ್ಷಣ ನೀಡುವುದು ಸರ್ಕಾರದ ನೇರ ಜವಾಬ್ದಾರಿಯಾದುದರಿಂದ ಮಕ್ಕಳ ಸಂಖ್ಯೆ ಎಷ್ಟೇ ಕಡಿಮೆ ಇದ್ದರೂ ಶಾಲೆಗಳನ್ನು ಮುಚ್ಚುಬಾರದೆಂಬುದು ಒಂದು ವಾದವಾದರೆ, ಖಾಸಗಿ ಶಾಲೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಇಂಥ ಕೆಲಸಕ್ಕೆ ಕೈಹಾಕಿದೆ ಎಂಬುದು ಇನ್ನೊಂದು ಪ್ರಭಲ ವಾದವಾಗಿದೆ. ಕನ್ನಡದ ಎಲ್ಲ ಪ್ರಮುಖ ಸಾಹಿತಿಗಳು, ಚಿಂತಕರು, ಹೊರಾಟಗಾರರು ಈ ಎರಡು ಕಾರಣಗಳನ್ನು ಮೊಂದೊಡ್ಡಿ ಸರ್ಕಾರದ ವಿರುದ್ಧ ಹೋರಾಟಕ್ಕೆ ನಿಂತಿದ್ದಾರೆ. ಮೇಲ್ನೋಟಕ್ಕೆ ಈ ಕಾರಣಗಳು ಸರಿಯಾಗಿ ಕಂಡು ಬಂದರೂ, ಆಳಕ್ಕೆ ಇಳಿಯದೆ ಇದ್ದರೆ ಈ ಸಮಸ್ಯೆಗೆ ಪರಿಹಾರ ಸಿಗುವುದು ಸಾಧ್ಯವೇ ಇಲ್ಲ ಎಂಬುದನ್ನು ನಾವೆಲ್ಲ ಅರ್ಥ ಮಾಡಿಕೊಳ್ಳಬೇಕಾಗಿದೆ. ಸರ್ಕಾರಿ ಕನ್ನಡ ಶಾಲೆಗಳ ಇಂಥ ಸ್ಥಿತಿಗೆ ಕೇವಲ ಸರ್ಕಾರ ಮಾತ್ರ ಕಾರಣವೇ ಅಥವಾ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳೂ ಕಾರಣವೇ ಎಂಬ ಬಗ್ಗೆ ತೀವ್ರವಾಗಿ ಚಿಂತಿಸಬೇಕಾಗಿದೆ. ಹಾಗೆ ಮಾಡಿ, ಅದಕ್ಕೊಂದು ಪರಿಹಾರ ಹುಡುಕಿಕೊಳ್ಳದಿದ್ದರೆ, ಕೇವಲ ಸರ್ಕಾರಿ ಕನ್ನಡ ಶಾಲೆಗಳು ಮಾತ್ರವಲ್ಲ, ಖಾಸಗಿ ಕನ್ನಡ ಶಾಲೆಗಳು ಕೂಡ ಮುಚ್ಚುವ ದಿನ ದೂರ ಇಲ್ಲ.

ಪ್ರಾಥಮಿಕ ಹಾಗೂ ಫ್ರೌಢಶಿಕ್ಷಣದಲ್ಲಿ ಭಾಷಾ ನೀತಿ, ಶಿಕ್ಷಣ ಮಾಧ್ಯಮ, ಪಠ್ಯಕ್ರಮ, ಈ ಎಲ್ಲ ವಿಚಾರಗಳಲ್ಲಿ ಸರ್ಕಾರ ಹಿಂದಿನಿಂದಲೂ ಎಡಬಿಡಂಗಿಯಾಗಿಯೇ ನಡೆದುಕೊಂಡಿದೆ. ಸರ್ಕಾರ ನಡೆಸುವ ಮಂತ್ರಿ, ಶಾಸಕರುಗಳಾಗಲಿ, ಅವರ ಕಾಲಾಳುಗಳಂತೆ ಕೆಲಸ ಮಾಡುವ ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಲಿ ಈ ಬಗೆಗೆ ಯಾವ ಪರಿಜ್ಞಾನವೂ ಇಲ್ಲ. ಮಕ್ಕಳಿಗೆ ಏನು ಬೇಕು ಏನು ಬೇಡ ಅನ್ನುವ ವಿಚಾರದಲ್ಲಿ ಸಹ ವೈಜ್ಞಾನಿಕ ಚಿಂತನೆಗಳು-ಅನುಭವಗಳನ್ನು ಆಧರಿಸುವ ಕ್ರಮ ಇಂದಿಗೂ ಅಸ್ತಿತ್ವದಲ್ಲಿಲ್ಲ.

ಇಡೀ ಶಿಕ್ಷಣ ಇಲಾಖೆ ಸರ್ಕಾರ ಹಾಗೂ ಇತರೆ ವಿವಿಧ ಮೂಲಗಳಿಂದ ಬರುವ ಹಣವನ್ನು ಹೇಗೆ ಬಳಕೆ ಮಾಡಬೇಕೆಂಬುದಕ್ಕೆ ಹೆಚ್ಚು ಗಮನ ಹರಿಸುತ್ತಿದೆ. ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಆರಂಭವಾದ ನಂತರವಂತೂ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ನಿತ್ಯ ಹಬ್ಬ. ಏನೋ ಒಂದು ಕಾರ್ಯಕ್ರಮ, ಅದರ ಜಾರಿಗಾಗಿ ಓಡಾಟ, ಅದಕ್ಕೆ ತಗಲುವ ಖರ್ಚು-ವೆಚ್ಚ, ಬಿಲ್ಲು ಇತ್ಯಾದಿಗಳಲ್ಲಿ ಮುಳುಗಿರುವುದನ್ನು ಬಿಟ್ಟರೆ ಬೇರಾವುದೇ ಕೆಲಸಗಳು ನಡೆಯುತ್ತಿಲ್ಲ.

ಸರ್ಕಾರಿ ಶಾಲೆಗಳ ಶಿಕ್ಷಕರೂ ಇದಕ್ಕೆ ಹೊರತಾಗಿಲ್ಲ. ದಿನ ಬೆಳಗಾದರೆ ಮೀಟಿಂಗು, ಟ್ರೈನಿಂಗ್, ಇಲಾಖೆ ವಹಿಸುವ ಇತರೆ ಕೆಲಸ, ಬಿಇಓ, ಡಿಡಿಪಿಐ ಕಛೇರಿ ಬೇಟಿ ಅಂತ ಓಡಾಡುತ್ತಲೇ ವರ್ಷ ಕಳೆದುಬಿಡುತ್ತಾರೆ. ಮಕ್ಕಳಿಗೆ ಪಾಠವೂ ಇಲ್ಲ. ಪರೀಕ್ಷೆಗಳೂ ಇಲ್ಲ. ಹೀಗಿದ್ದರೂ 1ರಿಂದ 7ನೇ ತರಗತಿವರೆಗೆ ಯಾರನ್ನೂ ಫೇಲ್ ಮಾಡುವಂತಿಲ್ಲ. ನೂರಕ್ಕೆ ನೂರು ಫಲಿತಾಂಶ! ಇನ್ನೂ ಮಕ್ಕಳ ಕಲಿಕೆ ಮಟ್ಟವನ್ನು ತಿಳಿಯುವುದಾದರೂ ಹೇಗೆ? ವಿಚಿತ್ರವೆಂದರೆ ಈಗಲೂ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿಷಯವಾರು ಶಿಕ್ಷಕರು ಇಲ್ಲ. ಗಣಿತ, ವಿಜ್ಞಾನ, ಇಂಗ್ಲಿಷ್ ಹಾಗೂ ಹಿಂದಿ ವಿಷಯಗಳನ್ನು ಬೋಧಿಸಲು ವಿಶೇಷ ಪರಿಣತಿ ಬೇಕಾಗುತ್ತದೆ. ಆದರೆ ಸರ್ಕಾರ ಇತ್ತ ತಲೆಯನ್ನೇ ಕೆಡಿಸಿ ಕೊಂಡಿಲ್ಲ. ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ಪೋಷಕರೂ ಇತ್ತ ಗಮನ ಹರಿಸುವುದಿಲ್ಲವಾದ್ದರಿಂದ ಸಮ



ಕನ್ನಡ ಅನ್ನ ಕೊಡುವ

ಸ್ಲೆಯೇ ಏಳುವುದಿಲ್ಲ! ಇನ್ನು ಶಾಲಾಭಿವೃದ್ಧಿ ಸಮಿತಿ (ಎಸ್.ಡಿ.ಎಂ.ಸಿ) ಕಥೆ ಹೇಗೆ ಹೇಳುವುದು? ಈ ಸಮಿತಿ ಸದಸ್ಯರು, ಶಾಲೆಯ ಅಭಿವೃದ್ಧಿಗಾಗಿ ಬರುವ ಹಣ ಹಂಚಿಕೆ, ಬಿಸಿಯೂಟದ ಲಾಭ, ಇಲ್ಲವೇ ತಮ್ಮ ಮಾತು ಕೇಳದ ಶಿಕ್ಷಕರಿಗೆ ಹೇಗೆ ಕಿರುಕುಳ ನೀಡುವುದೆಂಬ ಚಿಲ್ಲರೆ ವಿಚಾರ ಬಿಟ್ಟು ಬೇರೆ ವಿಚಾರಕ್ಕೆ ತಲೆ ಕೆಡಿಸಿಕೊಳ್ಳುವುದೇ ಇಲ್ಲ. ಅಲ್ಪ ಸ್ವಲ್ಪ ರಾಜಕೀಯ ಸೇರಿದರಂತೂ ಆ ಶಾಲೆಯ ಗತಿ ಹೇಳಲೇಬೇಕಾಗಿಲ್ಲ!

ನಾನು ನನ್ನ ಊರಿನಲ್ಲಿ ಕನ್ನಡ ಮಾಧ್ಯಮದ ಶಾಲೆಯೊಂದನ್ನು ನಡೆಸುತ್ತಿದ್ದೇನೆ. ಪ್ರತಿವರ್ಷ ಅಕ್ಕ-ಪಕ್ಕದ ಶಾಲೆಗಳಲ್ಲಿ ಓದಿದ ಹಲವಾರು ಮಕ್ಕಳು 8ನೇ ತರಗತಿಗೆಂದು ನಮ್ಮ ಶಾಲೆಗೆ ಬರುತ್ತಾರೆ. ಅವರಲ್ಲಿ ಬಹುತೇಕರಿಗೆ ಕನ್ನಡ ವರ್ಣಮಾಲೆ, ಕಾಗುಣಿತ, ಮಗ್ಗಿ, ಇಂಗ್ಲಿಷ್ ಅಕ್ಷರಗಳು ಇತ್ಯಾದಿಗಳ ಕನಿಷ್ಠ ಜ್ಞಾನ ಕೂಡ ಇರುವುದಿಲ್ಲ. ಅವರ 7ನೇ ತರಗತಿ ಅಂಕಪಟ್ಟಿ ನೋಡಿದರೆ ಎಲ್ಲ 60–70ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರುತ್ತಾರೆ. ಅವರೆಲ್ಲ ಹೇಗೆ ಇಷ್ಟು ಅಂಕ ಗಳಿಸುತ್ತಾರೆ ಅನ್ನುವುದೇ ನಿಗೂಢ! ಎಂಟನೇ ತರಗತಿಯ ಮೊದಲರ್ಧ ವರ್ಷ ಇವರಿಗೆಲ್ಲ ವರ್ಣಮಾಲೆ, ಕಾಗುಣಿತ, ಮಗ್ಗಿ ಕಲಿಸುವುದರಲ್ಲೇ ನಮ್ಮ ಶಿಕ್ಷಕರು ಕಳೆಯಬೇಕಾಗುತ್ತದೆ!

ಈ ಅಂಕಗಳ ಮಾಹಾತ್ಮೆ ಬಹಳ ದೊಡ್ಡದೇ ಇದೆ! ಶಾಲಾ ಮಕ್ಕಳು ಓದಿನ ನಡುವೆ ಶಾಲೆ ಬಿಡುವುದನ್ನು ತಪ್ಪಿಸಲು (ಫಂಡಿಂಗ್ ಏಜೆನ್ಸಿಗಳನ್ನು ತೃಪ್ತಿ ಪಡಿಸಲು ನೀಡಬೇಕಾದ ಅಂಕಿ-ಅಂಶಕ್ಕಾಗಿ) ಸರ್ಕಾರ ಎಲ್ಲರನ್ನೂ ಪಾಸು ಮಾಡುವ ಕ್ರಮಕ್ಕೆ ಮುಂದಾಗಿದ್ದರೆ, ಡಿ.ಎಡ್, ಬಿ.ಎಡ್‌ಗಳಲ್ಲಿ ಭಾವಿ ಶಿಕ್ಷಕರು ಪಡೆಯುವ ಅಂಕಗಳನ್ನು ನೋಡಿದರೆ ಮತ್ತಷ್ಟು ದಿಗ್ಭ್ರಮೆಯಾಗುತ್ತದೆ. ಕಳೆದ ವರ್ಷ ನಮ್ಮ ಶಾಲೆಯಲ್ಲಿ ಶಿಕ್ಷಕರು ಬೇಕೆಂದು ಜಾಹಿರಾತು ನೀಡಿದ್ದೆವು. ಸುಮಾರು ನಾನೂರಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು. ಸಂದರ್ಶನಕ್ಕೆ ನಾವು ಮೂರು ಮಾನದಂಡಗಳನ್ನು ನಿಗಧಿಪಡಿಸಿದ್ದೆವು. ಅದರಲ್ಲಿ ಮೊದಲನೆಯದು ಅವರು ಸಂಬಂಧಿಸಿದ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳು, ಎರಡನೆಯದು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ತಲಾ ಎರಡು ಪ್ಯಾರಗಳ ಡಿಕ್ಟೇಷನ್ ಮತ್ತು ಮೂರನೆಯದು ತಲಾ ಹದಿನೈದು ನಿಮಿಷಗಳ ಪಾಠ ಮಾಡುವ ಪ್ರಾತ್ಯಕ್ಷಿಕೆ.

ಸಂದರ್ಶನಕ್ಕೆ ಹಾಜರಾದವರಲ್ಲಿ ಶೇ. 90ಕ್ಕೂ ಹೆಚ್ಚು ಅಭ್ಯರ್ಥಿಗಳು ಡಿ.ಎಡ್ ಮತ್ತು ಬಿ.ಎಡ್‌ಗಳಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿದ್ದರೂ ಡಿಕ್ಟೇಷನ್‌ನಲ್ಲಿ ಯಾರೂ ಶೇ.30–40ನ್ನು ದಾಟಲಿಲ್ಲ. ಕೆಲವರಂತೂ ಒಂದೇ ಒಂದು ವಾಕ್ಯವನ್ನು ಸಹ ತಪ್ಪಿಲ್ಲದೆ ಬರೆದಿರಲಿಲ್ಲ. ಪ್ರಾತ್ಯಕ್ಷಿಕೆಯಲ್ಲೂ ಬೆರಳೆಣಿಕೆಯ ಕೆಲವರನ್ನು ಬಿಟ್ಟರೆ ಉಳಿದವರಾರೂ ಶೇ.50ರ ಗಡಿಯನ್ನು ದಾಟಲೇ ಇಲ್ಲ. ಇವರೆಲ್ಲ ಸರ್ಕಾರಿ ಮಾನ ದಂಡದಲ್ಲಿ ಪ್ರತಿಭಾವಂತರು! ಅತ್ಯಂತ ಹೆಚ್ಚು ಅಂಕ ಪಡೆದವರು. ಸರ್ಕಾರಿ ಶಾಲೆಗಳಲ್ಲಿ ಖಂಡಿತಾ ಇವರಿಗೆಲ್ಲ ಕೆಲಸ ಸಿಕ್ಕೇ ಸಿಗುತ್ತದೆ. ಇವರೆಲ್ಲ ಹೇಗೆ ಡಿ.ಎಡ್, ಬಿ.ಎಡ್‌ನಲ್ಲಿ 80–90 ಅಂಕ ಪಡೆದರು? ಯಾವ ಮಾನದಂಡ ಬಳಸಿ ಇವರಿಗೆ ಇಷ್ಟು ಅಂಕಗಳನ್ನು ನೀಡಲಾಯಿತು? ಇದಕ್ಕೆ ಉತ್ತರಿಸಬೇಕಾದವರು ಯಾರು?

> **ಇಡೀ ರಾಜ್ಯದಲ್ಲಿ ಬೆರಳೆಣಿಕೆಯ ಕೆಲವೇ ಕೆಲವು ಸರ್ಕಾರಿ ಶಾಲೆಗಳ ಹೊರತಾಗಿ, ಉಳಿದೆಲ್ಲಾ ಸರ್ಕಾರಿ ಶಾಲೆಗಳ ಸ್ಥಿತಿಯನ್ನು ನೆನೆದರೇ ನಾಚಿಕೆಯಾಗುತ್ತದೆ. ಶಾಲೆಗಳಲ್ಲಿ ಮಕ್ಕಳ ಕೊರತೆಯಾಗಬಾರದೆಂದು ಸರ್ಕಾರ ಹಲವು ಸೌಲಭ್ಯಗಳನ್ನು ನೀಡುತ್ತಲೇ ಇದೆ. ಸುಸಜ್ಜಿತ ಕಟ್ಟಡ, ಬಟ್ಟೆ, ಪುಸ್ತಕ, ಬಿಸಿಯೂಟ, ಸೈಕಲ್, ಹೀಗೆ ಎಲ್ಲವನ್ನೂ ಉಚಿತವಾಗಿ ನೀಡುತ್ತಿದೆ. ಆದರೂ ಮಕ್ಕಳೇಕೆ ಸರ್ಕಾರಿ ಶಾಲೆಗೆ ಹೋಗುತ್ತಿಲ್ಲ. ಕೂಲಿಮಾಡುವ ಪೋಷಕರೂ ಸಹ ಇಂಗ್ಲಿಷ್ ಶಾಲೆಗೆ ಮಕ್ಕಳನ್ನು ಯಾಕೆ ಕಳುಹಿಸುತ್ತಾರೆ?**

ಇದು ಕೇವಲ ಸರ್ಕಾರಕ್ಕೆ ಕೇಳಬೇಕಾದ ಪ್ರಶ್ನೆಯೇ? ನನಗೆ ತಿಳಿದಿರುವಂತೆ ಬಹುತೇಕ ಡಿ.ಎಡ್ ಮತ್ತು ಬಿ.ಎಡ್ ಕಾಲೇಜುಗಳಲ್ಲಿ ಹಣ ಕೊಟ್ಟು ಅಂಕಗಳನ್ನು ಪಡೆಯುತ್ತಾರೆ! ಪ್ರವೇಶದ ಸಂದರ್ಭದಲ್ಲೇ ಇಷ್ಟು ಅಂಕಗಳಿಗೆ ಇಷ್ಟು ಹಣ ಎಂದು ನಿಗಧಿಯಾಗಿರುತ್ತದೆ ಎಂಬ ಮಾತುಗಳೂ ಇವೆ. ಹಾಗಾಗಿಯೇ ಪಿ.ಯು.ಸಿ, ಡಿಗ್ರಿಗಳಲ್ಲಿ 40–50ರ ಆಸು ಪಾಸಿನಲ್ಲಿದ್ದವರು ಡಿ.ಎಡ್ ಮತ್ತು ಬಿ.ಎಡ್‌ಗಳಲ್ಲಿ 80–90ಕ್ಕೆ ಏರಿರುತ್ತಾರೆ!

ಇಡೀ ರಾಜ್ಯದಲ್ಲಿ ಬೆರಳೆಣಿಕೆಯ ಕೆಲವೇ ಕೆಲವು ಸರ್ಕಾರಿ ಶಾಲೆಗಳ ಹೊರತಾಗಿ, ಉಳಿದೆಲ್ಲಾ ಸರ್ಕಾರಿ ಶಾಲೆಗಳ ಸ್ಥಿತಿಯನ್ನು ನೆನೆದರೇ ನಾಚಿಕೆಯಾಗುತ್ತದೆ. ಬಹುತೇಕ ಶಾಲೆಗಳಲ್ಲಿ ಸಾಕಷ್ಟು ಸೌಲಭ್ಯಗಳೂ ಇವೆ. ಶಾಲೆಗಳಲ್ಲಿ ಮಕ್ಕಳ ಕೊರತೆಯಾಗಬಾರದೆಂದು ಸರ್ಕಾರ ಹಲವು ಸೌಲಭ್ಯಗಳನ್ನು ನೀಡುತ್ತಲೇ ಇದೆ. ಸುಸಜ್ಜಿತ ಕಟ್ಟಡ, ಬಟ್ಟೆ, ಪುಸ್ತಕ, ಬಿಸಿಯೂಟ, ಸೈಕಲ್, ಹೀಗೆ ಎಲ್ಲವನ್ನೂ ಉಚಿತವಾಗಿ ನೀಡುತ್ತಿದೆ. ಆದರೂ ಮಕ್ಕಳೇಕೆ ಸರ್ಕಾರಿ ಶಾಲೆಗೆ ಹೋಗುತ್ತಿಲ್ಲ. ಕೂಲಿಮಾಡುವ ಪೋಷಕರೂ ಸಹ ಇಂಗ್ಲಿಷ್ ಶಾಲೆಗೆ ಮಕ್ಕಳನ್ನು ಯಾಕೆ ಕಳುಹಿಸುತ್ತಾರೆ?

ಒಂದು ಮುಖ್ಯ ಸಂಗತಿಯನ್ನಿಲ್ಲಿ ಅರ್ಥಮಾಡಿಕೊಳ್ಳಬೇಕು. ಇಂದು ಸರ್ಕಾರಿ ಕನ್ನಡ ಶಾಲೆಗಳು ಮುಚ್ಚುತ್ತಿವೆ. ಇನ್ನು ಕೆಲವೇ ವರ್ಷಗಳಲ್ಲಿ ಖಾಸಗಿ ಕನ್ನಡ ಶಾಲೆಗಳು ಕೂಡ ಮುಚ್ಚುವ ಎಲ್ಲ ಸೂಚನೆಗಳು ಇವೆ. 1994ರಲ್ಲಿ ಆರಂಭಿಸಲಾದ ನಮ್ಮ ಶಾಲೆ ಇಡೀ ಜಿಲ್ಲೆಯ ಉತ್ತಮ ಶಾಲೆಗಳಲ್ಲಿ ಒಂದಾಗಿದ್ದು SSLCಯಲ್ಲಿ 100ಕ್ಕೆ 100 ಫಲಿತಾಂಶ ಹೊಂದಿದೆ. ಶಿಕ್ಷಣ ಇಲಾಖೆಯಿಂದ ತಾಲ್ಲೂಕಿನ ಅತ್ಯುತ್ತಮ ಶಾಲೆ ಎಂದು ಪ್ರಶಸ್ತಿಯನ್ನು ಪಡೆದಿದೆ. ಕಳೆದ ಮೂರ್‍ನಾಲ್ಕು ವರ್ಷಗಳ ಹಿಂದಿನವರೆಗೂ ಸುಮಾರು ಆರುನೂರು ಮಕ್ಕಳಿದ್ದರು. ಈಗ ಮಕ್ಕಳ ಸಂಖ್ಯೆ ಐದು ನೂರಕ್ಕೆ ಇಳಿದಿದೆ. ಯಾಕೆ ಹೀಗಾಗಿರಬಹುದೆಂದು ನಮ್ಮ ನೆರೆಹೊರೆಯ ಹಳ್ಳಿಗಳಲ್ಲಿ ಸಮೀಕ್ಷೆ ನಡೆಸಿದೆವು. ಗೊತ್ತಾದ ವಿಚಾರವೆಂದರೆ, ನಮ್ಮ ಊರಿನ ಸುತ್ತಮುತ್ತ ಸುಮಾರು 15–20 ಕಿ.ಮೀ ಅಂತರದಲ್ಲಿ ಸುಮಾರು ಐದಾರು ಖಾಸಗಿ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಆರಂಭವಾಗಿವೆ. ಅವುಗಳಲ್ಲಿ ಒಂದನ್ನು ಬಿಟ್ಟರೆ ಉಳಿದೆಲ್ಲ ಕೇಂದ್ರೀಯ ಪಠ್ಯಕ್ರಮವನ್ನು ಹೊಂದಿವೆ. ಆ ಎಲ್ಲಾ ಶಾಲೆಗಳೂ ಹಳ್ಳಿ ಹಳ್ಳಿಗಳಿಗೆ ಬಸ್‌ಗಳನ್ನು ಓಡಿಸಿ ಮಕ್ಕಳನ್ನ ಸೆಳೆದುಕೊಳ್ಳುತ್ತಿವೆ. ಪೋಷಕರ ಇಂಗ್ಲಿಷ್ ಮೋಹ ಉತ್ತಮ ಗುಣಮಟ್ಟದ ಖಾಸಗಿ ಕನ್ನಡ ಶಾಲೆಗಳನ್ನು ಸಹ ತಿರಸ್ಕರಿಸುವಂತೆ ಮಾಡುತ್ತಿದೆ. ಗುಣಮಟ್ಟದ ಕೊರತೆಯಿಂದ ಮಾತ್ರ ಸರ್ಕಾರಿ ಕನ್ನಡ ಶಾಲೆಗಳಿಗೆ ಮಕ್ಕಳು ಸೇರುತ್ತಿಲ್ಲ ಎನ್ನುವುದಾದರೆ, ಗುಣಮಟ್ಟ ಉತ್ತಮವಾಗಿರುವ ಖಾಸಗಿ ಕನ್ನಡ ಶಾಲೆಗಳಿಂದಲೂ ಯಾಕೆ ಮಕ್ಕಳು ವಿಮುಖರಾಗುತ್ತಿದ್ದಾರೆ?

ಸರ್ಕಾರದ ದುರುದ್ದೇಶ ಇಲ್ಲಿ ಎದ್ದು ಕಾಣುತ್ತದೆ. ರಾಜ್ಯದ ಪಠ್ಯಕ್ರಮದಲ್ಲಿ ಆರಂಭವಾಗುವ ಶಾಲೆಗಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಅನುಮತಿ ನಿರಾಕರಿಸುವ ಸರ್ಕಾರ ಇಂಗ್ಲಿಷ್ ಮಾಧ್ಯಮದ ಕೇಂದ್ರೀಯ ಪಠ್ಯಕ್ರಮದ ಶಾಲೆ ತೆರೆಯಲು ನಿರಂತರವಾಗಿ 'ನಿರಾಕ್ಷೇಪಣಾ ಪತ್ರ' ನೀಡುತ್ತಾ ಬಂದಿದೆ. ಈಗಲೂ ನೀಡುತ್ತಿದೆ. ಹೀಗೆ 'ನಿರಾಕ್ಷೇಪಣಾ ಪತ್ರ' ನೀಡುವ ಮುನ್ನ ಇಂಥ ಶಾಲೆಯೊಂದು, ಅದನ್ನು ಆರಂಭಿಸಬೇಕೆಂದಿರುವ ಪ್ರದೇಶದಲ್ಲಿ ಬೇಕೆ ಬೇಡವೇ ಎಂದು ತಿಳಿದುಕೊಳ್ಳುವ ಕನಿಷ್ಟ ಕಾಳಜಿಯನ್ನೂ ತೋರುತ್ತಿಲ್ಲ.

ಕೇಂದ್ರೀಯ ಪಠ್ಯಕ್ರಮದ ಶಾಲೆಗಳು ಅಗತ್ಯವಾಗಿರುವುದು ಕೇಂದ್ರ ಸರ್ಕಾರಿ ನೌಕರರ ಮಕ್ಕಳಿಗೆ ಮಾತ್ರ. ಯಾಕೆಂದರೆ ಕೇಂದ್ರ ಸರ್ಕಾರಿ ನೌಕರರ ಮಕ್ಕಳಿಗೆ ರಾಜ್ಯಗಳಿಂದ ರಾಜ್ಯಗಳಿಗೆ ವರ್ಗಾವಣೆ ಇರುವುದರಿಂದ ಇಂಥ ಶಾಲೆಗಳ ಅಗತ್ಯವಿದೆ. ಇಂಥ ಶಾಲೆಗಳನ್ನು ಕೇಂದ್ರ ಸರ್ಕಾರವೇ ಪ್ರತೀ ರಾಜ್ಯದಲ್ಲಿ ಈಗಾಗಲೇ ನಡೆಸುತ್ತಿದೆ. ಖಾಸಗಿಯವರು ಇಂಥ ಶಾಲೆಯೊಂದನ್ನು ಆರಂಭಿಸುವುದಕ್ಕೆ ಆಯಾ ರಾಜ್ಯಗಳಿಂದ ಬೇಕಿರುವುದು ಕೇವಲ 'ನಿರಾಕ್ಷೇಪಣಾ ಪತ್ರ' ಮಾತ್ರ. 'ನಿರಾಕ್ಷೇಪಣಾ ಪತ್ರ' ಕೇಳಿದಾಗ ರಾಜ್ಯ ಸರ್ಕಾರ ಕನಿಷ್ಟ ಆ ಪ್ರದೇಶದಲ್ಲಿರುವ ಕೇಂದ್ರ ಸರ್ಕಾರಿ ನೌಕರರ ಸಂಖ್ಯೆ ಎಷ್ಟು? ಅವರ ಮಕ್ಕಳಿಗೆ, ಈಗಿರುವ ಕೇಂದ್ರ ಸರ್ಕಾರವೇ ನಡೆಸುತ್ತಿರುವ ಕೇಂದ್ರೀಯ ಶಾಲೆಗಳು ಸಾಕಾಗುವುದಿಲ್ಲವೆ? ಅವುಗಳು ಸಾಕಾದರೆ ಹೊಸ ಶಾಲೆಗೆ 'ನಿರಾಕ್ಷೇಪಣಾ ಪತ್ರ' ನೀಡುವುದಿಲ್ಲ ಎಂದು ಹೇಳುವ ಇಚ್ಛಾಶಕ್ತಿ ಸರ್ಕಾರಕ್ಕೆ ಬೇಕಾಗುತ್ತದೆ.

ದುರಂತವೆಂದರೆ ಸರ್ಕಾರದ ಅಧಿಕಾರಿಗಳೇ ಹೀಗೆ ಕೇಂದ್ರೀಯ ಪಠ್ಯಕ್ರಮದ ಇಂಗ್ಲಿಷ್ ಶಾಲೆಗಳಿಗೆ ಬೆಂಬಲವಾಗಿ ನಿಂತಿದ್ದಾರೆ. ಹಾಗಾಗಿ ರಾಜ್ಯಾದ್ಯಂತ ಹಳ್ಳಿ ಹಳ್ಳಿಗಳಲ್ಲಿ ಈಗ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಹುಟ್ಟಿಕೊಳ್ಳುತ್ತಿವೆ. ಒಂದುಕಡೆ ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಅನುಮತಿ ನಿರಾಕರಿಸುವ ಸರ್ಕಾರ ಮತ್ತೊಂದು ಕಡೆ ಕೇಂದ್ರೀಯ ಶಾಲೆಗಳಿಗೆ ಬೇಕಾಬಿಟ್ಟಿ 'ನಿರಾಕ್ಷೇಪಣಾ ಪತ್ರ' ನೀಡುವ ಮೂಲಕ ನಾಟಕವಾಡುತ್ತಿದೆ. ಸರ್ಕಾರದ ಇಂಥ ನಾಟಕವನ್ನು ನಮ್ಮ ಹೋರಾಟಗಾರರು ಕಂಡೂ ಸುಮ್ಮನಾಗುತ್ತಿದ್ದಾರೆ. ಕಳೆದ ಹತ್ತು-ಹದಿನೈದು ವರ್ಷಗಳಿಂದ ಆರಂಭವಾಗಿರುವ ಇಂಥ ಶಾಲೆಗಳನ್ನು ಮುಚ್ಚಿಸದಿದ್ದರೆ ಕನ್ನಡ ಶಾಲೆಗಳು, ಅವು ಸರ್ಕಾರದ್ದಾಗಲಿ-ಖಾಸಗಿಯದ್ದಾಗಲಿ ಉಳಿಯಲು ಸಾಧ್ಯವೇ ಇಲ್ಲ.

ಭಾಷೆ ಆಗುತ್ತಿಲ್ಲವೇಕೆ?

ರಾಜ್ಯದಲ್ಲಿ 1986ರ ನಂತರ ಆರಂಭವಾದ ಎಲ್ಲ ಖಾಸಗಿ ಪ್ರಾಥಮಿಕ ಶಾಲೆಗಳೂ ಕಡ್ಡಾಯವಾಗಿ ಕನ್ನಡ ಮಾಧ್ಯಮದಲ್ಲೇ ಪಾಠ ಮಾಡಬೇಕು. ಹಾಗೆಂದು ಸರ್ಕಾರ ಮುಚ್ಚಳಿಕೆ ಬರೆಸಿಕೊಂಡು ಶಾಲೆಗಳನ್ನು ತೆರೆಯಲು ಖಾಸಗಿಯವರಿಗೆ ಅನುಮತಿ ನೀಡಿದೆ. ಆದರೆ ಕೇವಲ ಬೆರಳೆಣಿಕೆಯಷ್ಟು ಶಾಲೆಗಳ ಹೊರತಾಗಿ, ಎಲ್ಲ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲೇ ಬೋಧಿಸಲಾಗುತ್ತಿದೆ. ಸರ್ಕಾರಕ್ಕೆ ಅದನ್ನು ತಡೆಯುವ ಇಚ್ಛೆಯಾಗಲಿ, ಶಕ್ತಿಯಾಗಲಿ ಇಲ್ಲವೇ ಇಲ್ಲ. ಆ ಶಾಲೆಗಳಿಗೆ ಕಾನೂನಿನ ಆಸರೆ ಸಿಕ್ಕಿದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಮಾತ್ರ ಕನ್ನಡ ಮಾಧ್ಯಮದಲ್ಲೇ ಬೋಧಿಸಲಾಗುತ್ತಿದೆ. ಅದೂ ಅರೆ ಬರೆ ಪಾಠ. ಶಿಕ್ಷಕರು ಬಂದರೆ ಬಂದರು, ಇಲ್ಲದಿದ್ದರೆ ಇಲ್ಲ. ಮೊದಲೇ ಇಂಗ್ಲಿಷ್ ಆಸೆಗೆ ಬಿದ್ದಿರುವ ಪೋಷಕರು ಇಂಥ ಸ್ಥಿತಿಯಲ್ಲಿ ತಮ್ಮ ಮಕ್ಕಳನ್ನು ಯಾಕಾಗಿ ಸರ್ಕಾರಿ ಶಾಲೆಗಳಿಗೆ ಕಳುಹಿಸುತ್ತಾರೆ.

ಇಲ್ಲಿ ಮತ್ತೊಂದು ವಿಚಾರ ಕೂಡ ಮುಖ್ಯವಾಗುತ್ತದೆ. ಪ್ರಸ್ತುತ ಸರ್ಕಾರ ಶಾಲೆಗಳನ್ನು ಆರಂಭಿಸಲು ಅನುಸರಿಸುತ್ತಿರುವ ನೀತಿಯೇ ವಿರೋಧಾಭಾಸಗಳಿಂದ ಕೂಡಿದೆ. ಒಂದು ಪ್ರದೇಶದಲ್ಲಿ ಶಾಲೆ ಆರಂಭಿಸಲು ಹಿಂದಿನಿಂದಲೂ ಅನುಸರಿಸುತ್ತಿರುವ ಕ್ರಮ ಅಲ್ಲಿನ ಮಕ್ಕಳ ಸಂಖ್ಯೆಯನ್ನು ಅಧರಿಸಿದ್ದಲ್ಲ. ರಾಜಕೀಯ ಕಾರಣಕಾಗಿಯೋ ಅಥವಾ ವಿದೇಶಿ ಸಂಸ್ಥೆಗಳ ಹಣಕಾಸಿನ ಲಾಭ ಪಡೆಯುವ ಸಲುವಾಗಿಯೋ ಸರ್ಕಾರ 10–15 ಮನೆಗಳಿ ರುವ ಕುಗ್ರಾಮಗಳಲ್ಲಿ ಸಹ ಶಾಲೆ ತೆರೆದಿದೆ. ಅಂಥವೇ ಊರುಗಳಲ್ಲಿ ರಾಜಕೀಯ ಕಾರಣಗಳಾಗಿ ಖಾಸಗಿ ಶಾಲೆಗಳಿಗೂ ಅನುಮತಿ ನೀಡಿದೆ. ಪ್ರತಿ ಶಾಲೆಯಿಂದ ಶಾಲೆಗೆ ಇಷ್ಟು ಅಂತರ ವಿರಬೇಕೆಂದು ನಿಯಮವಿದ್ದರೂ ಸರ್ಕಾರ ಅದನ್ನು ಪಾಲಿಸುತ್ತಿಲ್ಲ. ಮಕ್ಕಳ ಕೊರತೆಯೇ ಶಾಲೆ ಮುಚ್ಚಲು ಕಾರಣ ಎನ್ನುತ್ತಿರುವ ಸರ್ಕಾರ ಮಕ್ಕಳಿಲ್ಲದ ಊರುಗಳಲ್ಲೇಕೆ ಶಾಲೆ ಆರಂಭಿಸಿತು? ಪ್ರತಿ ತರಗತಿಗಳಿಗೆ ಇಂತಿಷ್ಟು ಮಕ್ಕಳಿರಬೇಕೆಂದು ಕೂಗಿ ಹೇಳುತ್ತಿರುವ ಸರ್ಕಾರಕ್ಕೆ ಹಿಂದೆ ಇದು ತಿಳಿದಿರಲಿಲ್ಲವೇ?

ಆಯಾ ಗ್ರಾಮಗಳ ಜನಸಂಖ್ಯೆ ಆಧರಿಸಿ ಶಾಲೆಗಳನ್ನು ತೆರೆದಿದ್ದರೆ, ಜನ ಸಂಖ್ಯೆ ಕಡಿಮೆ ಇರುವ ಪ್ರದೇಶಗಳಲ್ಲಿ ಹೊಸದಾಗಿ ಶಾಲೆ ತೆರೆಯಲು ಖಾಸಗಿಯವರಿಗೆ ಅವಕಾಶ ಮಾಡಿಕೊಡದೇ ಇದ್ದಿದ್ದರೆ, ಇಂದು ಶಾಲೆ ಮುಚ್ಚುವ ಸ್ಥಿತಿ ಸರ್ಕಾರಕ್ಕೆ ಬರುತ್ತಲೇ ಇರಲಿಲ್ಲ. ಅವಿವೇಕಿ ಸರ್ಕಾರಗಳು ರಾಜಕೀಯ ಲಾಭಕ್ಕಾಗಿ ಎಲ್ಲಂದರಲ್ಲಿ ಶಾಲೆ ತೆರೆಯಲು ಅನುಮತಿ ನೀಡುವ ಮೂಲಕ ಸರ್ಕಾರಿ ಶಾಲೆಗಳನ್ನು ಮುಚ್ಚುವ ಜನವಿರೋಧಿ ಕೃತ್ಯಕ್ಕೆ ಈಗ ಮುಂದಾಗುತ್ತಿವೆ. ಶಾಲೆಗಳನ್ನು ನಡೆಸುವುದು ಲಾಭದಾಯಕ ವ್ಯವಹಾರಕ್ಕಾಗಿ ಅಲ್ಲ. ಅದೊಂದು ಸಾಮಾಜಿಕ ಬದ್ಧತೆ ಅನ್ನುವ ಕನಿಷ್ಠ ಕಾಳಜಿ ಕೂಡ ಸರ್ಕಾರಕ್ಕೆ ಇಲ್ಲ.

ಇದೆಲ್ಲಕ್ಕಿಂತ ಹೆಚ್ಚಾಗಿ ನಾವೆಲ್ಲಾ ಒಪ್ಪಲಿ ಬಿಡಲಿ ಇಂಗ್ಲಿಷ್ ಇಂದು ಪ್ರತಿಯೊಬ್ಬರ ಮೋಹದ ಸರಕಾಗಿದೆ. ಕನ್ನಡ ಅಭಿಮಾನಕ್ಕಾದರೆ, ಇಂಗ್ಲಿಷ್ ಅನ್ನಕ್ಕೆ ಎನ್ನುವ ಭಾವನೆ ಬಹುತೇಕರಲ್ಲಿ ಮನೆ ಮಾಡಿದೆ. ಪ್ರಲೋಭನೆಗೆ ಒಳಗಾಗಿರುವ ಜನರ ಇಂಥ ಮನಃಸ್ಥಿತಿಯನ್ನು ಇಂಗ್ಲಿಷ್ ಶಾಲೆಗಳು ಅಮಾನವೀಯವಾಗಿ ಶೋಷಿಸುತ್ತಿವೆ. ಅದರಲ್ಲೂ ರಾಜ್ಯ ಪಠ್ಯಕ್ರಮಕ್ಕಿಂತ ಕೇಂದ್ರ ಪಠ್ಯಕ್ರಮಕ್ಕೆ ಮೊರೆ ಹೋಗುವವರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗುತ್ತಿದೆ. ಅದೊಂದು ಸಾಮಾಜಿಕ ಮೌಲ್ಯವಾಗುತ್ತಿದೆ. ತನ್ನ ಮಗು

ಪ್ರಸ್ತುತ ಸರ್ಕಾರ ಶಾಲೆಗಳನ್ನು ಆರಂಭಿಸಲು ಅನುಸರಿಸುತ್ತಿರುವ ನೀತಿಯೇ ವಿರೋಧಾಭಾಸಗಳಿಂದ ಕೂಡಿದೆ. ರಾಜಕೀಯ ಕಾರಣಕಾಗಿಯೋ ಅಥವಾ ವಿದೇಶಿ ಸಂಸ್ಥೆಗಳ ಹಣಕಾಸಿನ ಲಾಭ ಪಡೆಯುವ ಸಲುವಾಗಿಯೋ ಸರ್ಕಾರ 10–15 ಮನೆಗಳಿರುವ ಕುಗ್ರಾಮಗಳಲ್ಲಿ ಸಹ ಶಾಲೆ ತೆರೆದಿದೆ. ಅಂಥವೇ ಊರುಗಳಲ್ಲಿ ರಾಜಕೀಯ ಕಾರಣಗಳಾಗಿ ಖಾಸಗಿ ಶಾಲೆಗಳಿಗೂ ಅನುಮತಿ ನೀಡಿದೆ. ಪ್ರತಿ ಶಾಲೆಯಿಂದ ಶಾಲೆಗೆ ಇಷ್ಟು ಅಂತರ ವಿರಬೇಕೆಂದು ನಿಯಮವಿದ್ದರೂ ಸರ್ಕಾರ ಅದನ್ನು ಪಾಲಿಸುತ್ತಿಲ್ಲ.

ಕೇಂದ್ರಿಯ ಪಠ್ಯಕ್ರಮವನ್ನು ಓದುತ್ತಿದೆ ಎಂದು ಹೇಳಿಕೊಳ್ಳುವುದು ಪೋಷಕರ ಘನತೆಯ ವಿಷಯವಾಗಿದೆ. ಕನ್ನಡದ ಬಗ್ಗೆ ಕಾಳಜಿ ತೋರುವ ಬಹುತೇಕರೂ ಗುಟ್ಟಾಗಿ ಇಂಗ್ಲಿಷ್ ಶಾಲೆಗಳಿಗೆ ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ಕಳುಹಿಸುತ್ತಿರುವುದೂ ಈ ಘನತೆಗಾಗಿಯೇ. ತಮ್ಮ ಮಕ್ಕಳನ್ನು ಕೇವಲ ಇಂಜಿನಿಯರ್ ಮತ್ತು ಡಾಕ್ಟರ್‌ಗಳನ್ನಾಗಿ ಮಾತ್ರ ನೋಡಲು ಇಚ್ಚಿಸುವ ಪೋಷಕರಂತೂ ಯಾರು ಏನೇ ಮಾಡಿದರೂ ಕನ್ನಡ ಶಾಲೆಗಳತ್ತ ಮುಖ ಕೂಡ ಮಾಡಲಾರದ ಸ್ಥಿತಿಯನ್ನು ಮುಟ್ಟಿದ್ದಾರೆ.

ಈ ಇಂಗ್ಲಿಷ್‌ನ ಮೋಹ ಮತ್ತು ಡಾಕ್ಟರ್–ಇಂಜಿನಿಯರ್ ದಾಹ ಎಲ್ಲಿಗೆ ಬಂದು ಮುಟ್ಟಿದೆ ಎಂದರೆ, ಇಂದು ಬಹುತೇಕ ಪ್ರೌಢಶಾಲೆಗಳಲ್ಲಿ ಗಣಿತ ಮತ್ತು ವಿಜ್ಞಾನವನ್ನು ಬೋಧಿಸುವ ಶಿಕ್ಷಕರೇ ಇಲ್ಲದಂತಾಗಿದೆ. ಪಿಯುಸಿ ನಂತರ ಬಹುತೇಕ ಎಲ್ಲ ಮಕ್ಕಳೂ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಶಿಕ್ಷಣಕ್ಕೆ ಹೋಗುವುದರಿಂದ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಬಿಎಸ್‌ಸಿ, ಬಿಇಡಿ ಮಾಡುವ ವಿದ್ಯಾರ್ಥಿಗಳೇ ಸಿಗುತ್ತಿಲ್ಲ. ಇನ್ನು ವಿಜ್ಞಾನ ವಿಷಯಗಳಲ್ಲಿ ಪಿ.ಯು.ಸಿ ಮಾಡಿದ ವಿದ್ಯಾರ್ಥಿಗಳು ಡಿ.ಎಡ್ ಕಲಿಯಲು ಪ್ರಯತ್ನಿಸುವುದೇ ಇಲ್ಲ. ಕೆಲವು ಪ್ರತಿಷ್ಠಿತ ವಿಜ್ಞಾನ ಕಾಲೇಜುಗಳು ವಿದ್ಯಾರ್ಥಿಗಳ ಅಭಾವದಿಂದಾಗಿ ಸಾಮಾನ್ಯ ವಿಜ್ಞಾನದ ಬಿ.ಎಸ್ಸಿ ಕೋರ್ಸ್ ಅನ್ನೇ ಮುಚ್ಚಿಬಿಟ್ಟಿವೆ. ಮುಂದಾಲೋಚನೆ ಇಲ್ಲದ ಸರ್ಕಾರಗಳು ಅನಗತ್ಯವಾಗಿ ಮಂಜೂರು ಮಾಡಿದ ವೈದ್ಯ ಮತ್ತು ತಾಂತ್ರಿಕ ಕಾಲೇಜುಗಳು ಹಾಗೂ ಅವುಗಳಿಗೆ ಜನ ಮಾನಸದಲ್ಲಿ ಸಿಕ್ಕಿದ ಅಪರಿಮಿತ ಪ್ರೋತ್ಸಾಹ ಇಂದು ವಿದ್ಯಾರ್ಥಿಗಳಿಗೆ ಸಾಮಾನ್ಯ ವಿಜ್ಞಾನ ಮತ್ತು ಗಣಿತವನ್ನೂ ನಿರಾಕರಿಸುವ ಮಟ್ಟಕ್ಕೆ ತಂದು ನಿಲ್ಲಿಸಿದೆ. ಲಾಭಕೋರ ಸರ್ಕಾರಗಳು ಹಾಗೂ ಲಾಭಕೋರ ಶಿಕ್ಷಣ ಸಂಸ್ಥೆಗಳು ಮಾಡಿದ ಸಂಚಿಗೆ ಇಡೀ ಪ್ರೌಢ ಶಿಕ್ಷಣವೇ ಬಲಿಯಾಗುವ ಸ್ಥಿತಿ ಇಂದು ನಿರ್ಮಾಣವಾಗಿದೆ.

ವಿಷಾದದ ಸಂಗತಿಯೆಂದರೆ, ಇಡೀ ಶಿಕ್ಷಣ ಕ್ಷೇತ್ರವೇ ಇಂದು ಲಾಭಕೋರರ ಅಡ್ಡೆಯಾಗಿ ಮಾರ್ಪಟ್ಟಿದೆ. ಖಾಸಗಿ ಇಂಗ್ಲಿಷ್ ಶಾಲೆಗಳೂ ಗುಣಮಟ್ಟದ ಹೆಸ ರಿನಲ್ಲಿ ಜನರನ್ನು ಸುಲಿಯುತ್ತಿದ್ದರೆ, ಸರ್ಕಾರಿ ಶಾಲೆಗಳ ಶಿಕ್ಷಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಒಂದುಕಡೆ ಶಿಕ್ಷಣ ಇಲಾಖೆ ಅಧಿಕಾರಿಗಳು ಶಿಕ್ಷಕರನ್ನು ಅವರದಲ್ಲದ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದರೆ, ಮತ್ತೊಂದು ಕಡೆ ಶಿಕ್ಷಕರು ಶಾಲೆಗಳಲ್ಲಿ ಸರಿಯಾಗಿ ಪಾಠ ಮಾಡದೆ ತಮ್ಮದೇ ಖಾಸಗಿ ವ್ಯವಹಾರಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ ಬಹಳಷ್ಟು ಜನ ಶಿಕ್ಷಕರಂತೂ ಹಗಲೂ ರಾತ್ರಿ ಚೀಟಿ–ಬಡ್ಡಿ ವ್ಯವಹಾರದಂಥ ದಂಧೆ ನಡೆಸುತ್ತಾರೆ. ಸರ್ಕಾರಿ ಉದ್ಯೋಗವನ್ನು ಅದೊಂದು 'ಖಾತರಿ ಆದಾಯ ಮೂಲ'ವೆಂದು ಮಾತ್ರ ಪರಿಗಣಿಸಿ 'ಉಪ ಕಸಬು'ಗಳಲ್ಲೇ ಸದಾ ಮಗ್ನರಾಗಿರುತ್ತಾರೆ. ಇದನ್ನು ಸರಿಪಡಿಸುವ, ಶೈಕ್ಷಣಿಕ ವಾತಾವರಣಕ್ಕೆ ಶಿಕ್ಷಕರನ್ನು ಬಗ್ಗಿಸುವ ಕೆಲಸ ಯಾರಿಂದಲೂ ನಡೆಯುತ್ತಿಲ್ಲ. ಸರ್ಕಾರಕ್ಕಂತೂ ಇದು ಬೇಕೇ ಇಲ್ಲ. ಸಾರ್ವಜನಿಕರು ಕೂಡ ಕಂಡೂ ಕಾಣದಂತೆ ಸುಮ್ಮನಾಗುತ್ತಿದ್ದಾರೆ. ಸರ್ಕಾರ ರಚಿಸಿದ ಶಾಲಾಭಿವೃದ್ಧಿ ಸಮಿತಿಗಳಿಗಂತೂ ಇದು ತಮ್ಮ ಕೆಲಸ ಅನ್ನಿಸಿಯೇ ಇಲ್ಲ.

ನಾವು ನೀವೆಲ್ಲ ಒಪ್ಪಲಿ ಬಿಡಲಿ ಒಂದಂತೂ ಸತ್ಯ. ಜನ ಇಂಗ್ಲಿಷ್ ಪರ ಇದ್ದಾರೆ. ಇಂಗ್ಲಿಷ್‌ನ 'ಸಮೂಹ ಸನ್ನಿ' ಎಲ್ಲರ ಮನಸ್ಸಿಗೂ ಇಳಿದು ಬಿಟ್ಟಿದೆ. ಇಂಗ್ಲಿಷ್ ಕಲಿತರೆ ಮಾತ್ರ ನಮ್ಮ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಅವ ರೆಲ್ಲ ಪ್ರಾಮಾಣಿಕವಾಗಿ ನಂಬಿದ್ದಾರೆ. ತಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಸಲು ಅವರು ಎಂಥ ತ್ಯಾಗಕ್ಕೆ ಬೇಕಾದರೂ



ಸಿದ್ಧರಾಗಿದ್ದಾರೆ. ಇಂಥ ಪರಿಸ್ಥಿತಿಯನ್ನು ಕಾಯುತ್ತಿದ್ದ ಸರ್ಕಾರಕ್ಕಂತೂ 'ರೋಗಿ ಬಯಸಿದ್ದೂ ಅದೇ, ವೈದ್ಯರು ಹೇಳಿದ್ದೂ ಅದೇ' ಎಂಬಂತಾಗಿದೆ. ಪೋಷಕರನ್ನು ಕೇವಲ 'ಮತದಾರ'ರೆಂಬ ದೃಷ್ಟಿಕೋನದಿಂದಲೇ ನೋಡುವ ಸರ್ಕಾರ-ಸಾಂಸ್ಕೃತಿಕ ವಲಯದ ವಿರೋಧ ಎಷ್ಟೇ ಇದ್ದರೂ - ಬಹಳ ಜಾಣ್ಮೆಯಿಂದಲೇ ಇಂಗ್ಲಿಷ್ ಶಾಲೆಗಳನ್ನು ಆರಂಭಿಸುತ್ತಿದೆ.

ಇಲ್ಲಿ ಕೆಲವು ಕಹಿ ಸತ್ಯಗಳನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ನಾವುಗಳೆಲ್ಲ ಶಿಕ್ಷಣ ಮಾಧ್ಯಮದ ಬಗ್ಗೆ ಬಹಳ ಭಾವುಕರಾಗಿ ಪ್ರತಿಕ್ರಿಯಿಸುತ್ತಿದ್ದೇವೇನೋ ಎಂಬ ಅಳುಕು ನನ್ನಲ್ಲಿ ಮೂಡಿದೆ. ಕನ್ನಡ ಭಾಷೆಯನ್ನು ಹೇಗಾದರೂ ಉಳಿಸಿ ಬೆಳಸಬೇಕೆಂಬ ಹಂಬಲ ಕೂಡ ಇಂಥದೇ ಭಾವುಕತೆಯಿಂದ ಕೂಡಿದೆ ಎನ್ನಿಸುತ್ತಿದೆ. ಇಡೀ ಜಗತ್ತು ಅತ್ಯಂತ ವ್ಯವಹಾರಿಕ ಹಾಗೂ ಲಾಭದಾಯಕ ದಿಕ್ಕಿನತ್ತ ಧಾಪುಗಾಲು ಹಾಕುತ್ತಿರುವಾಗ ನಮ್ಮ ಜನರನ್ನು ಮಾತ್ರ ಅದರಿಂದ ಹೊರಗಿಡುವ ಚಿಂತನಾಕ್ರಮ ನಾಡಿನ ಸಾಂಸ್ಕೃತಿಕ ವಲಯಗಳಲ್ಲಿ ಪ್ರಬಲವಾಗಿ ವ್ಯಕ್ತವಾಗುತ್ತಿದೆ.

ಈ ಬಗ್ಗೆ ಚಿಂತಿಸಿದಂತೆಲ್ಲ ಯಾಕೆ ಕನ್ನಡಕ್ಕೆ ಅನ್ನ ಕೊಡುವ ಶಕ್ತಿ ದಕ್ಕುತ್ತಿಲ್ಲ ಎಂಬ ಉತ್ತರವಿಲ್ಲದ ಪ್ರಶ್ನೆ ತಲೆ ಎತ್ತತೊಡಗುತ್ತದೆ. ಬೆಂಗಳೂರಿನಲ್ಲಿ ಬೀದಿಯಲ್ಲಿ ತರಕಾರಿ ಮಾರುವವನಿಂದ ಹಿಡಿದು ದೊಡ್ಡ ದೊಡ್ಡ ಮಾಲ್‌ಗಳ ವ್ಯಾಪಾರಿಗಳವರೆಗೆ, ಕಟ್ಟಡವೊಂದರ ಕಾವಲು ಕಾಯುವ ಖಾಸಗಿ ರಕ್ಷಣಾ ಸಿಬ್ಬಂದಿಯಿಂದ ಹಿಡಿದು ಮಾಹಿತಿ-ತಂತ್ರಜ್ಞಾನ ಸಿಬ್ಬಂದಿವರೆಗೆ ಯಾಕೆ ಯಾರಿಗೂ ಕನ್ನಡ ಅನ್ನ ಕೊಡುವ ಭಾಷೆ ಅನ್ನಿಸುತ್ತಿಲ್ಲ? ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದಷ್ಟೂ ಸಾಧ್ಯವಾಗುತ್ತಿಲ್ಲ. ಕನ್ನಡದ ಬಗ್ಗೆ ತಲೆ ಕೆಡಿಸಿಕೊಂಡಿರುವ ನನ್ನ ಗೆಳಯರಿಂದಲೂ ಇದಕ್ಕೆ ಉತ್ತರ ಸಿಕ್ಕಿಲ್ಲ!

ಇಂಗ್ಲಿಷ್ ಎಂಬ 'ಮಾಯೆಯ ಮೋಹದ ನಶೆ'ಯಿಂದ ಜನರನ್ನು ಬಚಾವು ಮಾಡಲು ಸಾಧ್ಯವೇ? ಅಥವಾ ಇಂಗ್ಲಿಷ್ ಬಗೆಗಿನ ನಮ್ಮ ಭಾವನೆಗಳೇ ಅಸಂಗತವೋ? ಇಂಗ್ಲಿಷ್ ಭಾಷೆ ಮಾತ್ರ ನಮ್ಮ ಜನರಿಗೆ ಸರ್ವಸ್ವವನ್ನು ನೀಡುವ ಕಾಮಧೇನುವೇ? ಅದರ ವಿರುದ್ಧ ನಿಂತು ಸಮಾಜದ ಮುಂಚಲನೆಯನ್ನು ನಾವು ತಡೆಯುತ್ತಿದ್ದೇವೆಯೋ? ಈ ಎಲ್ಲ ಪ್ರಶ್ನೆಗಳಿಗೆ ಸಿದ್ಧ ಮಾದರಿಯ ಸೈದ್ಧಾಂತಿಕ ಉತ್ತರಗಳೇನೋ ಇವೆ. ಆದರೆ ಅವು ಎಷ್ಟರ ಮಟ್ಟಿಗೆ ವಾಸ್ತವ ಬದುಕಿಗೆ ಹತ್ತಿರವಾಗಿವೆ? ಹಾಗೆ ಪೂರಕವಾಗಿದ್ದರೆ ಯಾಕೆ ಅವು ಜನರಿಗೆ ಮನವರಿಕೆಯಾಗುತ್ತಿಲ್ಲ? ಇವೇ ಈ ಕಾಲಮಾನದ ಅತಿ ದೊಡ್ಡ ಪ್ರಶ್ನೆಯಾಗಿ ಉಳಿಯುತ್ತವೆ.

ಮಕ್ಕಳಿಲ್ಲದ ಅಥವಾ ಕಡಿಮೆ ಇರುವ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಸರಿ ಇಲ್ಲ ಎಂದು ಹೇಳುವುದು ವ್ಯಾವಹಾರಿಕವಾಗಿ ತಪ್ಪಾಗಬಹುದು. ಆದರೆ ಹಾಗೆ ಮುಚ್ಚುವುದರಿಂದ ಸಮಸ್ಸೆ ಬಗೆ ಹರಿಯುವುದಿಲ್ಲ ಎಂಬುದಂತೂ ದಿಟ. ಇದೊಂದು ಅಂಟು ಜಾಡ್ಯ ಇದು ಹೀಗೇ ಮುಂದುವರೆದರೆ ಇನ್ನು ಕೆಲವೇ ವರ್ಷಗಳಲ್ಲಿ ಎಲ್ಲ ಸರ್ಕಾರಿ ಕನ್ನಡ ಮಾಧ್ಯಮದ ಶಾಲೆಗಳನ್ನ ಮುಚ್ಚಾ ಬೇಕಾಗಬಹುದು. ಅಷ್ಟೇ ಅಲ್ಲ

ಮಕ್ಕಳಿಲ್ಲದ ಅಥವಾ ಕಡಿಮೆ ಇರುವ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಸರಿ ಇಲ್ಲ ಎಂದು ಹೇಳುವುದು ವ್ಯಾವಹಾರಿಕವಾಗಿ ತಪ್ಪಾಗಬಹುದು. ಆದರೆ ಹಾಗೆ ಮುಚ್ಚುವುದರಿಂದ ಸಮಸ್ಸೆ ಬಗೆ ಹರಿಯುವುದಿಲ್ಲ ಎಂಬುದಂತೂ ದಿಟ. ಇದೊಂದು ಅಂಟು ಜಾಡ್ಯ ಇದು ಹೀಗೇ ಮುಂದುವರೆದರೆ ಇನ್ನು ಕೆಲವೇ ವರ್ಷಗಳಲ್ಲಿ ಎಲ್ಲ ಸರ್ಕಾರಿ ಕನ್ನಡ ಮಾಧ್ಯಮದ ಶಾಲೆಗಳನ್ನ ಮುಚ್ಚಾ ಬೇಕಾಗಬಹುದು. ಅಷ್ಟೇ ಅಲ್ಲ ಖಾಸಗಿ ಕನ್ನಡ ಶಾಲೆಗಳೂ ಕ್ರಮೇಣ ಬೀಗ ಹಾಕಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಖಾಸಗಿ ಕನ್ನಡ ಶಾಲೆಗಳೂ ಕ್ರಮೇಣ ಬೀಗ ಹಾಕಿಕೊಳ್ಳುವುದು ಅನಿವಾರ್ಯವಾಗುತ್ತದೆ. ಹಾಗಾದರೆ ಸರ್ಕಾರ, ಸಾರ್ವಜನಿಕರು, ಕನ್ನಡಪರ ಚಿಂತಕರು, ಸರ್ಕಾರಿ ಶಾಲೆಗಳನ್ನೇ ನಂಬಿರುವ ತಳಸಮುದಾಯಗಳ ಜನ ಏನು ಮಾಡಬೇಕು? ಕನ್ನಡ ಬದುಕು-ಸಾಂಸ್ಕೃತಿ ಏನಾಗುತ್ತದೆ? ನಮ್ಮ ನಾಡೊಳಗೆ ನಾವೇ ಎಡಬಿಡಂಗಿಗಳಾಗಿ ಬದುಕಬೇಕೆ? ನಾವೆಲ್ಲ ಅಷ್ಟು ಅಸಹಾಯಕರೇ?

ಉತ್ತರ ಅಷ್ಟು ಸುಲಭವಲ್ಲ. ನಮ್ಮಲ್ಲಿರುವ ಸಿದ್ಧ ಮಾದರಿಯ ಸೈದ್ಧಾಂತಿಕ ಹಾಗೂ ಭಾವನಾತ್ಮಕ ಪರಿಹಾರಗಳು ನಿಜವಾಗಿಯೂ ಸಮಸ್ಸೆಗೆ ಪೂರ್ಣ ಪ್ರಮಾಣದ ಪರಿಹಾರಗಳನ್ನೂ ನೀಡಲಾರವು. ಆದರೂ ನಾವು ಈ ಕೆಳಗಿನ ಅಂಶಗಳನ್ನು ಪರಿಶೀಲಿಸಿ ಮುನ್ನಡೆದರೆ ಇದಕ್ಕೊಂದು ತಾರ್ಕಿಕ ಅಂತ್ಯ ದೊರಕಬಹುದೇನೋ ಅನ್ನಿಸುತ್ತಿದೆ. ಅವುಗಳನ್ನು ಆದ್ಯತೆ ಮೇಲೆ ಪರಿಶೀಲಿಸಬಹುದು.

1. ಆಯಾ ಪ್ರದೇಶದ ಮಕ್ಕಳ ಜನಸಂಖ್ಯೆಯ ವೈಜ್ಞಾನಿಕ ಸಮೀಕ್ಷೆ ನಡೆಸಿ ಅಗತ್ಯವಿದ್ದ ಕಡೆ ಮಾತ್ರ (ಅಂದರೆ ಸರ್ಕಾರಿ ಶಾಲೆಗಳಿಲ್ಲದ ಕಡೆ) ಹೊಸ ಖಾಸಗಿ ಶಾಲೆಗಳಿಗೆ ಅನುಮತಿ ನೀಡಬೇಕು ಮತ್ತು ಈಗಾಗಲೇ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಖಾಸಗಿ ಶಾಲೆಗಳನ್ನು ಜನನಿಬಿಡ ಪ್ರದೇಶಗಳಿಗೆ ವರ್ಗಾಯಿಸಬೇಕು. ರಾಜಕೀಯ ಕಾರಣಗಳಿಗಾಗಿ ಖಾಸಗಿ ಶಾಲೆಗಳಿಗೆ ಅನುಮತಿ ನೀಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು.

2. ವಸತಿ ಶಾಲೆಗಳನ್ನು ಹೊರತು ಪಡಿಸಿ ಆಯಾ ಪ್ರದೇಶದ ಶಾಲೆಗಳಲ್ಲಿ ಮಾತ್ರ ಕಲಿಯಲು ಮಕ್ಕಳಿಗೆ ಅವಕಾಶ ಕಲ್ಪಿಸಬೇಕು. ಅಂದರೆ ಇಂತಿಷ್ಟು ದೂರ ವ್ಯಾಪ್ತಿಯ ಶಾಲೆಗಳಿಗೆ ಮಾತ್ರ ಮಕ್ಕಳನ್ನು ಸೇರಿಸಲು ಅವಕಾಶ ನೀಡುವ ಮೂಲಕ ದೂರದ ಖಾಸಗಿ ಶಾಲೆಗಳ ಆಮಿಷಗಳನ್ನು ಕಡಿಮೆ ಮಾಡಬಹುದು. ಇವುಗಳನ್ನು 'ನೆರೆ ಹೊರೆ ಶಾಲೆ'ಗಳೆಂದು ಕರೆಯಬಹುದು.

3. ಖಾಸಗಿ ಕನ್ನಡ ಶಾಲೆಗಳು ಹಾಗೂ ಸರ್ಕಾರಿ ಕನ್ನಡ ಶಾಲೆಗಳಲ್ಲಿನ ಶಿಕ್ಷಕರು ಮತ್ತು ಮಕ್ಕಳು ಅನುಪಾತದಲ್ಲಿ ತಾರತಮ್ಯ ಇದೆ. ಖಾಸಗಿ ಶಾಲೆಗಳಲ್ಲಿನ ಶಿಕ್ಷಕರು ಪ್ರತಿ ತಿಂಗಳು ವೇತನಾನುದಾನ ಪಡೆಯಲು ಸರ್ಕಾರಿ ಶಾಲೆಗಳಿಗಿಂತ ಹೆಚ್ಚು ಮಕ್ಕಳ ಸಂಖ್ಯೆ ಅಗತ್ಯವಿರುವುದ ರಿಂದ ಖಾಸಗಿ ಶಾಲಾ ಸಿಬ್ಬಂದಿ ಶತಾಯ-ಗತಾಯ ಮಕ್ಕಳನ್ನು ತಮ್ಮ ಶಾಲೆಗಳಿಗೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದರಿಂದಾಗಿ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಮಕ್ಕಳ ಕೊರತೆ ಉಂಟಾಗುತ್ತಿದೆ. ಮಕ್ಕಳ ಸಂಖ್ಯೆಯನ್ನು ಖಾಸಗಿ ಶಾಲೆಯಲ್ಲಿ ಹೆಚ್ಚು ನಿಗಧಿಪಡಿಸಿರುವುದರಿಂದ ಅವರು ಇನ್ನಿಲ್ಲದ ಪ್ರಯತ್ನ ಮಾಡಿ ಮಕ್ಕಳನ್ನು ಕರೆದೊಯ್ಯುತ್ತಾರೆ. ಕನಿಷ್ಠ 19 ಮಕ್ಕಳಿದ್ದರೂ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ನಡೆಸಿಕೊಂಡು ಹೋಗುವ ಸರ್ಕಾರ, 40 ಮಕ್ಕಳಿಗಿಂತ ಕಡಿಮೆಯಾದ ಕೂಡಲೇ ಖಾಸಗಿ ಶಾಲೆಗಳನ್ನು ಮುಚ್ಚಿಬಿಡುತ್ತದೆ. ಹೀಗೆ 40 ಮಕ್ಕಳಿಗಿಂತ ಕಡಿಮೆ ಸಂಖ್ಯೆ ಹೊಂದಿದ ಸುಮಾರು ಒಂದು ಸಾವಿರ ಖಾಸಗಿ ಕನ್ನಡ ಶಾಲೆಗಳನ್ನು ಈಗಾಗಲೇ ಮುಚ್ಚಲಾಗಿದೆ. ಸರ್ಕಾರ ಕೂಡಲೇ ಈ ಅನುಪಾತವನ್ನು ಕಡಿಮೆ ಮಾಡಬೇಕು. ಪ್ರತಿ ತರಗತಿಗೆ ಈಗಿರುವ ಕನಿಷ್ಠ 40ರ ಬದಲು 20ರಿಂದ 25ಮಕ್ಕಳ ಸಂಖ್ಯೆಯನ್ನು ನಿಗದಿ ಪಡಿಸಿದರೆ ಖಾಸಗಿ ಶಾಲೆಗಳು ಮಕ್ಕಳ ದಾಹದಿಂದ ಪಾರಗಬಹುದು.

4. ಇಂಗ್ಲಿಷ್ ಮೋಹದ ಪೋಷಕರ ಮನಸ್ಥಿತಿ ಯನ್ನು

(37ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಡಾ. ಎಸ್. ನರೇಂದ್ರಕುಮಾರ್

ಪ್ರಿಯ ಸಂಪಾದಕರೇ,

ಸುಗತ ಶ್ರೀನಿವಾಸರಾಜು (ಅನು: ವಡ್ಡಗೆರೆ ನಾಗರಾಜಯ್ಯ) ಅವರ 'ದಕ್ಕಲಿಗರಿಗೂ ಸ್ವಾತಂತ್ರ್ಯ ಬಂತು' ಲೇಖನವು ಅತ್ಯಂತ ದಮನಿತ ಸಮುದಾಯವೊಂದನ್ನು ಪರಿಚಯಿಸುತ್ತಲೇ ಅಲ್ಲಿನ ಕೆಲವು ಅಂಶಗಳು ನೈತಿಕ ಹಾಗೂ ಸಾಮಾಜಿಕವಾದ ಅನೇಕ ಗಂಭೀರ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ನನಗೆ ಕಲಕಿದ ಕೆಲವು ಅನಿಸಿಕೆಗಳನ್ನು ಮುಕ್ತ ಚರ್ಚೆಗೆ ತೆರೆದಿಡುತ್ತೇನೆ.

ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿ ಹೀಗೆ ಬರುತ್ತದೆ: "ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ, ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರೀಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ; ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವ, ರಾಷ್ಟ್ರದ ಏಕತೆ ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃ ಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ; ನಮ್ಮ ಸಂವಿಧಾನ ಸಭೆಯಲ್ಲಿ 1949ನೇ ಇಸವಿ ನವೆಂಬರ್ ತಿಂಗಳ 26ನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ". (ಭಾರತ ಸಂವಿಧಾನ, ಕರ್ನಾಟಕ ಸರ್ಕಾರದ ಮುದ್ರಣ–2001) ಈ ಸಂವಿಧಾನವನ್ನು ನಾವು ಒಪ್ಪಿಕೊಂಡು 60 ವರ್ಷಗಳು ಕಳೆದರೂ ಇವು ಯಾವುವೂ ಸಮರ್ಥವಾಗಿ ಅನುಷ್ಠಾನಗೊಂಡಿಲ್ಲ. ಇನ್ನೂ ದುರಂತವೆಂದರೆ ಅನುಷ್ಠಾನಗೊಳಿಸುವ ಪ್ರಯತ್ನಗಳು ಈವರೆಗೂ ವೇಗವಾಗಿ ನಡೆಯುತ್ತಿಲ್ಲ. ಅದರಲ್ಲೂ ಶತಶತಮಾನಗಳಿಂದ ಜಾತಿ ಕ್ರೌರ್ಯಕ್ಕೆ ಸಿಕ್ಕಿ ದಮನಗೊಂಡ ತಳಸಮುದಾಯಗಳ ಬಗ್ಗೆ ಪ್ರಜಾಪ್ರಭುತ್ವದ ರಾಜಕಾರಣ ಹಾಗೂ ಅಧಿಕಾರಶಾಹಿ ಯಾವುದೇ ಕಾಳಜಿಯನ್ನು ಹೊಂದಿಲ್ಲ ಎಂಬುದೇ ಅತ್ಯಂತ ದುರಂತದ ಸಂಗತಿ. ದಕ್ಕಲಿಗರಂತ ಸಮುದಾಯವು ಕೇವಲ ತಮ್ಮ 19 ಕುಟುಂಬಗಳಿಗೆ ನಿವೇಶನ ಸಿಕ್ಕದ ಕಾರಣಕ್ಕಾಗಿ (ಅದು ಹಿಂದುಳಿದ ಆಯೋಗದ ಮಾಜಿ ಅಧ್ಯಕ್ಷರೂ ಚಿಂತಕರೂ ಆದ ಡಾ. ಸಿ.ಎಸ್. ದ್ವಾರಕನಾಥ್ ಮತ್ತು ಸ್ಥಳೀಯ ಪಶುವೈದ್ಯರಾದ ಡಾ॥ ರಘುಪತಿಯವರ ಪ್ರಯತ್ನದಿಂದ) ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿ ಸಂಭ್ರಮಿಸಿದರೆಂದರೆ ಅವರ ಸಮಗ್ರ ಸಬಲೀಕರಣ ಅವರನ್ನು ಇನ್ನೆಷ್ಟು ಸಂಭ್ರಮಿಸುವಂತೆ ಮಾಡಬಲ್ಲುದು? ಇದು ಸಾಧ್ಯವಾಗುವುದಕ್ಕೆ ಇನ್ನೆಷ್ಟು ಕಾಲ ತೆಗೆದುಕೊಳ್ಳಬಹುದು. ಭಾರತದಂತಹ ವಿಚಿತ್ರ ದೇಶದಲ್ಲಿ ಉತ್ತರ ಸರಳ ಎನಿಸುವುದಿಲ್ಲ.

ಇನ್ನು ಲೇಖನದಲ್ಲಿ ತುಂಬಾ ಕಾಡಿದ, ಮನಸ್ಸನ್ನು ಪದೇ ಪದೇ ಕಲಕಿದ ವಿಷಯವೆಂದರೆ ಯಾದಗಿರಿ ಜಿಲ್ಲೆಯ ದಕ್ಕಲಿಗರ ಮುಖಂಡರಾದ ಮಲಕಪ್ಪನವರು "ದಲಿತರು ಅಂಬೇಡ್ಕರ್‌ರವರ ಭಾವಚಿತ್ರವನ್ನು ಬಳಸುತ್ತಿದ್ದಾರೆ. ಪ್ರಾಯಶಃ ನಾವು ಚತುರ್ಭುಜ ದಕ್ಷಬ್ರಹ್ಮ (ಒಬ್ಬ ಪುರಾಣ ಪುರುಷನ) ಚಿತ್ರವನ್ನು ಸೃಷ್ಟಿಸಿಕೊಳ್ಳುತ್ತೇವೆ ಎಂದು ಹೇಳಿರುವ ಮಾತು. ಇದು ತಳಸಮುದಾಯವೊಂದರ ಹತಾಶೆಯ ಮನಸ್ಸು ವ್ಯಕ್ತಪಡಿಸಿರುವ ಅನಿಸಿಕೆಯಾಗಿದೆ. ಅದರೊಟ್ಟಿಗೇ ಅಂಬೇಡ್ಕರ್ ಅವರನ್ನು ಇವರು ಗ್ರಹಿಸಿರುವ ಹಾಗೂ ಗ್ರಹಿಸುತ್ತಿರುವ ಬಗೆ ಹೇಗೆ ಎಂಬುದು ವ್ಯಕ್ತವಾಗುತ್ತದೆ. ಇದು ಕೇವಲ ದಕ್ಕಲಿಗ ಸಮುದಾಯದ ಸಮಸ್ಯೆ ಮಾತ್ರವಲ್ಲ; ಹಲವಾರು ದಮನಿತ ಸಮುದಾಯಗಳ ಸ್ಥಿತಿಯೂ ಇದೇ ಆಗಿದೆ. ದಲಿತರು ಎಂದರೆ ಕೇವಲ ಹೊಲಯ ಮಾದಿಗ ಎಂಬ ಪರಿಕಲ್ಪನೆ ಬೆಳೆಯುತ್ತಿರುವುದೇ ಇದಕ್ಕೆ ಪ್ರಮುಖ ಕಾರಣ. ದಮನಿತ ಸಮುದಾಯಗಳ ದಿಕ್ಕುದೆಸೆಯಾಗಿ ರೂಪುಗೊಂಡ ಕರ್ನಾಟಕ ದಲಿತ ಸಂಘರ್ಷ ಸಮಿತಿ ತನ್ನ ಸಂವಿಧಾನದಲ್ಲಿ ದಲಿತ ಎಂಬ ಅರ್ಥವನ್ನು "ದಲಿತರು ಎಂದರೆ ಅಸ್ಪೃಶ್ಯರು ಮತ್ತು ಜಾತಿಯಿಂದ ಅವಮಾನಿತರಾದವರು. ಮತ್ತೂ ಹೇಳಬೇಕೆಂದರೆ ಯಾರು ಹಿಂದೂ ಚಾತುರ್ವರ್ಣದ ಶ್ರಮವಿಭಜನೆಯ ಕುತಂತ್ರಕ್ಕೆ ಈಡಾಗಿ ಕೀಳು ವೃತ್ತಿಗಳನ್ನೇ ತಲೆ ತಲಾಂತರದಿಂದ ಅವಲಂಬಿಸಿ ಜಾತಿ ಹೆಸರು ಹೇಳಿಕೊಳ್ಳಲೂ ನಾಚಿಕೆಪಡುತ್ತಾರೊ ಅವರು" ('ಪಂಚಮ' ಪತ್ರಿಕೆ ವತಿಯಿಂದ ಮುದ್ರಣಗೊಂಡ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂವಿಧಾನ) ಎಂಬುದಾಗಿ ತಿಳಿಸಿದೆ. ಮುಂದೆ ಈ ಪದದ ಅರ್ಥವನ್ನು ದಲಿತ ಚಳವಳಿಯು ತನ್ನ ಕಾರ್ಯಚಟುವಟಿಕೆಗಳಿಂದ ಹಿಗ್ಗಿಸಿತು. ಹಾಗಾಗಿ ಎಲ್ಲಾ ಹಿನ್ನೆಲೆಯ ನಿರ್ಗತಿಕರನ್ನು ವ್ಯಾಪಿಸಿಕೊಳ್ಳುವ ವಿಶಾಲ ಅರ್ಥವನ್ನು ಪಡೆದುಕೊಂಡಿತು. ಆದರೆ ಕೆಲವು ಸಂಕುಚಿತ ಮನಸ್ಸುಗಳು ದಲಿತ ಪದವನ್ನು ತೀರ ನಿರ್ದಿಷ್ಟಗೊಳಿಸುವ ಮೂಲಕ ಅದರ ಅರ್ಥವ್ಯಾಪ್ತಿಯನ್ನು ಕುಗ್ಗಿಸಿದರು. ಅದರ ದುರಂತವೀಗ ನಿಚ್ಚಳವಾಗಿ ಕಾಣುತ್ತಿದೆ.

ಇನ್ನು 'ದಲಿತರು ಅಂಬೇಡ್ಕರ್ ಅವರ ಭಾವಚಿತ್ರ ಬಳಸುತ್ತಿದ್ದಾರೆ' ಎಂಬುದಾಗಿ ತಾವು ದಲಿತರಾಚೆಗೆ ನಿಂತು, ಅಸ್ಪೃಶ್ಯ ಹಿನ್ನೆಲೆಯ ದಕ್ಕಲಿಗ ಮುಖಂಡರು ಹೇಳಿರುವ ಮಾತು ವಿಷಾದವೆನಿಸುವ ಬದಲಿಗೆ ಚಿಂತಿಸಬೇಕಾದ ಅಂಶಗಳನ್ನು ಎಚ್ಚರಿಸಿದೆ. ಇಂದು ಅಂಬೇಡ್ಕರ್ ಅವರು ಸಾಮಾನ್ಯ ಜನಸಮುದಾಯದಲ್ಲಿ ಹೇಗೆ ಗುರುತಿಸಲ್ಪಡುತ್ತಿದ್ದಾರೆ ಎಂಬುದರ ಪ್ರಾತಿನಿಧಿಕ ಸಂಕೇತದಂತೆ ಈ ಮಾತಿದೆ. ಇದು ನಿಜಕ್ಕೂ ಅತ್ಯಂತ ದುರಂತದ ಸಂಗತಿ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರನ್ನು ಮರು ನೆನಪು ಮಾಡಿಕೊಳ್ಳಬೇಕಾದ ಅಗತ್ಯವಿದೆ:

ಚರಿತ್ರೆಯಲ್ಲಿ ಎಲ್ಲರಿಗೂ ಗೊತ್ತಿರುವಂತೆ ಅಂಬೇಡ್ಕರ್ ಅವರು ತಮ್ಮ ಬದುಕಿನ ಕೊನೆತನಕವೂ ಅಸ್ಪೃಶ್ಯರನ್ನು ಹಾಗೂ ಅಸ್ಪೃಶ್ಯೇತರ ದಮನಿತರನ್ನು ಒಟ್ಟೊಟ್ಟಿಗೇ ಬಿಡುಗಡೆಗೊಳಿಸುವ; ಅವರಿಗೆ ಹಲವಾರು ಬಗೆಯ ಹಕ್ಕುಗಳನ್ನು ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದರು.

ಅಸ್ಪೃಶ್ಯರ ಸಂಘಟನಾತ್ಮಕ ಹೋರಾಟಕ್ಕಾಗಿ ಅಂಬೇಡ್ಕರ್ ಅವರು 1924ರ ಜುಲೈನಲ್ಲಿ 'ಬಹಿಷ್ಕೃತ ಹಿತಕಾರಿಣಿ ಸಭಾ' ಸ್ಥಾಪಿಸಿದರು. ಇಲ್ಲಿ ಯಾರನ್ನು ಉದ್ದೇಶಿಸಿ ಅಂಬೇಡ್ಕರರು ಬಹಿಷ್ಕೃತರೆಂದು ಕರೆದರು? 1927ರ ಮಾರ್ಚ್‌ನಲ್ಲಿ ಮಹಾದ್ ನಗರದ ಚೌಡರ್ ಕೆರೆಯ ನೀರನ್ನು ಮುಟ್ಟುವ ಚಳವಳಿಯನ್ನು ಇದೇ ಸಂಘಟನೆಯ ವತಿಯಿಂದ ಹಮ್ಮಿಕೊಂಡಾಗ ಅಂಬೇಡ್ಕರ್ ಅವರು ಮಹಾರ್ ಮತ್ತು ಚಮ್ಮಾರ ಸಮುದಾಯದ ಜನರನ್ನು ಒಟ್ಟುಗೂಡಿಸಿಕೊಂಡು ಹೋಗಿರುತ್ತಾರೆ. ಅಲ್ಲದೆ ಇದಕ್ಕೆ ಪೂರಕವಾಗಿ 1927ರ ಡಿಸೆಂಬರ್‌ನಲ್ಲಿ ಮಹಾದ್ ನಗರದಲ್ಲಿ ಮತ್ತೊಂದು ಸಮಾವೇಶವನ್ನು ನಡೆಸಿ ಮನುಸ್ಮೃತಿಯನ್ನು ದಹನ ಮಾಡುವಾಗ ಅವರು ಪ್ರಜ್ಞಾಪೂರ್ವಕವಾಗೆ ಬ್ರಾಹ್ಮಣ, ಚಮ್ಮಾರ ಹಾಗೂ ಮಹಿಳಾ ಸಮುದಾಯದ ಒಬ್ಬೊಬ್ಬರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಗೊತ್ತುವಳಿ ಮಂಡನೆ ಮಾಡುವವರು ಸಹಸ್ರಬುದ್ಧೆ (ಬ್ರಾಹ್ಮಣ), ಗೊತ್ತುವಳಿ ಅನುಮೋದಿಸುವವರು ಪಿ.ಎನ್. ರಾಜಭೋಜ್ (ಚಮ್ಮಾರ), ಬೆಂಕಿ ಹಚ್ಚುವವರು ಗಂಗೂಬಾಯಿ ಸಾವಂತ್ (ಮಹಿಳೆ), ಇದು ಸಾಂಕೇತಿಕವಾಗಿದ್ದು ಮಾನಸಿಕ ಹಾಗೂ ಆಚರಣಾತ್ಮಕವಾಗಿ ಮನು ಧೋರಣೆಗಳನ್ನು ನಿರ್ಮೂಲನಗೊಳಿಸುವುದಾಗಿದೆ. ಹೀಗೆ ಅಂಬೇಡ್ಕರ್‌ರವರು ಬೇರೆ ಬೇರೆ ಹಿನ್ನೆಲೆಯ ವ್ಯಕ್ತಿಗಳನ್ನು ಮನುಶಾಸ್ತ್ರ ದಹನಕ್ಕೆ ಗೊತ್ತುಮಾಡಿದ್ದರ ಅರ್ಥ ಹಾಗೂ ಆದರ್ಶವೇನು? ಬಳಿಕ ಅಂಬೇಡ್ಕರ್ ಅವರು 1927ರ ಏಪ್ರಿಲ್‌ನಲ್ಲಿ ಹೊರತಂದ ಪತ್ರಿಕೆಯ ಹೆಸರೂ "ಬಹಿಷ್ಕೃತ ಭಾರತ"ವೆಂದು. ಆ ಬಳಿಕ ಗಾಂಧೀಜಿಯವರೊಂದಿಗೆ ಬಹುದೊಡ್ಡ ಸಂಘರ್ಷ ಹಾಗೂ ವಾಗ್ವಾದಗಳಿಗೆ ಪ್ರತ್ಯೇಕ ಚುನಾಯಕಗಳನ್ನು ಪ್ರಬಲವಾಗಿ ಪ್ರಸ್ತಾಪ ಮಾಡಿದಾಗಲೂ ಅವರ ಕಣ್ಣಮುಂದೆ ಹಾಗೂ ಮನಸ್ಸಿನಾಳದಲ್ಲಿ ಇದ್ದುದು ಇಡೀ ಅಸ್ಪೃಶ್ಯ ಸಮುದಾಯದ ಏಳಿಗೆಯೆ ತಾನೆ? ಅಸ್ಪೃಶ್ಯ ಸಮುದಾಯವನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಹಾಗೂ ಅಲ್ಪಸಂಖ್ಯಾತರಿಗೆ ನೀಡಲಾಗುತ್ತಿದ್ದ ಎಲ್ಲಾ ಬಗೆಯ ಪ್ರಾತಿನಿಧ್ಯ, ಸೌಲಭ್ಯ, ಸವಲತ್ತುಗಳನ್ನು ನೀಡಬೇ

ದಕ್ಕಲಿಗರ ವಿಮೋಚನೆ: ಪುರಾಣ, ಅಂಬೇಡ್ಕರ್, ವೈಚಾರಿಕತೆ ಇತ್ಯಾದಿ

ಕೆಂಬುದು ಅವರ ಹೋರಾಟದ ಕಾಳಜಿಯಾಗಿತ್ತು. ಮುಂದೆ 1944ರ ಸಂದರ್ಭದಲ್ಲಿ ಅವರು "ಅಖಿಲ ಭಾರತ ಪರಿಶಿಷ್ಟಜಾತಿಗಳ ಒಕ್ಕೂಟ"ವನ್ನು ಹುಟ್ಟುಹಾಕುತ್ತಾರೆ. ಅಲ್ಲದೆ ಅಸ್ಪೃಶ್ಯರ ಸಂರಕ್ಷಣೆಯನ್ನು ಯಾವ ಯಾವ ಬಗೆಯ ಸವಲತ್ತುಗಳನ್ನು ಒದಗಿಸಿಕೊಡುವ ಮೂಲಕ ಮಾಡಬೇಕೆಂಬುದನ್ನು ಬಹು ಸುದೀರ್ಘವಾಗಿ ಬರೆದು ಈ ಒಕ್ಕೂಟದ ಪರವಾಗಿ ಬ್ರಿಟಿಷರಿಗೆ 1946ರಲ್ಲಿ "ರಾಜ್ಯಗಳು ಮತ್ತು ಅಲ್ಪಸಂಖ್ಯಾತರು" ಎಂಬ ಶೀರ್ಷಿಕೆ ಕೊಟ್ಟು ಬಿನ್ನವತ್ತಳೆ ಅರ್ಪಿಸುತ್ತಾರೆ. ಇದರಲ್ಲಿ ಅಸ್ಪೃಶ್ಯರಿಗೆ ಶೈಕ್ಷಣಿಕ ಸೌಲಭ್ಯ, ನಾಗರಿಕ-ಮೂಲಭೂತ ಹಕ್ಕುಗಳು, ಭೂಮಿ ನೀಡಿಕೆ, ಶಾಸಕಾಂಗ, ಕಾರ್ಯಾಂಗ, ಸ್ಥಳೀಯ ಸಂಸ್ಥೆ ಮತ್ತು ಸೇವಾ ವಲಯಗಳಲ್ಲಿ ವಿಶೇಷ ಪ್ರಾತಿನಿಧ್ಯ ಹಾಗೂ ಸಂರಕ್ಷಣೆ ಕುರಿತು ಬೇಡಿಕೆ ಸಲ್ಲಿಸಿದ್ದಾರೆ. ಮುಂದೆ 1948ರ ಅಕ್ಟೋಬರ್‌ನಲ್ಲಿ "ಅಸ್ಪೃಶ್ಯರು ಯಾರು?" ಎನ್ನುವ ಸಂಶೋಧನಾ ಕೃತಿಯನ್ನು ಪ್ರಕಟಿಸುವ ಮೂಲಕ ಈ ದೇಶದ ಅಸ್ಪೃಶ್ಯರಿಗೊಂದು ಪಾರಂಪರಿಕ ಹಾಗೂ ಸಾಂಸ್ಕೃತಿಕವಾದ ಚರಿತ್ರೆ ಇದೆ ಎಂಬುದನ್ನು ಗುರುತಿಸಿದ್ದಾರೆ. ಈ ಕೃತಿಯನ್ನು "ಅಸ್ಪೃಶ್ಯರಾಗಿ ಜನಿಸಿ ತಮ್ಮ ವೈಯಕ್ತಿಕ ಶ್ರದ್ಧಾ ಭಕ್ತಿ ಮತ್ತು ಸದ್ಗುಣಗಳಿಂದ ಸರ್ವರ ಗೌರವಕ್ಕೆ ಪಾತ್ರರಾದಂತಹ ಮೂವರು ಸಂತರಾದ ನಂದನಾರ್, ರವಿದಾಸ್ ಹಾಗೂ ಚೋಖಾಮೇಳಾ ಅವರ ಪುಣ್ಯಸ್ಮೃತಿಗೆ ಸಮರ್ಪಣೆ" ಮಾಡಿದ್ದಾರೆ. ಈ ಸಂತರಲ್ಲಿ ಮಹಾರ್ ಹಾಗೂ ಚಮ್ಮಾರ ಹಿನ್ನೆಲೆಯ ಸಂತರಿದ್ದಾರೆ ಎಂಬುದನ್ನು ಅರಿಯಬೇಕು. ಮುಂದೆ 1956ರ ಅಕ್ಟೋಬರ್ 14ರಂದು ತಾವು ಬುದ್ಧನತ್ತ ನಡೆದಾಗ ಭಿನ್ನಭೇದವಿಲ್ಲದೆ ಅಸಂಖ್ಯಾತ ಅಸ್ಪೃಶ್ಯ ಸಮುದಾಯದವರನ್ನು ತಮ್ಮೊಟ್ಟಿಗೆ ಮರಳಿ ಮನೆಗೆ ಕರೆದೊಯ್ದು, ಸ್ಥಗಿತಗೊಂಡಿದ್ದ ಸಾವಿರಾರು ವರ್ಷಗಳ ಅಸ್ಪೃಶ್ಯರ ಮೂಲ ಸಂಸ್ಕೃತಿಗೆ ಧರ್ಮಚಕ್ರದ ಚಾಲನೆ ನೀಡಿದರು. ಇದು ಎಲ್ಲರಿಗೂ ಗೊತ್ತಿರುವಂತದ್ದೆ, ಚರಿತ್ರೆಯಲ್ಲಿ ದಾಖಲಾಗಿರುವಂತದ್ದೆ.

ಆದರೆ ನಾವು ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಕೆಲವು ರಾಜಕಾರಣಿಗಳು, ಕೆಲವು ಅಧಿಕಾರಿಗಳು ಹಾಗೂ ಕೆಲವು ಶಿಕ್ಷಣ ಪಡೆದಿರುವವರು ಅಂಬೇಡ್ಕರ್ ಅವರ ಈ ಬಗೆಯ ಚಿಂತನೆಗಳಿಗೆ ಜಾಣಕುರುಡುತನ ತೋರುತ್ತಿದ್ದಾರೆ. ಅಲ್ಲದೆ ಅಂಬೇಡ್ಕರ್ ಅವರಿಂದಲೆ ದೂರವಾಗುತ್ತಿದ್ದಾರೆ. ಈ ಮಾತುಗಳನ್ನು ನಾನು ಭಾವನಾತ್ಮಕ ನೆಲೆಯಲ್ಲಿ ಹೇಳುತ್ತಿಲ್ಲ ಬದಲಿಗೆ ಕ್ರಿಯಾತ್ಮಕ ನೆಲೆಯಲ್ಲಿ ಹೇಳುತ್ತಿದ್ದೇನೆ. ಯಾಕೆಂದರೆ ಬಹುಪಾಲು ಶಿಕ್ಷಿತ ಸಮುದಾಯ ಇಂದು ಅಂಬೇಡ್ಕರ್ ಅವರ ಬಗ್ಗೆ ಅತಿರೇಕದ ಅಭಿಮಾನವನ್ನೊ ಇಲ್ಲವೆ ಕುರುಡು ಅಭಿಮಾನವನ್ನೊ ಇಲ್ಲವೆ ಹುಸಿ ಅಭಿಮಾನವನ್ನೊ ಹೊಂದಿದ್ದಾರೆ. ಇಂತಹವರಲ್ಲಿ ಕೆಲವರು ವೇದಿಕೆ ಸಿಕ್ಕಿದಾಗ ಭಾಷಣದಲ್ಲಿ ಅಂಬೇಡ್ಕರ್ ಅವರ ಬಗ್ಗೆ ತುಂಬು ಅಭಿಮಾನ ಹಾಗೂ ಅವರ ಕಾರ್ಯಚಟುವಟಿಕೆಗಳನ್ನು ಕುರಿತು ವಾಗ್ಝರಿಯನ್ನು ಹರಿಸುವರು. ಆದರೆ ತಮ್ಮ ವೈಯಕ್ತಿಕ ಬದುಕಿನಲ್ಲಿ ಮಾತ್ರ ಕಿಂಚಿತ್ತು ಅಳವಡಿಸಿಕೊಳ್ಳದಿರುವುದು ದುರಂತ. ಇಂತಹ ದ್ವಂದ್ವವೆ ಅಸ್ಪೃಶ್ಯ ಸಮುದಾಯದೊಳಗೆ ದೊಡ್ಡ ಬಿರುಕನ್ನು ಸೃಷ್ಟಿಸುತ್ತಿದೆ ಎಂಬ ಅನುಮಾನ ನನಗಿದೆ. ಯಾಕೆಂದರೆ ಇಂತವರು ಅಂಬೇಡ್ಕರ್ ಅವರು ಇಡೀ ಅಸ್ಪೃಶ್ಯರ ವಿಮೋಚನೆಗೆ ಹೇಗೆ ಹೋರಾಡಿದರು ಸಮಕಾಲೀನ ಪ್ರಸ್ತುತ ಸಂದರ್ಭದಲ್ಲಿ ಅವುಗಳನ್ನು ಹೇಗೆ ಕ್ರಿಯಾತ್ಮಕವಾಗಿ ಕೊಂಡೊಯ್ಯಬೇಕು ಎಂಬುದನ್ನು ತಮ್ಮ ಅಭಿಮಾನದ ಭರದಲ್ಲಿ ಮರೆತು ಬಿಡುತ್ತಾರೆ. ಅಲ್ಲದೆ ಭಾವನಾತ್ಮಕ ಪರಿಸರವನ್ನು ಸೃಷ್ಟಿಸಿ ಬಿಡುತ್ತಾರೆ. ಇನ್ನೂ ಹೇಳಬೇಕೆಂದರೆ ಅಂಬೇಡ್ಕರ್ ಹಿನ್ನೆಲೆಯ ಸೈದ್ಧಾಂತಿಕತೆ ಕೇವಲ ಶುದ್ಧ ಅಕಾಡೆಮಿಕ್ ಆಗಿ ಮಾತ್ರವೇ ಚರ್ಚೆಯಾಗದೇ ಅದು ಸಾಮಾಜಿಕವಾಗಿ ಕ್ರಿಯಾ ರೂಪದಲ್ಲಿ ಪ್ರಯೋಗಿಸಿದಾಗ ಮಾತ್ರವೇ ಅದು ಅರ್ಥ ಹಾಗೂ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತದೆ. ಇಲ್ಲದಿದ್ದರೆ ಕೇವಲ ಸೀಮಿತ ಪರಿಧಿಯನ್ನು ಸೃಷ್ಟಿಸುತ್ತದೆ. ಇದು ಗಂಭೀರವಾಗಿ ಯೋಚಿಸಬೇಕಾದ ಸಂಗತಿ.

ದಕ್ಕಲಿಗರ ಸಮಸ್ಯೆಯು ಅಸ್ಪೃಶ್ಯ ಸಮುದಾಯದೊಳಗೆ ಈಗೀಗ ಪ್ರಬಲಗೊಳ್ಳುತ್ತಿರುವ ಎಡಬಲ ಸಮಸ್ಯೆಯಿಂದ ಉದ್ಭವಿಸಿರುವ ಹೊಸ ಬಿಕ್ಕಟ್ಟಾಗಿದೆ. ಛಲವಾದಿ ಸಂಘವೆಂಬುದು ಅಂಬೇಡ್ಕರ್ ತತ್ವಕ್ಕೆ ವಿರುದ್ಧವಾಗಿ ಹಾಗೂ ಅಂಬೇಡ್ಕರ್ ಅವರನ್ನು ಒಂದೇ ಒಂದು ಜಾತಿ ಸಮುದಾಯದ ನಾಯಕನನ್ನಾಗಿ ಮಾತ್ರ ಕೇಂದ್ರೀಕರಿಸ ತೊಡಗಿದ್ದು ಕೂಡ ಇಂತಹ ಅನಾಹುತಕ್ಕೆ ಕಾರಣವಾಗಿರುವ ಅಂಶಗಳಲ್ಲಿ ಒಂದು. ಇನ್ನು ಮಾದಿಗ ದಂಡೋರವು ಬಾಬುಜಗಜೀವನರಾಂ ಅವರನ್ನು ತಮ್ಮ ಸಮುದಾಯದ ನಾಯಕನನ್ನಾಗಿ ರೂಪಿಸತೊಡಗಿದ್ದು ಇನ್ನೊಂದು ಬಗೆಯ ಬಿಕ್ಕಟ್ಟನ್ನು ಸೃಷ್ಟಿಸಿತು. ಹೀಗೆ ಒಂದೊಂದು ಅಸ್ಪೃಶ್ಯ ಸಮುದಾಯವು ಜಾತಿ ಮೀರುವ ಬದಲಿಗೆ ಜಾತಿ ಕೇಂದ್ರಿತವಾಗಿ ಒಬ್ಬೊಬ್ಬ ನಾಯಕನನ್ನು ತಮ್ಮ ಸಮುದಾಯದ ನಾಯಕನನ್ನಾಗಿ ಪ್ರತಿಮೀಕರಿಸಿಕೊಂಡ ಕಾರಣವಾಗಿ ಸಹಜವಾಗೇ ಹೊಲಯರೂ ಅಲ್ಲದ, ಮಾದಿಗರೂ ಅಲ್ಲದ ಹಾಗೂ ಎರಡು ಸಮುದಾಯಗಳಿಂದಲೂ ಶೋಷಣೆಗೆ ಒಳಗಾಗಿರುವ ದಕ್ಕಲಿಗ ಸಮುದಾಯವು ತನ್ನದೇ ನಾಯಕನನ್ನು ರೂಪಿಸಿಕೊಳ್ಳಲು ಹೊರಟು ದಕ್ಷ ಬ್ರಹ್ಮನನ್ನು ಮರುಸೃಷ್ಟಿಸಿಕೊಳ್ಳುತ್ತಿರುವುದು ಇನ್ನಷ್ಟು ಗೊಂದಲವನ್ನು ಮೂಡಿಸುವುದಾಗಿದೆ. ಪುರಾಣದ ಇಂತಹ ಪ್ರತಿಮಾತ್ಮಕ ರೂಪಕ ದಕ್ಕಲಿಗ ಸಮುದಾಯವನ್ನು ಒಂದಿಷ್ಟು ಮೇಲರಿಮೆಯಿಂದ ಇರುವಂತೆ ಮಾಡಬಹುದೇ ಹೊರತು ಇಡೀ ಸಮುದಾಯವನ್ನು ವಿಮೋಚನೆಯ ದಿಕ್ಕಿಗೆ ಕೊಂಡೊಯ್ಯುವ ಬದಲಿಗೆ ಶತಮಾನಗಳಷ್ಟು ಹಿಂದಕ್ಕೆ ತಲುಪಿಸುವುದಾಗಿದೆ.

ಪ್ರಸ್ತುತ ದಕ್ಕಲಿಗ ಸಮುದಾಯವನ್ನು ವಿಮೋಚನೆಗೊಳಿಸುವ ಜವಾಬ್ದಾರಿ ಸಾಮೂಹಿಕವಾದುದು. ಈ ಹಿನ್ನೆಲೆಯಲ್ಲಿ ಅವರೊಟ್ಟಿಗೆ ಈಗಾಗಲೇ ಒಡನಾಡುತ್ತಿರುವ ಹಾಗೂ ಅಂಬೇಡ್ಕರ್ ಚಿಂತನೆಗಳನ್ನು ಗಂಭೀರವಾಗಿ ಅಧ್ಯಯನ ಮಾಡಿರುವ ಚಿಂತಕರಾದ ಡಾ. ಸಿ.ಎಸ್. ದ್ವಾರಕನಾಥ್, ಲೇಖನ ಬರೆದು ಪರಿಚಯಿಸಿದ ಸುಗತ ಶ್ರೀನಿವಾಸರಾಜು, ಅನುವಾದಿಸಿದ ವಡ್ಡಗೆರೆ ನಾಗರಾಜಯ್ಯ ಹಾಗೂ ಸ್ಥಳೀಯ ಕ್ರಿಯಾಶೀಲ ದಲಿತ ಚಳವಳಿ, ಜಾತ್ಯತೀತ ಪ್ರಾಮಾಣಿಕ ಮನಸ್ಸಿನ ದಲಿತರು-ದಲಿತೇತರರು ಹಾಗೂ ದಕ್ಕಲಿಗ ಮುಖಂಡರಾದ ಶಾಂತರಾಜು, ಮಲಕಪ್ಪ ಮತ್ತು ಈ ಸಮುದಾಯದ ಉತ್ಸಾಹಿ ಯುವಕರು ಈ ಎಲ್ಲರೂ ಒಟ್ಟಾಗಿ ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ ಪರಿಶ್ರಮಿಸುವುದಾದರೆ ದಕ್ಕಲಿಗರ ವಿಮೋಚನೆಯ ಪರ್ಯಾಯವೊಂದು ರೂಪುಗೊಳ್ಳಲು ಸಾಧ್ಯವಾಗಬಹುದು. □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಯಡಿಯೂರಪ್ಪ ಪ್ರಕರಣ ಮತ್ತು ಎಚ್ಚೆತ್ತುಕೊಳ್ಳಬೇಕಾದ ಶೂದ್ರ ಪ್ರಜ್ಞೆ

ಸಂಪಾದಕರೊಡನೆ ಸಂವಾದ

ರಘೋತ್ತಮ ಹೊ.ಬ.

ಪ್ರಿಯ ಸಂಪಾದಕರೇ,

ಕಡೆಗೂ ಯಡಿಯೂರಪ್ಪನವರ ಬಿಡುಗಡೆಯಾಗಿದೆ, 24 ದಿನಗಳ ಬಂಧನದ ನಂತರ ಅವರ ಬಂಧಮುಕ್ತವಾಗಿದೆ. ಇದು ಖುಷಿಯ ವಿಚಾರವೋ ಅಥವಾ ವಿಷಾದದ ವಿಚಾರವೋ ಅದು ಅವರವರ ಭಾವಕ್ಕೆ ಬಿಟ್ಟದ್ದು, ಅವರವರ ಭಕುತಿಗೆ ಬಿಟ್ಟದ್ದು. ಒಂದಂತು ನಿಜ ಒಟ್ಟಾರೆ "ಯಡಿಯೂರಪ್ಪ ಎಂಬ ಸಂಪೂರ್ಣ ಪ್ರಕರಣ" ಒಂದು ಸಣ್ಣ ಚಿಂತನೆಯ ತೊರೆಯನ್ನು ಈ ಸಂದರ್ಭದಲ್ಲಿ ಹುಟ್ಟುಹಾಕಿದೆ. ವೈಚಾರಿಕ ವಿಪ್ಲವದ ಅಲೆಗಳನ್ನು ಎಳಿಸಿದೆ. ಬ್ರಾಹ್ಮಣಿಕೆಯ ಯಜಮಾನ್ಯದ ತಂತ್ರವನ್ನು ಜಗಜ್ಜಾಹೀರುಗೊಳಿಸಿದೆ. ಅದನ್ನು ಅರ್ಥಮಾಡಿಕೊಳ್ಳದ ಶೂದ್ರಶಾಹಿಯ ದಡ್ಡತನವನ್ನು ಬೀದಿಗೆಳೆದಿದೆ. ಒಟ್ಟಾರೆ ಪ್ರಕರಣ ದೇಶದ ಬೃಹತ್ ಸಮುದಾಯವೊಂದಕ್ಕೆ ಪಾಠವಾಗಬೇಕು, ಮತ್ತದರ ಪ್ರಜ್ಞೆಯ ಸುಪ್ತ ಸ್ಥಿತಿಯನ್ನು ಸಹ ಎಚ್ಚರಿಸಬೇಕು. ಹೌದು, ಹಾಗೆ ಪಾಠ ಕಲಿಯಬೇಕಾದ ಸಮುದಾಯ ಶೂದ್ರರು. ಹಾಗೆ ಎಚ್ಚೆತ್ತುಕೊಳ್ಳಬೇಕಾದುದು ಆ ಶೂದ್ರ ಪ್ರಜ್ಞೆಯದು.

ಹೌದು, ಶೂದ್ರ ಪ್ರಜ್ಞೆ, ಈ ದೇಶದಲ್ಲಿ ಗುಪ್ತಗಾಮಿನಿಯಂತೆ ಹರಿಯುತ್ತಿರುವ ಮತ್ತು ಅಂತಹ ಸಮುದಾಯದ ಅರಿವಿಗೆ ಬಾರದ ಪ್ರಜ್ಞೆಯದು. ಎಲ್ಲೋ ಒಂದೆರಡುಕಡೆ ಮಹಾತ್ಮ ಜ್ಯೋತಿಬಾಫುಲೆ, ಮಾತೆ ಸಾವಿತ್ರಿಬಾಫುಲೆ, ಶ್ರೀ ನಾರಾಯಣಗುರು, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ಇತ್ಯಾದಿ ಮಹಾನ್ ಪುರುಷರು ಇದರ ಎಚ್ಚರಿಕೆಗೆ ಪ್ರಯತ್ನಿಸಿದ್ದರೂ ಒಟ್ಟಾರೆ ಭಾರತದ ಬಿಡಿ ಬಿಡಿ ಸಮುದಾಯವಾದ ಶೂದ್ರ ಸಮುದಾಯ ಇಂತಹ ಮಹಾಪುರುಷರ ಹೋರಾಟವನ್ನು ಅರ್ಥ ಮಾಡಿಕೊಳ್ಳಲು ಹೋಗಿಲ್ಲ.

ಮನು ಧರ್ಮಶಾಸ್ತ್ರ ಶೂದ್ರರು ನೀವು ಪಾದದಿಂದ ಹುಟ್ಟಿದವರು ಎಂದಾಕ್ಷಣ ಶೂದ್ರರು ಬೀದಿಗಿಳಿಯಬೇಕಿತ್ತು. "ಹಾಗೆ ಬರೆಯಲು ನಿನಗೆ ಅಧಿಕಾರ ಕೊಟ್ಟವರ್ಯಾರು?" ಎಂದು ಆ ಮನುಧರ್ಮ ಶಾಸ್ತ್ರವನ್ನು ಸುಡಬೇಕಿತ್ತು. ಆದರೆ ಅಂಬೇಡ್ಕರ್ ಎಂಬ ಅಸ್ಪೃಶ್ಯ ದೊರೆಯ ಕೈಯಲ್ಲಿ ಅಂತಹ ಸುಡುವ ಕ್ರಿಯೆ ನಡೆಯಿತೆ ಹೊರತು ಶೂದ್ರರಿಂದ ಸಾಧ್ಯವಾಗಲಿಲ್ಲ. ಹಾಗಿದ್ದರೆ ಅಂಬೇಡ್ಕರ್ ಎಂಬ ಅಸ್ಪೃಶ್ಯ ನಾಯಕರಿಗೆ ಸಾಧ್ಯವಾದದ್ದು ಶೂದ್ರರಿಗೇಕೆ ಸಾಧ್ಯವಾಗಲಿಲ್ಲ? ಮತ್ತದೇ ಕಾರಣ ನಾವು ಆ ಸಮುದಾಯದವರು, ನಮ್ಮದು ಅಂತ ಭಾರತದ ಸಮಾಜದಲ್ಲಿ ಒಂದು ಸಮುದಾಯವಿದೆ ಎಂಬ ಅರಿವಿನ ಕೊರತೆಯ ಕಾರಣವದು. ನಿಜ, ಭೌತಿಕವಾಗಿ ಇಂತಿಂತಹವರೆ ಶೂದ್ರರು ಎಂದು ಗುರುತಿಸಲು ಸಾಧ್ಯವಿಲ್ಲ ಅಥವಾ ಜಾತಿಯು ಹೆಸರಿನ ಮೂಲಕವೂ ಅಂತಹ ಗುರುತಿಸುವಿಕೆ ಸಾಧ್ಯವಿಲ್ಲ. ಆದರೆ ಆಚರಣೆಯ ಮೂಲಕ? ಖಂಡಿತ ಗುರುತಿಸಬಹುದು. ಸಾಮುದಾಯಿಕ ಚಿಂತನೆಯನ್ನು ಬಿತ್ತಬಹುದು. ಒಗ್ಗಟ್ಟಿನ ದೃಷ್ಟಿಯಿಂದ ಅಲ್ಲವಾದರೂ atleast ಯಡಿಯೂರಪ್ಪ ಪ್ರಕರಣದಂತಹ ಕುತಂತ್ರ ತಪ್ಪಿ ಸಲಾದರೂ ಅಂತಹ ಗುರುತಿಸುವಿಕೆ ನಡೆಯಬೇಕು. ಆದರೆ?

ಯಡಿಯೂರಪ್ಪ ಪ್ರಕರಣ ಹುಟ್ಟು ಹಾಕಿರುವುದೇ ಇದನ್ನು. ಬ್ರಾಹ್ಮಣಿಕೆಯ ಕುತಂತ್ರದ ಮತ್ತೊಂದು ಪುಟ ಈ ಯಡಿಯೂರಪ್ಪ ಪ್ರಕರಣ. ಸಂಖ್ಯಾಬಲವಿದ್ದರೂ ವಿದ್ಯೆ ಬಲ, ಬುದ್ಧಿ ಬಲವಿಲ್ಲದ ಕಾರಣ ಇಂತಹ ಪ್ರಕರಣಗಳು ಜರುಗುತ್ತಿವೆ. ಗೊತ್ತಿದ್ದೋ ಗೊತ್ತಿಲ್ಲದೆಯೋ ಬ್ರಾಹ್ಮಣಿಕೆಗೆ ಶೂದ್ರರ ಗುಲಾಮಗಿರಿ ನಡೆಯುತ್ತಿದೆ. ಇದನ್ನು ನೋಡಿಯೇ "ಶೂದ್ರಾತಿ ಶೂದ್ರರ ತಂದೆ" ಮಹಾತ್ಮ ಜ್ಯೋತಿಬಾಫುಲೆ ಯವರು "ಗುಲಾಮಗಿರಿ"ಎಂಬ ಕೃತಿ ಬರೆದಿರುವುದು. ಆ ಕೃತಿಯ ಒಂದೆರಡು ಸಾಲುಗಳು ಇಂತಿವೆ "ಇಂದು ಶೂದ್ರ ಬ್ರಾಹ್ಮಣನ ಬಂಧನಕ್ಕೆ ಒಳಗಾಗಿದ್ದಾನೆ. ಧಾರ್ಮಿಕ ಸೋಗಿನಡಿಯಲ್ಲೆ ಶೂದ್ರನ ಸಣ್ಣ-ಹಾಗೂ ದೊಡ್ಡ ಎಲ್ಲಾ ಕೆಲಸ ಕಾರ್ಯಗಳಲ್ಲಿ ಬ್ರಾಹ್ಮಣ ಮೂಗು ತೂರಿಸುತ್ತಾನೆ. ಮನೆಯಾಗಲಿ, ಹೊಲವಾಗಲಿ ಅಥವಾ ಕೋರ್ಟಿಗೆ ಹೋದರೂ, ಯಾವುದೇ ವ್ಯವಹಾರಕ್ಕೆ ಹೋದರೂ ಯಾವುದೋ ಸೋಗಿನಲ್ಲಿ ಬ್ರಾಹ್ಮಣ ಅಲ್ಲಿಗೆ ಬರುತ್ತಾನೆ. ಮತ್ತು ತನ್ನ ಕುಯುಕ್ತಿ ಬುದ್ಧಿಯಿಂದ ತನಗೆ ಎಷ್ಟು ಸಾಧ್ಯವೋ ಅಷ್ಟು ಶೂದ್ರನನ್ನು ಹಿಂಡುತ್ತಾನೆ. ಬ್ರಾಹ್ಮಣ ಬರೀ ಪುರೋಹಿತನಾಗಿ ಶೂದ್ರನನ್ನು ಲೂಟಿ ಮಾಡುತ್ತಿಲ್ಲ. ಬದಲಾಗಿ ಅನೇಕ ವಿಧಾನಗಳಲ್ಲಿ ಕೊಳ್ಳೆ ಹೊಡೆಯುತ್ತಾನೆ." ತಮ್ಮ ಕೃತಿಯಲ್ಲಿ ಹೀಗೆ ಹೇಳುತ್ತಹೋಗುತ್ತಾರೆ ಮಹಾತ್ಮ ಫುಲೆಯವರು. ಆಶ್ಚರ್ಯಕರವೆಂದರೆ ಫುಲೆಯವರ ಒಂದೊಂದು ಮಾತೂ ಈಗಲೂ ಸತ್ಯ! ಯಡಿಯೂರಪ್ಪನವರ ಪ್ರಕರಣವನ್ನೆ ತೆಗೆದುಕೊಳ್ಳಿ ಅವರು ಅಧಿಕಾರ ಕಳೆದುಕೊಳ್ಳುವುದರಿಂದ ಹಿಡಿದು ಬಂಧನಕ್ಕೊಳಗಾಗುವವರೆಗೆ, ಜಾಮೀನು ಸಿಗದೆ ನರಳಾಡುವವರೆಗೆ ಪ್ರತಿಯೊಂದು ಸಂದರ್ಭದಲ್ಲೂ ಫುಲೆಯವರು ಹೇಳಿದ ಬ್ರಾಹ್ಮಣಿಕೆ ಅವರನ್ನು ಕಾಡಿದೆ!

ಫುಲೆಯವರು ಮುಂದುವರೆದು ಹೇಳುವುದನ್ನು ಕೇಳಿ "ಗ್ರಾಮದ ಪಟೇಲ ಕೇವಲ ನಾಮಕಾವಸ್ತೆಗೆ ಮುಖ್ಯಸ್ಥ. ಕುಲಕರ್ಣಿ, ವಂಶಪಾರಂಪರ್ಯ ಬ್ರಾಹ್ಮಣ ಗ್ರಾಮೀಣ ಲೆಕ್ಕಾಧಿಕಾರಿ. ಕುಖ್ಯಾತ ಕಲಹ ಸೃಜನನಾದ ಕುಲಕರ್ಣಿ ಪಟೇಲನನ್ನು ತನ್ನ ಅವಶ್ಯಕತೆಗೆ ಅನುಗುಣವಾಗಿ ಮಾರ್ಪಡಿಸಿಕೊಳ್ಳುತ್ತಾನೆ. ಕೃಷಿಕರಿಗೆ ಅವನೆ ಐಹಿಕ ಮತ್ತು ಧಾರ್ಮಿಕ ಭೋದಕ, ಅವನ ಅಗತ್ಯಗಳ ನಿವಾರಕ. ಎಲ್ಲಾ ವಿಚಾರಗಳ ತೀರ್ಪುಗಾರ. ಸಾಕಷ್ಟು ಸಂದರ್ಭಗಳಲ್ಲಿ ಕಿಲಾಡಿತನದಿಂದ ಈ ಬ್ರಾಹ್ಮಣ ವಿರೋಧಿಗಳಿಗೆ ಭಿನ್ನಸಲಹೆ ನೀಡಿ ತನ್ನ ರೆಕ್ಕೆ ಪುಕ್ಕಗಳನ್ನು ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಳ್ಳುತ್ತಾನೆ" ಎನ್ನುವ ಫುಲೆಯವರು ನ್ಯಾಯಾಲಯದಲ್ಲಿ ಅವರ ಸ್ಥಾನವೇನು, ಶೂದ್ರ ಅಪರಾಧಿಗಳ ಸ್ಥಿತಿಯೇನು ಎಂಬುದನ್ನು ಹೀಗೆ ಹೇಳುತ್ತಾರೆ: "ನಾವು ಮೇಲ್ಮಟ್ಟಕ್ಕೆ ಹೋಗಿ ಕೋರ್ಟ್‌ನ ಮಾಮ್ಲೂತ್‌ದಾರನಲ್ಲಿ ಹೊದರೂ ಅದೇ ಕಾಣಸಿಗುತ್ತದೆ. ಮಾಮ್ಲೂತ್‌ದಾರನ ಮೊದಲ ಕಳವಳ ಅವನ ಸಂಬಂಧಿಗಳನ್ನು, ಇಲ್ಲವಾದಲ್ಲಿ ಅವನ ಕುಲಸ್ತರನ್ನು ಅವನ ಸುತ್ತಮುತ್ತಲ ಅಧಿಕಾರಿಗಳನ್ನಾಗಿ ನೇಮಿಸಿಕೊಳ್ಳುವುದು. ಇವರು ಸಕ್ರೀಯವಾಗಿ ಕಲಹಗಳನ್ನು ಉತ್ತೇಜಿಸುತ್ತಾರೆ. ಹಾಗೂ ಸಾಮಾನ್ಯವಾಗಿ ಕೊರ್ಟುಗಳಲ್ಲಿ ಎಲ್ಲಾ ರೀತಿಯ ಭ್ರಷ್ಟಕಾರ್ಯಗಳಿಗೆ ಮಾಧ್ಯಮವಾಗುತ್ತಾರೆ. ಒಬ್ಬ ಶೂದ್ರನು, ಅತೀಶೂದ್ರನು ಈ ಕೊರ್ಟುಗಳಿಗೆ ಅಲೆಯುವಂತಾದಲ್ಲಿ ಅವರಿಗೆ ದೊರಕುವ ಉಪಚಾರ ಕೀಳು ಜಂತುವಿಗೆ ಸಿಗುವ ಉಪಚಾರಕಿಂತಲೂ ಕೀಳಾಗಿರುತ್ತದೆ. ಅವರ ಮೊಕದ್ದಮ್ಮೆಗಳನ್ನು ಶ್ರದ್ಧೆಯಿಂದ ಆಲಿಸುವ ಬದಲು ಅವರ ಮೇಲೆ ಬೈಗುಳದ ಸುರಿಮಳೆಯೇ ಸುರಿದು ಅವರ ಮೊಕದ್ದಮೆಗಳು ಯಾವುದೋ ಕಳ್ಳನೆವದಿಂದ ತಳ್ಳಿ ಹಾಕಲ್ಪಡುತ್ತವೆ. ಅದೇ ತಮ್ಮ ಕುಲಸ್ತರು ಕೊರ್ಟುಗಳಿಗೆ ಹೋದರೆ ಅವರಿಗೆ ಸಿಗುವ ಮರ್ಯಾದೆಯೇ ಬೇರೆ". ಹೀಗೆ ಫುಲೆಯವರು ನ್ಯಾಯಾಲಯಗಳಲ್ಲಿ ಶೂದ್ರರಿಗೆ ಸಿಗುವ "ರಾಜ ಮರ್ಯಾದೆ"ಯನ್ನು ಕುರಿತು ಹೇಳುತ್ತಾರೆ. ಅಂದಹಾಗೆ ಶೂದ್ರವರ್ಗದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಜಾಮೀನು ಸಿಗಲು ತಡವಾದದ್ದಕ್ಕೆ ಕಾರಣ ಫುಲೆಯವರ ಈ ಮಾತಿನಲ್ಲಿ ಸಿಗುತ್ತದಲ್ಲವೆ?

ದುರಂತವೆಂದರೆ, ಯಡಿಯೂರಪ್ಪನವರಿಗಾಲೀ, ಮತ್ಯಾರೋ ಶೂದ್ರ ಸಮುದಾಯದ ನಾಯಕರಿಗಾಗಲೀ ಫುಲೆಯವರ ಈ ಚಿಂತನೆಯ ಕಾಳಜಿಯ ಮಾತುಗಳು ಅರ್ಥವಾಗುವುದೇ ಇಲ್ಲ. ಅದು ಕನಿಮೊಳಿ ಇರಬಹುದು, ಎ. ರಾಜ ಇರಬಹುದು, ಜನಾರ್ಧನ ರೆಡ್ಡಿ, ಜಗನ್ ರೆಡ್ಡಿ, ಲಾಲೂಪ್ರಸಾದ್ ಯಾದವ್, ಮತ್ಯಾರೋ ಇರಬಹುದು. ಬ್ರಾಹ್ಮಣಶಾಹಿಯ ಕುತಂತ್ರ ಇವರ್‍ಯಾರಿಗೂ ಅರ್ಥವಾಗುವುದಿಲ್ಲ. ಅರ್ಥವಾದರೂ ಅವರ "ಶೂದ್ರ ಪ್ರಜ್ಞೆ ಎಚ್ಚೆತ್ತುಕೊಳ್ಳುವುದೇ ಇಲ್ಲ. ಮತ್ತದೇ ಬ್ರಾಹ್ಮಣಿಕೆಯ ತಂತ್ರಕ್ಕೆ ಬೀಳುತ್ತಲೇ ಇರುತ್ತಾರೆ. ಬಿದ್ದು ನರಳುತ್ತಲೇ ಇರುತ್ತಾರೆ.

ಉದಾಹರಣೆಗೆ ಯಡಿಯೂರಪ್ಪನವರನ್ನು ತೆಗೆದುಕೊಳ್ಳಿ. ತಮ್ಮ ಪಕ್ಷದ ಬ್ರಾಹ್ಮಣ ನಾಯಕರ ಅಧಿಕಾರ ಲಾಲಸೆಗಾಗಿ ನಾನು ಈ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದೇನೆಂದು ಗೊತ್ತಿದ್ದರೂ ಕೂಡ ಅವರು ಬ್ರಾಹ್ಮಣರ ಆಚರಣೆಗಳಾದ ಯಜ್ಞ ಯಾಗಾದಿಗಳನ್ನು ಬಿಟ್ಟಿಲ್ಲ. ಹೋಮ ಹವನವನ್ನು ಆಚರಿಸುವುದನ್ನು ತಪ್ಪಿಸಿಲ್ಲ. ಆರ್.ಎಸ್.ಎಸ್. ನ ಪುಂಗಿ ಊದುವುದನ್ನು ನಿಲ್ಲಿಸಿಲ್ಲ. ಅದು ಕಲ್ಯಾಣ್ ಸಿಂಗ್ ಇರಬಹುದು, ಉಮಾಭಾರತಿ ಇರಬಹುದು, ಬಂಗಾರು ಲಕ್ಷ್ಮಣ್, ಮತ್ಯಾರೋ ಇರಬಹುದು ಬ್ರಾಹ್ಮಣಿಕೆಯ ಕುಣಿಕೆಗೆ ಕೊರಳೊಡ್ಡುವುದು ಇವರ್‍ಯಾರಿಗೂ ತಪ್ಪಿಲ್ಲ.

(13ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಸಾಮಾಜಿಕ ಬಹಿಷ್ಕಾರಕ್ಕೆ ಉಗ್ರ ಕ್ರಮ ಅಗತ್ಯ

ಮಾರುತಿ. ಹೆಚ್

ಪ್ರಿಯ ಸಂಪಾದಕರೇ,

47ರ ಸ್ವಾತಂತ್ರ್ಯಕ್ಕೆ 65ರ ಮುಪ್ಪು ಬದಲಾದುದು ಏನು ಇಲ್ಲ: ಇದು ಇವತ್ತಿನ ದಲಿತರ ಕರಾಳ ಬದುಕಿನ ಜೀವನಕ್ಕೆ ಸೂಕ್ತ ಹೇಳಿಕೆಯಾಗಿದೆ. ಏಕೆಂದರೆ ಈ ದೇಶದ ಆಳುವ ವರ್ಗಗಳು ಸ್ವಾತಂತ್ರ, ಸಮಾನತೆ, ಜಾತ್ಯತೀತತೆ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಅಥವಾ ವಿಧಾನ ಸೌಧಗಳ ಮೊಗಸಾಲೆಯಲ್ಲಿ ಪುಂಖಾನು ಪುಂಖವಾಗಿ ಊದುತ್ತಿದ್ದರು. ವಾಸ್ತವದಲ್ಲಿ ದಲಿತರು ಇಂದಿಗೂ ಅಭದ್ರತೆ, ಶೋಷಣೆ, ಅಸಮಾನತೆ, ದಬ್ಬಾಳಿಕೆಯ ಕರಿ ನೆರಳಿನಲ್ಲಿ ಜೀವನ ಸಾಗಿಸುತ್ತಿದ್ದಾರೆ.

ಇತ್ತೀಚೆಗೆ ಮಂಡ್ಯ ಜಿಲ್ಲೆಯ ನಾಗಮಂಗಲದ ಕಸುವಿನಹಳ್ಳಿ, ಅರಕಲಗೂಡು ತಾಲ್ಲೂಕಿನ ಸಿದ್ದಾಪುರ, ಧಾರವಾಡ ಜಿಲ್ಲೆಯ ನಾಯಕನೂರು, ಮಳವಳ್ಳಿಯ ಕಿರುಗಾವಲು, ಹಾಸನದ ಕೆರೆಗೋಡು ಮುಂತಾದ ಸ್ಥಳಗಳಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿರುವುದು ಅಮಾನವೀಯ ಕೃತ್ಯವಾಗಿದೆ.

"ಜಾತಿ" ಎನ್ನುವ ಒಂದೇಕಾರಣಕ್ಕಾಗಿ ಈರೀತಿಯ ದೌರ್ಜನ್ಯಗಳು, ಹಲ್ಲೆಗಳು ಹಾಗೂ ಬಹಿಷ್ಕಾರಗಳು ನಿರಂತರವಾಗಿ ದಲಿತರ ಮೇಲೆ ಎಸಗಲಾಗುತ್ತಿದೆ. ಆದರೆ ದಲಿತರನ್ನು ದೌರ್ಜನ್ಯದಿಂದ ಮುಕ್ತಗೊಳಿಸ ಬೇಕಾದ ಇಲ್ಲವೇ ರಕ್ಷಿಸಬೇಕಾದ ಪೊಲೀಸ್ ಇಲಾಖೆ, ಜಿಲ್ಲಾಡಳಿತಗಳು, ನ್ಯಾಯಾಲಯಗಳು, ಸಮಾಜಕಲ್ಯಾಣ ಇಲಾಖೆಗಳು ಸಂಪೂರ್ಣವಾಗಿ ವಿಫಲಗೊಂಡಿವೆ. ಈ ಹಿನ್ನಲೆಯಲ್ಲಿ ದಲಿತರ ಘನತೆ ಬದುಕಿಗೆ ಕುಂದು ಉಂಟಾಗದಂತೆ ಕ್ರಮ ಕೈಗೊಳ್ಳುವ ಜವಾಬ್ದಾರಿ ಸರ್ಕಾರದ್ದಾಗಿದೆ.

ದಲಿತರ ಪ್ರಶ್ನೆ ಎಂದರೆ ಸಾಮಾಜಿಕ ಘನತೆ, ಈ ಸಾಮಾಜಿಕ ಘನತೆಗಾಗಿ ಹಾಗೂ ಮೂಲಭೂತ ಹಕ್ಕುಗಳಿಗಾಗಿ ದಲಿತರು ಜಾಗೃತರಾದಂತೆಲ್ಲಾ ಸಾಮಾಜಿಕ ಬಹಿಷ್ಕಾರಗಳು ಎಗ್ಗಿಲ್ಲದೆ ನೆಡೆಯುತ್ತಿರುವದರಿಂದ ದೇಶವ್ಯಾಪಿ ಈ ಬಗ್ಗೆ ಗಂಭೀರ ಚಿಂತನೆ ಪರ್ಯಾಯ ಕಾನೂನು ಕ್ರಮಗಳು ಪ್ರಸ್ತುತವಾಗಿದೆ. ಕರ್ನಾಟಕದಲ್ಲಿ ದಲಿತರ ಮೇಲೆ ನಡೆಯುತ್ತಿರುವ ನಿರಂತರ ಬಹಿಷ್ಕಾರಗಳನ್ನು ಗಮನಿಸಿದರೆ ಇದು ನಾಗರಿಕ ಸಮಾಜವೇ? ಎಂದೆನಿಸುತ್ತದೆ.

ಇತ್ತೀಚೆಗೆ ಮಂಡ್ಯ ಜಿಲ್ಲೆಯ ನಾಗಮಂಗಲ ಕಸುವಿನಹಳ್ಳಿಯಲ್ಲಿ (ಶಾಸಕ ಸುರೇಶ್‌ಗೌಡ ಪ್ರತಿನಿಧಿಸುವ ಕ್ಷೇತ್ರ) ಗಣೇಶನ ವಿಸರ್ಜನೆ ವೇಳೆ ತಮಟೆ ಬಡಿಯಲು ನಿರಾಕರಿಸಿದರೆನ್ನುವ ಕಾರಣಕ್ಕಾಗಿ 8 ದಲಿತ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ. ಅಲ್ಲದೆ ಭೂಹೀನ ದಲಿತರಿಗೆ ಯಾರು ಕೂಲಿಗೆ ಕರೆಯದೆ, ಸಾರ್ವಜನಿಕ ಸ್ಥಳಗಳಲ್ಲಿ ಅಡ್ಡಾಡಲು ಬಿಡದೆ, ಕೊಳವೆ ಬಾವಿಯಲ್ಲಿ ನೀರು ತರಲು ಹೋದ ದಲಿತ ಮಹಿಳೆಯರಿಗೆ ಕೊಲೆ ಬೆದರಿಕೆಗಳನ್ನು ಹಾಕಲಾಗಿರುವುದು ಅಮಾನವೀಯ ನಡತೆಯಾಗಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಗ್ರಾಮದ ದಲಿತ ಚಿಕ್ಕಮಂಜಯ್ಯ ಎಂಬುವವರು ಕ್ಷೌರ ಮಾಡುವಂತೆ ಹೇರ್‌ಡ್ರಸಸ್ ಮಾಲಿಕನನ್ನು ಒತ್ತಾಯಿಸಿದ ಪರಿಣಾಮ ಜಾತಿ ವೈಷಮ್ಯಕ್ಕಾಗಿ ಆತನ ಮೂಗನ್ನು ಕುಯ್ದಿರುವುದು ಹೇಯ ಕೃತ್ಯವಾಗಿದೆ.

ಅರಕಲಗೂಡು ತಾಲ್ಲೂಕಿನ ಸಿದ್ದಾಪುರ ಗ್ರಾಮದಲ್ಲಿ ಸವರ್ಣೀಯ ಜಾತಿಗೆ ಸೇರಿದ ವ್ಯಕ್ತಿಯೊಬ್ಬ ಮೃತಪಟ್ಟ ಹಿನ್ನೆಲೆಯಲ್ಲಿ ಅಂತ್ಯಕ್ರಿಯೆಗೆ ಸಮಾಧಿ ತೆಗೆಯಬೇಕು ಎಂದು ಗ್ರಾಮದ ದಲಿತರಿಗೆ ಸೂಚಿಸಲಾಗಿ ದಲಿತರು ವಯಸ್ಸಾಗಿರುವ ಕಾರಣ ಮತ್ತು ಅವರ ಮಕ್ಕಳು ವ್ಯಾಸಂಗ ಮಾಡುತ್ತಿರುವುದರಿಂದ ಕುಲವಾಡಿಕೆ ನಿರಾಕರಿಸಿದ ಪರಿಣಾಮ 9 ದಲಿತ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ.

ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ನಾಯಕನೂರಿನ ದಲಿತರು ಸವರ್ಣೀಯರ ಮನೆಯ ದನದ ಕೊಟ್ಟಿಗೆಯ ಸಗಣಿ ತೆಗೆಯುವ ಸಂಬಂದ ಕುಲವಾಡಿಕೆ ನಿರಾಕರಿಸಿದರು ಹಾಗೂ ಈ ಸಗಣಿ ಬಳಿಯುವುದರಿಂದ ಹೊಟ್ಟೆ ತುಂಬುವುದಿಲ್ಲ ಬೇರೆ ಕೆಲಸ ಮಾಡುತ್ತೇವೆಂದು ದಲಿತರು ಹೇಳಿದ ಕಾರಣ ರೊಚ್ಚಿಗೆದ್ದ ಸವರ್ಣೀಯರು ಅಂದಾನಿಗೌಡ ಪಾಟೀಲನ ನೇತೃತ್ವದಲ್ಲಿ 37ದಲಿತ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ.

ಮುಂದುವರೆದ ಸವರ್ಣೀಯರ ಕ್ರೌರ್ಯವು ದಲಿತರನ್ನು ಚಹಾದಂಗಡಿ, ದೇವಸ್ಥಾನ, ಸರ್ಕಾರಿ ಜಾಗಗಳಲ್ಲಿ ಅಡ್ಡಾಡಲು ಬಿಡದಂತೆ, ವಿದ್ಯಾರ್ಥಿಗಳು ಶಾಲೆಗೆ ಹೋಗದಂತೆ ತಡೆಗಟ್ಟಿ ದಲಿತ ಮಹಿಳೆಯರನ್ನು ಅವಾಚ್ಯಾ ಶಬ್ಧಗಳಿಂದ ನಿಂದಿಸಿ ಹಲವರ ಮೇಲೆ ಹಲ್ಲೆ ಮಾಡಿದ್ದಾರೆ. ಊರಲ್ಲಿ ಯಾರಾದರು ದಲಿತರಿಗೆ ಸಹಾಯ ಮಾಡಿದರೆ 5001ರೂ.ಗಳಂತೆ ದಂಡವೆಂದು ನಿಗದಿ ಪಡಿಸಿದ್ದಾರೆ.

ಈ ಬಹಿಷ್ಕಾರದಿಂದ ಜರ್ಝರಿತರಾದ ದಲಿತರು ನವಲಗುಂದದ ಶೆಟ್ಟಿಹಳ್ಳಿ ಕ್ರಾಸ್ ಬಳಿ ಆಗಸ್ಟ್ 21ರಂದು ಧರಣಿ ನಡೆಸಿ ಪ್ರತಿಭಟನೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಸ್ಥಳಕ್ಕೆ ದಾವಿಸಿದ ಸಾಮಾಜ ಕಲ್ಯಾಣ ಸಚಿವರಾದ ಎ. ನಾರಾಯಣಸ್ವಾಮಿ ಮತ್ತು ಗ್ರಾಮೀಣ ಸಚಿವ ಜಗದೀಶ್ ಶೆಟ್ಟರ್‌ರವರಿಗೆ ತಮ್ಮ ಕೇರಿಯನ್ನು ಊರಿನಿಂದ ಹೊರಗೆ ಬದಲಿಸಿ ಕೊಡುವಂತೆ ಕೇಳಿಕೊಂಡರೂ ಈ ವರೆಗೆ ಪ್ರಯೋಜನವಾಗಿಲ್ಲ. ಒಟ್ಟಾರೆ ತಮ್ಮ ಕೇರಿ ಬೇರೆ ಆದರೆ ಸಾಕು ಆ ಗ್ರಾಮದ ಸಹವಾಸ ಬೇಡ ಎನ್ನುವ ಸ್ಥಿತಿ ದಲಿತರದ್ದಾಗಿದೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಹೋಬಳಿಯ ಕೆರೆಗೋಡು ಗ್ರಾಮದಲ್ಲಿ ದಲಿತರು ಕುಲವಾಡಿಕೆ ಮಾಡಲಿಲ್ಲ ಎನ್ನುವ ಕಾರಣಕ್ಕೆ ಬಹಿಷ್ಕಾರಕ್ಕೆ ಒಳಗಾಗಿದ್ದಾರೆ.

ಸಾಮಾಜಿಕ ಬಹಿಷ್ಕಾರಗಳೇಕೆ?

ಭಾರತದಲ್ಲಿ ಸಂವಿಧಾನ ಬದ್ದ ಕಾನೂನುಗಳು ಜಾರಿಮಾಡಿದ್ದರೂ ದಲಿತರು ದೌರ್ಜನ್ಯಗಳಿಂದ ಮುಕ್ತರಾಗಿಲ್ಲ. ದಲಿತರು ತಾವು ಪಡೆದ ವಿದ್ಯೆಯಿಂದ ಜಾಗೃತರಾಗಿ, ಸ್ವಾಭಿಮಾನಿ ಹಕ್ಕುಗಳಿಗಾಗಿ ದನಿ ಎತ್ತಿದಾಗಲೆಲ್ಲಾ ಬಹಿಷ್ಕಾರ ಪ್ರಕರಣಗಳು ಹೆಚ್ಚುತ್ತಲೇ ಸಾಗಿರುವುದು ದುರದೃಷ್ಟದ ವಿಚಾರ. ದೌರ್ಜನ್ಯ ತಡೆ ಕಾಯ್ದೆ ಕಾನೂನುಗಳು ಕಠಿಣವಾಗಿದ್ದರೂ ವಾಸ್ತವದಲ್ಲಿ ಕಾಗದದಲ್ಲಷ್ಟೆ ಇವೆ. ಈ ಹಿನ್ನೆಲೆಯಲ್ಲಿ ಆರೋಪಿಗಳು ರಾಜಿ-ರಾಜಕೀಯ ಪ್ರಭಾವಗಳನ್ನು ಬಳಸಿ ತಪ್ಪಿಸಿಕೊಳ್ಳುವುದೇ ಹೆಚ್ಚು.

ಇತ್ತೀಚೆಗೆ ದಲಿತರ ಮೇಲೆ ದೌರ್ಜನ್ಯ ಎಸಗುತ್ತಿರುವ ಜಾತಿಗಳ ಕಡೆ ಕಣ್ಣಾಯಿಸಿದರೆ ಅವು ದಲಿತರಂತೆ ಸಂವಿಧಾನ ಅಡಿಯಲ್ಲಿ ಮೀಸಲಾತಿ ಪಡೆಯುವ ಹಿಂದುಳಿದ ಜಾತಿಗಳೇ ಆಗಿವೆ. ಉದಾಹರಣೆಗೆ- ಒಕ್ಕಲಿಗ, ಲಿಂಗಾಯತ, ಮಡಿವಾಳ, ಗೊಲ್ಲ, ಕುರುಬ, (ಓ.ಬಿ.ಸಿ) ಪಂಚಮರ ಸಾಲಿನ ಶೂದ್ರವರ್ಗಗಳಲ್ಲಿ ಪರಿಶಿಷ್ಟ ಜಾತಿಗಳಂತೆ ಕಂಡುಬರುವ ಈ ಓ.ಬಿ.ಸಿ ಜಾತಿಗಳು ಗ್ರಾಮೀಣ ಭಾರತದ ಸಮಾಜದಲ್ಲಿ ಹಿಂದೂ ದೇವಾಲಯಗಳಿಗೆ ಮುಕ್ತ ಪ್ರವೇಶ ಹಾಗೂ ಹಿಂದೂ ದೇವರುಗಳನ್ನು ಪೂಜಿಸಲು ಅವಕಾಶ ಪಡೆದುಕೊಂಡಿವೆ, ಆದರೆ ಅದೇ ವೇಳೆಗೆ ದಲಿತರು ಇವತ್ತಿನವರೆಗೂ ಯಾವುದೇ ಗ್ರಾಮೀಣ ಪ್ರದೇಶಗಳಲ್ಲಿ ದೇವಾಲಯಗಳನ್ನು ಪ್ರವೇಶಿಸಲು ಆಗದಿರುವುದು ಬಹು ಮುಖ್ಯ ವಿಚಾರ.

ಓ.ಬಿ.ಸಿಗಳು ವೈದಿಕಶಾಹಿ ಪರಂಪರೆಯಲ್ಲಿ ಕಂಡುಬರುವ ಬ್ರಾಹ್ಮಣರಂತೆ ತಾವು ಶ್ರೇಷ್ಠ ಎನ್ನುವ ಪರಿಕಲ್ಪನೆಯಲ್ಲಿ ಕೆಲವು ಅನುಕರಣೆಗಳನ್ನು ಮಾಡುತ್ತಾ ಹೊರಟಿರುವುದು ಜೊತೆಗೆ ಸ್ವಂತ ಜಮೀನುಗಳನ್ನು ಗ್ರಾಮೀಣ ಪ್ರದೇಶದಲ್ಲಿ ಹೊಂದಿರುವುದೇ ಆಗಿದೆ. ಆದರೆ ದಲಿತರಿನ್ನೂ ಕೃಷಿಕಾರ್ಮಿಕರಾಗೆ ಈ ಓ.ಬಿ.ಸಿಗಳ ಜಮೀನುಗಳನ್ನೇ ತಮ್ಮ ಜೀವನಾಧಾರ ಕೂಲಿಗಾಗಿ ಆಶ್ರಯಿಸಿಕೊಂಡು ಉಳಿದಿದ್ದಾರೆ.

ಈ ಹಿನ್ನೆಲೆಯಲ್ಲಿ ಜಾತಿ ಘರ್ಷಣೆಗಳು ಗ್ರಾಮೀಣ ಸಮಾಜದಲ್ಲಿ ಪುನ: ಪುನ: ಕಾಣಿಸಿಕೊಳ್ಳುತ್ತಿವೆ. ಈ ತಾರತಮ್ಯ ಅಸಮಾನತೆಯ ಬಗ್ಗೆ ಅಪರಿ ಪೂರ್ಣ ಭೂಒಡೆತನ ಮತ್ತು ಭೂಸುಧಾರಣೆಗಳ ಬಗ್ಗೆ ದೊಡ್ಡ ಮಟ್ಟದ ಚಿಂತನೆ ದೇಶವ್ಯಾಪಿ ಇಂದು ನಡೆಸ ಬೇಕಾಗಿರುವುದರ ಅಗತ್ಯವಿದೆ.

ಓ.ಬಿ.ಸಿಗಳು ಕೆಲವು ಪ್ರದೇಶಗಳಲ್ಲಿ ದಲಿತರಿಗಿಂತ ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದಿದ್ದೇವೆ ಎಂದರೂ ಸಹ ಜಾತಿಯಿಂದ ಅವರು ಸವರ್ಣೀಯರೇ ಆಗಿದ್ದಾರೆ. ಈ ನಿಟ್ಟಿನಲ್ಲಿ ದಲಿತರು ಮತ್ತು ಹಿಂದುಳಿದ ಜಾತಿಗಳು ಒಂದಾಗಬೇಕೆಂಬ ಆಶಯಗಳು ಫಲಿಸುವುದೆ? ತಪ್ಪು

(13ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಅಂಬೇಡ್ಕರ್ ಜ್ಯೋತಿ; ಕೋಮುವಾದ ಕೋತಿ

ಸನತ್‌ಕುಮಾರ ಬೆಳಗಲಿ

ಪ್ರಿಯ ಸಂಪಾದಕರೇ,

ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಅಸ್ತಿತ್ವಕ್ಕೆ ಬಂದು 86 ವರ್ಷಗಳು ಗತಿಸಿದರೂ ಅದು ತನ್ನದೇ ಆದ ಹೆಮ್ಮೆಪಡುವ, ಅಭಿಮಾನದಿಂದ ಹೇಳಿಕೊಳ್ಳುವ ಪರಂಪರೆಯನ್ನು ಕಟ್ಟಿಕೊಳ್ಳಲು ಅದಕ್ಕೆ ಆಗಲೇ ಇಲ್ಲ. ಇಡೀ ರಾಷ್ಟ್ರ ಒಪ್ಪಿಕೊಳ್ಳುವ ಒಬ್ಬನೇ ಒಬ್ಬ ನಾಯಕನೂ ಈ ಸಂಘದಿಂದ ಬರಲಿಲ್ಲ. ದೇಶಕ್ಕಾಗಿ, ಜನತೆಗಾಗಿ ಹೋರಾಟ ನಡೆಸಿದ ಚರಿತ್ರೆಯೂ ಇದಕ್ಕಿಲ್ಲ. ಇಡೀ ರಾಷ್ಟ್ರ ಸ್ವಾತಂತ್ರ್ಯ ಆಂದೋಲನದ ಅಗ್ನಿಕುಂಡದಲ್ಲಿದ್ದಾಗ ಈ ಕರಿಟೋಪಿ ಕೂಟ ಬ್ರಿಟಿಷರ ಆಳರಸರ ಫಲಾನುಭವಿಯಾಗಿತ್ತು. ಸ್ವಾತಂತ್ರ್ಯ ಹೋರಾಟಗಾರರನ್ನು ಪೊಲೀಸರಿಗೆ ಹಿಡಿದುಕೊಡುವುದೇ ಆಗ ಈ ಸಂಘದ 'ರಾಷ್ಟ್ರಸೇವೆ'ಯಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಗಾಂಧೀಜಿಯವರನ್ನು ಮುಗಿಸಿದ್ದು, ಗುಜರಾತನ್ನು ರಕ್ತದಲ್ಲಿ ತೋಯಿಸಿದ್ದು, ರಥಯಾತ್ರೆ ಎಂಬ ರಕ್ತಯಾತ್ರೆ ನಡೆಸಿದ್ದು ಇವರ ಸಾಧನೆ.

ಅಂತಲೇ ಸಂಘದಿಂದ ಒಬ್ಬನೇ ಒಬ್ಬ ರಾಷ್ಟ್ರನಾಯಕ ಹೊರಹೊಮ್ಮಲಿಲ್ಲ. ಉದುರಿಬಿದ್ದವರೆಲ್ಲ ನಾತೂರಾಮ ಗೋಡ್ಸೆ, ಆಪ್ಟೆ, ಗೋಳ್ವಲ್ಕರ್, ನರೇಂದ್ರಮೋದಿ, ಅಡ್ವಾಣಿ, ಯಡಿಯೂರಪ್ಪ, ತೊಗಾಡಿಯಾ, ಮುತಾಲಿಕ, ಸಾಧ್ವಿ ಪ್ರಜ್ಞಾ ಸಿಂಗ್‌ಳಂಥ ಕಪ್ಪೆಚಿಪ್ಪುಗಳು. ಇಂಥವರನ್ನು ಟ್ಟುಕೊಂಡು ಜನರ ಬಳಿ ಹೋಗಲು ಅದಕ್ಕೆ ಮುಖವಿಲ್ಲ. ವಾಜಪೇಯಿಯಂಥ ಮುಖವಾಡ ಬೇಕು. ಅಂತಲೇ ಆರ್‌ಎಸ್‌ಎಸ್, ವಿಎಚ್‌ಪಿ ಮುಂತಾದ ಸಂಘಟನೆಗಳು ವೇದಿಕೆಗಳಮೇಲೆ ತಮ್ಮ ನಾಯಕರ ಬದಲಿಗೆ ಗಾಂಧೀಜಿ, ಅಂಬೇಡ್ಕರ್, ಭಗತ್‌ಸಿಂಗ್, ಕನಕದಾಸ, ನಾರಾಯಣ ಗುರು, ಬಸವಣ್ಣ ಮೊದಲಾದ ಸಮಾಜ ಸುಧಾರಕರ, ಕ್ರಾಂತಿಕಾರರ ಭಾವಚಿತ್ರ ಹಾಕಿ ತಮ್ಮದಲ್ಲದ ಪರಂಪರೆಯ ವಾರಸುದಾರಿಕೆಗಾಗಿ ಯತ್ನಿಸುತ್ತಲೇ ಬಂದಿದೆ.

ಆರ್‌ಎಸ್‌ಎಸ್ ಇಂಥ ಹುನ್ನಾರಕ್ಕೆ ಬಳಸಿಕೊಂಡ ಮಹಾಚೇತನಗಳಲ್ಲಿ ಡಾ. ಅಂಬೇಡ್ಕರ್ ಕೂಡ ಒಬ್ಬರು. ಒಂದೆಡೆ ಅದೇ ಪರಿವಾರದ ಚಿಂತನ ಚಿಲುಮೆ ಅರುಣ್ ಶೌರಿ 'ವರ್ಷಿಪಿಂಗ್ ಫಾಲ್ಸ್‌ಗಾಡ್' ಎಂಬ ಪುಸ್ತಕ ಬರೆದು ಬಾಬಾ ಸಾಹೇಬರನ್ನು ಹಿಗ್ಗಾಮುಗ್ಗ ಟೀಕಿಸುತ್ತಾರೆ. ಇನ್ನೊಂದೆಡೆ ಅದೇ ಸಂಘದ ಇನ್ನೊಂದು ಚಿಂತನ ಕುಲುಮೆ ದತ್ತೋಪಂತ ಠೇಂಗಡಿ 'ಸಾಮಾಜಿಕ ಕ್ರಾಂತಿಸೂರ್ಯ ಅಂಬೇಡ್ಕರ್' ಎಂಬ ಪುಸ್ತಕ ಬರೆದು ಅಂಬೇಡ್ಕರ್‌ರನ್ನು ಹಿಂದೂತ್ವದ ಗಲ್ಲುಗಂಬಕ್ಕೆ ಏರಿಸುತ್ತಾರೆ. ಇವೆರಡು ಇಮ್ಮುಖ ಕುತಂತ್ರಗಳನ್ನು ಈ ದೇಶದ ಮನುವಾದಿ ಶಕ್ತಿಗಳು ಮೂರು ಸಾವಿರ ವರ್ಷದಿಂದ ನಡೆಸುತ್ತ ಬಂದಿವೆ. ಈಗಲೂ ನಿರ್ಲಜ್ಜವಾಗಿ ಮುಂದುವರೆಸಿವೆ. ಆರ್‌ಎಸ್‌ಎಸ್ ಮನುವಾದದ ಆಧುನಿಕ ರೂಪ.

ಆರ್‌ಎಸ್‌ಎಸ್ ಹಿರಿಯ ನಾಯಕರಾಗಿದ್ದ ದತ್ತೋಪಂತ ಠೇಂಗಡಿಯವರು ಬರೆದ ಈ ಪುಸ್ತಕವನ್ನು (ಸಾಮಾಜಿಕ ಕ್ರಾಂತಿಸೂರ್ಯ ಅಂಬೇಡ್ಕರ್) ಇತ್ತೀಚೆಗೆ ಕನ್ನಡಕ್ಕೆ ಅನುವಾದಿಸಿ ಬಿಡುಗಡೆ ಮಾಡಲಾಯಿತು. ಈ ಪುಸ್ತಕದ ಬಿಡುಗಡೆ ಸಮಾರಂಭಕ್ಕೆ ಬಂದಿದ್ದ ಆರ್‌ಎಸ್‌ಎಸ್‌ನ ರಾಷ್ಟ್ರೀಯ ಸಹ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಆ ದಿನ ಭಾಷಣ ಮಾಡುತ್ತ, 'ಡಾ. ಅಂಬೇಡ್ಕರ್ ಹಿಂದೂರಾಷ್ಟ್ರ ರಚನೆ ಬಗ್ಗೆ ಮಾತನಾಡಿದ್ದರು, ಸಂಸ್ಕೃತ ರಾಷ್ಟ್ರಭಾಷೆಯಾಗಬೇಕು ಎಂದಿದ್ದರು. ಭಗವದ್ಗೀತೆ ರಾಷ್ಟ್ರಧ್ವಜ ಆಗಬೇಕು ಎಂದು ಹೇಳಿದ್ದರು' ಎಂದು ಹಾಡಹಗಲೇ ಹಸಿ ಸುಳ್ಳು ಹೇಳಿದರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಚಿತ್ರದುರ್ಗ ಮುರುಘಾ ಮಠದ ಶರಣರು ಹೊಸಬಾಳೆ ಮಾತಿಗೆ ಗೋಣು ಆಡಿಸಿದರು.

ಶಿವಮೊಗ್ಗ ಜಲ್ಲೆಯ ಈ ಹೊಸಬಾಳೆ ಎಂಬತ್ತರ ದಶಕದಲ್ಲಿ ಎಬಿವಿಪಿ ಕರ್ನಾಟಕ ಘಟಕದ ಕಾರ್ಯದರ್ಶಿಯಾಗಿದ್ದರು. ಆಗ ಒಮ್ಮೆ ಜಮಖಂಡಿಗೆ ಬಂದಿದ್ದ (ಅನಂತಕುಮಾರ್ ಜೊತೆಗಿದ್ದರು) ಅವರು ಇದೇ ರೀತಿ ಸುಳ್ಳಿನ ಬುರುಡೆಯನ್ನು ಬಿಚ್ಚಿಟ್ಟಿದ್ದರು. ಆಗ ಸಭೆಯಲ್ಲಿದ್ದ ಎಐಎಸ್‌ಎಫ್ ಕಾರ್ಯಕರ್ತರು ಕೆಲ ಪ್ರಶ್ನೆಗಳಿಗೆ ಉತ್ತರಿಸುವಂತೆ ಪಟ್ಟು ಹಿಡಿದರು. ಇಲ್ಲದ್ದನ್ನು ಇದೆ ಎಂದು ಹೇಳಿ ಪಾರಾಗಬಹುದು. ಆದರೆ ಅದನ್ನು ತೋರಿಸು ಅಂದರೆ ಎಲ್ಲಿಂದ ತೋರಿಸಬೇಕು ಅಂತಲೇ ಅಂದು ಫಜೀತಿಪಟ್ಟಿದ್ದ ಹೊಸಬಾಳೆ ಮತ್ತೆ ಉತ್ತರಿಸಲು ಹೋಗಿರಲಿಲ್ಲ.

> **ಆರ್‌ಎಸ್‌ಎಸ್ ಈಗ ಹತಾಶ ಸ್ಥಿತಿಗೆ ತಲುಪಿದೆ. ಮಾಲೆಗಾಂವ್, ನಾಂದೇಡ, ಸಂಜೋತಾ ಮುಂತಾದ ಬಾಂಬ್ ಸ್ಫೋಟದಲ್ಲಿ ಈ ನಕಲಿ ರಾಷ್ಟ್ರಪ್ರೇಮಿ ಸಂಘದ ಸಾಧ್ವಿಗಳು ಸಿಕ್ಕು ವಿಲಿವಿಲಿ ಒದ್ದಾಡುತ್ತಿದ್ದಾರೆ. ಇನ್ನೊಂದೆಡೆ ಆಕಸ್ಮಿಕವಾಗಿ ದೊರೆತ ಅಧಿಕಾರ ಬಳಸಿ ಕೊಂಡು ತಿನ್ನಬಾರದ್ದನ್ನು ತಿಂದು ಸಂಘದ ಸ್ವಯಂಸೇವಕರಾದ ಯಡಿಯೂರಪ್ಪ, ಮೊದಲಾದವರು ಜೈಲು ಸೇರಿದ್ದಾರೆ. ನೀರಾ ರಾಡಿಯಲ್ಲಿ ಮುಳುಗಿ ಮೇಲೆದ್ದ ಅನಂತಕುಮಾರ್ ಎಂಬ ಸ್ವಯಂಸೇವಕ ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ.**

ದತ್ತಾತ್ರೇಯ ಹೊಸಬಾಳೆ ಅವರೇ ಯಾಕೆ ಇಂಥ ಸುಳ್ಳು ಹೇಳುತ್ತೀರಿ? ಅಂಬೇಡ್ಕರ್, ಶಿವಾಜಿ, ಭಗತ್ ಸಿಂಗ್‌ರಂಥವರ ಹೆಸರನ್ನು ಯಾಕೆ ಈ ಪರಿ ಲಜ್ಜೆಗೆಟ್ಟು ದುರುಪಯೋಗ ಮಾಡಿಕೊಳ್ಳುತ್ತೀರಿ? ಹಿಂದೂರಾಷ್ಟ್ರ ಕಲ್ಪನೆಯನ್ನು ಅಂಬೇಡ್ಕರ್ ಅತ್ಯುಗ್ರವಾಗಿ ವಿರೋಧಿಸಿದ್ದರು. 'ಒಂದು ವೇಳೆ ಹಿಂದೂರಾಷ್ಟ್ರ ಸ್ಥಾಪಿಸಲ್ಪಟ್ಟರೆ, ಅದು ದೇಶಕ್ಕೆ ಒದಗಿದ ಮಹಾವಿಪತ್ತು ಆಗಿರುತ್ತದೆ. ಹಿಂದೂಗಳೇನೆ ಹೇಳಲಿ, ಹಿಂದೂಧರ್ಮ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ವಿರೋಧಿಯಾಗಿದೆ. ಆದ್ದರಿಂದ ಯಾವುದೇ ಬೆಲೆ ತೆತ್ತಾದರೂ ಹಿಂದೂರಾಷ್ಟ್ರ ಸ್ಥಾಪನೆಯಾಗದಂತೆ ತಡೆಯಬೇಕು' ಎಂದು ಹೇಳಿದ್ದರು. ಇದು 'ಪಾಕಿಸ್ತಾನದ ಆರ್ ದಿ ಪಾರ್ಟಿಷನ್ ಆಫ್ ಇಂಡಿಯಾ' (ಪುಟ-538) ಎಂಬ ಪುಸ್ತಕದಲ್ಲಿ ದಾಖಲಾಗಿದೆ.

ಇಂಥ ಮಹಾಚೇತನ ಅಂಬೇಡ್ಕರ್ ಬಗ್ಗೆ ಮಾತನಾಡುವಾಗ ಹೊಸಬಾಳೆಯಂಥ ನಾಯಕರು ಎಚ್ಚರ ವಹಿಸಬೇಕು. ಕನ್ನಡಕ್ಕೆ ಬಂದ ಈ ಪುಸ್ತಕವನ್ನು ಬರೆದ ದತ್ತೋಪಂತ ಠೇಂಗಡಿ ಆರ್‌ಎಸ್‌ಎಸ್ ನಾಯಕಾರಾಗಿದ್ದಾರೆಂದು ಗೊತ್ತು. ಕೊನೆಯ ಐದು ವರ್ಷ ಠೇಂಗಡಿ ಅಂಬೇಡ್ಕರ್ ಒಡನಾಟ ಹೊಂದಿದ್ದರೆಂದು ಸಂಘದ ನಾಯಕರು ಹೇಳಿಕೊಳ್ಳುತ್ತಾರೆ. ಆದರೆ ವಾಸ್ತವಾವಗಿ ಈ ಠೇಂಗಡಿಯನ್ನು ಗೂಢಚಾರಿಕೆ ಮಾಡಲು ಆರ್‌ಎಸ್‌ಎಸ್, ಅಂಬೇಡ್ಕರ್ ಬಳಿ ಕಳುಹಿಸಿತ್ತು. ಹಿಂದುತ್ವದ ಹುನ್ನಾರದ ವಿರುದ್ಧ ಪ್ರತ್ಯೇಕ ದಲಿತ ಸಂಘಟನೆಯನ್ನು ಕಟ್ಟಲು ಅಂಬೇಡ್ಕರ್ ಆಗ ಕ್ರಿಯಾಶೀಲರಾಗಿದ್ದರು. ಅಂಥ ಸಭೆಗಳಲ್ಲಿ ಸಂಘಟಕರ ಕಣ್ಣುತಪ್ಪಿಸಿ, ಆಗಿನ್ನೂ ಯುವಕರಾಗಿದ್ದ ಠೇಂಗಡಿ ಓಡಾಡುತ್ತಿದ್ದರಂತೆ. ಇದರ ಬಗ್ಗೆ ವಿವರವಾಗಿ ಇನ್ನೊಮ್ಮೆ ಬರೆಯಬೇಕಾಗಿದೆ.

ಡಾ. ಅಂಬೇಡ್ಕರ್ ಸಂಘಟನೆಯನ್ನು ನಾಶಪಡಿಸಲು ಗೂಢಚಾರಿಕೆ ಮಾಡಿದ ಈ ವ್ಯಕ್ತಿ ಮುಂದೆ ಕಮ್ಯುನಿಸ್ಟ್ ಸಂಘಟನೆಗಳಲ್ಲೂ ನುಸುಳಿ ಅಲ್ಲೂ ಇದೇ ಕೆಲಸ ಮಾಡಿದರು. ಕಮ್ಯುನಿಸ್ಟರು ಕಾರ್ಮಿಕರನ್ನು, ರೈತರನ್ನು, ಮಹಿಳೆಯರನ್ನು ಹೇಗೆ ಸಂಘಟಿಸುತ್ತಾರೆ ಎಂಬುದನ್ನು ತಿಳಿದುಕೊಂಡ ಠೇಂಗಡಿ ಮುಂದೆ ಭಾರತೀಯ ಮಜ್ದೂರ್ ಸಂಘ, ಎಬಿವಿಪಿ, ಕಿಸಾನ ಸಂಘ ಮುಂತಾದವನ್ನು ಕಟ್ಟಿ ಸಂಘಪರಿವಾರದ ಜಾಲ ವಿಸ್ತರಿಸಲು ನೆರವಾದರು. ಈ ಠೇಂಗಡಿಯನ್ನು ಕೆಲ ಬಾರಿ ಹತ್ತಿರದಿಂದ ನೋಡಿ ಭಾಷಣ ಕೇಳಿದ ನನಗೆ ಆ ಮಾತುಗಳು ಎರವಲು ಮಾತುಗಳು ಎಂದು ತಿಳಿಯಿತು.

ಆರ್‌ಎಸ್‌ಎಸ್ ಈಗ ಹತಾಶ ಸ್ಥಿತಿಗೆ ತಲುಪಿದೆ. ಮಾಲೆಗಾಂವ್, ನಾಂದೇಡ, ಸಂಜೋತಾ ಮುಂತಾದ

ಬಾಂಬ್ ಸ್ಫೋಟದಲ್ಲಿ ಈ ನಕಲಿ ರಾಷ್ಟ್ರಪ್ರೇಮಿ ಸಂಘದ ಸಾಧ್ವಿಗಳು ಸಿಕ್ಕು ವಿಲಿವಿಲಿ ಒದ್ದಾಡುತ್ತಿದ್ದಾರೆ. ಇನ್ನೊಂದೆಡೆ ಆಕಸ್ಮಿಕವಾಗಿ ದೊರೆತ ಅಧಿಕಾರ ಬಳಸಿಕೊಂಡು ತಿನ್ನಬಾರದ್ದನ್ನು ತಿಂದು ಸಂಘದ ಸ್ವಯಂಸೇವಕರಾದ ಯಡಿಯೂರಪ್ಪ, ಕಟ್ಟಾ ಸುಬ್ರಮಣ್ಯ ನಾಯ್ಡು ಪರಪ್ಪನ ಅಗ್ರಹಾರ ಜೈಲು ಸೇರಿದ್ದಾರೆ. ನೀರಾ ರಾಡಿಯಲ್ಲಿ ಮುಳುಗಿ ಮೇಲೆದ್ದ ಅನಂತಕುಮಾರ್ ಎಂಬ ಸ್ವಯಂಸೇವಕ ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ ಎಂದು ಯಡಿಯೂರಪ್ಪ ಗುಂಪಿನವರೇ ಹೇಳುತ್ತಿದ್ದಾರೆ.

ಹೀಗೆ ತನ್ನ ಮೈತುಂಬ ಹೊಲಸು ಮೆತ್ತಿಕೊಂಡುನಂತ ಪರಿವಾರದ ರಕ್ಷಣೆಗೆ ಈಗಿರುವುದು ದೇಶ–ವಿದೇಶಿ ಲೂಟಿಗಾರ, ಬಂಡವಾಳಶಾಹಿಗಳಿಂದ ಸಂಗ್ರಹಿಸಿದ ಗುರುದಕ್ಷಿಣೆ ಎಂಬ ಕಪ್ಪುಹಣ. ಈ ಕಪ್ಪು ಹಣಕ್ಕೆ ರಕ್ಷಣೆ ನೀಡುತ್ತಿರುವವರು ಕಪಟ ಮಠಾಧೀಶರು. ಈ ಹಣವನ್ನು ಬಳಸಿಕೊಂಡೇ ಜನರನ್ನು ಇನ್ನಷ್ಟು ದಾರಿ ತಪ್ಪಿಸಲು ಮತ್ತು ಕಲಹದ ಕಿಡಿ ಹೊತ್ತಿಸಲು ಈ ಸಂಘ ಪಿತೂರಿ ನಡೆಸುತ್ತಲೇ ಬಂದಿದೆ. ಅದಕ್ಕಾಗಿ ಅಂಬೇಡ್ಕರ್, ಭಗತ್‌ಸಿಂಗ್‌ರ ಹೆಸರುಗಳನ್ನು ಬಳಸಿಕೊಳ್ಳುತ್ತಿದೆ. ಆದರೆ ಇಂಥ ಕೇಸರಿ ಖೆಡ್ಡಕ್ಕೆ ಬೀಳುವಷ್ಟು ದಲಿತ, ಶೂದ್ರ ಸಮುದಾಯದವರು ಪ್ರಜ್ಞಾಹೀನರಾಗಿಲ್ಲ ಎಂಬುದನ್ನು ಈ ನಕಲಿ ರಾಷ್ಟ್ರಭಕ್ತರು ಮರೆಯಬಾರದು.

ಹಿಂದೂತ್ವದ ಮುಸುಕಿನಲ್ಲಿ ಕೆಲ ಹಿಂದುಳಿದ ವರ್ಗಗಳನ್ನು ಆಪೋಶನ ಮಾಡಿಕೊಳ್ಳುವಲ್ಲಿ ಈ ಕರಾಳ ಫ್ಯಾಸಿಸ್ಟ್ ಪರಿವಾರ ಕೊಂಚ ಯಶಸ್ವಿಯಾಗಿದೆ. ಕರ್ನಾಟಕ ಕರಾವಳಿ ಪ್ರದೇಶದ ಬಿಲ್ಲವ, ಮೊಗವೀರ ಯುವಕರಿಗೆ ಮತಾಂಧತೆಯ ಮತ್ತೇರಿಸಿ ಅಮಾಯಕರ ಮೇಲೆ ಅವರ ಮೂಲಕ ಹಲ್ಲೆ ನಡೆಸಿ, ಈ ಶೂದ್ರ ಯುವಕರು ಜೈಲು ಮತ್ತು ಕೋರ್ಟ್‌ಗೆ ಎಡತಾಕುವಂತೆ ಮಾಡಿದ್ದು ಇದೆ ಈ ಕಲ್ಲಡ್ಕ ಭಟ್ಟರ ಪರಿವಾರ. ಆದರೆ ಈ ಪರಿವಾರದ ವಂಚನೆಯ ಜಾಲಕ್ಕೆ ದಲಿತ ಸಮುದಾಯ ಈವರಗೆ ಬಲಿ ಬಿದ್ದಿಲ್ಲ. ಆದರೂ ಆರ್‌ಎಸ್‌ಎಸ್ ಈ ಯತ್ನ ಕೈಬಿಟ್ಟಿಲ್ಲ. ದಲಿತರನ್ನು ಬಲಗೈ ಮತ್ತು ಎಡಗೈ ಎಂದು ವಿಭಜಿಸಲು ಮತ್ತು ವಿಭಜಿಸಿ ಒಡೆದಾಳಲು ಕಸರತ್ತು ನಡೆಸುತ್ತಲೇ ಇದೆ. ಅದೆಲ್ಲ ವಿಫಲವಾದಾಗ ಅಂಬೇಡ್ಕರ್ ಭಜನೆ ಶುರುವಾಗುತ್ತದೆ.

ದಲಿತ ಸಮುದಾಯದ ಬಂಧುಗಳು ಸಂಘ ಪರಿವಾರದ ಹಿಂದೂತ್ವವಾದಿ ಕತ್ತಲಕೂಪಕ್ಕೆ ಬೀಳದಂತೆ ತಡೆದದ್ದು ಡಾ. ಅಂಬೇಡ್ಕರ್ ಎಂಬ ಬೆಳಕು. ಅಂಬೇಡ್ಕರ್ ಸಾಹಿತ್ಯವನ್ನು ಓದಿದ ಯಾವುದೇ ಸಮುದಾಯದ ವ್ಯಕ್ತಿಯಿರಲಿ, ಆತ ನಿದ್ದೆಗಣ್ಣಿನಲ್ಲೂ ಆರ್‌ಎಸ್‌ಎಸ್ ಎಂಬ ಹಾಳುಬಾವಿಗೆ ಬೀಳುವುದಿಲ್ಲ. 'ನಾನು ಹಿಂದೂವಾಗಿ ಜನಿಸಿದ್ದರೂ ಹಿಂದೂವಾಗಿ ಸಾಯುವುದಿಲ್ಲ' ಎಂಬ ಅಂಬೇಡ್ಕರ್ ಅವರ ಒಂದೇ ನುಡಿಮುತ್ತು ಸಾಕು. ಯಾವ ದಲಿತನೂ ಆರ್‌ಎಸ್‌ಎಸ್ ಶಾಖೆ ಎಂಬ ಖೆಡ್ಡಾಕ್ಕೆ ಬೀಳಲು ಇಷ್ಟಪಡುವುದಿಲ್ಲ. ಅಂಬೇಡ್ಕರ್ ಎಂಬ ಚೇತನ ಬೆಂಕಿ ಇದ್ದಂತೆ. ಅದು ಜ್ಯೋತಿಯಾಗಿ ಬೆಳಕನ್ನು ನೀಡುತ್ತದೆ. ಆ ಬೆಳಕಿನ ಜ್ಯೋತಿ ಈ ದೇಶದ ಶೋಷಿತ ವರ್ಗಗಳ ಕೈದೀವಿಗೆ 'ಯಾಗಿದೆ. ಈ ಬೆಳಕನ್ನು ನಂದಿಸಲು ಕೇಸರಿ ಪರಿವಾರ ಕೈ ಹಾಕಿದರೆ, ಆ ಜ್ಯೋತಿ ಉರಿಯುವ ಪಂಜಾಗಿ ನಂದಿಸಲು ಬಂದ ಹಸ್ತವನ್ನೇ ಸುಟ್ಟು ಹಾಕುತ್ತದೆ ಎಂಬುದನ್ನು ಈ ನಯವಂಚಕರು ಮರೆಯಬಾರದು. □

ಎಚ್ಚೆತ್ತುಕೊಳ್ಳಬೇಕಾದ ಶೂದ್ರ ಪ್ರಜ್ಞೆ

(10ನೇ ಪುಟದಿಂದ)

ಅಂದಹಾಗೆ ಯಡಿಯೂರಪ್ಪನವರು ಅಕ್ರಮವೆಸಗಿದ್ದಾರೆ. ಅದಕ್ಕಾಗಿ ಜೈಲು ಅನುಭವಿಸಿದ್ದಾರೆ. ಎಂದು ಈ ಸಂದರ್ಭದಲ್ಲಿ ಹಲವರಿಗೆ ಅನಿಸಬಹುದು. ಆದರೆ ವಾಸ್ತವ? ಹೌದು, ಯಡಿಯೂರಪ್ಪನವರ ವಿರುದ್ಧದ ಅನಿಸಿಕೆಗೆ ಮುನ್ನ ಫುಲೆಯವರ ಈ ಮಾತುಕೇಳಿ. "ಶೂದ್ರನೊಬ್ಬನಿಗೆ ಅಧಿಕಾರವಿದ್ದರೂ ಅವನು ಅನಾವಶ್ಯಕವಾಗಿ ಸಿರಿವಂತಿಕೆಯನ್ನು ಸಂಗ್ರಹಿಸುವಂತಿಲ್ಲ. ಏಕೆಂದರೆ ಗುಲಾಮನೊಬ್ಬ ಸಿರಿವಂತಿಕೆ ಸಂಪಾದಿಸಿದರೆ ಅವನಿಗೆ ಗರ್ವ ಬಂದು ಅವನ ಸೊಕ್ಕಿನಿಂದ ಅವನು ಬ್ರಾಹ್ಮಣನನ್ನು ನಿರ್ಲಕ್ಷಿಸಿ ಪೀಡಿಸುತ್ತಾನೆ." ಅಂದಹಾಗೆ ಫುಲೆಯವರು ಈ ಮಾತನ್ನು ಹೇಳಿರುವುದು ವೇದ ಶಾಸ್ತ್ರಸ್ಮೃತಿಗಳನ್ನು ಆಧರಿಸಿ. ಶಾಸ್ತ್ರಸ್ಮೃತಿಗಳೇ ಹೀಗೆ ಹೇಳಿರ ಬೇಕಾದರೆ ಯಡಿಯೂರಪ್ಪನವರಂತಹ ಶೂದ್ರ ಮುಖ್ಯ ಮಂತ್ರಿಗಳು ಆಸ್ತಿ ಸಂಪಾದಿಸುವುದನ್ನು ಬ್ರಾಹ್ಮಣ ಸಮುದಾಯ ಹೇಗೆ ಸಹಿಸುತ್ತದೆ.? ಒಟ್ಟಾರೆ. ಹೇಳುವುದಾದರೆ ಶೂದ್ರರ ಏಳಿಗೆಯನ್ನು ಬ್ರಾಹ್ಮಣಿಕೆ ಸಹಿಸುವುದಿಲ್ಲ. ಏಕೆಂದರೆ ಅದು ಅದರ ತಪ್ಪಲ್ಲ. ಫುಲೆಯವರೇ ಹೇಳಿ ರುವ ಹಾಗೆ ಅದರ ಶಾಸ್ತ್ರ ಪುರಾಣಗಳೇ ಅಂತಹದಕ್ಕೆ ಅಂದರೆ ಶೂದ್ರರ ಏಳಿಗೆಗೆ ಅವಕಾಶ ಕೊಡುವುದಿಲ್ಲ. ಹೀಗಿರುವಾಗ ಶೂದ್ರರು ಏನು ಮಾಡಬೇಕು.? ಏನು ಮಾಡುವುದು ಬೇಡ, ನಾವು ಶೂದ್ರರು ಎಂಬ ವರ್ಗ ಪ್ರಜ್ಞೆಯನ್ನು ಈ ದೇಶದ ಶೋಷಿತ ಹಿಂದುಳಿದ ಸಮುದಾಯಗಳು ಬೆಳೆಸಿಕೊಳ್ಳಬೇಕು. ಆರ್.ಎಸ್.ಎಸ್. ಶಿಬಿರಗಳಲ್ಲಿ ಚಡ್ಡಿಹಾಕಿ ಬ್ರಾಹ್ಮಣರ ಆಜ್ಞೆಗಳನ್ನು ಪಾಲಿಸುವುದನ್ನು ಬಿಟ್ಟು ಸ್ವತಂತ್ರವಾಗಿ ಆಲೋಚಿಸುವುದನ್ನು ಕಲಿಯಬೇಕು. "ಹಿಂದೂ ನಾವೆಲ್ಲಾ ಒಂದು" ಎಂದು ಎಷ್ಟು ಕಿರುಚಿದರೂ ಕೂಡ "ಹಿಂದು ನಾವು ನಾಲ್ಕು ವರ್ಣ, ಆರು ಸಾವಿರ ಜಾತಿ" ಎಂಬುದು ಯಾವುದೇ ಕಾರಣಕ್ಕೂ ಹೋಗುವುದಿಲ್ಲ. ಹೀಗಿರುವಾಗ "ಹಿಂದೂ ನಾವೆಲ್ಲಾ ಒಂದು" ಎಂದು ಅರಚುತ್ತಾ ಅಧಿಕಾರ ಪಡೆಯ ಹೋದರೆ ಮೊದಲು ಬ್ರಾಹ್ಮಣ ನಂತರ ಉಳಿದವರು ಎಂಬ ಪರಿಪಾಠ ತಪ್ಪಿದ್ದಲ್ಲ. ಅಕಾಸ್ಮಾತ್ ಪಡೆದರೂ ಯಡಿಯೂರಪ್ಪನವರಿಗಾದ ಗೋಳಂತೂ ಖಂಡಿತ ತಪ್ಪುವುದಿಲ್ಲ.

ಹಾಗಿದ್ದರೆ ಇದಕ್ಕೆ ಪರಿಹಾರವೇನು? ಶೂದ್ರರು ಅಥವಾ ಶೂದ್ರ ಆಳುವ ಪ್ರಭುಗಳು ಪ್ರಹ್ಲಾದನಂತಾಗಬೇಕು! ಹೌದು, ಭಕ್ತ ಪ್ರಹ್ಲಾದ ಕಥೆ ಎಲ್ಲರಿಗೂ ಗೊತ್ತಿದ್ದೆ. ದಾನವ ಕುಲದ ಪ್ರಹ್ಲಾದನ ತಂದೆ ಹೀರಣ್ಯ ಕಶ್ಯಪನನ್ನು ಅವನ ಅರಮನೆ ಒಳಗೆ ಕಳ್ಳತನದಲ್ಲಿ, ಮಲಗುವ ಕೋಣೆ ಸೇರಿ ಕಂಬದ ಹಿಂದೆ ಬಚ್ಚಿಟ್ಟುಕೊಂಡು ವಿಪ್ರನಾದ ನರಸಿಂಹನು ಕೊಂದು ಹಾಕುತ್ತಾನೆ. ಅಂದಹಾಗೆ ಕಥೆ ಎಲ್ಲರಿಗೂ ಇಷ್ಟು ಮಾತ್ರ ಗೊತ್ತಿದೆ. ಆದರೆ ಮುಂದಿನದ್ದು? ಏಕೆಂದರೆ, ಮುಂದೆ ನರಸಿಂಹನ ಮೋಸವನ್ನರಿತ ಹೀರಣ್ಯ ಕಶ್ಯಪನ ಮಗನಾದ ಪ್ರಹ್ಲಾದನು ಮುಂದೆಂದೂ ವಿಪ್ರರನ್ನು ಕಿಂಚಿತ್ತೂ ನಂಬಲಿಲ್ಲ. ರಾಜ್ಯದ ಸರ್ವ ಜನರೊಡನೆ ಉತ್ತಮ ಸಂಬಂಧವನ್ನಿಟ್ಟುಕೊಂಡು ಅವನು ರಾಜ್ಯವನ್ನು ಚೆನ್ನಾಗಿ ಆಳಿದನು. ಯಡಿಯೂರಪ್ಪನವರೂ ಅಷ್ಟೆ ಮುಂದೆಂದೂ ಅವರು ಬ್ರಾಹ್ಮಣಿಕೆಯನ್ನು ನಂಬಬಾರದು. ದಾನವ ಕುಲದ ವಾರಸುದಾರರಾದ ಶೂದ್ರ ಕುಲಕ್ಕೆ ಸೇರಿದ ಅವರು ಪ್ರಹ್ಲಾದನನ್ನು ತಮ್ಮ ಆದರ್ಶವಾಗಿ ಸ್ವೀಕರಿಸಬೇಕು. ಅವಕಾಶ ಸಿಕ್ಕರೆ ಶೂದ್ರ ಪ್ರಜ್ಞೆಯಿಂದ ರಾಜ್ಯವಾಳಬೇಕಷ್ಟೆ. □

ಉಗ್ರ ಕ್ರಮ ಅಗತ್ಯ

(11ನೇ ಪುಟದಿಂದ)

ಮಾಡಿದವರನ್ನು ತಪ್ಪು ಎಂದು ವಸ್ತುನಿಷ್ಠವಾಗಿ ಹೇಳಬೇಕಾಗಿದೆ. ಜೊತೆಗೆ ದಲಿತ ಹಿಂದುಳಿದ ಜಾತಿಗಳನ್ನು ಒಟ್ಟುಗೂಡಿಸಿ ಕೊಂಡೊಯ್ಯಬೇಕಾದ ಅಗತ್ಯ ಕಾರ್ಯಕ್ರಮಗಳನ್ನು ಪ್ರಗತಿಪರರು ಕೈಗೊಳ್ಳಬೇಕಾಗಿದೆ. ಕಮ್ಯುನಿಷ್ಠರು ಪ್ರಗತಿಪರರು ತಮ್ಮ ಸಿದ್ದಾಂತಗಳಿಗೆ ಜೋತು ಬೀಳದೆ ಗಂಭೀರವಾಗಿ ಯೋಚಿಸಬೇಕಾಗಿದೆ.

ರಾಷ್ಟ್ರೀಯ ಕ್ರಿಮಿನಲ್ ಅಪರಾಧ ವರದಿಯ ಪ್ರಕಾರ ಪರಿಶಿಷ್ಟ ಜಾತಿಯ ಜನರ ಮೇಲೆ ಹೆಚ್ಚು ದೌರ್ಜನ್ಯವಾಗುತ್ತಿರುವ ರಾಜ್ಯಗಳ ಪೈಕಿ ಕರ್ನಾಟಕವು 6ನೇ ಸ್ಥಾನದಲ್ಲಿದೆ. 2009ರ ನವೆಂಬರ್ ಅಂತ್ಯಕ್ಕೆ ದಲಿತರ ಮೇಲಿನ ದೌರ್ಜನ್ಯ ಇತ್ಯರ್ಥವಾಗದೆ ಉಳಿದ ಪ್ರಕರಣಗಳು 2338 ಆಗಿವೆ. 2010ರಲ್ಲಿ 1632 ಪ್ರಕರಣಗಳು ದಲಿತರ ಮೇಲೆ ದೌರ್ಜನ್ಯವೆಂದು ಕರ್ನಾಟಕದಲ್ಲಿ ದಾಖಲಿಸಲಾಗಿದೆ. ಇಷ್ಟಾದರೂ ಸಚಿವರೊಬ್ಬರೂ ಕಳೆದ 3–4 ವರ್ಷಕ್ಕೆ ಹೋಲಿಸಿದ್ದಲ್ಲಿ ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣ ಕಡಿಮೆಯಾಗಿವೆ ಎಂದು ಹೇಳಿಕೆ ನೀಡಿರುವುದು ಅವರ ಬೇಜವಾಬ್ದಾರಿತನ ಹಾಗೂ ದಲಿತರ ಕುರಿತ ನಿಷ್ಕಾಳಜಿಯನ್ನು ಒತ್ತಿ ಹೇಳುತ್ತದೆ.

ದೌರ್ಜನ್ಯ ತಡೆ ಕಾಯ್ದೆಗೆ ತಿದ್ದುಪಡಿ ಅಗತ್ಯ:

ಪರಿಶಿಷ್ಟ ಜಾತಿ /ಪಂಗಡ ದೌರ್ಜನ್ಯ ನಿಯಂತ್ರಣ ತಡೆ ಕಾಯ್ದೆ– 1989ರ 3ರಲ್ಲಿ 15 ಸ್ವರೂಪದ ಅಪರಾಧ ಗುರುತಿಸುತ್ತದೆ ವಿನಹ ಸಾಮಾಜಿಕ ಬಹಿಷ್ಕಾರದ ಬಗ್ಗೆ ಏನು ಹೇಳದೆ ಇರುವುದರಿಂದ ಬಹಿಷ್ಕಾರದ ಕೇಸು ದಾಖಲಾದರೂ ಅವುಗಳನ್ನು ಹಿಂಸೆ, ಬೆದರಿಕೆ ಎಂದು ನಮೂದಿಸಿ ಪ್ರಕರಣ ಕೈಬಿಡಲಾಗುತ್ತಿದೆ. ಇದರಿಂದ ಸಾಮಾಜಿಕ ಬಹಿಷ್ಕಾರ ಸಣ್ಣ ಮಟ್ಟದ ಅಪರಾಧವಾಗಿ ಕಾಣುತ್ತದೆ.

ಸಾಮಾಜಿಕ ಬಹಿಷ್ಕಾರವನ್ನು ಒಂದು ಗಂಭೀರವಾದ ಅಪರಾಧವೆಂದು ಪರಿಗಣಿಸಿ ಉಗ್ರಶಿಕ್ಷೆಗೆ ಒಳಪಡಿಸಿ ಆ ಶಿಕ್ಷೆಯನ್ನು "ಮಾದರಿ" ಗೊಳಿಸಬೇಕಾದ ಜವಾಬ್ದಾರಿ ಸರ್ಕಾರದ್ದಾಗಿದೆ. ಜೊತೆಗೆ ಇಂತಹ ಪ್ರಕರಣಗಳನ್ನು ನಿಬಾಯಿಸಲು ವಿಫಲರಾಗುವ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಮೇಲೂ ಕಠಿಣ ಕ್ರಮ ಜರುಗಿಸಬೇಕಾಗಿದೆ. ಅಲ್ಲದೆ ಇಂತಹ ಅಹಿತಕರ ಘಟನೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರನ್ನು ಹೊಣೆಗಾರರನ್ನಾಗಿಸಬೇಕಿದೆ.

ಮುಂಚೂಣಿ ದಲಿತ ಚಳವಳಿಗಳು ಇಂದು ಯಾವುದೇ ಕಾರಣಗಳಿಂದಲೂ ಜೊತೆಯಾಗದ ಕಾರಣಗಳಿಂದಲೂ ದಲಿತರ ಮೇಲೆ ನಿರಂತರವಾಗಿ ನಡೆಯುವ ದೌರ್ಜನ್ಯ, ಹಲ್ಲೆ, ಅತ್ಯಾಚಾರ, ಕೊಲೆ ಮತ್ತು ಸಾಮಾಜಿಕ ಬಹಿಷ್ಕಾರಗಳು ಮಾಮೂಲಾಗಿಬಿಟ್ಟಿದೆ. ಸಮರ್ಪಕ ನಾಯಕತ್ವ ಇಲ್ಲದ ದಲಿತ ಚಳವಳಿ ಕ್ಷೀಣವಾಗುತ್ತಿರುವ ಜೊತೆಗೆ ದಲಿತ ಸಮುದಾಯದ ಮೇಲೆ ದೌರ್ಜನ್ಯ ಮತ್ತು ದಾಳಿ ನಡೆಯುತ್ತಿರುವುದಕ್ಕೆ ಕಾರಣವೂ ಆಗಿದೆ. ದಲಿತ ನಾಯಕರು ಇಂತಹ ಸಾಮಾನ್ಯ ಕಾರಣಗಳಿಗಾಗಿಯಾದರೂ ಒಗ್ಗೂಡಿ ಚಳವಳಿ ನಡೆಸಬೇಕಾಗಿದೆ. □

ಭ್ರಷ್ಟಾಚಾರ ವಿರೋಧಿ ಲಿರಿಕ್ಕು! ಕೋಮುವಾದದ ಕಿರಿಕ್ಕು!!

ಸಂಡೂರು ಕುಮಾರಸ್ವಾಮಿ

ಅಡ್ವಾಣಿ ರಥಯಾತ್ರೆಯ ಉದ್ದೇಶದ ಬಗ್ಗೆ ಈಗ ಯಾರಿಗೂ ಅಷ್ಟಾಗಿ ಗೊಂದಲವಿಲ್ಲವಾದರೂ ಒಂದು ವಿಷಯ ಸ್ಪಷ್ಟವಾಗಿಯೇ ಅರ್ಥಮಾಡಿಕೊಳ್ಳುವುದು ವಾಸಿ. ಅಡ್ವಾಣಿಯವರ ಈ ಆರನೇ ಹಾಗೂ ಅಂತಿಮ(?)ರಥಯಾತ್ರೆಯ ಲಿರಿಕ್ಕು ಬದಲಾಗಿರಬಹುದು. ಆದರೆ ರಾಗ ಹಳೆಯದೇ! ಹಿಂದೂ ಕೋಮುವಾದದ್ದು. ಹೀಗಾಗಿ ಲಿರಿಕ್ಕು ನೋಡಿ ಕನ್ಫ್ಯೂಸ್ ಆಗುವುದು ಬೇಡ.

ಆರ್ಥಶಾಸ್ತ್ರದಲ್ಲಿ iminishing marginal utility- ಸೀಮಾಂತ ತುಷ್ಟಿ ಗುಣ ಎಂಬ ಪರಿಭಾಷೆಯನ್ನು ಬಳಸುತ್ತಾರೆ. ಯಾವುದಾದರೂ ಒಂದು ಸರಕಿಗೆ ಬಳಕೆ ಗುಣ ಇಲ್ಲದೆ ಕೇವಲ ವಿನಿಮಯ ಮೌಲ್ಯದ ಮೇಲೆ ಮಾತ್ರ ಚಲಾವಣೆಯಲ್ಲಿದ್ದರೆ ಅದು ಬಳಕೆದಾರನ ಬಯಕೆಯನ್ನು ತುಷ್ಟಿಗೊಳಿಸುವ ಗುಣ ನಿಧಾನಕ್ಕೆ ಕಡಿಮೆಯಾಗುತ್ತಾ ಹೋಗುತ್ತದೆ. ಅನ್ನವನ್ನು ದಿನಾ ತಿಂದರೂ ಪ್ರತಿ ದಿನ ತಿನ್ನುತ್ತೇವೆ. ಅದಕ್ಕೆ ಅಗತ್ಯವನ್ನು ಪೂರೈಸುವ ಬಳಕೆ ಮೌಲ್ಯವಿದೆ. ಆದರೆ ನಮ್ಮ ಮನಸ್ಸನ್ನು ಮುದಗೊಳಿಸುವ ಹಾಡು ವರ್ಷಕ್ಕೊಮ್ಮೆ ಬದಲಾಗುತ್ತಿರುತ್ತದೆ. ಅಥವಾ ಒಂದೇ ಹಾಡು ಪದೇಪದೇ ಕೇಳಿದರೆ ಮೊದಲಲ್ಲಿ ನಾವು ಅದರಿಂದ ಪಡೆದ ಮುದದ ಪ್ರಮಾಣ ಮತ್ತು ಗುಣ ನಿಧಾನಕ್ಕೆ ಕಡಿಮೆಯಾಗುತ್ತಾ ಹೋಗುತ್ತದಲ್ಲ..ಹಾಗೆ...ಅಡ್ವಾಣಿ ಮತ್ತು ಅವರ ಪರಿವಾರದ ರಾಮಜನ್ಮಭೂಮಿ ರಾಗವೂ ಯಾವುದೇ ಬಳಕೆ ಮೌಲ್ಯವಿಲ್ಲದೆ ರಾಜಕೀಯ ದುರುದ್ದೇಶದಿಂದ ಪ್ರಾರಂಭವಾದ ರಾಜಕಾರಣ, ನಿಧಾನಕ್ಕೆ ಅವರಿಗೆ ಗಳಿಸಿಕೊಟ್ಟ ಓಟಿನ ಪ್ರಮಾಣವನ್ನು ಕಡಿಮೆ ಮಾಡದಿದ್ದರೂ ಸ್ಥಗಿತಗೊಳಿಸಿದೆ. ಈ ಹಿನ್ನೆಲೆಯಲ್ಲಿ ಜನರನ್ನು ಮತ್ತೆ ಬುಟ್ಟಿಗೆ ಸೆಳೆದುಕೊಳ್ಳಲು ಕಳೆದ ಎರಡು ಮೂರು ವರ್ಷಗಳಿಂದ ತಲೆಕೆಡಿಸಿಕೊಳ್ಳುತ್ತಿದ್ದ ಬಿಜೆಪಿಗೆ ಕಾಂಗ್ರೆಸ್ಸೇ ತನ್ನ ಭ್ರಷ್ಟಾ ಚಾರದ ಮೂಲಕ ಒಂದು ಅವಕಾಶವನ್ನು ತೆರೆದುಕೊಟ್ಟಿತು. 2ಜಿ, ಸಿಎಜಿ ಇನ್ನಿತರ ಹಗರಣಗಳಲ್ಲಿ ಪರೋಕ್ಷವಾಗಿ ಬಿಜೆಪಿಯೂ ಪಾಲು ದಾರನಾದರೂ ಅದನ್ನು ಮುಚ್ಚಿಟ್ಟುಕೊಂಡು ಈಗ ಜನರಿಗೆ ಕೇಂದ್ರದ ಕಾಂಗ್ರೆಸ್ ಸರ್ಕಾರದ ಮೇಲಿರುವ ಆಕ್ರೋಶವನ್ನು ತನ್ನ ಮತವನ್ನಾಗಿ ಪರಿವರ್ತಿಸಿಕೊಳ್ಳುವ ಹುನ್ನಾರದ ಯೋಜನೆಯೇ ಈ "ಜನ ಚೇತನಾ ಯಾತ್ರೆ".

ಆದರೆ 1990ರಲ್ಲಿ ಅಡ್ವಾಣಿ ನಡೆಸಿದ ಮೊದಲ ರಾಮರಥ ಯಾತ್ರೆಗೂ ಮತ್ತು ಈಗ್ಗೂ ಸಂದರ್ಭವೂ ಬದಲಾಗಿದೆ. ಬಿಜೆಪಿಯ ಒಳಗಿನ ಹೊಲಸೂ ಹೆಚ್ಚಾಗಿದೆ. 1990ರ ವೇಳೆಗೆ ಹೆಚ್ಚು ಅಧಿಕಾರವನ್ನು ಅನುಭವಿಸದ ಬಿಜೆಪಿ ಪಕ್ಷ ಜನರ ಕಣ್ಣೆದುರು ಪರಮ ಭ್ರಷ್ಟ ಕಾಂಗ್ರೆಸ್‌ಗೆ ಒಂದು ಸಂಭವನೀಯ ಪರ್ಯಾಯವಾಗಿಯಾದರೂ ಕಾಣುತ್ತಿತ್ತು. ಆದರೆ 1990ರ ನಂತರದಲ್ಲಿ ಬಿಜೆಪಿ ಹತ್ತಕ್ಕೂ ಹೆಚ್ಚು ರಾಜ್ಯಗಳಲ್ಲಿ ಅಧಿಕಾರ ಅನುಭವಿಸಿದೆ. ಕೇಂದ್ರದಲ್ಲೂ ಒಟ್ಟು 6 ವರ್ಷಗಳ ಕಾಲ ಅಖಂಡ ಅಧಿಕಾರವನ್ನು ಅನುಭವಿಸಿದೆ. ಮಧ್ಯಪ್ರದೇಶ ಮತ್ತು ಗುಜರಾತಿನಲ್ಲಿ ಹೆಚ್ಚೂ ಕಡಿಮೆ ಹತ್ತು ವರ್ಷಗಳ ಕಾಲ ಒಂದೇ ಸಮನೆ ಅಧಿಕಾರದ ಕುರ್ಚಿಯಲ್ಲಿ ಕೂತಿದೆ. ಕರ್ನಾಟಕದಲ್ಲಿ ಆ ಮೂಲಕ ದಕ್ಷಿಣ ಭಾರತದಲ್ಲೂ ಖಾತೆ ತೆಗೆದಿದೆ. ಆದರೆ ತಾನು ಭಿನ್ನ ಪಕ್ಷ ಎಂದು ಹೇಳುತ್ತಿದ್ದ ಬಿಜೆಪಿ ಅಧಿಕಾರಕ್ಕೆ ಬಂದ ಕಡೆ ಕಾಂಗ್ರೆಸ್‌ಗಿಂತಲೂ ಬಕಾಸುರ ಭ್ರಷ್ಟಾಚಾರಿ ಎಂದು ರುಜುವಾತುಪಡಿಸಿದೆ. ಅದಕ್ಕೆ ಕರ್ನಾಟಕದ ಯಡ್ಡಿ ರೆಡ್ಡಿಗಳೇ ಸಾಕು ಉದಾಹರಣೆಗೆ. ಬಿಜೆಪಿಯ ಬಕಾಸುರ ಭ್ರಷ್ಟಾಚಾರಕ್ಕೆ. ರೆಡ್ಡಿ ಯಡ್ಡಿ ತಿಂದ ಹೊಲಸಿನಲ್ಲಿ ಗಡ್ಕರಿಯನ್ನೂ ಒಳಗೊಂಡಂತೆ ಕೇಂದ್ರ ಬಿಜೆಪಿಗಳೆಲ್ಲರೂ ಪಾಲುದಾರರು ಎಂಬುದು ಈಗೇನೂ ಗುಟ್ಟಲ್ಲ. ಹಣ ಮತ್ತು ಅಧಿಕಾರ ಬಂದೊಡನೆ ಸಿದ್ಧಾಂತ-ಪದ್ಧಾಂತವೆಲ್ಲಾ ಅಬದ್ಧವಾಗಿ ಬಿಜೆಪಿ ಈಗ ಒಡೆದ ಮನೆಯಾಗಿದೆ. ರಾಜ್ಯ ಸರ್ಕಾರಗಳ ಮಂತ್ರಿಗಿರಿಯಿಂದ ಮೊದಲುಗೊಂಡು ಕೇಂದ್ರದ ಪ್ರಧಾನಿಗಿರಿವರೆಗೆ ಪೈಪೋಟಿಗಳು ಶುರುವಾಗಿ ಬಿಜೆಪಿ ಈಗ ಕಾಂಗ್ರೆಸ್‌ಗಿಂತ ಯಾವ ರೀತಿಯಲ್ಲೂ ಭಿನ್ನವಾಗಿಯೇನೂ ಉಳಿದಿಲ್ಲ.

ಈಗ ಅಡ್ವಾಣಿ ಕೈಗೊಂಡಿರುವ ರಥಯಾತ್ರೆಯ ಘೋಷವಾಕ್ಯ "ಅಬ್ ಬಸ್"- ಇನ್ನೂ ಸಾಕು ಎಂದು. ಆದರೆ ಬಿಜೆಪಿ ಪಕ್ಷದೊಳಗೇ ಇರುವ ಹಲವು ಗಣ್ಯ ಭಿನ್ನಮತೀಯರು "ಅಬ್ ಬಸ್ ಕರೋ" ಎಂದು ಅಡ್ವಾನಿಗೇ ಹೇಳುತ್ತಿದ್ದಾರೆ ಎಂಬುದು ಯಾತ್ರೆ ಪ್ರಾರಂಭವಾದಗಿನಿಂದಲೂ ಬಿಜೆಪಿಯವರೇ ಹರಡಿರುವ ಸುದ್ದಿ!

ಪ್ರಭು ಚಾವ್ಲಾರಂಥ ಪರಮ ಚಡ್ಡಿಹರುಕ ಬಿಜೆಪಿ "ಚಿಂತಕ"ರೂ ಇದು "ಬಿಜೆಪಿ ಚೇತನಾ ಯಾತ್ರೆಯೇ" ಹೊರತು "ಜನ ಚೇತನಾ ಯಾತ್ರೆ" ಯಲ್ಲವೆಂದು ಹೇಳುತ್ತಿರುವುದೇ ಬಿಜೆಪಿಯ ಘೋಷಿತ ಉದ್ದೇಶಕ್ಕೂ ಅಂತರಿಕ ರಾಜಕಾರಣಕ್ಕೂ ಇರುವ ವ್ಯತ್ಯಾಸವನ್ನು ವಿದಿತ ಗೊಳಿಸುತ್ತದೆ! ಅವರೇ ಹೇಳಿಕೊಳ್ಳುವ ಹಾಗೆ ಕರ್ನಾಟಕ ಮತ್ತು ಗುಜರಾತ್ ಬಿಟ್ಟರೆ ಕಳೆದ ಮೂರು ವರ್ಷಗಳಲ್ಲಿ ಬಿಜೆಪಿ ಚುನಾವಣಾ ಕ್ಷಮತೆ ಯಾವ ರಾಜ್ಯದಲ್ಲೂ ಹೇಳಿಕೊಳ್ಳುವಂತಿಲ್ಲ. ಇತ್ತೀಚೆಗೆ ನಡೆದ ಹಿಸ್ಸಾರ್ ಮಧ್ಯಂತರ ಚುನಾವಣೆ ಬಿಟ್ಟರೆ ಇತ್ತೀಚೆಗೆ ಮಧ್ಯಪ್ರದೇಶ, ಉತ್ತರ ಪ್ರದೇಶ, ಉತ್ತರ್‌ಖಂಡ್, ಬಂಗಾಳ, ಪಂಜಾಬ್, ರಾಜ್ಯಗಳಲ್ಲಿ ನಡೆದ ಯಾವುದೇ ಚುನಾವಣೆಗಳಲ್ಲಿ ಬಿಜೆಪಿ ಹೇಳಿಕೊಳ್ಳುವಂಥ ಸಾಧನೆ ಮಾಡಿಲ್ಲ. ಅಷ್ಟು ಮಾತ್ರವಲ್ಲ. ಗುಜರಾತ್ ಬಿಟ್ಟರೆ ಮಿಕ್ಕ ಕಡೆ ಅಧಿಕಾರಕ್ಕೆ ಬಂದ ನಂತರ ಬಿಜೆಪಿಯ ಜನಪ್ರಿಯತೆ ಕುಗ್ಗುತ್ತಿದೆ. ಹಳೆ ಅಜೆಂಡಾಗಳು ಅಷ್ಟು ಫಲಿತಾಂಶ ಕೊಡುತ್ತಿಲ್ಲ. ಅದೇ

ಬಿಜೆಪಿಯೊಳಗೇ ಇಲ್ಲದಿರುವ ಖುರ್ಚಿಗೆ ನಡೆದಿರುವ ಪೈಪೋಟಿಯಲ್ಲಿ ಅಂತಿಮ ಸುತ್ತಿನ ಅಭ್ಯರ್ಥಿಯಾಗಿ ಹೊರಹೊಮ್ಮಲು ಮೋದಿ ಮತ್ತು ಅಡ್ವಾಣಿ ಇಬ್ಬರೂ ಇಲ್ಲದ ಕಸರತ್ತು ನಡೆಸುತ್ತಿದ್ದಾರೆ. ಒಂದೆಡೆ ಮೋದಿ ಎಂದೂ ಇಲ್ಲದಂತೆ ಇದ್ದಕ್ಕಿದ್ದಂತೆ ಸಮರಸತಾ ಉಪವಾಸ ಕೂತು ರಾಷ್ಟ್ರೀಯ ಮಟ್ಟದಲ್ಲಿ ಇಮೇಜು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಅದಕ್ಕೆ ಪ್ರತಿಯಾಗಿ ಅಡ್ವಾಣಿ ಭ್ರಷ್ಟಾಚಾರದ ವಿರುದ್ಧ ಸಮರ ಯಾತ್ರೆಯ ಪೋಸು ಕೊಡುತ್ತಾ ಜನ ಚೇತನಾ ಯಾತ್ರೆಯನ್ನು ಪ್ರಾರಂಭಿಸಿದ್ದಾರೆ. ಮೋದಿ ಮತ್ತು ಅಡ್ವಾಣಿ ನಡುವಿನ ಒಳಪೈಪೋಟಿ ತಾರಕಕ್ಕೆ ಹೋಗಿದೆ.





ಸಮಯದಲ್ಲಿ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕೆಂದರೆ ಎನ್‌ಡಿಎ ಮಿತ್ರಪಕ್ಷಗಳ ಬೆಂಬಲ ಬೇಕೇಬೇಕು. ಆದರೆ ಜೆಡಿಯು ಮತ್ತು ಅಕಾಲಿ ದಳ ಹೊರತುಪಡಿಸಿದರೆ ಬೇರೆ ಯಾರೂ ನೆಚ್ಚಿಕೊಳ್ಳುವಂಥ ಮಿತ್ರರೇ ಬಿಜೆಪಿಗೆ ಇಲ್ಲವಾಗಿದೆ. ಹಳೆಯ ಹಲವಾರು ಮಿತ್ರಪಕ್ಷಗಳು ನಿಧಾನವಾಗಿ ಕಾಂಗ್ರೆಸ್ ಜೊತೆ ದೋಸ್ತಿ ಕುದುರಿಸಿಕೊಳ್ಳುತ್ತಿವೆ. ಕೆಲವು ಈಗಾಗಲೆ ಕ್ಯಾಂಪು ತೊರೆದಿವೆ. ಜೆಡಿಯು ಅಂಥ ಮಿತ್ರಪಕ್ಷವೂ ಬಿಜೆಪಿಯ ಅಸಲಿ ಅಜೆಂಡಾ ಆದ ಹಿಂದೂ ಕೋಮುವಾದದ ಜೊತೆ ಬಹಿರಂಗ ಸ್ನೇಹ ಇಟ್ಟುಕೊಳ್ಳಲು ಸಾಧ್ಯವಿಲ್ಲವಾಗಿದೆ.

ಹೀಗಾಗಿ ಮುಂದಿನ 2014ರ ಲೋಕಸಭಾ ಚುನಾವಣೆಗೆ ಈಗಲೇ ತಯಾರಿ ಪ್ರಾರಂಭಿಸಿರುವ ಬಿಜೆಪಿ ಅಧಿಕಾರಕ್ಕೆ ಬರಬೇಕೆಂದರೆ ಕುಸಿಯುತ್ತಿರುವ ತನ ಓಟು ಶೇರುಗಳನ್ನು ಭದ್ರ ಪಡಿಸಿಕೊಳ್ಳುತ್ತಲೇ ಹಳೆಯ ಮತ್ತು ಹೊಸಮಿತ್ರರನ್ನು ಜೊತೆಗೂಡಿಸಿಕೊಳ್ಳಬೇಕಿದೆ. ಅದರ ಜೊತೆಗೆ ಎನ್‌ಡಿಎ ಒಕ್ಕೂಟಕೆ ಪ್ರಶ್ನಾತೀತ ನಾಯಕನಾಗಿದ್ದ ವಾಜಪೇಯಿ ರಂಗದಲ್ಲಿ ಇಲ್ಲದಿರುವ ಸಂದರ್ಭದಲ್ಲಿ ಬಿಜೆಪಿಯೊಳಗೆ ಮತ್ತು ಹೊರಗೆ ಸರ್ವ ಸಮ್ಮತ ಪ್ರಧಾನಿ ಅಭ್ಯರ್ಥಿಯನ್ನು ಹುಡುಕುವುದೇ ಕಷ್ಟವಾಗಿದೆ. ಅಡ್ವಾಣಿ ಭಾರತದ ರಾಜಕಾರಣದಲ್ಲಿ ರಕ್ತಸಿಕ್ತ ಅಧ್ಯಾಯ ಪ್ರಾರಂಭಿಸಿದ, ಬಿಜೆಪಿಯ ಗದ್ದುಗೆಗೆ ಅಲ್ಪಸಂಖ್ಯಾತರ ಹೆಣಗಳ ಸೋಪಾನವನ್ನು ಮಾಡಿಕೊಟ್ಟ ಪರಮ ಹಿಂದೂತ್ವವಾದಿಯಾದರೂ ಆರೆಸ್ಸೆಸ್‌ನ ಸಂಘಟನಾ ಶಿಸ್ತನ್ನು ಹಲವಾರು ಬಾರಿ ಮುರಿದಿರುವುದರಿಂದ ಸಂಘಪರಿವಾರಕ್ಕೆ ಅಡ್ವಾಣಿ ಒಪ್ಪಿತ ಕ್ಯಾಂಡಿಡೇಟಲ್ಲ. ಅವರ ನೆಚ್ಚಿನ ಅಭ್ಯರ್ಥಿ ಈಗ ಭಾರತದ ಕೋಮುವಾದಿ ರಾಜಕಾರಣವನ್ನು ಅಡ್ವಾಣಿ ಯುಗದಿಂದ ಮೋದಿತ್ವದ ಹಂತಕ್ಕೆ ಕೊಂಡೊಯ್ದಿರುವ ಗುಜರಾತಿನ ನರಹಂತಕ ನರೇಂದ್ರ ಮೋದಿ. ಆದರೆ ಮೋದಿಯ ಮುಖ ಇನ್ನೂ ಅರೆ ಸೆಕ್ಯುಲಾರ್ ರಾಜಕಾರಣಿಗಳಿಗೆ ಪಥ್ಯವಿಲ್ಲ. ಏಕೆಂದರೆ ಗುಜರಾತಿನ ಕರಾಳ ನೆನಪು ಏನಿಲ್ಲವೆಂದರೂ ಮುಸ್ಲಿಂ ಸಮುದಾಯ ಮರೆತಿಲ್ಲ. ಹೀಗಾಗಿ ಮೋದಿಯ ಛತ್ರಿ ಹಿಡಿರುವ ಸುಷ್ಮಾ ಮತ್ತು ಜೈಟ್ಲಿಯಂಥ ನರಿಗಳೂ ಪ್ರಧಾನಿ ಹುದ್ದೆಗೆ ಆಸೆಪಡುತ್ತಿವೆ.

ಹೀಗೆ ಬಿಜೆಪಿಯೊಳಗೇ ಇಲ್ಲದಿರುವ ಖುರ್ಚಿಗೆ ನಡೆದಿರುವ ಪೈಪೋಟಿಯಲ್ಲಿ ಅಂತಿಮ ಸುತ್ತಿನ ಅಭ್ಯರ್ಥಿಯಾಗಿ ಹೊರಹೊಮ್ಮಲು ಮೋದಿ ಮತ್ತು ಅಡ್ವಾಣಿ ಇಬ್ಬರೂ ಇಲ್ಲದ ಕಸರತ್ತು ನಡೆಸುತ್ತಿದ್ದಾರೆ. ಒಂದೆಡೆ ಮೋದಿ ಎಂದೂ ಇಲ್ಲದಂತೆ ಇದ್ದಕ್ಕಿದ್ದಂತೆ ಸಮರಸತಾ ಉಪವಾಸ ಕೂತು ರಾಷ್ಟ್ರೀಯ ಮಟ್ಟದಲ್ಲಿ ಇಮೇಜು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಅದಕ್ಕೆ ಪ್ರತಿಯಾಗಿ ಅಡ್ವಾಣಿ ಭ್ರಷ್ಟಾಚಾರದ ವಿರುದ್ಧ ಸಮರ ಯಾತ್ರೆಯ ಫೋಸು ಕೊಡುತ್ತಾ ಜನ ಚೇತನಾ ಯಾತ್ರೆಯನ್ನು ಪ್ರಾರಂಭಿಸಿದ್ದಾರೆ. ಮೋದಿ ಮತ್ತು ಅಡ್ವಾಣಿ ನಡುವಿನ ಒಳಪೈಪೋಟಿ ಎಷ್ಟು ತಾರಕಕ್ಕೆ ಹೋಗಿದೆಯೆಂದರೆ ಈವರೆಗಿನ ಎಲ್ಲಾ ಐದು ರಥಯಾತ್ರೆಗಳನ್ನು ಗುಜರಾತಿನಿಂದ ಪ್ರಾರಂಭಿಸಿದ್ದ ಅಡ್ವಾಣಿ ಈ ಬಾರಿ ಮಾತ್ರ ತಮ್ಮ ಯಾತ್ರೆಯನ್ನು ಮೋದಿಯನ್ನು ಬಹಿರಂಗವಾಗಿ ವಿರೋಧಿಸಿದ ಬಿಹಾರದ ಮುಖ್ಯಮಂತ್ರಿ ನಿತೀಶರ ರಾಜ್ಯದಿಂದ ಮತ್ತು ಅವರ ಕೈಯಿಂದ ಉದ್ಘಾಟನೆ ಮಾಡಿಸಿದ್ದಾರೆ. ಹೀಗೆ ಈ ರಥಯಾತ್ರೆ, ಮುಖ್ಯವಾಗಿ 2014ರ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ತನ್ನ ಅಂತರಿಕ ಮತ್ತು ಬಾಹ್ಯ

ಮೋದಿ ಮತ್ತು ಅಡ್ವಾಣಿಯವರ ನಡುವಿನ ಒಳಜಗಳ ಏನೇ ಇದ್ದರೂ ಇಬ್ಬರೂ ಪರಮ ಹಿಂದೂತ್ವವಾದಿಗಳು ಮತ್ತು ನರಹಂತಕ ಫ್ಯಾಸಿಸ್ಟರು ಎಂಬುದನ್ನು ಇಬ್ಬರೂ ರುಜುವಾತುಪಡಿಸಿದ್ದಾರೆ. ಇಬ್ಬರೂ ದೇಶದ ರಾಜಕಾರಣದಲ್ಲಿ ಕೋಮುವಾದಿ ವಿದ್ವೇಷವನ್ನು ಬಿತ್ತುವ ಮೂಲಕವೇ ಅಧಿಕಾರವನ್ನು ಪಡೆದವರು. ಕೋಮುವಾದಕ್ಕೆ ತತ್‌ಕ್ಷಣದ ಚುನಾವಣಾ ಪ್ರಯೋಜನ ಕಡಿಮೆಯಾಗುತ್ತಿದ್ದಂತೆ ಗುಡ್ ಗವರ್ನೆನ್ಸ್, ಅಭಿವೃದ್ಧಿ, ಭ್ರಷ್ಟಾಚಾರಮುಕ್ತ ಸರ್ಕಾರದ ಗಾಳಿಪಟವನ್ನು ಹಾರಿಸಿದವರೇ. ಆರೆಸ್ಸೆಸ್ ಮತ್ತು ಬಿಜೆಪಿ ಜನರ ಆಗಿನ ಮನೋಭಾವಕ್ಕೆ ತಕ್ಕಂತೆ ತಮ್ಮ ಬಣ್ಣವನ್ನು, ಬಾವುಟವನ್ನು ಮಾತಿನ ವರಸೆಯನ್ನು ಬದಲಿಸುತ್ತಾ ಅಧಿಕಾರಕ್ಕೆ ಬಂದು ನಂತರ ಒಂದೊಂದಾಗಿ ಹಿಂದೂರಾಷ್ಟ್ರದ ಅಜೆಂಡಾವನ್ನು ಜಾರಿಗೆ ತರುವ ದೀರ್ಘಕಾಲೀನ ವ್ಯೂಹದೊಂದಿಗೆ ರಾಜಕಾರಣ ಮಾಡುತ್ತಿದ್ದಾರೆ. ಇದನ್ನು ಪ್ರಜ್ಞಾವಂತ ಮತ್ತು ಕೋಮುವಾದ ರಾಜಕಾರಣಕ್ಕೆ ಬಲಿಯಾದ ಸಮುದಾಯಗಳು ಎಂದಿಗೂ ಮರೆಯುವಂತಿಲ್ಲ.

ಸಾಮರ್ಥ್ಯವನ್ನು ಪುನರುಜ್ಜೀವನಗೊಳಿಸಿಕೊಳ್ಳಲು ಬಿಜೆಪಿ ನಡೆಸಿರುವ ಬಿಜೆಪಿ ಚೇತನಾ ಯಾತ್ರೆಯೇ ಆಗಿದೆ.

ಆದರೆ ಮೋದಿ ಮತ್ತು ಅಡ್ವಾಣಿಯವರ ನಡುವಿನ ಒಳಜಗಳ ಏನೇ ಇದ್ದರೂ ಇಬ್ಬರೂ ಪರಮ ಹಿಂದೂತ್ವವಾದಿಗಳು ಮತ್ತು ನರಹಂತಕ ಫ್ಯಾಸಿಸ್ಟರು ಎಂಬುದನ್ನು ಇಬ್ಬರೂ ರುಜುವಾತುಪಡಿಸಿದ್ದಾರೆ. ಇಬ್ಬರೂ ದೇಶದ ರಾಜಕಾರಣದಲ್ಲಿ ಕೋಮುವಾದಿ ವಿದ್ವೇಷವನ್ನು ಬಿತ್ತುವ ಮೂಲಕವೇ ಅಧಿಕಾರವನ್ನು ಪಡೆದವರು. ಕೋಮುವಾದಕ್ಕೆ ತತ್‌ಕ್ಷಣದ ಚುನಾವಣಾ ಪ್ರಯೋಜನ ಕಡಿಮೆಯಾಗುತ್ತಿದ್ದಂತೆ ಗುಡ್ ಗವರ್ನೆನ್ಸ್, ಅಭಿವೃದ್ಧಿ, ಭ್ರಷ್ಟಾಚಾರ ಮುಕ್ತ ಸರ್ಕಾರದ ಗಾಳಿಪಟವನ್ನು ಹಾರಿಸಿದವರೇ. ಆರೆಸ್ಸೆಸ್ ಮತ್ತು ಬಿಜೆಪಿ ಜನರ ಆಗಿನ ಮನೋಭಾವಕ್ಕೆ ತಕ್ಕಂತೆ ತಮ್ಮ ಬಣ್ಣವನ್ನು, ಬಾವುಟವನ್ನು, ಮಾತಿನ ವರಸೆಯನ್ನು ಬದಲಿಸುತ್ತಾ ಅಧಿಕಾರಕ್ಕೆ ಬಂದು ನಂತರ ಒಂದೊಂದಾಗಿ ಹಿಂದೂರಾಷ್ಟ್ರದ ಅಜೆಂಡಾವನ್ನು ಜಾರಿಗೆ ತರುವ ದೀರ್ಘಕಾಲೀನ ವ್ಯೂಹದೊಂದಿಗೆ ರಾಜಕಾರಣ ಮಾಡುತ್ತಿದ್ದಾರೆ. ಇದನ್ನು ಪ್ರಜ್ಞಾವಂತ ಮತ್ತು ಕೋಮುವಾದ ರಾಜಕಾರಣಕ್ಕೆ ಬಲಿಯಾದ ಸಮುದಾಯಗಳು ಎಂದಿಗೂ ಮರೆಯುವಂತಿಲ್ಲ. ಗಾಂಧಿ ಕೊಲೆಯ ನಂತರ ಪ್ರಧಾನಧಾರೆ ರಾಜಕಾರಣದ ಅಂಚಿನಲ್ಲಿದ್ದ ಆಗಿನ ಭಾರತೀಯ ಜನಸಂಘ ಜೆಪಿಯವರ ಭ್ರಷ್ಟಾಚಾರ ವಿರೋಧಿ ಹೋರಾಟದ ಹಿಂದೆ ಅವಿತುಕೊಂಡೆ ಮತ್ತೆ ಪ್ರಧಾನ ವಾಹಿನಿಗೆ ಬಂದುಬಿಟ್ಟಿತು. 1977ರಲ್ಲಿ ಅಧಿಕಾರಕ್ಕೆ ಬಂದೊಡನೆ ಶಿಕ್ಷಣ ಮತ್ತು ಸಂಸ್ಕೃತಿ, ವಿದೇಶಾಂಗ ವ್ಯವಹಾರದಂಥ ಕೀಲಕ ಖಾತೆಗಳನ್ನು ಪಡೆದುಕೊಂಡು ಹಿಂದೂ ಕೋಮುವಾದಕ್ಕೆ ಶಾಸನಬದ್ಧ ಸಮರ್ಥನೆ ಪಡೆದುಕೊಳ್ಳಲು ಯತ್ನಿಸಿತು. ಮತ್ತೆ 1984ರಲ್ಲಿ ರಾಜಕೀಯ ದಂಚಿಗೆ ಸೇರಿದ್ದ ಬಿಜೆಪಿಯನ್ನು ಅಡ್ವಾಣಿಯ ಕೋಮುವಾದಿ ರಥಯಾತ್ರೆ 4 ರಾಜ್ಯಗಳಲ್ಲಿ ಅಧಿಕಾರಕ್ಕೆ ತಂದಿತು. ಆ ಅಧಿಕಾರವನ್ನು ಬಳಸಿಕೊಂಡೇ 1992ರಲ್ಲಿ ಅವರು ಬಾಬ್ರೀ ಮಸಿದಿ ಕೆಡವಿ ಹಾಕಿದರು. ಗುಡ್ ಗವರ್ನೆನ್ಸ್, ಸುಭದ್ರ ಮತ್ತು ಸುರಾಜ್ಯದ ಹೆಸರಲ್ಲಿ 1999ರಲ್ಲಿ ಕೇಂದ್ರದಲ್ಲಿ ಪಡೆದುಕೊಂಡ ಅಧಿಕಾರದ ಶ್ರೀರಕ್ಷೆಯಲ್ಲೇ 2002ರ ಗುಜರಾತ್ ಹತ್ಯಾಕಾಂಡವನ್ನು ದಕ್ಕಿಸಿಕೊಂಡಿತು. ಹೀಗೆ ಚುನಾವಣಾ ಪೂರ್ವದಲ್ಲಿ ಯಾವುದೇ ನೆಪದಲ್ಲಿ ಅಧಿಕಾರ ಪಡೆದುಕೊಂಡರೂ ಅಧಿಕಾರಕ್ಕೆ ಬಂದೊಡನೆ ಹಿಂದೂ ರಾಷ್ಟ್ರದ ಅಂಜೆಂಡಾವನ್ನು ಯಾವುದೇ ಎಗ್ಗುಸಿಗ್ಗಿಲ್ಲದೆ ಜಾರಿಗೆ ತರುತ್ತಿದೆ. ಹೀಗಾಗಿ ಈಗಲೂ ಅದರ ಭ್ರಷ್ಟಾಚಾರದ ವಿರೋಧೀ ಮುಸುಕಿನ ಹಿಂದಿರುವ ಗುಪ್ತ ಹಿಂದೂತ್ವವಾದಿ ಅಜೆಂಡಾವನ್ನು ಕಾಣುವಷ್ಟು ಜನರ ಕಣ್ಣುಗಳು ಸಮರ್ಥವಿರಬೇಕು.

ಕೋಮುವಾದಿ ಅಜೆಂಡಾ ಈಗ ಹಿಂದಿನಷ್ಟು ಸಲೀಸಾಗಿ ಓಟುಗಳನ್ನು ಗಳಿಸಿಕೊಡಲು ಸಾಧ್ಯವಾಗುತ್ತಿಲ್ಲ. ಈಗ ಕೇವಲ ಮುಸ್ಲಿಂ ವಿರೋಧ, ಪಾಕಿಸ್ತಾನ ವಿರೋಧ ರಾಜಕಾರಣದಲ್ಲಿ ಬಿಜೆಪಿ ಸರಕನ್ನು ಮಾರುವಷ್ಟು ಪ್ರಬಲವಾಗಿಲ್ಲ. ಆದ್ದರಿಂದಲೇ 2004ರಲ್ಲಿ ಬಿಜೆಪಿ "India is Shining" ಎಂಬ ಅಭಿವೃದ್ಧಿ ಭ್ರಾಂತಿಯ ಆತ್ಮವಂಚಕ ಘೋಷಣೆಯನ್ನು ತೇಲಿಬಿಟ್ಟಿತ್ತು. ಆದರೆ ಅದು ಸಾಮಾನ್ಯ ಜನರಿಂದ ತಿರಸ್ಕರಿಸಲ್ಪಟ್ಟ ನಂತರ ಕೇಂದ್ರದ ಮಟ್ಟಗೆ ಬಿಜೆಪಿ ಚೇತರಿಸಿಕೊಳ್ಳಲೇ ಆಗಿರಲಿಲ್ಲ. ಹೀಗಾಗಿ ಈ ಬಾರಿಯ ಚುನಾವಣೆಗೆ ಮುಂಚೆ ಮತ್ತೊಂದು ಲಂಗರಿಗಾಗಿ ಕಾಯುತ್ತಿದ್ದ ಆ ಪಕ್ಷಕ್ಕೆ ಕಾಂಗ್ರೆಸ್ ಕೇಂದ್ರದಲ್ಲಿ ನಡೆಸುತ್ತಲೇ ಬಂದಿರುವ ಬ್ರಹ್ಮಾಂಡ ಭ್ರಷ್ಟಾಚಾರ ವರವಾಗಿ ಬಂದಿತು. ಜನರೆಲ್ಲಾ ದಿಗ್ಭ್ರಾಂತಿಯಾಗುವ ಪ್ರಮಾಣದಲ್ಲಿ ನಡೆದಿರುವ ಲಕ್ಷ ಕೋಟಿಗಳ ಹಗರಣ ಜನರಲ್ಲಿ ಹುಟ್ಟುಹಾಕಿದ ಪರಮ ತಿರಸ್ಕಾರವನ್ನು ಬಳಸಿಕೊಳ್ಳಲು ಅದು ಹೋದವರ್ಷದ ಡಿಸೆಂಬರ್‌ನಲ್ಲಿಯೇ ಯೋಜನೆ ಹಾಕಿಕೊಂಡಿತು.

ಅದರ ಪ್ರಥಮ ತಂತ್ರವಾಗಿ ಜನರಲ್ಲಿ ಭ್ರಷ್ಟಾಚಾರ ವಿರೋಧಿ ಭಾವನೆಯನ್ನು ಸಧೃಢೀಕರಿಸಲು ಜನಾಂದೋಲನ ಸ್ವರೂಪವನ್ನು ಕೊಡಲು ಅರೆಸ್ಸೆಸ್ ಯೋಜನೆ ರೂಪಿಸಿತು. ನೇರವಾಗಿ ತಾವೇ ಹೋರಾಟ ಕಣಕ್ಕೆ ಇಳಿದರೆ ಜನರ ಸಮ್ಮತಿ ಸಿಗುವುದು ಕಷ್ಟ ಎಂದು ಅಂದಾಜಿಸಿದ್ದ ಬಿಜೆಪಿ ಮೊದಲು ಪ್ರತ್ಯಕ್ಷವಾಗಿ ಬಾಬಾ ರಾಮದೇವರನ್ನು ನಂತರ ಪರೋಕ್ಷವಾಗಿ ಅಣ್ಣಾ ಹಜಾರೆಯವರನ್ನು ಬಳಸಿಕೊಂಡಿತು. ಈಗ ಅಣ್ಣಾ ತಂಡದ ಕೇಜ್ರಿವಾಲ್, ಕಿರಣ್ ಬೇಡಿ ಬಿಜೆಪಿಯಿಂದ ನೇರವಾಗಿ ಮಾರ್ಗದರ್ಶನ ಪಡೆಯುತ್ತಿದ್ದದ್ದೂ, ಸ್ವಯಂ ಅಣ್ಣಾ ಹಜಾರೆ ಬಿಜೆಪಿ ಭ್ರಷ್ಟಾಚಾರದ ಬಗ್ಗೆ ಕುರುಡರಾಗಿದ್ದದ್ದೂ ಎಲ್ಲವೂ ಸಾಬೀತಾಗಿದೆ.

(21ನೇ ಪುಟಕ್ಕೆ)

ಮಸುಕಾದ ನಾಯಕರು!

ಬಿ. ಶ್ರೀಪಾದ ಭಟ್

ಚಿಂತಕ ಡಿ. ಆರ್. ನಾಗರಾಜ್ ಅತ್ಯಂತ ಮಾರ್ಮಿಕವಾಗಿ ಹೇಳಿದ್ದು, "ನಮ್ಮ ಹಳ್ಳಿಗಳ ಒಳಗೆ ಅಂಬೇಡ್ಕರ್ ಇರಬೇಕು ಹಾಗೂ ಗಾಂಧಿ ಹಳ್ಳಿಗಳಿಂದ ಹೊರಗೆ ಪಟ್ಟಣಾಭಿಮುಖವಾಗಿ ಚಲಿಸಬೇಕು" ಎಂದು. ಇದು ದಲಿತ ಚಳವಳಿಗಳನ್ನು ಹತ್ತಿರದಿಂದ ನೋಡಿದ, ಗಾಂಧಿ, ಅಂಬೇಡ್ಕರ್ ಇಬ್ಬರನ್ನೂ ತಳಮಟ್ಟದಲ್ಲಿ ಅಭ್ಯಸಿಸಿದ ನಿಜದ ಚಿಂತಕನ ಒಂದು ಅದ್ಭುತ ನುಡಿ. ಭಾರತದ ಸಾಂಪ್ರದಾಯಿಕ ಜಾತೀವಾದಿ ಮನಸ್ಸು ಅದು ಹಳ್ಳಿಯಲ್ಲಾಗಲಿ, ಪಟ್ಟಣದಲ್ಲಾಗಲಿ ಮೂಲಭೂತವಾಗಿ ಜಾತಿಪದ್ಧತಿಯನ್ನು ಒಪ್ಪಿಕೊಂಡಂತಹ ಒಂದು ಸ್ಥಿತಿ. ಜಾತೀಯತೆಯ ಪ್ರಶ್ನೆ ಎದುರಾದಾಗ, ತಳ ಸಮುದಾಯಗಳು ಹೊಸ ಪ್ರಜ್ಞೆಯ, ಹೊಸ ನುಡಿಗಟ್ಟಿನಲ್ಲಿ ಅದನ್ನು ಪ್ರಶ್ನಿಸತೊಡಗಿದಾಗ, ಜೀವ ವಿರೋಧಿ ಅಮಾನವೀಯ ಪದ್ಧತಿಗಳನ್ನು ವಿರೋಧಿಸತೊಡಗಿದಾಗ ತಮ್ಮ ಮೇಲಾಗುತ್ತಿರುವ ಹಿಂಸೆಯ ಬಗ್ಗೆ ಮಾತನಾಡತೊಡಗಿದಾಗ ಸಂಪೂರ್ಣವಾಗಿ ಕೊಳೆತು ಹೋಗಿರುವ ಈ ಸಾಂಪ್ರದಾಯಿಕ, ಜಾತೀವಾದಿ ಭಾರತದ ಮನಸ್ಸು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಅವರೆಲ್ಲ ಹೊಂದಿಕೊಂಡು ಹೋಗಬೇಕು ಎನ್ನುವ ಸಮಾನ ಪಾತಳಿಯೊಂದನ್ನು ನಿರ್ಮಿಸಿಕೊಂಡು ತಳಸಮುದಾಯಗಳ ವಿರುದ್ಧ ಪ್ರಭುತ್ವದ ದೌರ್ಜನ್ಯವನ್ನು ಅಧಿಕೃತವಾಗಿಯೇ ನಡೆಸುತ್ತದೆ.

ಇದಕ್ಕೆ ಪ್ರಭುತ್ವ ಕೆಲವೊಮ್ಮೆ ಬಹಿರಂಗವಾಗಿ ಅನೇಕ ವೇಳೆ ಅನಧಿಕೃತವಾಗಿ ಸಮರ್ಥನೆಗೆ ಇಳಿಯುತ್ತದೆ. ಈ ಹಿಂಸೆಯ ಪ್ರಕ್ರಿಯೆಗೆ ಸಂಘ ಪರಿವಾರದ ಹಿಂದುತ್ವ ಅಜೆಂಡಾ ಸೇರಿಕೊಂಡರಂತೂ ಈ ನಾಗರಿಕ ಸಮಾಜದಲ್ಲಿ ಆಗುವ ಅನಾಹುತಗಳು, ಅಮಾನುಷ ಘಟನೆಗಳು ಊಹಿಸಲಸಾಧ್ಯ. ಮೊನ್ನೆ ಕೋಲಾರದಲ್ಲಿ ಜರುಗಿದ ಮಲ ತೊಳೆಯುವ 3 ಮುಗ್ಧ, ಅಮಾಯಕ ಸಫಾಯಿ ಕರ್ಮಾಚಾರಿಗಳ ಸಾವು, ಸರಣಿ ಹತ್ಯೆಗಳಂತೆಯೇ ದಲಿತರ ಮೇಲೆ ಜರಗುತ್ತಿರುವ ಸರಣಿ ದೌರ್ಜನ್ಯಗಳ ಮುಂದುವರೆದ ಕಂತು. 80ರ ದಶಕದಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಕುದುರೆ ಮೋತಿ ಸ್ವಾಮಿಗಳು ದಲಿತ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದ ಪ್ರಕರಣ ಜರುಗಿತು. ಆಗ ಈ ಸ್ವಾಮಿಗಳ ದೌರ್ಜನ್ಯದ ವಿರುದ್ಧ ರಾಜ್ಯದಲ್ಲೆಲ್ಲಾ ಪ್ರಗತಿಪರ, ದಲಿತ, ಸಂಘಟನೆಗಳು, ತೀವ್ರವಾದ ಹೋರಾಟ ನಡೆಸಿ ಸದರಿ ಸ್ವಾಮಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದವು. ಈ ಹೋರಾಟದ ಒತ್ತಾಯಕ್ಕೆ ಮಣಿದು ಹೆಗಡೆಯವರು ಅರೆಮನಸ್ಸಿನಿಂದಲೇ 6 ಸದಸ್ಯರನ್ನೊಳಗೊಂಡ ಒಂದು ಸತ್ಯಶೋಧನಾ ಸಮಿತಿ ನೇಮಿಸಿದರು. ಆದರೆ ದುರಂತವೆಂದರೆ ಅದರಲ್ಲಿಯು. ಭೂಪತಿಯವರನ್ನು ಹೊರ ತುಪಡಿಸಿ (ಆಗ ಭೂಪತಿಯವರು ಸಂಡೂರು ಕ್ಷೇತ್ರದ ಶಾಸಕರಾಗಿದ್ದರು) ಮಿಕ್ಕ 5 ಸದಸ್ಯರು ಕುದುರೆಮೋತಿ ಸ್ವಾಮಿಯ ಜಾತಿಯವರಾಗಿದ್ದರು !!! ಅಲ್ಲಿಗೆ ಈ ಸತ್ಯಶೋಧನಾ ಸಮಿತಿಯ ನೈತಿಕತೆಯೇ ಪ್ರಶ್ನಾರ್ಹವಾಗಿ ಅದರ ಆಶಯಗಳೇ ಮೂಲೆಗುಂಪಾಗಿ ಆ ಸಮಿತಿಯೇ ಕಾಲಕ್ರಮೇಣ ಬರ್ಖಾಸ್ತಾಯಿತು.

ಸ್ವಜಾತಿ ಪತ್ರಕರ್ತರಿಂದ, ಭಟ್ಟಂಗಿ ಸಾಹಿತಿಗಳಿಂದ ಸಂಪನ್ನ ರಾಜಕಾರಣಿಯೆಂದು ಕರೆಯಲ್ಪಡುವ ಹೆಗಡೆಯವರಿಗೆ ಕೂಡಬೇಕಾಗಿದ್ದು ಇದೇ. ಈ ಮುಖ್ಯಮಂತ್ರಿಗೆ ಆ ಕಾಲದಲ್ಲಿ ಜನತಾದಳದ ಪರ ಒಲವಿದ್ದ ಲಿಂಗಾಯತರನ್ನು ಎದುರು ಹಾಕಿಕೊಳ್ಳಲು ಎಳ್ಳಷ್ಟೂ ಇಷ್ಟವಿರಲಿಲ್ಲ. ಧೈರ್ಯವಿರಲಿಲ್ಲ. ರಾಜಕೀಯ ಇಚ್ಛಾಶಕ್ತಿಯಂತೂ ಇರಲೇ ಇಲ್ಲ !!! ಆಗ ಪ್ರಜ್ಞಾವಂತರೆನಿಸಿಕೊಂಡವರೆಲ್ಲ ಇದರ ಬಗ್ಗೆ ತೋರಿದ ದಿವ್ಯ ನಿರ್ಲಕ್ಷ್ಯ ನಿಜಕ್ಕೂ ಖಂಡನಾರ್ಹವಾಗಿತ್ತು. ಇವರೆಲ್ಲ ಆಗ ತಮ್ಮ ಜಡತ್ವ ತೊರೆದು ದಲಿತ ಸಂಘಟನೆಗಳೊಂದಿಗೆ ಕೈಜೋಡಿಸಿದ್ದರೆ ಈ ಪ್ರಕರಣದ ತನಿಖಾ ಕಾರ್ಯ ತನ್ನ ತಾರ್ಕಿಕ ಅಂತ್ಯಕ್ಕೆ ಮುಟ್ಟುವ ಎಲ್ಲಾ ಸಾಧ್ಯತೆಗಳಿದ್ದವು. ಒಂದು ವೇಳೆ ಹಾಗಾಗಿದ್ದರೆ ಕರ್ನಾಟಕದ ಬಲಿಷ್ಠ ಜಾತಿಗಳ ಅಹಂಗೆ ಸರಿಯಾದ ಪೆಟ್ಟಿನ ರಾಜಕಾರಣದ ಉದ್ಘಾಟನೆಯೇ ಆಗುವ ಸಾಧ್ಯತೆ ಇತ್ತು. ಆದರೆ ಹಾಗಾಗಲಿಲ್ಲ. ನಂತರ ಇದೇ ಹೆಗಡೆಯವರ ಕಾಲಘಟ್ಟದಲ್ಲೇ ದಲಿತರ ಮೇಲಿನ ಅತ್ಯಾಚಾರ ಬೆಂಡಿಗೇರಿ ಮಲ ಪ್ರಕರಣ ಜರುಗಿತು. ನಂತರವೂ ಅಷ್ಟೇ ತೀವ್ರವಾದ ಪ್ರತಿಭಟನೆಯ ನಂತರ ಪ್ರಜ್ಞಾವಂತರ, ವಿದ್ಯಾವಂತರ, ದಿವ್ಯ ಮೌನ. ಇಲ್ಲಿಂದಾಚೆಗೆ ದೇವರಾಜ್ ಅರಸರು ತಮ್ಮ ರಾಜಕೀಯ ಮುತ್ಸದ್ಧಿತನ,

ರಾಜ್ಯದ ಎಲ್ಲಾ ಜಿಲ್ಲೆಗಳ ವೈವಿಧ್ಯತೆಗಳ ಪರಿಚಯವಿರುವ, ಜನಸಮುದಾಯಗಳ ಬೆವರಿನ ವಾಸನೆಯನ್ನು ಗುರುತು ಹಿಡಿಯುವಂತಹ ಒಬ್ಬ ಹೊಸ ನಾಯಕನಿಗಾಗಿ ಈ ರಾಜ್ಯ ಎದುರು ನೋಡುತ್ತಿದೆ. ಭ್ರಷ್ಟ ಕೋಮುವಾದ ರಾಜಕಾರಣಕ್ಕೆ ತಮ್ಮ ಸೆಕ್ಯುಲರ್ ವ್ಯಕ್ತಿತ್ವದಿಂದಲೇ ನಿಭಾಯಿಸುವ ಛಾತಿಯುಳ್ಳ ಮಲ್ಲಿಕಾರ್ಜುನ ಖರ್ಗೆ, ಸಿದ್ಧರಾಮಯ್ಯ ತಮ್ಮ ೩೫ ವರ್ಷಗಳ ರಾಜಕೀಯ ಜೀವನಕ್ಕೆ ಒಂದು ಅರ್ಥಪೂರ್ಣತೆಯನ್ನು ತಂದುಕೊಳ್ಳಬೇಕಾದರೆ ಇವರಿಬ್ಬರೂ ತಮ್ಮ ಜಡತ್ವ, ಸೋಮಾರಿತನವನ್ನ ಸಂಪೂರ್ಣವಾಗಿ ಕಳಚಿಕೊಳ್ಳಬೇಕಾದೆ.



ಇಚ್ಛಾಶಕ್ತಿಯನ್ನೆಲ್ಲ ಬಳಸಿ ಈ ರಾಜ್ಯದ ಹಿಂದುಳಿದ, ದಲಿತ ಜಾತಿಗಳಲ್ಲಿ ತಂದಂತಹ ಆತ್ಮಾಭಿಮಾನ, ನೈತಿಕ ಸ್ಥೈರ್ಯ, ರಾಜಕೀಯ ಆಕಾಂಕ್ಷೆಗಳು ಎಲ್ಲವೂ ಒಂದೊಂದಾಗಿ ಕಳಚಿ ಬೀಳತೊಡಗಿದವು.

ದೌರ್ಜನ್ಯಕ್ಕೆ ಒಳಗಾದವರಿಗೆ ನ್ಯಾಯ ದೊರಕಿಸಿ ಕೊಡುವವರೆಗೂ ಹೋರಾಟವನ್ನು, ಪ್ರತಿಭಟನೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವಷ್ಟು ತಾಳ್ಮೆ, ಸಂಯಮ, ಹೋರಾಟದ ಜಿಗುಟುತನ, ನಿರಂತರತೆ ಎಲ್ಲವನ್ನೂ ಕಾಲಕ್ರಮೇಣ ಕಳೆದುಕೊಂಡೆವು. ಇದರ ಫಲ ಮತ್ತೆ ಬದನವಾಳು ಅತ್ಯಾಚಾರ, ಕಂಬಾಲಪಲ್ಲಿ ನರಮೇಧ, ಬಳ್ಳಾರಿ ಜಿಲ್ಲೆಯಲ್ಲಿ ದಲಿತ ಮಹಿಳೆಯ ಬೆತ್ತಲೆ ಮೆರವಣಿಗೆ ಹೀಗೆ ಕೆಲವು ಉದಾಹರಣೆಗಳನ್ನು ನೆನಪಿಸಿಕೊಳ್ಳ ಬಹುದಷ್ಟೆ. ಈ ಹಿನ್ನೆಲೆಯಲ್ಲಿ ಆಗ ಬಂದಂತಹ ಡಾ. ತಿಪ್ಪೇಸ್ವಾಮಿಯವರ ವರದಿ ಬಹಳ ಅರ್ಥಪೂರ್ಣವಾಗಿತ್ತು. ಅದು ಗ್ರಾಮಗಳಲ್ಲಿ ದಲಿತರ ಮೇಲೆ ನಡೆಯುತ್ತಿರುವ ಹಿಂಸೆಗಳನ್ನು, ಅದರ ನೆಲೆಗಟ್ಟನ್ನು ತುಂಬ ಸೂಕ್ಷ್ಮವಾಗಿ ಎಳೆಎಳೆಯಾಗಿ ಬಿಚ್ಚಿಡುತ್ತದೆ. ಆದರೆ ಅದರ ಬಗ್ಗೆ ಸಮಗ್ರವಾದ ಚರ್ಚೆ ಕೂಡ ನಡೆಯಲಿಲ್ಲ. ಇದು ಕೂಡ ಪ್ರಜ್ಞಾವಂತರ ನಿರ್ಲಕ್ಷ್ಯದ ಪರಮಾವಧಿಯಾಗಿತ್ತು.

ನಮ್ಮ ಪ್ರಜಾತಂತ್ರ ವ್ಯವಸ್ಥೆ, ಸೋ ಕಾಲ್ಡ್ ನಾಗರಿಕ ಸಮಾಜ ಹಾಗೂ ಪ್ರಗತಿಪರರೆಲ್ಲರೂ ಬಹುವಾಗಿ ಬಯಸುವ, ಅತ್ಯಂತ ರಮ್ಯವಾಗಿಯೇ ಆದರ್ಶಪ್ರಾಯವಾಗಿಯೇ ನೋಡುವ ಗ್ರಾಮ ಪಂಚಾಯತಿ ವ್ಯವಸ್ಥೆಯನ್ನು ಗಾಂಧಿಯವರು ಸಮಾನ ಅವಕಾಶಗಳಿಗಾಗಿ ಬಯಸಿದ, ಬಯಸಿದ ಗ್ರಾಮ್ ಸ್ವರಾಜ್‌ನ ಮುಗ್ಧ ಆಶಯಗಳನ್ನು ಅಂಬೇಡ್ಕರರವರು ಈ ವ್ಯವಸ್ಥೆ ಹೇಗೆ ಪ್ರಚ್ಛನ್ನ ಜಾತೀಯತೆಯನ್ನು ತನ್ನ ಒಡಲೊಳಗೆ ಹುದುಗಿಸಿಟ್ಟುಕೊಂಡು ಸಂದರ್ಭ ಸಿಕ್ಕಾಗಲೆಲ್ಲ ದಲಿತರ ಮೇಲೆ ಬಹಿರಂಗವಾಗಿ ಜಾತೀಯ ಅತ್ಯಾಚಾರಗಳನ್ನು ನಡೆಸುತ್ತ, ಅಮಾನುಷ ಹಲ್ಲೆ ನಡೆಸುವುದರ ಮೂಲಕ ಹೊರಹಾಕುತ್ತದೆ, ಆ ಸಂದರ್ಭದಲ್ಲಿ ಯಾವುದೇ ಸರ್ಕಾರವಾಗಲಿ, ಆಡಳಿತ ಯಂತ್ರವಾಗಲಿ, ಪ್ರಗತಿಪರ ಸಂಘಟನೆಗಳಾಗಲಿ, ಅಕಾಡೆಮಿಕ್ ಚಿಂತಕರಾಗಲಿ ನಿಸ್ಸಹಾಯಕರಾಗಿ ಕರ್ತವ್ಯ ಮೂಢರಂತೆ ಮೂಕಪ್ರೇಕ್ಷಕಾಗಬೇಕಾಗುತ್ತದೆ ಎಂದು ವಾಸ್ತವವಾದಿ ನೆಲೆಗಟ್ಟಿನಲ್ಲಿ ಈ ರಮ್ಯವಾದ ಗ್ರಾಮ ಪಂಚಾಯಿತಿ ವ್ಯವಸ್ಥೆಯ ಅಮಾನುಷ ವರ್ತನೆಗಳನ್ನು ಸರಿಯಾಗಿಯೇ ಅರ್ಥೈಸಿಕೊಂಡು ಈ ವೈರುಧ್ಯವನ್ನು ವಿರೋಧಿಸಿದ್ದರು.

ಯಾವುದೇ ಗ್ರಾಮವು ದಲಿತರಿಗೆ ಒಂದು ಕ್ಷಣಕ್ಕಾದರೂ ಇಡೀ ಹಳ್ಳಿಯ ಪರವಾದ ಭಾಷೆಯನ್ನು ಬಳಸಲು, as a spokesperson ಆಗಿ ಮಾತನಾಡಲು ಅವಕಾಶ ಕೊಡುವುದೇ ಇಲ್ಲ ಎಂದು ಅಂಬೇಡ್ಕರ್‌ರವರಿಗೆ 80 ವರ್ಷಗಳ ಹಿಂದೆಯೆ ಮನದಟ್ಟಾಗಿತ್ತು. ಇವತ್ತಿಗೂ ದೇಶದ, ನಮ್ಮ ರಾಜ್ಯದ ಯಾವುದೇ ಜಿಲ್ಲಾ ಪಂಚಾಯ್ತಿಯಲ್ಲಾಗಲಿ, ಗ್ರಾಮ ಪಂಚಾಯ್ತಿಯಲ್ಲಾಗಲಿ ದಲಿತ ಸಮೂಹದ ಧ್ವನಿ ಕೇಳಿಸುವುದೂ ಇಲ್ಲ, ಒಂದು ವೇಳೆ ಅಲ್ಲೇನಾದರು ಒಂದು ಕ್ಷೀಣ ಶಬ್ದ ಬಂದರೂ ಅದನ್ನು ಅಲ್ಲೇ ಅದುಮಲಾಗುತ್ತದೆ. ಅಂತಿಮವಾಗಿ ಈ ಜಾಗತೀಕರಣದ ಸುನಾಮಿ ಪ್ರವಾಹ ತನ್ನ ಕಬಂಧ ಬಾಹುಗಳಲ್ಲಿ, ಆರ್ಥಿಕ ಅಸಮಾನತೆಯಲ್ಲಿ ನಮ್ಮ ಹಳ್ಳಿಯ ಬಡ ರೈತ ಹಾಗೂ ನಿರ್ಗತಿಕ ದಲಿತ ಇಬ್ಬರನ್ನು ಒಟ್ಟಾಗಿಯೇ ಹಿಸುಕಿ ಜೀವಂತವಾಗಿ ನರಳುವಂತೆ ಮಾಡುತ್ತದೆ. ಆಗ

ಯಾವುದೇ ಗ್ರಾಮವು ದಲಿತರಿಗೆ ಒಂದು ಕ್ಷಣಕ್ಕಾದರೂ ಇಡೀ ಹಳ್ಳಿಯ ಪರವಾದ ಭಾಷೆಯನ್ನು ಬಳಸಲು, as a spokesperson ಆಗಿ ಮಾತನಾಡಲು ಅವ ಕಾಶ ಕೊಡುವುದೇ ಇಲ್ಲ ಎಂದು ಅಂಬೇಡ್ಕರ್‌ರವರಿಗೆ 80 ವರ್ಷಗಳ ಹಿಂದೆಯೆ ಮನದಟ್ಟಾಗಿತ್ತು. ಇವತ್ತಿಗೂ ದೇಶದ, ನಮ್ಮ ರಾಜ್ಯದ ಯಾವುದೇ ಜಿಲ್ಲಾ ಪಂಚಾಯ್ತಿ ಯಲ್ಲಾಗಲಿ, ಗ್ರಾಮ ಪಂಚಾಯ್ತಿಯಲ್ಲಾಗಲಿ ದಲಿತ ಸಮೂಹದ ಧ್ವನಿ ಕೇಳಿಸುವುದೂ ಇಲ್ಲ, ಒಂದು ವೇಳೆ ಅಲ್ಲೇನಾದರು ಒಂದು ಕ್ಷೀಣ ಶಬ್ದ ಬಂದರೂ ಅದನ್ನು ಅಲ್ಲೇ ಅದುಮಲಾಗುತ್ತದೆ. ಅಂತಿಮವಾಗಿ ಈ ಜಾಗತೀ ಕರಣದ ಸುನಾಮಿ ಪ್ರವಾಹ ತನ್ನ ಕಬಂಧ ಬಾಹುಗಳಲ್ಲಿ, ಆರ್ಥಿಕ ಅಸಮಾನತೆಯಲ್ಲಿ ನಮ್ಮ ಹಳ್ಳಿಯ ಬಡ ರೈತ ಹಾಗೂ ನಿರ್ಗತಿಕ ದಲಿತ ಇಬ್ಬರನ್ನು ಒಟ್ಟಾಗಿಯೇ ಹಿಸುಕಿ ಜೀವಂತವಾಗಿ ನರಳುವಂತೆ ಮಾಡುತ್ತದೆ.

ಗಾಂಧೀಜಿಯವರ, ಅಂಬೇಡ್ಕರ್‌ರವರ ಸಮಾನ ಕಳಕಳಿಗಳು ಬೇರೆ ಬೇರೆ ನೆಲೆಗಟ್ಟಿನಲ್ಲಿ ಆರಂಭಗೊಂಡರೂ ಅಂತಿಮವಾಗಿ ತಮ್ಮ ಗುರಿ ತಲುಪಲು ಒಂದೇ ಪಾತಳಿಯಲ್ಲಿ, ಬಿಂದುವಿನಲ್ಲಿ ಸಂಧಿಸಲೇಬೇಕಾಗುತ್ತದೆ. ಇದನ್ನು ಸಂಪೂರ್ಣವಾಗಿ ಅರಿತುಕೊಂಡೇ ನಮ್ಮ ದೇವನೂರು ಮಹಾದೇವರವರು ರೈತ ಚಳವಳಿ ಹಾಗೂ ದಲಿತ ಚಳವಳಿ ಸಾಮರಸ್ಯ ನೆಲೆಯಲ್ಲಿ ಸಂಧಿಸಲಿ ಎಂದೇ ಅವೆರಡನ್ನು ಒಳಗೊಂಡ, ಅಪಾರ ಮಹತ್ವಾಕಾಂಕ್ಷೆಯ "ಸರ್ವೋದಯ ಪಕ್ಷ"ವನ್ನು ಹುಟ್ಟುಹಾಕಿದ್ದು.

ಆದರೆ ನಾವೆಲ್ಲಾ ಏನೋ ಬಿಗುಮಾನದಿಂದ, ಮಳ್ಳಿಯ ಥರ ಅದನ್ನು ಅನುಮೋದಿಸಿಯೂ ಅನುಮೋದಿಸದಂತೆ ನಡೆದುಕೊಂಡಿದ್ದು, ಈ ಸರ್ವೋದಯ ಪಕ್ಷವನ್ನು ಬೆಳೆಸದೆ ಮತ್ತೆ ಮತ್ತೆ ನಮ್ಮ, ನಮ್ಮ ತರ್ಕ, ಸಿದ್ಧಾಂತಗಳಲ್ಲೇ ಮುಳುಗಿದ್ದು ಒಂದು ಅಕ್ಷಮ್ಯ ಅಪರಾಧವೇ ಸರಿ. ಮೊನ್ನೆ ಕೋಲಾರದಲ್ಲಿ ಜರುಗಿದ ಮಲ ತೊಳೆಯುವ 3 ಮುಗ್ಧ, ಅಮಾಯಕ ಸಫಾಯಿ ಕರ್ಮಾಚಾರಿಗಳ ಸಾವನ್ನು ಕೂಡ ನಾವುಗಳೆಲ್ಲಾ ಒಂದು ರೀತಿಯ ಅನ್ಯಮನಸ್ಕರಂತೆ ಸ್ಪಂದಿಸುತ್ತಿರುವುದು, ಸರ್ಕಾರದ ವಿರುದ್ಧ ಸಣ್ಣದಾಗಿ ಗೊಣಗಿ ನಮ್ಮ ಕರ್ತವ್ಯವನ್ನು ಮುಗಿಸಿದ್ದೇವೆಂದು ಸುಖವಾಗಿ ನಿದ್ರಿಸುವ ರಾಜ್ಯದ ಎಲ್ಲಾ ಪ್ರಜ್ಞಾವಂತರ ಈ ಆತ್ಮವಂಚನೆಯೇ ಎಲ್ಲಕ್ಕಿಂತಲೂ ಘೋರವಾದದ್ದೆನಿಸುತ್ತದೆ. ಇಂತಹ ಪ್ರಕರಣಗಳಲ್ಲಿ ಸರ್ಕಾರ ಹಾಗೂ ನೌಕರಶಾಹಿವರ್ಗಗಳು ಯಾವಾಗಲೂ ತಪ್ಪಿತಸ್ಥರೇ. ಅವರ ಕುತ್ತಿಗೆ ಪಟ್ಟಿ ಹಿಡಿದುಕೊಂಡು ನ್ಯಾಯ ಕೇಳುವ, ದಕ್ಕಿಸಿಕೊಳ್ಳುವ, ಅಪರಾಧಿಗಳಿಗೆ ಶಿಕ್ಷೆ ಕೊಡಿಸುವ ಹೋರಾಟದ ಮನೋಭೂಮಿಕೆಯ ಅಗತ್ಯತೆ ಪ್ರತಿಯೊಬ್ಬ ಪ್ರಜ್ಞಾವಂತರಲ್ಲಿ ಸಂಪೂರ್ಣ ಕಾಣೆಯಾಗಿದೆ.

ಇಂದೂಧರ ಹೊನ್ನಾಪುರರು ಸರಿಯಾಗಿ ಹೇಳಿದಂತೆ ಈಗ ನಾವೆಲ್ಲ "ಸತ್ತ ಹಾವನ್ನು ಬಡಿಯುವಲ್ಲಿ Expert ಆಗಿದ್ದೇವೆ." ಅದೇ ಮತ್ತದೇ ಭೂತದ ಹಳಹಳಿಕೆ!! ಮತ್ತದೇ ಪ್ರಗತಿಪರ ಸಂಘಟನೆಗಳು, ಹೋರಾಟಗಳು ಹೇಗೆ ಸೋತುಹೋದವೆಂದು ಆಕರ್ಷಕವಾಗಿ ಅಕಡೆಮಿಕ್ ನೆಲೆಗಟ್ಟಿನಲ್ಲಿ ಆಕರ್ಷಕವಾಗಿ ವಿವರಿಸುತ್ತ ಚಪ್ಪಾಳೆ ಗಿಟ್ಟಿಸುವ ಇಂದಿನ ಸಂಪೂರ್ಣ ಸುಖದ ಮನೋಭೂಮಿಕೆಯಿಂದ ನಾವೆಲ್ಲ ಹೊರಬರದಿದ್ದರೆ ಯಾವ ಸರ್ಕಾರ ಬಂದರೂ ಅಷ್ಟೆ. ಯಾಕೆಂದರೆ ಎರಡು ದಶಕಗಳ ಕಾಲ ನಿರಂತರ ತಮ್ಮ ಹೋರಾಟಗಳನ್ನು ನಡೆಸಿದ ಈ ಎಲ್ಲಾ ಪ್ರಗತಿಪರ ಚಳವಳಿಗಳು ಈ ಕಾಲಘಟ್ಟದಲ್ಲಿ ಹೊತ್ತುಕೊಂಡ ಭಾರವಾದರೂ ಎಂತಹದು!! ಅವು ಸೈದ್ಧಾಂತಿಕವಾಗಿ ಎಡಪಂಥೀಯವಾಗಿಯೂ, ಪ್ರಜಾಸತ್ತಾತ್ಮಕವಾಗಿಯೂ, ಜಾತ್ಯತೀತವಾಗಿಯೂ, ಭ್ರಷ್ಟಾಚಾರದ ಕಳಂಕ ಸ್ವಲ್ಪವೂ ತಟ್ಟದಂತೆ ನಿರಂತರ ಪ್ರಜ್ಞೆ ಹಾಗೂ ಸ್ವತಹ ತಮ್ಮಲ್ಲೂ, ತಮ್ಮ ಎಲ್ಲ ಕಾರ್ಯಕರ್ತರಲ್ಲೂ ಈ ಬಗ್ಗೆ ನಿರಂತರ ಎಚ್ಚರಿಕೆಯನ್ನು ಕಾಯ್ದುಕೊಳ್ಳುವಿಕೆ ಇಷ್ಟೊಂದು ಒಜ್ಜೆಯನ್ನು ಯಾವ ಚಳವಳಿಗಳೂ ನಿರಂತರವಾಗಿ ಹೊತ್ತುಕೊಳ್ಳಲಾರವು.

ಕರ್ನಾಟಕದಲ್ಲಾದದ್ದೂ ಇದೇ. ಈಗ ವಿಘಟನೆಗೊಂಡು ಸದ್ಯ ಜಡತ್ವದ ಸ್ಥಿತಿಯಲ್ಲಿರುವ ಆ ಕಾಲದ ಪ್ರಗತಿಪರ ಚಳವಳಿಗಳು ಮತ್ತೇನಿಲ್ಲ ಹೊಸ ಜಗಿತ, ಹೊಸರೂಪ ಕಂಡುಕೊಳ್ಳಬೇಕಾಗಿದೆ ಅಷ್ಟೇ. ಇದಕ್ಕಾಗಿ ನಾಡಿನ ಪ್ರಜ್ಞಾವಂತರೆಲ್ಲ ತಮ್ಮ ಅಕಡೆಮಿಕ್ ಚಿಂತನ ಶೈಲಿಯ, ಸೆಮಿನಾರ್‌ಗಳ ಗೋಪುರಗಳಿಂದ ಹೊರ ಬರಬೇಕಿದೆ ಆಗ ಎಲ್ಲವೂ ಸ್ಪಷ್ಟವಾಗತೊಡಗುತ್ತವೆ. ಈ ಸಂದರ್ಭದಲ್ಲಿ ಚಿಂತಕ ಕೆ. ರಾಮಯ್ಯ ಮಾರ್ಮಿಕವಾಗಿ ಹೇಳಿದ ಮಾತು, "ನಮ್ಮ ನಾಡಿನ ಎಲ್ಲಾ ತಳ ಸಮುದಾಯಗಳ, ಬುಡಕಟ್ಟು ಹಿಂದುಳಿದ ವರ್ಗಗಳ ಚಿಂತನೆಗಳನ್ನು, ಮಣ್ಣಿನ ಗುಣಗಳನ್ನು, ಜೀವಪರ ಪರಂಪರೆಗಳನ್ನು ಅಕಡೆಮಿಕ್ ಚಿಂತನೆಗಳು ಸಂಪೂರ್ಣವಾಗಿ ಸವಾರಿ ಮಾಡುತ್ತಿವೆ. ಇಂತಹ ಅಪಾಯಕಾರಿ ತಪ್ಪುಗಳನ್ನು ಸರಿಪಡಿಸಲು ಮತ್ತೊಂದು ವಿದ್ಯಾಲಯವನ್ನೇ ತೆರೆಯಬೇಕಾಗುತ್ತದೆ". ಸದ್ಯಕ್ಕೆ ಸಂಕೋಚದ, ರುಜು ಸ್ವಭಾವದ, ಅಬ್ಬರ, ಆಕರ್ಷಕವಾಗಿ ಮಾತನಾಡದ, ಕನಿಷ್ಠ ರಾಜ್ಯದ ಎಲ್ಲಾ ಜಿಲ್ಲೆಗಳ ವೈವಿಧ್ಯತೆಗಳ ಪರಿಚಯವಿರುವ, ಜನ ಸಮುದಾಯಗಳ ಬೆವರಿನ ವಾಸನೆಯನ್ನು ಗುರುತು ಹಿಡಿಯುವಂತಹ ಒಬ್ಬ ಹೊಸನಾಯಕನಿಗಾಗಿ ಈ ರಾಜ್ಯ ಎದುರು ನೋಡುತ್ತಿದೆ. ಆದರೆ ಇಂದಿನ ಸ್ಥಿತಿಯಲ್ಲಿ ಅದು ಒಂದು ಮರೀಚಿಕೆಯೇ ಸರಿ ಹಾಗೂ ಅಸಾಧ್ಯವಾದದ್ದು. ಆದರೆ ಸಂಘ ಪರಿವಾರದ ಭ್ರಷ್ಟ ಕೋಮುವಾದ ರಾಜಕಾರಣಕ್ಕೆ ತಮ್ಮ ಸೆಕ್ಯುಲರ್ ವ್ಯಕ್ತಿತ್ವದಿಂದಲೇ ನಿಭಾಯಿಸುವ ಛಾತಿಯುಳ್ಳ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ತಮ್ಮ 35 ವರ್ಷಗಳ ರಾಜಕೀಯ ಜೀವನಕ್ಕೆ ಒಂದು ಅರ್ಥಪೂರ್ಣತೆಯನ್ನ, ಒಂದು ರೀತಿಯ ಸಾರ್ಥಕತೆಯನ್ನ ತಂದುಕೊಳ್ಳಬೇಕಾದರೆ ಇವರಿಬ್ಬರೂ ತಮ್ಮ ಜಡತ್ವ, ಸೋಮಾರಿತನವನ್ನ ಸಂಪೂರ್ಣವಾಗಿ ಕಳಚಿಕೊಂಡು ಮೇಲ್ಕಾಣಿಸಿದ ಶೈಲಿಯ ನಾಯಕನ ಭ್ರಮೆಯನ್ನಾದರೂ ಈ ರಾಜ್ಯಕ್ಕೆ, ಜನತೆಗೆ ತೋರಿಸಿ ಕೊಟ್ಟರೆ ಅದು ನಿಜಕ್ಕೂ ಒಂದು ಪವಾಡವೇ. □

ಹೆಸರಿಗೆ 'ಭಯೋತ್ಪಾದನೆ ವಿರುದ್ಧ ಸಮರ', ನಿಜವಾಗಿ ದಗಲ್ಬಾಜಿ.

ಜನರಿಗೆ ಮಂಕುಬೂದಿ!

ಪೌಲ್ ಕ್ರೇಗ್ ರಾಬರ್ಟ್ಸ್
ಅನು: ಸುರೇಶ್ ಭಟ್ ಬಾಕ್ರಬೈಲು

ದಶಕದ ಹಿಂದೆ ತನ್ನ 'ಭಯೋತ್ಪಾದನೆ ವಿರುದ್ಧ ಸಮರ'ವನ್ನು ಘೋಷಿಸಿರುವ ಅಮೆರಿಕಾ ಸರ್ಕಾರ ಆ ಹೆಸರಿನಡಿಯಲ್ಲಿ ಇದುವರೆಗೆ ಬರೋಬ್ಬರಿ ಆರು ಮುಸ್ಲಿಂ ರಾಷ್ಟ್ರಗಳ ವಿರುದ್ಧ ಸೇನಾ ಕಾರ್ಯಾಚರಣೆಗಳನ್ನು ನಡೆಸಿದೆ. ಈ ಅಪ್ರಚೋದಿತ ಆಕ್ರಮಣಗಳ ಫಲವಾಗಿ ಮಿಲಿಯಾಂತರ ಮುಸ್ಲಿಮರು ಹತರಾಗಿದ್ದಾರೆ, ಊನಾಂಗರಾಗಿದ್ದಾರೆ, ಮನೆಮಠ ಕಳೆದುಕೊಂಡಿದ್ದಾರೆ; ಹೆಣ್ಮಕ್ಕಳು ವಿಧವೆಯರಾಗಿದ್ದಾರೆ; ಮಕ್ಕಳು ಅನಾಥರಾಗಿದ್ದಾರೆ. ಪ್ರಧಾನವಾಗಿ ಅಸೈನಿಕ ಜನಸಾಮಾನ್ಯರ ಬದುಕು ಮತ್ತು ಮೂಲಭೂತ ಸೌಕರ್ಯಗಳ ಮೇಲೆ ದುಷ್ಪರಿಣಾಮ ಉಂಟುಮಾಡುತ್ತಿರುವ ಈ ದಾಳಿಗಳು ಯುದ್ಧಾಪರಾಧ ಕಾನೂನಿನ ವ್ಯಾಪ್ತಿಯಲ್ಲಿ ಬರುತ್ತವೆ. ಅಮೆರಿಕಾ ಇಂದು ನಡೆಸುತ್ತಿರುವ ದುಷ್ಕೃತ್ಯಗಳು ಅಂದು ನಾಜಿಗಳು ನಡೆಸಿದ್ದ ಕರ್ಮಕಾಂಡಗಳಿಗೆ ಸಮನಾಗಿವೆ. ನಾಜಿಗಳನ್ನು ಯುದ್ಧಾಪರಾಧಿಗಳೆಂದು ತೀರ್ಮಾನಿಸಿ ಅವರಿಗೆ ಮರಣ ದಂಡನೆ ವಿಧಿಸಲಾಗಿತ್ತು.

ಅಮೆರಿಕಾ ಸರ್ಕಾರದ ಈ ಅಘೋಷಿತ ಯುದ್ಧಗಳ ಬಿಸಿ ನೇರವಾಗಿ ತಟ್ಟಿರುವುದು ಅಲ್ಲಿನ ತೆರಿಗೆದಾರರಿಗೆ. ಭವಿಷ್ಯದ ನಿಧಿಗಳನ್ನೂ ಈಗಾಗಲೇ ಖರ್ಚು ಮಾಡಿರುವ ಸರ್ಕಾರ ಕನಿಷ್ಠ 4000 ಶತಕೋಟಿ ಡಾಲರುಗಳ ಈ ಮೊತ್ತವನ್ನೆಲ್ಲ ತೆರಿಗೆದಾರರಿಂದಲೇ ವಸೂಲಿಮಾಡಿದೆ. ಇದುವರೆಗಿನ ಸರ್ಕಾರಿ ಸಾಲದ ಮೂರನೇ ಒಂದಂಶದಷ್ಟಾಗುವ ಈ ವೆಚ್ಚಗಳ ಪರಿಣಾಮವಾಗಿ ಅಮೆರಿಕಾದಲ್ಲಿ ಆರ್ಥಿಕ ಕೊರತೆಯ ಬಿಕ್ಕಟ್ಟು ತಲೆದೋರಿದೆ. ಸರ್ಕಾರದ ಸಾಮಾಜಿಕ ಸುರಕ್ಷತಾ ಕಾರ್ಯಕ್ರಮಗಳಿಗೆ ಕತ್ತರಿಪ್ರಯೋಗದ ಭೀತಿ ಎದುರಾಗಿದೆ. ಡಾಲರ್ ಮೌಲ್ಯ ಹಾಗೂ ಅದರ ಮೀಸಲು ಹಣದ ಪಾತ್ರದ ಮೇಲೆ ತೂಗುಗತ್ತಿ ನೇತಾಡುತ್ತಿದೆ. ಇದೇ ವೇಳೆ ಈ ಯುದ್ಧಗಳ ನೇರ ಲಾಭ ಪಡೆದುಕೊಂಡ ದೇಶದ ಮಿಲಿಟರಿ/ಭದ್ರತಾ ವ್ಯವಸ್ಥೆ ಹಾಗೂ ಉದ್ಯಮಗಳ ಕೂಟ ಮತ್ತದರ ಸಮರ್ಥಕರೆಲ್ಲ ಹಿಂದೆಂದೂ ಇಲ್ಲದಷ್ಟು ಸಂಪತ್ತನ್ನು ತಮ್ಮದಾಗಿಸಿಕೊಂಡಿದ್ದಾರೆ.

ಅಮೆರಿಕಾ ಎಂಬ ದೈತ್ಯರಾಷ್ಟ್ರದ ಪ್ರಜೆಗಳು ದಶಕದಿಂದಲೂ ಸರ್ಕಾರದ ಸುಳ್ಳುಗಳನ್ನು ನಂಬುತ್ತಾ ಭಯಭೀತರಾಗಿ ಕುಳಿತಿದ್ದಾರೆ. ಅವರೆಲ್ಲ ಅಸ್ತಿತ್ವದಲ್ಲಿರದ ಉಗ್ರರ ಬಗ್ಗೆ ಭಯಪಡುತ್ತಾ ಬೆರಳು ಚೀಪುತ್ತಾ ಕುಳಿತಿದ್ದಾಗ ಅತ್ತ ಆರು ಮುಸ್ಲಿಂ ರಾಷ್ಟ್ರಗಳ ಮಿಲಿಯಾಂತರ ಜನರ ಬದುಕು ಸರ್ವನಾಶವಾಗಿದೆ. ಅಮೆರಿಕಾದ ಗರಿಷ್ಠ ಸಂಖ್ಯೆಯ ಪ್ರಜೆಗಳ ಮನೋಸ್ಥಿತಿ ಹೇಗಿದೆಯೆಂದರೆ ಯಾವುದೇ ಪುರಾವೆ ಇದ್ದರೆ ಸಾಕು, ತಮ್ಮಿಂದ ಭೂಪಟಗಳಲ್ಲಿ ಕಂಡುಹಿಡಿಯಲು ಅಸಾಧ್ಯವಾದ ದೇಶಗಳ ಪ್ರಜೆಗಳನ್ನು ನಿಷ್ಕಾರಣವಾಗಿ ಕೊಲೆಗೈಯುವ ವಿಷಯದಲ್ಲಿ ಅವರು ಒಂದಿನಿತೂ ವಿಚಲಿತರಾಗುವುದಿಲ್ಲ.

'ಭಯೋತ್ಪಾದನೆ ವಿರುದ್ಧ ಸಮರ'ದ ಫಲವಾಗಿ ಪ್ರಜೆಗಳ ಸಾಂವಿಧಾನಿಕ ಮತ್ತು ನಾಗರಿಕ ಹಕ್ಕುಗಳು ಅತ್ಯಧಿಕ ದಮನಕ್ಕೊಳಗಾಗಿವೆ. ಸರ್ಕಾರ ಯಾವನೇ ಪ್ರಜೆಯೋರ್ವನ ವಿರುದ್ಧ ಆರೋಪ ಮಾಡಿದಾಕ್ಷಣ ಆತನ ಕಾನೂನಾತ್ಮಕ ಹಾಗೂ ಸಂವಿಧಾನಾತ್ಮಕ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಸರ್ಕಾರಗಳು ಕಾನೂನಿಗೆ ಉತ್ತರದಾಯಿಗಳಾಗುವಂತೆ ಮಾಡಿರುವುದು ಮಾನವಕುಲದ ಅತಿ ದೊಡ್ಡ ಸಾಧನೆಯಾಗಿದ್ದರೂ ಬುಷ್-ಚೇನಿ-ಒಬಾಮ ಆಡಳಿತಗಳು ಇದನ್ನು ಪೂರ್ತ ಬುಡಮೇಲು ಮಾಡಿವೆ.

ಅಮೆರಿಕಾ ಇಂದು ಭಯೋತ್ಪಾದನೆಯ ಹಿಡುಗಿನಿಂದ ಪಾರಾಗಿದೆಯಾದರೆ ಅದಕ್ಕೆ ಒಂದು ದಶಕ ಪರ್ಯಂತದ ಪೊಲೀಸ್ ರಾಜ್ಯ ಮತ್ತು ಸಮರಗಳೇ ಮುಖ್ಯ ಕಾರಣ ಎಂದು ಸಾರಲಾಗುತ್ತಿದೆ. ಆದರೆ ಎಷ್ಟೇ ಹುಡುಕಾಡಿದರೂ ಈ ಭಯೋತ್ಪಾದನೆ ಮಾತ್ರ ಕಾಣಸಿಗುತ್ತಿಲ್ಲ. ಸೆಪ್ಟೆಂಬರ್ 11, 2001 (9/11)ರ ದಾಳಿಯ ಹಿಂದೆ ಒಂದು ಒಳಸಂಚು ಇತ್ತೆಂದು ಸರ್ಕಾರ ವಾದಿಸುತ್ತಿದೆ. ಒಂದು ಪಕ್ಷ ನಾವು ಸರ್ಕಾರದ ಈ ಅಸಂಭವ ಸಿದ್ಧಾಂತವನ್ನು ಒಪ್ಪುತ್ತೇವೆಂದು ಇಟ್ಟುಕೊಂಡರೂ 9/11ರ ನಂತರ ಅಮೆರಿಕಾದಲ್ಲಿ ಯಾವುದೇ ಭಯೋತ್ಪಾದಕ ದಾಳಿ ನಡೆದಿಲ್ಲವೆಂಬ ವಿಷಯವನ್ನು ಗಮನಿಸಬೇಕು. ಕೆಲವು ಆಂತರಿಕ "ಭಯೋತ್ಪಾದಕ ಸಂಚು"ಗಳು ಭಾರಿ ಪ್ರಚಾರ ಗಿಟ್ಟಿಸಿಕೊಂಡಿದ್ದರೆ ಅದಕ್ಕೆ ಮಾಧ್ಯಮಗಳ ಅತಿರಂಜಿತ ವರದಿಗಳೇ ಕಾರಣ. ಮದರ್ ಜೋನ್ಸ್ ನಿಯತಕಾಲಿಕ ಮತ್ತು ಕ್ಯಾಲಿಫೋರ್ನಿಯ-ಬರ್ಕಲಿ ವಿಶ್ವವಿದ್ಯಾನಿಲಯ ಇತ್ತೀಚೆಗೆ ನಡೆಸಿದ ಜಂಟಿ ತನಿಖಾ ವರದಿಯೊಂದು ಬಯಲುಗೊಳಿಸಿರುವಂತೆ ಆ "ಸಂಚು"ಗಳನ್ನು ರೂಪಿಸಿದವರು ಇನ್ನಾರೂ ಅಲ್ಲ, ಎಫ್‌ಬಿಐ ಸಂಸ್ಥೆಯ ಗೂಢಚಾರರು.

ಎಫ್‌ಬಿಐ ಸಂಸ್ಥೆಯಲ್ಲಿ ಇಂದು 15,000 ಗೂಢಚಾರರು ಕೆಲಸ ಮಾಡುತ್ತಿದ್ದಾರೆ. ವಿಯೆಟ್ನಾಂ ಯುದ್ಧವನ್ನು ವಿರೋಧಿಸಿದವರೆಲ್ಲರೂ ಕಮ್ಯೂನಿಸಂ ಬಗ್ಗೆ ಸಹಾನುಭೂತಿ ಉಳ್ಳವರೆಂದು ಶಂಕಿಸಲಾದ ಕಾಲದಲ್ಲಿ ಇದ್ದುದಕ್ಕಿಂತಲೂ ಇದು ಹತ್ತು ಪಟ್ಟು ಅಧಿಕ. ಇಷ್ಟೊಂದು ಬೃಹತ್ತಾದ ನೌಕರವರ್ಗವನ್ನು ಇಟ್ಟುಕೊಂಡಿರುವ ಎಫ್‌ಬಿಐಗೆ ಸಾಕಷ್ಟು ಸಂಖ್ಯೆಯಲ್ಲಿ ನೈಜ ಒಳಸಂಚುಗಳು ಸಿಗದಿರುವ ವಾಸ್ತವ ಮೇಲುನೋಟಕ್ಕೇ ಸ್ಪಷ್ಟವಿದೆ. ಅದೇ ವೇಳೆ ಅದಕ್ಕೆ ತನ್ನ ಬಜೆಟ್ಟನ್ನೂ, "ಭಯೋತ್ಪಾದಕ ಸಂಚು" ಕುರಿತ ಎಚ್ಚರಿಕೆಗಳನ್ನೂ, ಭದ್ರತಾ ತಪಾಸಣೆಗಳ ವೇಳೆ ನಡೆಯುವ ಹಕ್ಕುಗಳ ಉಲ್ಲಂಘನೆಯನ್ನೂ ಸಮರ್ಥಿಸಿಕೊಳ್ಳುವ ಅನಿವಾರ್ಯತೆ ಇದೆ. ಇದರ ಸಲುವಾಗಿ ಎಫ್‌ಬಿಐ ಖುದ್ದು ತಾನೇ ಕೆಲವು "ಭಯೋತ್ಪಾದಕ ಸಂಚು"ಗಳನ್ನು ಹುಟ್ಟು ಹಾಕುತ್ತದೆ. ಬಳಿಕ ಯಾರೋ ತಲೆಕೆಟ್ಟ ವ್ಯಕ್ತಿಗಳನ್ನು ತನ್ನ ಬಲೆಗೆ ಕೆಡವುತ್ತದೆ. ಉದಾಹರಣೆಗಾಗಿ ವಾಷಿಂಗ್ಟನ್ ಮೆಟ್ರೋರೈಲು ಸ್ಫೋಟ ಸಂಚು, ನ್ಯೂಯಾರ್ಕ್

ನಗರದ ಸುರಂಗರೈಲು ಸ್ಫೋಟ ಸಂಚು, ಷಿಕಾಗೊ ನಗರದ 'ಸಿಯರ್ಸ್ ಟವರ್ಸ್' ಸ್ಫೋಟ ಸಂಚುಗಳನ್ನೇ ತೆಗೆದುಕೊಳ್ಳಬಹುದು. ಇವುಗಳನ್ನು ಆಯೋಜಿಸಿ ಕಾರ್ಯಗತಗೊಳಿಸಿರುವುದೆಲ್ಲ ಇದೇ ಎಫ್‌ಬಿಐ ಸಂಸ್ಥೆ.

ಅಂತರ್ಜಾಲ ತಾಣ ಆರ್‌ಟಿ (rt.com) ಪ್ರಕಟಿಸಿರುವ ವರದಿಯಲ್ಲಿ ಹೇಳಲಾಗಿರುವಂತೆ ಮಿಕ್ಕ ಮೂರು ಸಂಚುಗಳನ್ನು ಇತರರು ನಡೆಸಿರಬಹುದು. ಆದರೂ ಗಮನಾರ್ಹ ವಿಷಯವೇನೆಂದರೆ ಆ ಕಾರ್ಯಾಚರಣೆಗಳ ಪೈಕಿ ಒಂದಾದರೂ ಫಲಪ್ರದವಾಗಿರಲಿಲ್ಲ. ಹಾಗಾಗಿ ಅವುಗಳನ್ನು ಒಂದು ವೃತ್ತಿಪರ ಭಯೋತ್ಪಾದಕ ಸಂಘಟನೆ ಎನ್ನಲಾಗಿರುವ ಅಲ್ ಖೈದಾವಂತೂ ನಡೆಸಿಲ್ಲವೆನ್ನುವುದು ಸುವ್ಯಕ್ತ. ಇನ್ನು ಟೈಮ್ಸ್ ಸ್ಕ್ವೇರ್ ಕಾರುಬಾಂಬ್ ಪ್ರಕರಣದಲ್ಲಿ ಬಾಂಬ್ ಸ್ಫೋಟಿಸಿರಲಿಲ್ಲ. ಅದು ಸ್ಫೋಟಿಸುತ್ತಲೂ ಇರಲಿಲ್ಲವೆನ್ನುವ ನಿಜಾಂಶ ಮೇಲು ನೋಟಕ್ಕೇ ತಿಳಿಯುತ್ತದೆ.

ಎಫ್‌ಬಿಐ ಸಂಸ್ಥೆಯ ಕುಟುಕು ಕಾರ್ಯಾಚರಣೆಯ ಬಲೆಗೆ ಬಿದ್ದಿರುವ ಇತ್ತೀಚಿನ ಮಿಕವೇ ಬೋಸ್ಟನ್ ನಗರದ ರೆಝ್ವಾನ್ ಫಿರ್ದೌಸ್ ಎಂಬಾತ. ಈತ ಮಾದರಿ ವಿಮಾನಗಳಲ್ಲಿ ಸಿ–4 ಸ್ಫೋಟಕ ತುಂಬಿ ಆ ಮೂಲಕ ಪೆಂಟಗಾನ್ ಮತ್ತು ಕ್ಯಾಪಿಟೋಲ್ ಕಟ್ಟಡಗಳನ್ನು ಧ್ವಂಸಗೊಳಿಸಲು ಸಂಚು ಹೂಡಿದ್ದನೆಂದು ಆರೋಪಿಸಲಾಗಿದೆ. ದೇಶದ ಪ್ರಜೆಗಳಿಗೆ ಯಾವತ್ತೂ ಅಪಾಯ ಇರಲಿಲ್ಲವೆಂದು ಅಭಯವಿತ್ತ ಅಟಾರ್ನಿ ಕಾರ್ಮನ್ ಆರ್ಟಿಝ್ 'ಎಫ್‌ಬಿಐ ಗೂಢಚಾರರು ಈ ಸಂಚನ್ನು ಭೇದಿಸಿ ಅದನ್ನು ಪೂರ್ತಿ ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರು' ಎಂದು ತಿಳಿಸಿದರು.

ವಾಸ್ತವದಲ್ಲಿ ಈ ಸಂಚನ್ನು ರೂಪಿಸಿದ್ದೇ ಎಫ್‌ಬಿಐ. ಅದಕ್ಕೆ ಬಕರಾ ಮಾಡಿದ್ದು ರೆಝ್ವಾನ್ ಫಿರ್ದೌಸ್‌ನನ್ನು. ಫಿರ್ದೌಸ್ "ಭಯೋತ್ಪಾದಕ ಸಂಘಟನೆಯೊಂದಕ್ಕೆ ಸರಂಜಾಮು ಪೂರೈಕೆ ಮಾಡಿದ್ದ; ಸರಕಾರಿ ಕಟ್ಟಡಗಳನ್ನು ಧ್ವಂಸಗೊಳಿಸಲು ಸಂಚುಹೂಡಿದ್ದ" ಎಂದು ಆರೋಪಿಸಲಾಗಿದೆ. ಸರಕಾರಿ ಕಟ್ಟಡಗಳನ್ನು ದಾಳಿಗೀಡುಮಾಡುವ ಅಪರಾಧ ಸಾಬೀತಾದಲ್ಲಿ ಒಂದೊಂದು ಕಟ್ಟಡಕ್ಕೆ 20 ವರ್ಷಗಳಂತೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ.

ಫಿರ್ದೌಸ್ ಯಾವ "ಭಯೋತ್ಪಾದಕ ಸಂಘಟನೆ" ಪರವಾಗಿ ಕೆಲಸ ಮಾಡುತ್ತಿದ್ದಾನೆ? ಅದು ಅಲ್ ಖೈದಾವಂತೂ ಖಂಡಿತಾ ಅಲ್ಲ. ಯಾಕೆಂದರೆ 9/11ರ ಇಡೀ ಕಾರ್ಯಾಚರಣೆಯನ್ನು ಒಂದೇ ದಿನದಲ್ಲಿ, ಅದೂ ಬೆಳಗಿನ ಒಂದು ತಾಸಿನ ಅವಧಿಯೊಳಗಾಗಿ ಮಾಡಿಮುಗಿಸಿದರೆನ್ನಲಾದ ಅಲ್ ಖೈದಾ ಉಗ್ರರು ಅಮೆರಿಕಾದ 16 ಗೂಢಚಾರ ಸಂಸ್ಥೆಗಳು, ನ್ಯಾಟೊ ಹಾಗೂ ಇಸ್ರೇಲಿನ ಅಷ್ಟೂ ಗೂಢಚಾರ ಇಲಾಖೆಗಳು, ಉತ್ತರ ಅಮೆರಿಕಾದ ಅಂತರಿಕ್ಷ ರಕ್ಷಣಾ ಪ್ರಾಧಿಕಾರ, ರಾಷ್ಟ್ರೀಯ ಭದ್ರತಾ ಮಂಡಳಿ, ವಿಮಾನ ಸಂಚಾರ ನಿಯಂತ್ರಣಾ ವ್ಯವಸ್ಥೆ, ಡಿಕ್ ಚೇನಿ ಮತ್ತು ವಿಮಾನನಿಲ್ದಾಣ ಭದ್ರತಾ ವ್ಯವಸ್ಥೆಗಳನ್ನೆಲ್ಲ ಒಂದಲ್ಲ, ನಾಲ್ಕು ಬಾರಿ ಸೋಲಿಸುವ ಚಾತುರ್ಯವನ್ನು ತೋರಿದವರು. ಇಂತಹ ಮಹಾ ಸಮರ್ಥ ಸಂಘಟನೆಯೊಂದು ಮಾದರಿ ವಿಮಾನಗಳ ಮೂಲಕ ಪೆಂಟಗಾನ್ ಕಟ್ಟಡವನ್ನು ನೆಲಸಮಗೊಳಿಸುವಂತಹ ಅಸಂಬದ್ಧ ಸಂಚಿನಲ್ಲಿ ಪಾಲ್ಗೊಳ್ಳಲಾರದು.

ಜೆಟ್ ಇಂಧನದಿಂದ ಕೂಡಿದ್ದ 757 ವಿಮಾನಕ್ಕೇ ಪೆಂಟಗಾನ್ ಕಟ್ಟಡವನ್ನು ಕೆಡವಲು ಸಾಧ್ಯವಾಗಿರಲಿಲ್ಲ. ವಿಮಾನ ಒಳನುಸುಳಲೂ ಸಾಧ್ಯವಿರದ ಪುಟ್ಟದೊಂದು ತೂತನ್ನು ಮಾಡಲಷ್ಟೇ ಅದು ಶಕ್ತವಾಗಿತ್ತು ಎಂದ ಮೇಲೆ ಚಿಕ್ಕದೊಂದು ಮಾದರಿ ವಿಮಾನದಿಂದ ಪೆಂಟಗಾನ್ ಕಟ್ಟಡವನ್ನು ಕೆಡವಲು ಸಾಧ್ಯವಿದೆಯೆಂದು ನಾವೇಕೆ ನಂಬಬೇಕು? ಈ ಪ್ರಶ್ನೆ ಓದುಗರ ಮನಸ್ಸಿನಲ್ಲಿ ಈಗಾಗಲೇ ಮೂಡಿರಬೇಕೆಂದು ನಿರೀಕ್ಷಿಸುತ್ತಿರುವ ನಾನು ದೇಶಾಭಿಮಾನಿಯೋರ್ವನ ಕರ್ತವ್ಯವೇ ಆಗಿರುವ ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯುತ್ತಿದ್ದೇನೆ. ಈ ಕರ್ತವ್ಯವನ್ನು ನಾನು ಹಲವು ವರ್ಷಗಳ ಸಾರ್ವಜನಿಕ ಸೇವೆಯ ವೇಳೆಯಲ್ಲೂ ಸದಾ ನಿಭಾಯಿಸಿದ್ದೇನೆ.

ಅಮೆರಿಕಾ ಸರ್ಕಾರ ಉತ್ಪಾದಿಸುತ್ತಿರುವ ಈ ಹಾಸ್ಯಾಸ್ಪದ "ಭಯೋತ್ಪಾದಕ ಸಂಚು"ಗಳನ್ನು ಸುಲಭವಾಗಿ ನಂಬುತ್ತಿರುವ ಪ್ರಜೆಗಳು ವಾಸ್ತವದಲ್ಲಿ ಮೋಸ ಹೋಗುತ್ತಿದ್ದಾರೆ. ಜನರ ಈ ದೌರ್ಬಲ್ಯವನ್ನು ಕಂಡಾಗ ಒಂದು ಸತ್ಯದ ಮನವರಿಕೆ ಆಗುತ್ತಿದೆ. ಅದೇನೆಂದರೆ ಅಘೋಷಿತ ಅಜೆಂಡಾವನ್ನು ಜಾರಿಗೊಳಿಸಲಿಚ್ಛಿಸುವ ಯಾವುದೇ ಸರ್ಕಾರ ಬಳಸುವ ಅತ್ಯಂತ ಶಕ್ತಿಶಾಲಿ ಅಸ್ತ್ರವೇ ಭೀತಿ. ಫಿರ್ದೌಸ್‌ನನ್ನು ನ್ಯಾಯಾಂಗದ ಕಟಕಟೆಗೆ ತಂದು ನಿಲ್ಲಿಸಿದಾಗ ಅಲ್ಲಿ ಜ್ಯೂರಿಗಳು ಆತ ಮಾದರಿ ವಿಮಾನಗಳನ್ನು ಬಳಸಿ ಸರಕಾರಿ ಕಟ್ಟಡಗಳನ್ನು ಧ್ವಂಸಗೊಳಿಸಲು ಸಂಚು ಹೂಡಿದ್ದನೆಂದು ತೀರ್ಮಾನಿಸಿ ಆತನಿಗೆ ಶಿಕ್ಷೆ ವಿಧಿಸಲಿರುವವರು ಎಂಬುದರಲ್ಲಿ ಅನುಮಾನವಿಲ್ಲ. ಆದರೂ ಬಲಾತ್ಕಾರ ಅಥವಾ ಚಿತ್ರಹಿಂಸೆಯ ಮೂಲಕ ಆತ ಕೆಲವೊಂದು ಆರೋಪಗಳನ್ನೊಪ್ಪಿ ಶಿಕ್ಷೆಯಲ್ಲಿ ರಿಯಾಯಿತಿ ಪಡೆದುಕೊಳ್ಳುವಂತೆ ಮಾಡುವ ಸಾಧ್ಯತೆಗಳೇ ಹೆಚ್ಚು.

ಅಮೆರಿಕಾದ ಪ್ರಜೆಗಳೆಲ್ಲರೂ ಅಥವಾ ಅವರಲ್ಲಿ ಹೆಚ್ಚಿನವರೆಲ್ಲರೂ ಅತಿಶಯ ಭೀತಿಗೊಳಗಾಗಿದ್ದಾರೆ. ಹಾಗಾಗಿಯೇ ಅವರಿಗೆಲ್ಲ "ತಮ್ಮ" ಸರ್ಕಾರ ಮಿಲಿಯಗಟ್ಟಲೆ ಅಮಾಯಕರನ್ನು ಕೊಲ್ಲುತ್ತಿರುವ ಬಗೆಗಾಗಲಿ, ನಿರ್ವಸಿತರನ್ನಾಗಿ ಮಾಡುತ್ತಿರುವ ಬಗೆಗಾಗಲಿ ಪಾಪಪ್ರಜ್ಞೆಯೇ ಕಾಡುವುದಿಲ್ಲ. ಒಂದು ಬಿಲಿಯದಷ್ಟಿರುವ ಮುಸ್ಲಿಮರೆಲ್ಲರೂ ಉಗ್ರರು, ಅವರನ್ನೆಲ್ಲ ನಿರ್ನಾಮಗೊಳಿಸಬೇಕಾಗಿದೆ ಎಂಬ ಭಾವನೆ ಅವರಲ್ಲಿ ಬೇರೂರಿದೆ. ಭವಿಷ್ಯತ್ತಿನಲ್ಲಿ ಅಮೆರಿಕಾ ನಡೆಸಲಿರುವ ಮಾರಣ ಹೋಮಕ್ಕೆ ಹೋಲಿಸಿದರೆ ನಾಝಿಗಳ ಯಹೂದ್ಯ ಹತ್ಯಾಕಾಂಡವನ್ನು ಬರೀ ಪೀಠಿಕೆ ಎನ್ನಬಹುದು.

ಒಂದು ದಶಕದ ಕಾಲ ನಡೆದ ಸೇನಾ ಕಾರ್ಯಾಚರಣೆಗಳಲ್ಲಿ (ಈ ಕಾಲಾವಧಿ ದ್ವಿತೀಯ ಮಹಾಯುದ್ಧಕ್ಕಿಂತಲೂ 2.5 ಪಟ್ಟು ಅಧಿಕ) ಆರು ದೇಶಗಳಲ್ಲಿನ ಮುಸ್ಲಿಮರನ್ನು ಹತ್ಯೆಗೈದು, ಅವರ ಕುಟುಂಬಗಳನ್ನು ಬೀದಿಪಾಲು ಮಾಡಿ ಅವರ ಭವಿಷ್ಯವನ್ನು ನುಚ್ಚುನೂರು ಮಾಡಲಾಗಿದೆ. ಇಷ್ಟೆಲ್ಲದರ ಹೊರತಾಗಿಯೂ ಅಮೆರಿಕಾದಲ್ಲಿ ಇದುವರೆಗೂ ನೈಜ ಭಯೋತ್ಪಾದಕ ಘಟನೆಗಳು ನಡೆದೇ ಇಲ್ಲವೆಂದರೆ ನಿಮಗೆ ವಿಸ್ಮಯವಾಗುವುದಿಲ್ಲವೇ? ಸ್ವಲ್ಪ ಯೋಚನೆ ಮಾಡಿ.

ಉಗ್ರರು ಇದ್ದ ಪಕ್ಷದಲ್ಲಿ ಅಮೆರಿಕಾದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸುವುದು ಎಷ್ಟೊಂದು ಸುಲಭವಿದೆ ಎಂಬುದರ ಬಗ್ಗೆ ಕ್ಷಣಕಾಲ ಯೋಚಿಸಿ. ಒಂದು ಪಾಶ್ಚಿಮಾತ್ಯ ರಾಷ್ಟ್ರದ, ಅದರಲ್ಲೂ ಜಗತ್ತಿನ ಏಕೈಕ ಸೂಪರ್ ಪವರ್ ಅನಿಸಿಕೊಂಡ ರಾಷ್ಟ್ರದ ಪಾಲಿಗೆ ಅತ್ಯಂತ ಅಪಮಾನಕರವಾದ 9/11ರ ಕೃತ್ಯವನ್ನು ನಡೆಸಿತೆನ್ನಲಾದ ಅಲ್ ಖೈದಾದ ಉಗ್ರನೊಬ್ಬ ಇಂದಿನ ಭದ್ರತಾ ತಪಾಸಣೆಗಳ ನಡುವೆ ವಿಮಾನವೊಂದನ್ನು ಅಪಹರಿಸಲು ಅಥವಾ ಸ್ಫೋಟಿಸಲು ಯತ್ನಿಸಿಯಾನೇ? ಅದೂ ಇನ್ನಿತರ ಅನೇಕ ಬಹುಸುಲಭ ಗುರಿಗಳಿರುವಾಗ? ಖಂಡಿತಾ ಇಲ್ಲ.

ನಿಜಕ್ಕೂ ಅಮೆರಿಕಾದಲ್ಲಿ ಉಗ್ರರಿದ್ದರೆ ಅವರು ವಿಮಾನ ನಿಲ್ದಾಣಗಳಲ್ಲಿರುವ ಭದ್ರತಾ ತಪಾಸಣೆಯ ಮೈಲುದ್ದ ಸಾಲುಗಳ ಮಧ್ಯೆ ನುಸುಳಿ ಬಾಂಬ್ ಸ್ಫೋಟಿಸಬಹುದು. ಒಂದು ವೇಳೆ ಹಾಗೆ ಮಾಡುವಲ್ಲಿ ಯಶಸ್ವಿಯಾದರೆ ವಿಮಾನ ಸ್ಫೋಟಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜನ ಸಾಯಲಿದ್ದಾರೆ. ಅಂತಹದೊಂದು ಘಟನೆ ನಡೆದರೆ "ವಿಮಾನ ನಿಲ್ದಾಣದ ಭದ್ರತೆ"ಯ ಅರ್ಥ ಯಾರೊಬ್ಬನೂ ಸುರಕ್ಷಿತನಲ್ಲವೆಂದು ಅದು ತಿಳಿಸಿಕೊಡಲಿದೆ. ತಂತಿಬೇಲಿ ಬಿಟ್ಟರೆ ಬೇರೇನೂ ಇರದ ನಿರ್ಜನ ಉಪ ವಿದ್ಯುತ್‌ಕೇಂದ್ರಗಳನ್ನು ಉಡಾಯಿಸುವುದು ಉಗ್ರನೊಬ್ಬನ ಪಾಲಿಗೆ ಮಕ್ಕಳಾಟ. ಅದೇ ರೀತಿ ಜನನಿಬಿಡ ವ್ಯವಹಾರ ಸಂಕೀರ್ಣಗಳನ್ನು ಸ್ಫೋಟಿಸುವುದೂ ಸುಲಭ. ರಸ್ತೆ, ಹೆದ್ದಾರಿಗಳಲ್ಲಿ ವಾಹನದಟ್ಟಣೆ ಅತ್ಯಧಿಕವಿರುವ ಸಮಯದಲ್ಲಿ ಬಾಕ್ಸ್‌ಗಟ್ಟಲೆ ಮೊಳೆಗಳನ್ನು ಸುರಿದರೆ ವಾಹನ ಸಂಚಾರವೆಲ್ಲ ಹಲವು ದಿನಗಳ ಕಾಲ ಅಸ್ತವ್ಯಸ್ತಗೊಳ್ಳಲಿದೆ.

ಅಮೆರಿಕಾ ಸರ್ಕಾರ ಉತ್ಪಾದಿಸುತ್ತಿರುವ ಈ ಹಾಸ್ಯಾಸ್ಪದ "ಭಯೋತ್ಪಾದಕ ಸಂಚು"ಗಳನ್ನು ಸುಲಭವಾಗಿ ನಂಬುತ್ತಿರುವ ಪ್ರಜೆಗಳು ವಾಸ್ತವದಲ್ಲಿ ಮೋಸ ಹೋಗುತ್ತಿದ್ದಾರೆ. ಜನರ ಈ ದೌರ್ಬಲ್ಯವನ್ನು ಕಂಡಾಗ ಒಂದು ಸತ್ಯದ ಮನವರಿಕೆ ಆಗುತ್ತಿದೆ. ಅದೇನೆಂದರೆ ಅಘೋಷಿತ ಅಜೆಂಡಾವನ್ನು ಜಾರಿಗೊಳಿಸಲಿಚ್ಛಿಸುವ ಯಾವುದೇ ಸರ್ಕಾರ ಬಳಸುವ ಅತ್ಯಂತ ಶಕ್ತಿಶಾಲಿ ಅಸ್ತ್ರವೇ ಭೀತಿ. ಫಿರ್ದೌಸ್‌ನನ್ನು ನ್ಯಾಯಾಂಗದ ಕಟಕಟೆಗೆ ತಂದು ನಿಲ್ಲಿಸಿದಾಗ ಅಲ್ಲಿ ಜ್ಯೂರಿಗಳು ಆತ ಮಾದರಿ ವಿಮಾನಗಳನ್ನು ಬಳಸಿ ಸರಕಾರಿ ಕಟ್ಟಡಗಳನ್ನು ಧ್ವಂಸಗೊಳಿಸಲು ಸಂಚು ಹೂಡಿದ್ದನೆಂದು ತೀರ್ಮಾನಿಸಿ ಆತನಿಗೆ ಶಿಕ್ಷೆ ವಿಧಿಸಲಿರುವವರು ಎಂಬುದರಲ್ಲಿ ಅನುಮಾನವಿಲ್ಲ. ಆದರೂ ಬಲಾತ್ಕಾರ ಅಥವಾ ಚಿತ್ರಹಿಂಸೆಯ ಮೂಲಕ ಆತ ಕೆಲವೊಂದು ಆರೋಪಗಳನ್ನೊಪ್ಪಿ ಶಿಕ್ಷೆಯಲ್ಲಿ ರಿಯಾಯಿತಿ ಪಡೆದುಕೊಳ್ಳುವಂತೆ ಮಾಡುವ ಸಾಧ್ಯತೆಗಳೇ ಹೆಚ್ಚು.

ನಾನು ಭಯೋತ್ಪಾದಕರಿಗೆ ಉಪಾಯ ಹೇಳಿಕೊಡುತ್ತಿದ್ದೇನೆಂದು ಆರೋಪ ಮಾಡುವ ಮೊದಲು ಒಂದು ಕ್ಷಣ ನಿಲ್ಲಿ. 9/11ರಂತಹ ಕೃತ್ಯವನ್ನು ನಡೆಸಿದವರಿಗೆ ಇಂತಹ ಐಡಿಯಗಳೆಲ್ಲ ಈಗಾಗಲೇ ಹೊಳೆಯದೆ ಇದ್ದೀತೇ ಎಂದು ಯೋಚಿಸಿ. ನಮ್ಮಲ್ಲಿ ಮೇಲೆ ಹೇಳಲಾಗಿರುವ ಘಟನೆಗಳ್ಯಾವುವೂ ನಡೆಯುವುದಿಲ್ಲ. ಬದಲಿಗೆ ವ್ಯಕ್ತಿಯೊಬ್ಬನನ್ನು ಬಂಧಿಸುವ ಎಫ್‌ಬಿಐ, ಆತ ಮಾದರಿ ವಿಮಾನವೊಂದರ ಮೂಲಕ ಅಮೆರಿಕಾವನ್ನು ಸ್ಫೋಟಿಸಲು ಯೋಜನೆ ರೂಪಿಸಿದ್ದನೆಂದು ಆರೋಪ ಮಾಡುತ್ತದೆ. ಇದನ್ನು ಎಷ್ಟೊಂದು ಜನ ನಂಬುತ್ತಾರಲ್ಲಾ ಎಂದು ಯೋಚಿಸಿದಾಗ ಖಿನ್ನತೆ ಆವರಿಸುತ್ತದೆ.

ಇನ್ನೂ ಕೆಲವು ವಿಷಯಗಳ ಬಗ್ಗೆ ಗಮನ ಹರಿಸಬೇಕು. ಈ "ಭಯೋತ್ಪಾದನೆ ವಿರುದ್ಧ ಸಮರ"ವನ್ನು ಸಾರಿರುವ ಅಮೆರಿಕಾದ ನವಸಂಪ್ರದಾಯವಾದಿಗಳಿಗೆಲ್ಲ ಯಾವುದೇ ರೀತಿಯ ಭದ್ರತೆ ಒದಗಿಸದಿರುವುದನ್ನು ಗಮನಿಸಬೇಕು. ಬುಷ್ ಮತ್ತು ಚೇನಿಯವರ ಭದ್ರತೆಗಾಗಿ ಒಂದಿಷ್ಟು ಗೂಢಚರರನ್ನು ನಿಯೋಜಿಸಲಾಗಿದ್ದರೂ ಅವರ ಸಂಖ್ಯೆ ಅತ್ಯಂತ ಕಡಿಮೆ. ಅಮೆರಿಕಾ ಭಯೋತ್ಪಾದನೆಯ ಅಪಾಯ ಎದುರಿಸುತ್ತಿದೆ, ಅದರಲ್ಲೂ ವಿಶೇಷವಾಗಿ 9/11ರ ವೃತ್ತಿಪರ ಭಯೋತ್ಪಾದಕರಿಂದ, ಎನ್ನುವುದು ನಿಜವೇ ಆಗಿದ್ದರೆ, ಬುಷ್, ಚೇನಿಯಂತಹ ನವಸಂಪ್ರದಾಯವಾದಿಗಳು ಒಂದು ತಾಸಿನೊಳಗಾಗಿ ಹತ್ಯೆಗೀಡಾಗಬಲ್ಲರು. ಅದು ಬೆಳಗಿನ ಹೊತ್ತಲ್ಲೂ ಸಾಧ್ಯ, ಸಾಯಂಕಾಲವೂ ಸಾಧ್ಯ. ವಾಸ್ತವ ಏನೆಂದರೆ ಅಮೆರಿಕಾ ಭಯೋತ್ಪಾದನೆಯ ಅಪಾಯ ಎದುರಿಸುತ್ತಿಲ್ಲ. ಪೌಲ್ ವೂಲ್ಫೋವಿಟ್ಜ್, ಡೊನಾಲ್ಡ್ ರಮ್ಸ್‌ಫೆಲ್ಡ್, ಕಾಂಡೊಲಿಜಾ ರೈಸ್ ಮತ್ತಿತರ ನವಸಂಪ್ರದಾಯವಾದಿಗಳೆಲ್ಲರೂ ಯಾವುದೇ ತೆರನಾದ ಭದ್ರತೆಯೂ ಇಲ್ಲದೆ ನಿರ್ಭಯವಾಗಿ ಬದುಕುತ್ತಿರುವುದೇ ಇದಕ್ಕೆ ಸಾಕ್ಷಿ.

ಈಗ ವಿಮಾನದಲ್ಲಿ ಶೂ ಬಾಂಬ್ ಇರಿಸುವ ಸಂಚು, ಒಳಚಡ್ಡಿ ಬಾಂಬ್ ಸಂಚು, ಶಾಂಪೂ ಬಾಟಲಿಯೊಳಗಿನ ದ್ರವರೂಪದ ಬಾಂಬ್ ಸಂಚುಗಳ ಬಗ್ಗೆ ಸ್ವಲ್ಪ ಯೋಚಿಸಿ. ಇದೆಲ್ಲವೂ ಎಷ್ಟು ಅಸಂಬದ್ಧ ಎಂಬುದನ್ನು ಅರಿಯಬೇಕಿದ್ದರೆ ಸರ್ಕಾರದ ಹಲ್ಕಾ ಬಾಡಿಗೆ ತಜ್ಞರ ಅಭಿಪ್ರಾಯಗಳನ್ನು ಬದಿಗಿಟ್ಟು, ನೈಜ ತಜ್ಞರಲ್ಲಿ ವಿಚಾರಿಸಬೇಕು. ಶೂ ಬಾಂಬ್ ಮತ್ತು ಒಳಚಡ್ಡಿ ಬಾಂಬ್‌ಗಳಲ್ಲಿ ಇದ್ದುದು ಬಣ್ಣದ ಸುಡುಮದ್ದಿನ ಪುಡಿ. ಆ "ಬಾಂಬ್"ಗಳಿಂದ ಒಂದು ಡಬ್ಬಿಯನ್ನು ಸಹ ಒಡೆಯಲು ಸಾಧ್ಯವಿರಲಿಲ್ಲ. ಇನ್ನು ವಿಮಾನದ ಶೌಚಾಲಯದಲ್ಲಿ ತಯಾರಿಸಲಾಗಿತ್ತೆನ್ನಲಾದ ದ್ರವರೂಪದ ಬಾಂಬ್‌ನ ಕಥಾನಕವನ್ನು ತಳ್ಳಿಹಾಕಿರುವ ತಜ್ಞರು ಅದನ್ನೊಂದು ಕಲ್ಪನಾಲೋಕದ ವಿಹಾರವೆಂದು ಬಣ್ಣಿಸಿದ್ದಾರೆ. "ಒಳಚಡ್ಡಿ ಬಾಂಬರ್"ನ ವಿಷಯಕ್ಕೆ ಬಂದರೆ, ಆತನ ಬಳಿ ಪಾಸ್‌ಪೋರ್ಟ್ ಇರಲಿಲ್ಲವೆನ್ನುವುದನ್ನು ಜ್ಞಾಪಿಸಿಕೊಳ್ಳಿ, ಇದನ್ನು ಎಲ್ಲಾ ವರದಿಗಳು ದೃಢಪಡಿಸಿರುವುದನ್ನೂ ನೆನಪು ಮಾಡಿಕೊಳ್ಳಿ. ಪಾಸ್‌ಪೋರ್ಟ್ ಹೊಂದಿರದ ಈತನನ್ನು ವಿಮಾನಕ್ಕೆ ಕರೆತಂದವನು ಓರ್ವ ಸರ್ಕಾರಿ ಅಧಿಕಾರಿ. ಪಾಸ್‌ಪೋರ್ಟ್ ಇಲ್ಲದ ಪ್ರಯಾಣಿಕನೊಬ್ಬನನ್ನು ಒಂದು ಅಂತಾರಾಷ್ಟ್ರೀಯ ವಿಮಾನದೊಳಗೆ ಕೂರಿಸಲು ಅನುಮತಿ ಸಿಕ್ಕಿದ್ದಾದರೂ ಹೇಗೆ? ಈ ಕುರಿತಂತೆ ಎಫ್‌ಬಿಐ ಆಗಲಿ, ಸಿಐಎ ಆಗಲಿ ಅಥವಾ ಇನ್ಯಾವ ಸಂಸ್ಥೆಯಾಗಲಿ ಇದುವರೆಗೆ ತನಿಖೆ ನಡೆಸಿಲ್ಲ. ವಾಸ್ತವ ಇದು.

ಹಾಗಾದರೆ ಈ ನಕಲಿ ಸಂಚುಗಳ ಉದ್ದಿಶ್ಯವೇನು ಎಂಬ ಪ್ರಶ್ನೆ ಸ್ವಾಭಾವಿಕವೇ ಆಗಿದೆ. ಈ ಕೃತ್ರಿಮ ಸಂಚುಗಳ ಹಿಂದೆ ಎರಡು ಉದ್ದೇಶಗಳು ಅಡಗಿವೆ. ಒಂದು, ಜನರಲ್ಲಿ ಇನ್ನಷ್ಟು ಭೀತಿಯನ್ನು ಸೃಷ್ಟಿಸುವುದು. ಎರಡು, ಆಂತರಿಕ ಭದ್ರತಾ ಇಲಾಖೆಯ ಮಾಜಿ ಮುಖ್ಯಸ್ಥ ಮೈಕಲ್ ಚರ್ಟಾಫ್ ಎಂಬಾತನಿಗೆ ಆತನದೇ ಕಂಪೆನಿ ಉತ್ಪಾದಿಸುವ ಅಶ್ಲೀಲ ತಪಾಸಣಾ ಯಂತ್ರಗಳನ್ನು ಮಾರಲು ಅವಕಾಶ ಕಲ್ಪಿಸಿ, ಆ ಮೂಲಕ ಆತ ಅಪಾರ ಲಾಭ ಬಾಚಿಕೊಳ್ಳಲು ಅನುವು ಮಾಡಿಕೊಡುವುದು.

ಇದೆಲ್ಲದರ ಒಟ್ಟಾರೆ ಪರಿಣಾಮವೆಂದರೆ ಭದ್ರತಾ ಪರವಾನಗಿ ಉಳ್ಳವರು, ಉನ್ನತ ಸರ್ಕಾರಿ ಹುದ್ದೆಯಲ್ಲಿರುವವರು, ಸಾಮಾನ್ಯ ಪ್ರಜೆಗಳು ಎಲ್ಲರೂ ವಿಮಾನವೇರುವ ಮುನ್ನ ಒಂದೋ ಶೂ, ಕೋಟು, ಬೆಲ್ಟ್ ಇತ್ಯಾದಿಗಳನ್ನು ಕಳಚಿ ಈ ಅಶ್ಲೀಲ ತಪಾಸಣಾ ಯಂತ್ರಗಳ ಅಡಿ ನಿಲ್ಲಬೇಕು ಅಥವಾ ಜನನಾಂಗಗಳ ನೇವರಿಕೆಯನ್ನು ಸಹಿಸಬೇಕು. ಇದರಿಂದ ಬಹಳ ಸ್ಪಷ್ಟವಾಗಿ ತೋರಿಬರುತ್ತಿರುವುದೇನೆಂದರೆ ವ್ಯಕ್ತಿಯೊಬ್ಬ ಮುಸ್ಲಿಂ ಉಗ್ರನೇ ಅಥವಾ ದೇಶಪ್ರೇಮಿ ಪ್ರಜೆಯೇ ಅಥವಾ ಶಾಸನಸಭೆಯ ಸದಸ್ಯನೇ ಅಥವಾ ನೌಕಾಸೇನೆಯ ದಂಡನಾಯಕನೇ ಅಥವಾ ಸಿಐಎ ಗೂಢಚರನೇ ಎಂಬುದನ್ನು ವಿಮಾನನಿಲ್ದಾಣಗಳಲ್ಲಿನ ಭದ್ರತಾ ತಪಾಸಣೆಗಳ ಮೂಲಕ ತಿಳಿಯಲು ಸಾಧ್ಯವಿಲ್ಲ.

ಪ್ರಯಾಣಿಕನೊಬ್ಬ ಆರೋಗ್ಯ ಅಥವಾ ಇನ್ನಿತರ ಕಾರಣಗಳಿಗಾಗಿ ಮಿತಿಗಿಂತ ಜಾಸ್ತಿ ಟೂತ್‌ಪೇಸ್ಟ್, ಶಾಂಪೂ, ತಿಂಡಿ ಅಥವಾ ಔಷಧಿಗಳನ್ನು ತನ್ನ ಜೊತೆ ಇಟ್ಟುಕೊಳ್ಳಲು ಬಯಸಿದರೆ ಆತ ವಿಮಾನಯಾನ ಭದ್ರತಾ ನಿರ್ವಹಣಾ ವ್ಯವಸ್ಥೆ (ಟಿಎಸ್‌ಎ,) TSAಯಿಂದ ಪೂರ್ವಸಮ್ಮತಿ ಪಡೆದುಕೊಳ್ಳಬೇಕಾಗುತ್ತದೆ. ಈ ಟಿಎಸ್‌ಎ ಕೆಲಸ ಮಾಡುವುದೇ ಅಪರೂಪ. ಉದಾಹರಣೆಗೆ, ಸಾವಿನಂಚಿನಲ್ಲಿರುವ ಮಹಿಳೆಯೊಬ್ಬಳು ಗಾಲಿ ಕುರ್ಚಿಯಲ್ಲಿ ವಿಮಾನನಿಲ್ದಾಣಕ್ಕೆ ಬಂದಿದ್ದಾಳೆ. ಆಕೆಗೆ ಬೇಕಾಗುವ ಸ್ಪೆಷಲ್ ಆಹಾರವನ್ನು ಜೊತೆಗೊಯ್ಯಲು ಈಗಾಗಲೇ ಅನುಮತಿ ಸಿಕ್ಕಿದ್ದರೂ ರಹಸ್ಯ ಪೊಲೀಸ ರಂತೆ ವರ್ತಿಸುವ ಅಧಿಕಾರಿಗಳು ಆಕೆಯ ಆಹಾರವನ್ನು ಆಚೆಗೆಸೆಯುತ್ತಾರೆ. ಇದನ್ನು ಪ್ರತಿಭಟಿಸಿದ ಮಗಳನ್ನು ಬಂಧಿಸುತ್ತಾರೆ. ಆ ಮಹಿಳೆಯನ್ನು ಒಬ್ಬಂಟಿಯಾಗಿ ನಿಲ್ದಾಣದಲ್ಲಿ ಬಿಟ್ಟುಬಿಡುತ್ತಾರೆ. ಈ ಘಟನಾವಳಿಗಳನ್ನು ಯೂಟ್ಯೂಬ್ ವಿಡಿಯೊ ತುಣುಕೊಂದರಲ್ಲಿ ವೀಕ್ಷಿಸಬಹುದು.

ಹೀಗಿದೆ ಇಂದಿನ ಅಮೆರಿಕಾದ ಪರಿಸ್ಥಿತಿ. ಅಮಾಯಕ ಜನರ ಮೇಲೆ ನಡೆಸಲಾಗುತ್ತಿರುವ ಈ ದೌರ್ಜನ್ಯಗಳನ್ನು ಸಮರ್ಥಿಸಿಕೊಳ್ಳುವ ಮೂರ್ಖ ಬಲಪಂಥೀಯರು ಮಾತ್ರ ಇವೆಲ್ಲವೂ ಅಮೆರಿಕಾದ ಪ್ರಜೆಗಳನ್ನು ಭಯೋತ್ಪಾದನೆಯಿಂದ ರಕ್ಷಿಸುತ್ತವೆಂದು ಹೇಳುತ್ತಾರೆ. ಆದರೆ ಅವರು ಹೇಳುತ್ತಿರುವ ಈ "ಅಪಾಯ" ಅಸ್ತಿತ್ವದಲ್ಲೇ ಇಲ್ಲ ಎನ್ನುತ್ತವೆ ಎಲ್ಲಾ ಪುರಾವೆಗಳು.

ಇಂದು ಯಾವೊಬ್ಬ ಪ್ರಜೆಗೂ ಭದ್ರತೆ ಇಲ್ಲ. ಈಗ ನನ್ನ ವಿಷಯವನ್ನೇ ತೆಗೆದುಕೊಳ್ಳಿ, ನಾನು ಹಿಂದೆ ಭದ್ರತಾ ಸಮಿತಿಯ ಸಹಾಯಕ ಸಿಬ್ಬಂದಿ ಆಗಿದ್ದೆ; ಶಸ್ತ್ರಾಸ್ತ್ರ ಯೋಜನೆಗಳ ಬಗ್ಗೆ ಮಾಹಿತಿ ಪಡೆಯುವ ಅವಕಾಶ ನನಗಿತ್ತು; ಉನ್ನತ ಮಟ್ಟದ ಭದ್ರತಾ ಪರವಾನಗಿಯೂ ಇತ್ತು. ನಾನು ಬಜೆಟ್ ಸಮಿತಿಯ ಪ್ರಧಾನ ಆರ್ಥಿಕ ತಜ್ಞನಾಗಿದ್ದೆ. ಮಿಲಿಟರಿ ಮತ್ತು ಭದ್ರತಾ ಬಜೆಟ್ ಬಗೆಗಿನ ಮಾಹಿತಿ ನನ್ನಲ್ಲಿರುತ್ತಿತ್ತು. ಖಜಾನೆಯ ಸಹಾಯಕ ಕಾರ್ಯದರ್ಶಿಯೂ ಆಗಿದ್ದೆ. ಆಗ ಸಿಐಎ ದಿನಾ ಬೆಳಗ್ಗೆ ರಾಷ್ಟ್ರಾಧ್ಯಕ್ಷರಿಗೆ ನೀಡುತ್ತಿದ್ದ ಸಂಕ್ಷಿಪ್ತ ವರದಿ ಮತ್ತು ಭದ್ರತೆಗೆ ಸಂಬಂಧಿಸಿದ ಅಪಾರ ಮಾಹಿತಿಗಳು ನನಗೆ ಲಭ್ಯವಾಗುತ್ತಿದ್ದವು. ನಾನು ಖಜಾನೆಯ ಹುದ್ದೆ ತ್ಯಜಿಸಿದ ನಂತರದಲ್ಲಿ ಅಧ್ಯಕ್ಷ ರೊನಾಲ್ಡ್ ರೀಗನ್ ನನ್ನನ್ನು ಅತ್ಯಂತ ಗೌಪ್ಯ ಸಮಿತಿಯೊಂದಕ್ಕೆ ನೇಮಕ ಮಾಡಿದ್ದರು. ಸೋವಿಯೆಟ್ ರಷ್ಯಾದ ಸಾಮರ್ಥ್ಯ ಕುರಿತಂತೆ ಸಿಐಎ ಮಾಡಿದ್ದ ಅಂದಾಜನ್ನು ತನಿಖೆಗೊಳಪಡಿಸುವ ಕಾರ್ಯಭಾರವನ್ನು ಆ ಸಮಿತಿಗೆ ವಹಿಸಲಾಗಿತ್ತು. ಬಳಿಕ ಪೆಂಟಗಾನ್‌ಗೆ ಭದ್ರತಾ ಸಲಹೆಗಾರನಾಗಿದ್ದೆ. ನನ್ನ ಬಳಿ ಎಲ್ಲಾ ವಿಧದ ಭದ್ರತಾ ಪರವಾನಗಿಗಳೂ ಇದ್ದವು. ಇಷ್ಟೆಲ್ಲ ಇದ್ದರೂ ವಿಮಾನನಿಲ್ದಾಣದ ಪೊಲೀಸರು ನನ್ನ ಮತ್ತು ಭಯೋತ್ಪಾದಕನೊಬ್ಬನ ನಡುವಿನ ವ್ಯತ್ಯಾಸಗಳನ್ನು ಗುರುತಿಸಲಾರರು. ನನಗೆ ಮಾದರಿ ವಿಮಾನಗಳ ಹವ್ಯಾಸ ಇದ್ದಿದ್ದರೆ ಅಥವಾ ಯುದ್ಧವಿರೋಧಿ ಪ್ರತಿಭಟನೆಗಳಲ್ಲಿ

ಭಾಗವಹಿಸಿದ್ದರೆ ನನ್ನನ್ನೂ ಬಂಧಿಸುತ್ತಿದ್ದುದರ ಬಗ್ಗೆ ಅನುಮಾನವೇ ಇಲ್ಲ.

ನನ್ನ ಸಾರ್ವಜನಿಕ ಸೇವೆಯ ಅವಧಿ 20ನೆ ಶತಮಾನದ ಅಂತಿಮ ವರ್ಷಗಳು. ಬಳಿಕ 21ನೆ ಶತಮಾನದ ಮೊದಲ ದಶಕದಲ್ಲಿ ಅಮೆರಿಕಾ ಬಹಳಷ್ಟು ಸಾಧನೆಗಳನ್ನು ಮಾಡಿರುವುದನ್ನು ಕಂಡಿದ್ದೇನೆ. ಹಾಗೆಂದ ಮಾತ್ರಕ್ಕೆ ಅವು ಕಳಂಕರಹಿತವೆಂದಲ್ಲ. ಆದರೆ ಇಂದು ಆ ಸಕಲ ಸಾಧನೆಗಳ ಕುರುಹನ್ನೇ ಅಳಿಸಲಾಗುತ್ತಿರುವುದನ್ನು ಕಾಣುತ್ತಿದ್ದೇನೆ. ಅವುಗಳ ಜಾಗವನ್ನು ಪ್ರಪಂಚವನ್ನಾಳುವ ಹೆಬ್ಬಯಕೆ ಮತ್ತು ಸಂಪತ್ತಿನ ಅತಿಶಯ ಕೇಂದ್ರೀಕರಣಗಳು ಆಕ್ರಮಿಸಿವೆ. ಅಮೆರಿಕಾ ಅಂದರೆ ಒಂದು ಯುದ್ಧಕ್ಕಾಗಿ ಹಾತೊರೆಯುವ ಪೊಲೀಸ್ ಪ್ರಭುತ್ವ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಪೈಕಿ ಆದಾಯದ ಅತ್ಯಂತ ಕೆಟ್ಟ ಹಂಚಿಕೆ ಇರುವ ದೇಶವಾಗಿ ಪರಿಣಮಿಸಿದೆ. ನನ್ನ ಬಹುತೇಕ ಮಿತ್ರರು ಮತ್ತು ಸಾಮಾನ್ಯವಾಗಿ ಇತರ ಪ್ರಜೆಗಳು ಈ ವಾಸ್ತವವನ್ನು ಗುರುತಿಸುವಲ್ಲಿ ಸೋತಿದ್ದಾರೆ.

ವಿಶ್ವದ ಏಕೈಕ ದೈತ್ಯರಾಷ್ಟ್ರದ ಇಷ್ಟೊಂದು ಜನರು ಒಗ್ಗಟ್ಟಿಲ್ಲದ, ನೌಕಾಸೇನೆ ಇಲ್ಲದ, ವೈಮಾನಿಕ ಸೇನೆ ಇಲ್ಲದ, ಖಂಡಾಂತರ ಕ್ಷಿಪಣಿಗಳಿಲ್ಲದ ಮುಸ್ಲಿಂ ಸಮುದಾಯಗಳಿಂದ ತಮಗೆ ಅಪಾಯವಿದೆಯೆಂದು ನಂಬುತ್ತಿರುವುದು ಒಂದು ಅಸಾಧಾರಣ ವಿದ್ಯಮಾನವಾಗಿದೆ. ನಿಜ ಹೇಳಬೇಕೆಂದರೆ ಅಪಾಯಕಾರಿ ಎನ್ನಲಾಗುವ ಈ ಮುಸ್ಲಿಮರ ಪೈಕಿ ಗರಿಷ್ಠ ಮಂದಿ, ಅದರಲ್ಲೂ ವಿಶೇಷವಾಗಿ ಯುವಜನತೆ, ಅಮೆರಿಕಾದಲ್ಲಿರುವ ಲೈಂಗಿಕ ಸ್ವಾತಂತ್ರ್ಯದಿಂದ ಆಕರ್ಷಿತರಾಗಿರುವವರು.

ಇರಾನಿನ ಸಿಐಎ ಪ್ರೇರಿತ "ಹಸಿರು ಕ್ರಾಂತಿ"ಗೆ ಬೆಪ್ಪುತಕ್ಕಡಿಗಳಾದವರೆಲ್ಲರೂ ಇದೇ ಅಮೆರಿಕಾ ಹಿಂದೆ 1950ರ ದಶಕದಲ್ಲಿ ತಮ್ಮ ಚುನಾಯಿತ ಸರಕಾರವನ್ನು ಉರುಳಿಸಿದ್ದನ್ನು ಮರೆತುಬಿಟ್ಟಿದ್ದಾರೆ. ಮುಸ್ಲಿಮರ ವಿರುದ್ಧ ನಡೆಸಿದ ಒಂದು ದಶಕ ಕಾಲದ ಅನ್ಯಾಯಯುತ ಸೇನಾ ಕಾರ್ಯಾಚರಣೆಗಳ ಹೊರತಾಗಿಯೂ ಅಮೆರಿಕಾವೇ ತಮ್ಮ ಸಂರಕ್ಷಕನೆಂದು ಭಾವಿಸುವ ಮುಸ್ಲಿಮರು ಇನ್ನೂ ಇದ್ದಾರೆ. ಧನರಾಶಿಯನ್ನೇ ಚೆಲ್ಲುವ ಮೂಲಕ ಅವರ ನಾಯಕರುಗಳನ್ನು ಖರೀದಿಸಲಾಗುತ್ತದೆ.

ತನ್ನ ಸಂಘಟನೆಯಿಂದಲೇ ಭದ್ರತಾ ವ್ಯವಸ್ಥೆ ಮತ್ತು ಆಯುಧಗಳು ದೊರೆಯದಿದ್ದ ಅಲ್ ಖೈದಾ ನಾಯಕ ಉಸಾಮಾ ಬಿನ್ ಲಾದೆನ್‌ನನ್ನು ಅಧ್ಯಕ್ಷ ಒಬಾಮ ಹತ್ಯೆ ಮಾಡಿಸಿದರೆನ್ನಲಾಗುತ್ತಿದೆ. ಹೀಗೆ ಅಮೆರಿಕಾ ಸರ್ಕಾರ "ಭಯೋತ್ಪಾದನೆಯ ಅಪಾಯ" ಮತ್ತು ಅಲ್ ಖೈದಾಗಳ ಜಂಘಾಬಲವನ್ನೇ ಉಡುಗಿಸಿತೆಂದು ಹೇಳಲಾದ ಬಳಿಕ ಅದೀಗ ಹಕ್ಕಾನಿಗಳು ಎಂಬ ಹೊಚ್ಚ ಹೊಸದಾದ ಗುಮ್ಮವೊಂದನ್ನು ಹುಟ್ಟುಹಾಕಿದೆ.

ಪಾಕಿಸ್ತಾನದ ಮೇಲೆ ಆಕ್ರಮಣವೊಂದನ್ನು ಸಂಯೋಜಿಸುತ್ತಿರುವ ಅಮೆರಿಕಾದ ಸೇನಾ ಪ್ರಧಾನ ಮೈಕ್ ಮುಲ್ಲನ್, 'ಹಕ್ಕಾನಿಗಳು ಪಾಕಿಸ್ತಾನಿ ಸರಕಾರದ ಗೂಢಚರ ಸಂಸ್ಥೆಯಾದ ಐಎಸ್‌ಐನ ಕಾಲಾಳು ಪಡೆಗಳು' ಎಂದು ಆರೋಪಿಸಿದರು. ಆದರೆ ಜಾನ್ ಗ್ಲೇಸರ್ ಮತ್ತು ಹೆಸರು ಹೇಳಲಿಚ್ಛಿಸದ ಸಿಐಎ ಅಧಿಕಾರಿಗಳ ಪ್ರಕಾರ ಹಕ್ಕಾನಿ ಎಂಬ ಬಂಡಾಯಗಾರ ಗುಂಪಿನ ವಿರುದ್ಧ ಮುಲ್ಲನ್ ಮಾಡುತ್ತಿರುವ ಆರೋಪಗಳು

“ಉತ್ಪ್ರೇಕ್ಷೆ”ಯಿಂದ ಕೂಡಿವೆ. ತಾನು ಹೇಳಿದ ಸುಳ್ಳಿನಿಂದ ಮುಲ್ಲನ್ ಈಗ ನುಣುಚಿಕೊಳ್ಳುತ್ತಿದ್ದಾರೆ. ಆತನ ಸಹಾಯಕನಾದ ಜಾನ್ ಕರ್ಬಿ "ಪಾಕಿಸ್ತಾನಿ ಸರಕಾರವನ್ನು ಪ್ರಚೋದಿಸಿ ಅದು ಹಕ್ಕಾನಿ ಜಾಲವನ್ನು ಹತ್ತಿಕ್ಕುವಂತೆ ಮಾಡುವುದೇ ಮುಲ್ಲನ್ ಆರೋಪಗಳ ಉದ್ದೇಶವಾಗಿತ್ತು" ಎನ್ನುತ್ತಾರೆ. ಅರ್ಥಾತ್ ಪಾಕಿಸ್ತಾನಿ ಸರಕಾರ ಇನ್ನಷ್ಟು ಪಾಕಿಸ್ತಾನಿ ಪ್ರಜೆಗಳನ್ನು ಕೊಲ್ಲಬೇಕು; ಆ ಮೂಲಕ ಅಮೆರಿಕಾದ ಶ್ರಮವನ್ನು ಉಳಿಸಬೇಕು.

ನಿಮಗೆ ಈ "ಹಕ್ಕಾನಿ ಜಾಲ"ದ ಬಗ್ಗೆ ಅರಿವಿಲ್ಲವಾದರೆ ಅಚ್ಚರಿಪಡಬೇಕಾಗಿಲ್ಲ. 9/11ಕ್ಕೂ ಮುನ್ನ ನೀವು ಅಲ್ ಖೈದಾದ ಹೆಸರು ಕೇಳಿದ್ದಿರೇನು? ನವಸಂಪ್ರದಾಯವಾದಿಗಳ ಜಾಗತಿಕ ಆಧಿಪತ್ಯ ಮತ್ತು ಅಧಿಕ ಲಾಭಗಳ ಅಜೆಂಡಾಕ್ಕೆ ಅಗತ್ಯವೆನಿಸಿದಾಗಲೆಲ್ಲ ಅಮೆರಿಕಾ ಹೊಸ ಹೊಸ ಗುಮ್ಮಗಳನ್ನು ಹಾಗೂ ಘಟನೆಗಳನ್ನು ಹುಟ್ಟುಹಾಕುತ್ತದೆ.

ಅಮೆರಿಕಾ ಎಂಬ ದೈತ್ಯರಾಷ್ಟ್ರದ ಪ್ರಜೆಗಳು ದಶಕದಿಂದಲೂ ಸರ್ಕಾರದ ಸುಳ್ಳುಗಳನ್ನು ನಂಬುತ್ತಾ ಭಯಭೀತರಾಗಿ ಕುಳಿತಿದ್ದಾರೆ. ಅವರೆಲ್ಲ ಅಸ್ತಿತ್ವದಲ್ಲಿರದ ಉಗ್ರರ ಬಗ್ಗೆ ಭಯಪಡುತ್ತಾ ಬೆರಳು ಚೀಪುತ್ತಾ ಕುಳಿತಿದ್ದಾಗ ಅತ್ತ ಆರು ಮುಸ್ಲಿಂ ರಾಷ್ಟ್ರಗಳ ಮಿಲಿಯಾಂತರ ಜನರ ಬದುಕು ಸರ್ವನಾಶವಾಗಿದೆ. ಅಮೆರಿಕಾದ ಗರಿಷ್ಠ ಸಂಖ್ಯೆಯ ಪ್ರಜೆಗಳ ಮನೋಸ್ಥಿತಿ ಹೇಗಿದೆಯೆಂದರೆ ಯಾವುದೇ ಪುರಾವೆ ಇದ್ದರೆ ಸಾಕು, ತಮ್ಮಿಂದ ಭೂಪಟಗಳಲ್ಲಿ ಕಂಡುಹಿಡಿಯಲು ಅಸಾಧ್ಯವಾದ ದೇಶಗಳ ಪ್ರಜೆಗಳನ್ನು ನಿಷ್ಕಾರಣವಾಗಿ ಕೊಲೆಗೈಯುವ ವಿಷಯದಲ್ಲಿ ಅವರು ಒಂದಿನಿತೂ ವಿಚಲಿತರಾಗುವುದಿಲ್ಲ.

ಅಮೆರಿಕಾ ನಿಜಕ್ಕೂ ಒಂದು ಜಗಜ್ಯೋತಿಯೇ ಸೈ. ಸಕಲರಿಗೂ ಒಂದು ಮೇಲ್ಪಂಕ್ತಿಯೇ ಸೈ.

http://www.informationclearinghouse.info/article29273.htm

ಪೌಲ್ ಕ್ರೇಗ್ ರಾಬರ್ಟ್ಸ್ ವಾಲ್‌ಸ್ಟ್ರೀಟ್ ಜರ್ನಲ್ ಪತ್ರಿಕೆಯಲ್ಲಿ ಸಹ ಸಂಪಾದಕ ಹಾಗೂ ಅಂಕಣಕಾರ ಆಗಿದ್ದರು. ಅವರು ಕೆಂಪ್-ರಾಥ್ ತೆರಿಗೆ ದರ ಇಳಿಕೆ ಮಸೂದೆಯನ್ನು ರಚಿಸಿದ್ದಾರೆ; ಇಕನಾಮಿಕ್ಸ್ ವಿಷಯದಲ್ಲಿ ಪ್ರೊಫೆಸರ್ ಆಗಿ ಆರು ವಿಶ್ವವಿದ್ಯಾನಿಲಯಗಳಲ್ಲಿ ದುಡಿದಿದ್ದಾರೆ; ಹಲವಾರು ಕೃತಿಗಳನ್ನು ರಚಿಸಿದ್ದಾರಲ್ಲದೆ ವಿದ್ವತ್ಪೂರ್ಣ ಪ್ರಬಂಧಗಳನ್ನೂ ಮಂಡಿಸಿದ್ದಾರೆ. □

ಭ್ರಷ್ಟಾಚಾರ ವಿರೋಧಿ ಅಲೆ

(15ನೇ ಪುಟದಿಂದ)

ಹೀಗೆ ಭ್ರಷ್ಟಾಚಾರ ವಿರೋಧಿ ಭಾವನೆ ಕಾಂಗ್ರೆಸ್ ವಿರೋಧಿಯಾಗಿ ಗಟ್ಟಿಯಾಗತೊಡಗಿದಮೇಲೆ ಈಗ ನೇರವಾಗಿ ಅದನ್ನು ಬಿಜೆಪಿಯ ಪರವಾದ ಅಲೆಯನ್ನಾಗಿ ಮಾಡಿಕೊಳ್ಳಲು ಅಡ್ವಾಣಿ ನೇತೃತ್ವದಲ್ಲಿ ಬಿಜೆಪಿ ಮತ್ತು ಆರೆಸ್ಸೆಸ್ ಕಣಕ್ಕಿಳಿದಿದೆ.

ಆದರೆ ಕರ್ನಾಟಕದಲ್ಲಿ ಬಿಜೆಪಿ ನಡೆಸಿರುವ ಭೂಹಗರಣದ ಕರ್ಮಕಾಂಡವೇ 3 ಲಕ್ಷ ಕೋಟಿ ರೂಪಾಯಿಗಳಷ್ಟೆಂದು ಸರ್ಕಾರವೇ ನೇಮಿಸಿದ ಬಾಲಸುಬ್ರಹ್ಮಣ್ಯಂ ಸಮಿತಿ ಹೇಳಿದೆ. ಇದು ಕೇಂದ್ರದ 2ಜಿ ಮತ್ತು ಸಿಎಜಿ ಹಗರಣದ ಒಟ್ಟು ಮೊತ್ತಕ್ಕಿಂತ ಜಾಸ್ತಿ. ಇನ್ನು ಒರಿಸ್ಸಾದಲ್ಲಿ ಬಿಜೆಪಿ-ಬಿಜೆಡಿ ಜಂಟಿ ಅಧಿಕಾರದ ಅವಧಿಯಲ್ಲಿ ರೋಜ್‌ಗಾರ್ ಯೋಜನೆ ಮತ್ತು ಭೂಹಗಣರದಲ್ಲೂ 3 ಲಕ್ಷ ಕೋಟಿ ರೂಪಾಯಿ ಹಗರಣ ಸಂಭವಿಸಿದೆಯೆಂದು ಈಗ ಆ ರಾಜ್ಯದ ಬಿಜೆಪಿ ರಾಜ್ಯ ಕಾರ್ಯದರ್ಶಿಯೇ ಹೇಳುತ್ತಿದ್ದಾರೆ. ಆ ಅವಧಿಯಲ್ಲೇ ಕರ್ನಾಟಕದ ರೀತಿಯಲ್ಲೇ ಅಲ್ಲೂ ಸೆಕ್ಸ್ ಹಗರಣಗಳು ಹತ್ತಾರು ನಡೆದಿವೆ. ಇನ್ನೂ ಕಳೆದ 10 ವರ್ಷಗಳಿಂದ ಬಿಜೆಪಿಯೇ ಮಿತ್ರಪಕ್ಷವೇ ಅಧಿಕಾರದಲ್ಲಿದ್ದರೂ ರಸ್ತೆಗಳು ಎಷ್ಟು ಅಧ್ವಾನವಾಗಿದ್ದವೆಂದರೆ ಅಡ್ವಾಣಿಯ ರಥ ಅಲ್ಲಿ ಹೋಗಲಾಗದೆ ಹೆಲಿಕಾಪ್ಟರ್‌ನಲ್ಲಿ ಹಾರಬೇಕಾಯಿತು. ಮಧ್ಯಪ್ರದೇಶದ ಸಾತ್ನಾದಿಂದಲೂ ರಸ್ತೆಗೆಂದು ಕೊಟ್ಟ ದುಡ್ಡೆಲ್ಲಾ ಮಂತ್ರಿಗಳ ಜೋಬು ಸೇರಿದ್ದರಿಂದ ಅಲ್ಲೂ ಅಡ್ವಾಣಿಯ ರಥ ಆಕಾಶ ಮಾರ್ಗದಲ್ಲಿ ಹಾರಬೇಕಾಯಿತು. ಇವೆಲ್ಲಾ ಭ್ರಷ್ಟಾಚಾರವಲ್ಲವೇ ಎಂದು ಕೇಳಿದ್ದಕ್ಕೆ ಅಡ್ವಾಣಿಯವರು ""ಹೌದು ನಾನು ಬಿಜೆಪಿ ಅಥವಾ ಎನ್‌ಡಿಎ ಕೂಟದ ಪಕ್ಷಗಳು ಆಳುತ್ತಿರುವ ರಾಜ್ಯ ಸರ್ಕಾರದಲ್ಲಿನ ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ ಇದು ರಾಷ್ಟ್ರವ್ಯಾಪಿ ಆಂದೋಲನವಾಗಿದ್ದು ಇದರ ಗುರಿ ಕೇಂದ್ರ ಸರ್ಕಾರವಾಗಿದೆ." ಎಂದು ಹೇಳಿದ್ದಾರೆ! ಅವರ ಜೊತೆಗಿರುವ ಅನಂತಕುಮಾರ್ ಸ್ವಯಂ ಹುಡ್ಕೋ ಹಗರಣದಲ್ಲಿ ಪಾಲುದಾರಿ

ಹೀಗೆ ಕಾಂಗ್ರೆಸ್ ಎಲೆಯಲ್ಲಿ ಕತ್ತೆ ಬಿದ್ದಿರುವುದು ನಿಜ. ಆದರೆ ಬಿಜೆಪಿ ಎಲೆಯಲ್ಲೂ ಹಂದಿ ಬಿದ್ದಿದೆ. ಅದನ್ನು ಮುಚ್ಚಿಟ್ಟು ಅಡ್ವಾಣಿಯ ರಥ ಜನರ ಆಶಯಗಳ ಮೇಲೆ ಸವಾರಿ ಹೊರಟಿದೆ.

ಧರ್ಮದ ಬಗ್ಗೆ ಜನರಿಗಿರುವ ಮುಗ್ಧ ಶ್ರದ್ಧೆಯನ್ನು ದುರುಪಯೋಗ ಪಡಿಸಿಕೊಂಡ ರೀತಿಯಲ್ಲೇ ಭ್ರಷ್ಟಾಚಾರದ ವಿರುದ್ಧ ಜನರಿಗಿರುವ ಆಕ್ರೋಶವನ್ನು ದುರುಪಯೋಗಪಡಿಸಿಕೊಳ್ಳುವುದೇ ಈ ಜನಚೇತನಾ ಯಾತ್ರೆಯ ಸಾರಾಂಶ.

ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎಲ್ಲರೂ ಭ್ರಷ್ಟಾಚಾರಿಗಳೇ. ಅದರ ವಿರುದ್ಧ ಸಾಮಾನ್ಯ ಜನ ದೊಡ್ಡ ಸಂಗ್ರಾಮವನ್ನೇ ಸಾರಬೇಕು. ಆದರೆ ಬಿಜೆಪಿ ಭ್ರಷ್ಟಾಚಾರದ ವಿರುದ್ಧ ಜನರ ಆಕ್ರೋಶವನ್ನು ಬಳಸಿಕೊಳ್ಳುತ್ತಿರುವುದು ಮಾತ್ರ ಅಧಿಕಾರ ಪಡೆದು ತನ್ನ ಹಿಂದೂ ರಾಷ್ಟ್ರ ಅಜೆಂಡಾವನ್ನು ಹಿಂಬಾಗಿಲಿನಿಂದ ತರಲು ಎಂಬುದನ್ನು ಮರೆಯಬಾರದು. ಭ್ರಷ್ಟಾಚಾರವನ್ನು ವಿರೋಧಿಸೋಣ. ಭ್ರಷ್ಟಾಚಾರದ ವಿರೋಧಿ ಮುಸುಕಿನಲ್ಲಿರುವ ಹಿಂದೂತ್ವವಾದಿಗಳ ಅಜೆಂಡಾಗಳಿಗೆ ಬಲಿಬೀಳದಿರೋಣ! □

ಕನ್ನಡ ಕನ್ನಡತನ ಕನ್ನಡಿಗರು

ನಾ ದಿವಾಕರ

ಭಾರತದ ಎಲ್ಲಾ ರಾಜ್ಯಗಳೊಡನೆ ಹೋಲಿಸಿದಾಗ ಕರ್ನಾಟಕದಲ್ಲಿ ಕೆಲವು ವೈಶಿಷ್ಟ್ಯಗಳು ಕಾಣುತ್ತವೆ. ಪ್ರತಿವರ್ಷ ಆಚರಿಸಲಾಗುವ ರಾಜ್ಯೋತ್ಸವ ಒಂದು ವಿಶಿಷ್ಟ ಪರಂಪರೆಯೇ ಆಗಿಹೋಗಿದೆ. ಇದನ್ನು ಅನಿವಾರ್ಯತೆ ಅಥವಾ ಕನ್ನಡಿಗರ ಆತ್ಮವಿಶ್ವಾಸ ಹಾಗೂ ಸ್ವಾಭಿಮಾನವನ್ನು ಬಡಿದೆಬ್ಬಿಸುವ ಒಂದು ಸ್ವೀಕೃತ ಸಾಂಸ್ಕೃತಿಕ ಪರಂಪರೆ ಎಂದೇ ಭಾವಿಸೋಣ. ಆದರೆ ಇನ್ನೂ ಹಲವು ವೈಶಿಷ್ಟ್ಯಗಳಿವೆ. ನಾಲ್ಕೂ ನಿಟ್ಟಿನಿಂದ ಗಡಿ ವಿವಾದ ಎದುರಿಸುತ್ತಿರುವುದು, ತನ್ನ ಭಾಷೆಯ ಉಳಿವಿಗಾಗಿಯೇ ಹೋರಾಟ ಮಾಡಬೇಕಾಗಿರುವ ಪರಿಸ್ಥಿತಿ, ರಾಜ್ಯದ ಬಹುಪಾಲು ಜನತೆಯ ಮಾತೃಭಾಷೆಯಾದ ಕನ್ನಡವನ್ನು ಆಡಳಿತದಲ್ಲಿ, ಶೈಕ್ಷಣಿಕ ವಲಯದಲ್ಲಿ ಅಳವಡಿಸಲು ಪರದಾಡುತ್ತಿರುವುದು ಮತ್ತು ಸರ್ಕಾರದ ವತಿಯಿಂದ ಮಾತೃಭಾಷಾ ಶಿಕ್ಷಣವನ್ನು ನೀಡುವುದರಲ್ಲಿ ಕಾಣುತ್ತಿರುವ ವೈಫಲ್ಯ. ಈ ಎಲ್ಲಾ ಸಮಸ್ಯೆಗಳು ಬಹುಶಃ ಕರ್ನಾಟಕವನ್ನು ಮಾತ್ರ ಬಾಧಿಸುತ್ತಿದೆಯೇನೋ ಎಂದೆನಿಸುತ್ತದೆ. ಹಾಗಾಗಿಯೇ ರಾಜ್ಯದಲ್ಲಿ ಸದಾ ಭಾಷೆಯ ಅಳಿವು ಉಳಿವಿನ ಸಂವಾದಗಳು ನಡೆಯುತ್ತಲೇ ಇರುತ್ತವೆ. ಈ ಸಮಸ್ಯೆಗಳ ಹಿಂದಿನ ಸೂಕ್ಷ್ಮತೆಗಳನ್ನಾಗಲಿ, ವಾಸ್ತವಗಳನ್ನಾಗಲೀ ಗ್ರಹಿಸದೆ ಹೋದರೆ ಈಗ ರಾಜ್ಯದಲ್ಲಿ ಕಾಣಲಾಗುತ್ತಿರುವ ಭಾಷಾ ಚಳವಳಿಗಳು ಮತ್ತು ರಕ್ಷಣಾ ವೇದಿಕೆಗಳು ತಾರ್ಕಿಕ ಆಯಾಮವನ್ನು ಪಡೆಯಲಾಗುವುದಿಲ್ಲ.

ಭಾಷೆಯ ಅಳಿವು-ಉಳಿವು

ಕರ್ನಾಟಕದ ವೈಶಿಷ್ಟ್ಯವೆಂದರೆ ಕನ್ನಡ ಭಾಷೆ ಅಳಿಯುತ್ತಿದೆ, ಕನ್ನಡಿಗರಲ್ಲಿ ಸ್ವಾಭಿಮಾನವಿಲ್ಲ ಎಂಬ ಕೂಗು ಭಾಷಾವಾರು ರಾಜ್ಯಗಳ ಸ್ಥಾಪನೆಯಾದಂದಿನಿಂದಲೂ ಕೇಳಿಬರುತ್ತಲೇ ಇದೆ. ಇದು ಅರ್ಧ ಸತ್ಯವೆಂದೇ ನನ್ನ ಸ್ಪಷ್ಟ ಅಭಿಪ್ರಾಯ. ಕನ್ನಡ ಭಾಷೆ ನಶಿಸುತ್ತಿದೆ, ಕನ್ನಡಿಗರಿಗೆ ಸ್ವಾಭಿಮಾನ ಇಲ್ಲ, ಕನ್ನಡಿಗರು ನಿರಭಿಮಾನಿಗಳು, ಅಭಿಮಾನಶೂನ್ಯರು ಇತ್ಯಾದಿ ಆರೋಪಗಳು ಹಲವು ದಶಕಗಳಿಂದಲೂ ಕೇಳಿಸುತ್ತಲೇ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ ಎಂದರೂ ತಪ್ಪೇನಿಲ್ಲ. ವಾಸ್ತವತೆಗಳ ಪರಾಮರ್ಶೆಯಲ್ಲಿ ತೊಡಗದೆ ಭಾವನಾತ್ಮಕ ನೆಲೆಗಟ್ಟಿನಲ್ಲಿಯೇ ಒಂದು ಸಾಮಾಜಿಕ-ಸಾಂಸ್ಕೃತಿಕ ಸಮಸ್ಯೆಯನ್ನು ವೈಭವೀಕರಿಸಲು ಹೋದಾಗ ಈ ರೀತಿಯ ಅತಿಶಯೋಕ್ತಿಗಳು ಸಹಜ, ಸ್ವಾಭಾವಿಕ. ಈ ಕೂಗು ಎಲ್ಲಿಯವರೆಗೂ ವ್ಯಾಪಿಸಿದೆ ಎಂದರೆ, ಹಿಂದೂ ಮೂಲಭೂತವಾದಿಗಳು ಮತಾಂತರ ಪ್ರಕ್ರಿಯೆಯನ್ನೇ ಮುಂದಿಟ್ಟುಕೊಂಡು ಶೀಘ್ರದಲ್ಲೇ ಭಾರತ ಇಸ್ಲಾಮಿಕ್ ರಾಷ್ಟ್ರವಾಗುತ್ತದೆ ಎಂಬ ಕೂಗೆಬ್ಬಿಸುವಂತೆ, ಕರ್ನಾಟಕ ಇನ್ನು ಕೆಲವೇ ವರ್ಷಗಳಲ್ಲಿ ಕನ್ನಡ ರಹಿತ ರಾಜ್ಯವಾಗುತ್ತದೆ ಎಂದು ಹುಯಿಲೆಬ್ಬಿಸಲಾಗುತ್ತಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಭೆಯೊಂದರಲ್ಲಿ ಚಿಂತಕರೊಬ್ಬರು ರಾಜ್ಯದ ರಾಜಧಾನಿಯಲ್ಲಿ ಶೇ. 20ರಷ್ಟು ಜನರೂ ಕನ್ನಡ ಮಾತನಾಡುತ್ತಿಲ್ಲ, ಇದೇ ಪರಿಸ್ಥಿತಿ ಮುಂದುವರೆದಲ್ಲಿ ರಾಜಧಾನಿಯನ್ನೇ ಬದಲಾಯಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ನಿಜ, ನಗರ ಪ್ರದೇಶಗಳಲ್ಲಿ, ಮಧ್ಯಮವರ್ಗದ ಸುಶಿಕ್ಷಿತರಲ್ಲಿ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕನ್ನಡದ ಬಳಕೆ ಕಡಿಮೆಯಾಗುತ್ತಿದೆ, ಆಂಗ್ಲ ವ್ಯಾಮೋಹ ಹೆಚ್ಚಾಗುತ್ತಿದೆ. ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವಲ್ಲಿ ನಿಷ್ಕ್ರಿಯವಾಗಿರುವ ಸರ್ಕಾರಗಳ ಅಸಡ್ಡೆಯ ರಾಜಕಾರಣ ಮತ್ತು ಆಂಗ್ಲ ಮಾಧ್ಯಮ ಶಾಲೆಗಳ ಲಾಬಿಕೋರತನದಿಂದ ಗ್ರಾಮೀಣ ಮಕ್ಕಳೂ ದೂರದಲ್ಲಿನ ಆಂಗ್ಲಮಾಧ್ಯಮ ಶಾಲೆಗಳಿಗೆ ಹೋಗುತ್ತಿದ್ದಾರೆ. ನಗರ ಪ್ರದೇಶದ ಸಾರ್ವಜನಿಕ ವಲಯಗಳಲ್ಲಿ ಆಂಗ್ಲ ಭಾಷೆಯ ಬಳಕೆ ಹೆಚ್ಚಾಗುತ್ತಿದೆ. ಉನ್ನತ ಹುದ್ದೆಗಳಲ್ಲಿರುವ ಅಧಿಕಾರಿಗಳು ಕನ್ನಡ ಬಳಸುವುದೇ ಅಪಮಾನಕರ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವೆಲ್ಲವೂ ಕಣ್ಣಿಗೆ ರಾಚುವ ಅಲ್ಲಗಳೆಯಲಾಗದ ಸತ್ಯ. ಆದರೆ ಕರ್ನಾಟಕ ಎಂದರೆ ನಗರ ಪ್ರದೇಶಗಳು ಮಾತ್ರವಲ್ಲ. ಗ್ರಾಮೀಣ ಪ್ರದೇಶಗಳೂ ಅಸ್ತಿತ್ವದಲ್ಲಿವೆ ಅಲ್ಲವೇ?

ಆದರೆ ಶೇ. 70ರಷ್ಟು ಗ್ರಾಮೀಣ ಪ್ರದೇಶವನ್ನು ಹೊಂದಿರುವ ಕರ್ನಾಟಕದ ಸ್ಥಿತ್ಯಂತರಗಳನ್ನು ನಗರಕೇಂದ್ರಿತ ದೃಷ್ಟಿಕೋನದಿಂದಲೇ ನೋಡುವುದು ಎಷ್ಟು ಸಮಂಜಸ? ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕನ್ನಡದ ಭಾಷಾ ಸೊಗಡು ಜೀವಂತವಾಗಿದೆ. ಉತ್ತರ ಕರ್ನಾಟಕದ ಜನ ದಕ್ಷಿಣದವರಷ್ಟು ಆಂಗ್ಲವ್ಯಾಮೋಹಿಗಳಲ್ಲ ಎಂಬುದೂ ಸ್ಪಷ್ಟ. ನೆರೆರಾಜ್ಯಗಳ ದ್ರಾವಿಡ ಭಾಷಿಕರ ಸಂಖ್ಯೆ ಹೆಚ್ಚಾಗುತ್ತಿದ್ದರೂ ಕನ್ನಡ ಭಾಷೆಯ ಬಳಕೆಯ ವಿಚಾರದಲ್ಲಿ ಅತಿಯಾಗಿ ಗೋಳಾಡುವ ಪರಿಸ್ಥಿತಿ ಉದ್ಭವಿಸಿಲ್ಲವೆಂದೇ ಹೇಳಬಹುದು. ಆದರೆ ವ್ಯಾಪಕವಾಗಿ, ಶೀಘ್ರಗತಿಯಲ್ಲಿ ಬೆಳೆಯುತ್ತಿರುವ ನಗರ ಸಂಸ್ಕೃತಿ ಮತ್ತು ಜಾಗತೀಕರಣ ಸೃಷ್ಟಿಸಿರುವ ಗ್ರಾಮೀಣ-ಕೃಷಿ ಬಿಕ್ಕಟ್ಟಿನ ಪರಿಣಾಮವಾಗಿ ಹೆಚ್ಚುತ್ತಿರುವ ವಲಸೆ ಸಂಸ್ಕೃತಿ ಭಾಷೆಯ ಮೇಲೂ ಪ್ರಭಾವ ಬೀರಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಹಾಗಾಗಿ ಬೆಂಗಳೂರು ಮುಂತಾದ ನಗರಗಳಲ್ಲಿ ಕನ್ನಡದ ಬಳಕೆ ಮತ್ತು ಕನ್ನಡಿಗರ ಸಂಖ್ಯೆ ಕ್ಷೀಣಿಸುತ್ತಿದೆ. ಇದನ್ನು ಭಾಷಾ ಸಮಸ್ಯೆ ಎಂದು ಹಲುಬುವುದಕ್ಕಿಂತಲೂ ಸಮಾಜೋ-ಆರ್ಥಿಕ ಸಮಸ್ಯೆ ಎಂದು ಪರಿಗಣಿಸಿದಲ್ಲಿ ಪರಿಹಾರ ಮಾರ್ಗಗಳು ಸುಲಭ.

ಕನ್ನಡ ಭಾಷೆ ತನ್ನದೇ ಆದ ಹೊಸ ಮಾರ್ಗಗಳಲ್ಲಿ ವೃದ್ಧಿಸುತ್ತಿದೆ. ಕನ್ನಡದಲ್ಲಿ ಹೊಸ ಸಾಹಿತ್ಯ ಮೂಡಿ ಬರುತ್ತಿದೆ. ಲೇಖಕರ ಬಳಗ ಹೆಚ್ಚಾಗುತ್ತಿದೆ. ಬ್ಲಾಗ್ ಸಂಸ್ಕೃತಿಯಿಂದ ಹೆಚ್ಚಿನ ಜನ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಪ್ರಕಟಿತ ಸಾಹಿತ್ಯ, ಸಾಹಿತ್ಯೇತರ ಕೃತಿಗಳ ಸಂಖ್ಯೆ, ಗುಣಮಟ್ಟದ ಪ್ರಶ್ನೆಯನ್ನು ಬದಿಗಿಟ್ಟು ನೋಡಿದಾಗ,

ಶೇ. ೭೦ರಷ್ಟು ಗ್ರಾಮೀಣ ಪ್ರದೇಶವನ್ನು ಹೊಂದಿರುವ ಕರ್ನಾಟಕದ ಸ್ಥಿತ್ಯಂತರಗಳನ್ನು ನಗರಕೇಂದ್ರಿತ ದೃಷ್ಟಿಕೋನದಿಂದಲೇ ನೋಡುವುದು ಎಷ್ಟು ಸಮಂಜಸ? ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕನ್ನಡದ ಭಾಷಾ ಸೊಗಡು ಜೀವಂತವಾಗಿದೆ. ಉತ್ತರ ಕರ್ನಾಟಕದ ಜನ ದಕ್ಷಿಣದವರಷ್ಟು ಆಂಗ್ಲ ವ್ಯಾಮೋಹಿಗಳಲ್ಲ ಎಂಬುದೂ ಸ್ಪಷ್ಟ. ನೆರೆ ರಾಜ್ಯಗಳ ದ್ರಾವಿಡ ಭಾಷಿಕರ ಸಂಖ್ಯೆ ಹೆಚ್ಚಾಗುತ್ತಿದ್ದರೂ ಕನ್ನಡ ಭಾಷೆಯ ಬಳಕೆಯ ವಿಚಾರದಲ್ಲಿ ಅತಿಯಾಗಿ ಗೋಳಾಡುವ ಪರಿಸ್ಥಿತಿ ಉದ್ಭವಿಸಿಲ್ಲವೆಂದೇ ಹೇಳಬಹುದು.

ಹೆಚ್ಚಾಗುತ್ತಿದೆ. ಪತ್ರಿಕೆಗಳನ್ನು ಓದುವವರ ಸಂಖ್ಯೆ ಕ್ಷೀಣಿಸುತ್ತಿದ್ದರೂ ಸಾಹಿತ್ಯಾಸಕ್ತರ ಸಂಖ್ಯೆ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ರಕ್ಷಣಾ ವೇದಿಕೆ ಮತ್ತು ಸೇನೆಗಳ ಕಾರ್ಯವೈಖರಿಯನ್ನು ಪ್ರಶ್ನಿಸುತ್ತಲೇ ಕನ್ನಡ ಭಾಷೆ ನಶಿಸುತ್ತಿದೆ ಎಂಬ ಅಳಲು ಅನಗತ್ಯ ಎಂಬ ಮಾತನ್ನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಕನ್ನಡಿಗರು ಅಭಿಮಾನಶೂನ್ಯರು, ನಿರಭಿಮಾನಿಗಳು ಎಂದು ಹೇಳುವುದು ಎಚ್ಚರಿಕೆಯ ಗಂಟೆಯಾಗಲಿಕ್ಕೂ ಸಾಕು. ಆದರೆ ತಮ್ಮ ಸ್ವಾಭಿಮಾನವನ್ನು ತೋರ್ಪಡಿಸಲು ಕನ್ನಡಿಗರು ಏನು ಮಾಡಬೇಕು? ಅಥವಾ ಯಾವ ಸಂದರ್ಭದಲ್ಲಿ ತಮ್ಮ ಭಾಷಾಭಿಮಾನನ್ನು ಬಹಿರಂಗ ಪಡಿಸಬೇಕು?

ಇದು ಜನಸಾಮಾನ್ಯರನ್ನು ಸಹಜವಾಗಿ ಕಾಡುವ ಪ್ರಶ್ನೆ. ತಮ್ಮ ದೈನಂದಿನ ಜೀವನ ನಿರ್ವಹಣೆಯಲ್ಲಿ ತೊಡಗಿರುವ ಯಾವುದೇ ಜನಸಮುದಾಯಗಳಿಗೆ ಭಾಷೆ, ಧರ್ಮ, ಜಾತಿ ಮತ್ತಿತರ ಸಮಸ್ಯೆಗಳು ಪ್ರಾಥಮಿಕ ಎನಿಸುವುದಿಲ್ಲ. ಅವು ಕೇವಲ ಭಾವನಾತ್ಮಕ ವಿಷಯಗಳಾಗುತ್ತವೆ. ಕನ್ನಡಪರ ಸಂಘಟನೆಗಳ ಅಬ್ಬರ ಮತ್ತು ವಿಜೃಂಭಣೆಗಳು ಜನಸಾಮಾನ್ಯರ ಈ ಸೂಕ್ಷ್ಮತೆಗಳನ್ನು ಗ್ರಹಿಸಲು ವಿಫಲವಾಗಿರುವುದೇ ಇಂದು ಮೂಲಭೂತ ಸಮಸ್ಯೆಯಾಗಿ ಕಾಡುತ್ತಿದೆ. ಈ ನಿಟ್ಟಿನಲ್ಲಿ ಹತ್ತಾರು ಗುಂಪುಗಳಲ್ಲಿ ಹಂಚಿ ಹೋಗಿರುವ ಕನ್ನಡ ಪರ ಸಂಘಟನೆಗಳ ಕಾರ್ಯವೈಖರಿಯನ್ನೂ ಪರಾಮರ್ಶಿಸುವುದು ಅತ್ಯಗತ್ಯವಲ್ಲವೇ? ಕನ್ನಡ ರಕ್ಷಣಾ ಸೇನೆ, ಕರುನಾಡ ಸೇನೆ, ರಕ್ಷಣಾ ವೇದಿಕೆ ಹೀಗೆ ಹತ್ತು ಹಲವಾರು ಸಂಘಟನೆಗಳು ಕನ್ನಡದ ರಕ್ಷಣೆಗಾಗಿ ಟೊಂಕಕಟ್ಟಿ ನಿಂತಿವೆ. ಈ ಸಂಘ ಟನೆಗಳ ಮೂಲ ಧ್ಯೇಯ ಕನ್ನಡಭಾಷೆ, ಸಂಸ್ಕೃತಿ ಮತ್ತು ಕರ್ನಾಟಕದ ನೆಲ, ಜಲ ಸಂಪತ್ತಿನ ರಕ್ಷಣೆ. ಆದರೆ ವಾಸ್ತವದಲ್ಲಿ ಭಾಷೆಯ ಬಗ್ಗೆ ಮಾತ್ರ ಸೊಲ್ಲೆತ್ತಲಾಗುತ್ತಿರುವುದೇ ಹೊರತು, ಇತರ ಸಮಸ್ಯೆಗಳು ನೇಪಥ್ಯಕ್ಕೆ ಸರಿದಿವೆ. ಕನ್ನಡ ಪರ ಸಂಘಟನೆಗಳು ಪರೋಕ್ಷವಾಗಿ ರಾಜಕೀಯ ಪಕ್ಷಗಳ ಬಾಲಂಗೋಚಿಗಳಂತೆ ಕಾರ್ಯ ನಿರ್ವಹಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಫ್ಲೆಕ್ಸ್ ಬೋರ್ಡುಗಳಲ್ಲಿ ರಾರಾಜಿಸುತ್ತಲೇ ಮುಂದಿನ ರಾಜಕೀಯ ಹೆಜ್ಜೆಗಳನ್ನು ಗುರುತಿಸಿಕೊಳ್ಳುವ ವೇದಿಕೆಯಂತೆ ಗೋಚರಿಸುತ್ತಿದೆ. ಈ ಸಂಘಟನೆಗಳ ಬದ್ಧತೆ, ಶ್ರದ್ಧೆ ಏನೇ ಇರಲಿ, ಕನ್ನಡ-ಕನ್ನಡಿಗ ಮತ್ತು ಕನ್ನಡತನವನ್ನು ಕುರಿತಂತೆ ಒಂದು ಸ್ಪಷ್ಟ ಆಯಾಮ ಇಲ್ಲವೆಂಬುದಂತೂ ಸತ್ಯ.

ಹಾಗೊಮ್ಮೆ ಈ ಹೋರಾಟಗಳಿಗೆ ಸಾಮಾಜಿಕ ಆಯಾಮ ಇದ್ದಿದ್ದಲ್ಲಿ ಕರ್ನಾಟಕದ ಜನತೆ ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳ ವಿರುದ್ಧ ಅನೇಕ ಹೋರಾಟಗಳು ರೂಪುಗೊಳ್ಳಬೇಕಿತ್ತು. ಕನ್ನಡ ಭಾಷೆ ಎಂದಿಗೂ ಸಾಯುವುದಿಲ್ಲ. ಭಾಷೆಯ ಬಳಕೆ ಕಡಿಮೆಯಾಗಲು ಅನೇಕ ಸಾಪೇಕ್ಷ ಕಾರಣಗಳಿರುತ್ತವೆ. ಹಾಗಾಗಿ ಭಾಷೆಯ ಉಳಿವು ಎಂಬ ಪ್ರಶ್ನೆಯೇ ಅಸಂಬದ್ಧ ಎನಿಸುತ್ತದೆ. ಭಾಷೆಯ ರಕ್ಷಣೆಗಾಗಿ ಶ್ರಮಿಸುವುದು ಮತ್ತು ಹೋರಾಟ ನಡೆಸುವುದು ಹೆಚ್ಚು ಸ್ವೀಕಾರಾರ್ಹವಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಒಂದು ಭಾಷೆಯಾಗಿ ಕನ್ನಡದ ಬಳಕೆ, ರಾಜ್ಯದ ಕೆಲವು ಪ್ರದೇಶಗಳಲ್ಲಿ ಕ್ಷೀಣಿಸುತ್ತಿರುವುದನ್ನು ತಡೆಗಟ್ಟಿ, ಭಾಷೆಯ ರಕ್ಷಣೆಗಾಗಿ ಟೊಂಕ ಕಟ್ಟಿ ನಿಲ್ಲುವುದು ಕನ್ನಡಪರ ಸಂಘಟನೆಗಳ ಆದ್ಯತೆಯಾಗಬೇಕು. ಇಲ್ಲಿ ಕನ್ನಡದ ಬಳಕೆ ಎಂದಾಕ್ಷಣ ಎಲ್ಲ

ತಮ್ಮ ಸ್ವಾಭಿಮಾನವನ್ನು ತೋರ್ಪಡಿಸಲು ಕನ್ನಡಿಗರು ಏನು ಮಾಡಬೇಕು? ಅಥವಾ ಯಾವ ಸಂದರ್ಭದಲ್ಲಿ ತಮ್ಮ ಭಾಷಾಭಿಮಾನನ್ನು ಬಹಿರಂಗ ಪಡಿಸಬೇಕು? ಇದು ಜನಸಾಮಾನ್ಯರನ್ನು ಸಹಜವಾಗಿ ಕಾಡುವ ಪ್ರಶ್ನೆ. ತಮ್ಮ ದೈನಂದಿನ ಜೀವನ ನಿರ್ವಹಣೆಯಲ್ಲಿ ತೊಡಗಿರುವ ಯಾವುದೇ ಜನಸಮುದಾಯಗಳಿಗೆ ಭಾಷೆ, ಧರ್ಮ, ಜಾತಿ ಮತ್ತಿತರ ಸಮಸ್ಯೆಗಳು ಪ್ರಾಥಮಿಕ ಎನಿಸುವುದಿಲ್ಲ. ಅವು ಕೇವಲ ಭಾವನಾತ್ಮಕ ವಿಷಯಗಳಾಗುತ್ತವೆ. ಕನ್ನಡಪರ ಸಂಘಟನೆಗಳ ಅಬ್ಬರ ಮತ್ತು ವಿಜೃಂಭಣೆಗಳು ಜನಸಾಮಾನ್ಯರ ಈ ಸೂಕ್ಷ್ಮತೆಗಳನ್ನು ಗ್ರಹಿಸಲು ವಿಫಲವಾಗಿರುವುದೇ ಇಂದು ಮೂಲಭೂತ ಸಮಸ್ಯೆಯಾಗಿ ಕಾಡುತ್ತಿದೆ.

ಸಂಕಥನಗಳೂ ಬೆಂಗಳೂರಿಗೆ ಬಂದು ತಲುಪುವುದೇ ದುರಂತ. ಬೆಂಗಳೂರಿನಿಂದಾಚೆಗೂ ಕರ್ನಾಟಕದ-ಕನ್ನಡದ ಅಸ್ತಿತ್ವ ಇದೆ ಎಂಬುದನ್ನು ನಾವು ಗ್ರಹಿಸಬೇಕಿದೆ.

ಜನಸಾಮಾನ್ಯರ ನಿತ್ಯ ಜೀವನದಲ್ಲಿ ಬಳಕೆಯಲ್ಲಿ ಕನ್ನಡ ಕಾಣದಿದ್ದರೆ ಅದರ ಹಿಂದೆ ದೈನಂದಿನ ಅನಿವಾರ್ಯತೆಗಳೂ ಇರುತ್ತವೆ. ಟಿವಿ ವಾಹಿನಿಗಳಲ್ಲಿ ಬಿತ್ತರಿಸುವ ಕೆಲವು ಕಾರ್ಯಕ್ರಮಗಳಲ್ಲಿ ಕನ್ನಡವನ್ನೇ ಬಳಸುವ ಪ್ರಯತ್ನಗಳು ನಡೆದರೂ ಅದು ನಿಜ ಜೀವನದಲ್ಲಿ ಸಾಕಾರವಾಗಲಾರದು. ಏಕೆಂದರೆ ಭಾಷೆಯ ಬಳಕೆ ಸಂವಹನ ಪ್ರಕ್ರಿಯೆಯ ಅಂಗವಾಗಿದ್ದು, ಆ ಹೊತ್ತಿನ ಅನಿವಾರ್ಯತೆ ಮತ್ತು ಅಗತ್ಯತೆಗಳಿಗೆ ಅನುಗುಣವಾಗಿ ಬಳಕೆಯಾಗುತ್ತದೆ. ಕೋಲಾರ ಜಿಲ್ಲೆಯ ಗಡಿ ಪ್ರದೇಶಗಳಲ್ಲಿ ಪಾಠ ಮಾಡುವ ಕನ್ನಡ ಶಿಕ್ಷಕರು ಮಕ್ಕಳಿಗೆ ತೆಲುಗಿನಲ್ಲಿ ಅರ್ಥ ಹೇಳದೆ ಹೋದರೆ ಪಾಠ ಮಾಡುವುದೇ ದುಸ್ತರವಾಗುತ್ತದೆ. ಇದೇ ಪರಿಸ್ಥಿತಿ ಬೆಳಗಾವಿ ಪ್ರದೇಶದಲ್ಲೂ ಇರಬಹುದು. ಇದಕ್ಕೆ ಕಾರಣ ನಾವು ಒಪ್ಪಿಕೊಂಡಿರುವ ಕನ್ನಡತನದ ಭೌಗೋಳಿಕ ಲಕ್ಷಣ. ಇಲ್ಲಿ ಮಾತೃಭಾಷೆಯ ಪರಿಕಲ್ಪನೆಯೂ ಸಹ ಪ್ರಶ್ನೆಗೊಳಗಾಗುತ್ತದೆ. ಮನೆಯಲ್ಲಿ ಮಾತನಾಡುವ ಭಾಷೆ ಮಾತೃಭಾಷೆ ಎಂದಾದಲ್ಲಿ, ಕರ್ನಾಟಕದ ಶೇ. 50ರಷ್ಟು ಜನರ ಮಾತೃಭಾಷೆ ಮಾತ್ರ ಕನ್ನಡ ಆಗಿರಲು ಸಾಧ್ಯ. ಆದರೂ ಕರ್ನಾಟಕದ ಸಮಸ್ತ ಜನತೆಯನ್ನೂ ನಾವು ಕನ್ನಡಿಗರೆಂದೇ ಭಾವಿಸುತ್ತೇವೆ. ಕೊಂಕಣಿ, ತುಳು, ಕೊಡವ, ಹವ್ಯಕ, ಸಾಂಕೇತಿ ಹೀಗೆ ಹಲವು ಭಾಷೆಗಳು ಮರಾಠಿ-ಕನ್ನಡ-ತಮಿಳು-ಮಳಯಾಳಿ ಭಾಷೆಗಳ ಮಿಶ್ರಣವನ್ನೇ ಮಾತೃಭಾಷೆ ಎಂದು ಸ್ವೀಕರಿಸಿವೆ. ಇದೇ ಪರಿಸ್ಥಿತಿಯನ್ನು ಕೋಲಾರ ದಕ್ಷಿಣ ಕರ್ನಾಟಕದ ಇತರ ಭಾಗಗಳಲ್ಲೂ ಕಾಣಬಹುದು.

ಈ ಸನ್ನಿವೇಶದಲ್ಲಿ ಕನ್ನಡ ಭಾಷೆಯ ಬಳಕೆಯನ್ನೇ ಮಾನದಂಡವಾಗಿ ಪರಿಗಣಿಸಿದಾಗ ನಮಗೆ ಕನ್ನಡದ ಬಳಕೆ ಕ್ಷೀಣಿಸುತ್ತಿದೆ ಎಂಬ ಆತಂಕ ಸಹಜವಾಗಿ ಉಂಟಾಗುತ್ತದೆ. ರಾಜ್ಯದ ಅನೇಕ ಪ್ರದೇಶಗಳಲ್ಲಿ ನೆರೆ ರಾಜ್ಯದ ಭಾಷೆಗಳು ಸಂಪರ್ಕ ಮಾಧ್ಯಮವಾಗಿರುವುದನ್ನು ಭಾವನಾತ್ಮಕವಾಗಿ ವಿರೋಧಿಸಬಹುದಾದರೂ, ವಾಸ್ತವತೆಯ ನೆಲೆಯಲ್ಲಿ ನಿರಾಕರಿಸಲಾಗದು. ಇದೇ ಮಾನದಂಡವನ್ನು ಕೆಲವೊಮ್ಮೆ ಬೆಂಗಳೂರಿಗೂ ವಿಸ್ತರಿಸಬಹುದು. ನವ ಉದಾರವಾದ ಮತ್ತು ನಗರೀಕರಣ ಪ್ರಕ್ರಿಯೆ ಸೃಷ್ಟಿಸಿರುವ ಸನ್ನಿವೇಶದಲ್ಲಿ ತಮ್ಮ ಮೂಲ ನೆಲೆಗಳನ್ನೇ ತೊರೆದು ಪಟ್ಟಣ ಸೇರುವ ಜನಸಮುದಾಯಗಳಿಗೆ ಬೆಂಗಳೂರಿನಂತಹ ನಗರಗಳು ಜೀವನಾಧಾರದ ಸ್ತಂಭಗಳಾಗುತ್ತವೆ. ತಮ್ಮ ಒಪ್ಪೊತ್ತಿನ ಕೂಳಿಗಾಗಿ ದುಡಿಯುವ ಈ ಜನತೆಗೆ ಭಾಷೆಗಿಂತಲೂ ಸಂವಹನ ಮುಖ್ಯವಾಗುತ್ತದೆ. ಇದು ದಿನಗೂಲಿ ನೌಕರನಿಗೆ ಅನ್ವಯಿಸುವಷ್ಟೇ ಸಾಫ್ಟ್‌ವೇರ್ ಇಂಜಿನಿಯರ್‌ಗೂ ಅನ್ವಯಿಸುತ್ತದೆ. ಹಾಗಾಗಿ ಸಾಮಾನ್ಯವಾಗಿ ಬಾಹ್ಯ ಸಮಾಜದಲ್ಲಿ ವ್ಯಕ್ತವಾಗುವ ಭಾಷೆಯನ್ನೇ ಸಮಗ್ರ ಭಾಷಾ ಬಳಕೆಯ ಮಾನದಂಡವನ್ನಾಗಿ ಬಳಸುವುದು ತಪ್ಪಾಗುತ್ತದೆ. ಇದು ಸಮಸ್ಯೆಯ ಒಂದು ಆಯಾಮ.

ಕನ್ನಡ ಮಾಧ್ಯಮ ಮತ್ತು ಮಾಧ್ಯಮಗಳ ಕನ್ನಡ

ಕರ್ನಾಟಕದ ಮತ್ತೊಂದು ದುರಂತವೆಂದರೆ ಶೈಕ್ಷಣಿಕ ವಲಯದಲ್ಲಿ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮ ಕಡ್ಡಾಯ ಮಾಡಬೇಕೆಂಬ ಸಮಸ್ತ ಕನ್ನಡಿಗರ ಕೂಗು ದೊರೆಗಳ ಕಿವಿಗೆ ಬೀಳುತ್ತಲೇ ಇಲ್ಲ. ಈಗ ಒಂದು ರಾಷ್ಟ್ರೀಯವಾದಿ ಪಕ್ಷ ಅಧಿಕಾರದಲ್ಲಿದೆ. ಆದರೆ ಉಪರಾಷ್ಟ್ರೀಯತೆಯ ಸಂವೇದನೆಗಳನ್ನು ಗ್ರಹಿಸುವ ಮನೋಭಾವವಾಗಲೀ, ಇಚ್ಛೆಯಾಗಲೀ ಬಿಜೆಪಿ ಸರ್ಕಾರಕ್ಕೆ ಇದ್ದಂತಿಲ್ಲ. ಪರಿಣಾಮ ಮುನ್ನೂರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುವ ನಿರ್ಧಾರ ಕೈಗೊಂಡಿದೆ. ಆಡಳಿತದಲ್ಲಿ ಕನ್ನಡ ಅನುಷ್ಠಾನ ಮಾಡುವ ದಿಕ್ಕಿನಲ್ಲಿ ಸರ್ಕಾರಕ್ಕೆ ಆಸಕ್ತಿಯೇ ಇಲ್ಲ. ರಾಷ್ಟ್ರೀಕೃತ ಬ್ಯಾಂಕುಗಳು ಎಲ್ಲರನ್ನೂ ಒಳಗೊಳ್ಳುವ ಹಣಕಾಸು ಇನ್‌ಕ್ಲೂಷನ್ ಯೋಜನೆಯಡಿಯಲ್ಲಿ ಶೇ. 100ರಷ್ಟು ಜನರನ್ನು ಗ್ರಾಹಕರನ್ನಾಗಿ ಮಾಡಲು ಯೋಜಿಸುತ್ತಿವೆ. ಆದರೆ ಬ್ಯಾಂಕುಗಳ ಅರ್ಜಿಗಳು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿರುತ್ತವೆಯೇ ಹೊರತು ಕನ್ನಡದಲ್ಲಿರುವುದು ವಿರಳ. ಹಾಗಾಗಿ ಗ್ರಾಹಕರು ಕನ್ನಡದಲ್ಲಿ ಸಹಿ ಮಾಡಿದರೆ ಆ ಫಾರಂನಲ್ಲಿರುವ ಮಾಹಿತಿಯನ್ನು ಗ್ರಾಹಕನಿಗೆ ಓದಿ ಹೇಳಿದ್ದೇನೆಂದು ಮತ್ತೊಬ್ಬರು ಪ್ರಮಾಣೀಕರಿಸಬೇಕು. ಈ ಬಗ್ಗೆ ಯಾವುದೇ ಸಂಘಟನೆಗಳು ಈವರೆಗೂ ದನಿ ಎತ್ತದಿರುವುದು ಅಚ್ಚರಿ ಮೂಡಿಸುತ್ತದೆ.

ಇನ್ನು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಳಕೆಯಾಗುವ ಇಂಗ್ಲಿಷ್ ಭಾಷೆಯ ಬಗ್ಗೆ ಕ್ರಮ ಕೈಗೊಳ್ಳುವುದಿರಲಿ, ಯೋಚಿಸುವವರೂ ಗತಿ ಇಲ್ಲ. ಇತ್ತೀಚೆಗೆ ಸುವರ್ಣ ವಾಹಿನಿಯ ಒಂದು ಸಂವಾದ ಕಾರ್ಯಕ್ರಮ ವೀಕ್ಷಿಸುತ್ತಿದ್ದೆ. ಅಲ್ಲಿ ಚರ್ಚೆಗೊಳಗಾದ ವಿಷಯ ಕನ್ನಡ ಭಾಷೆಯ ಅಳಿವು-ಉಳಿವು, ಭಾಷೆಯ ಬಳಕೆ ಮತ್ತು ಬೆಳಗಾವಿ ವಿವಾದ. ಚರ್ಚೆಯಲ್ಲಿ ಭಾಗವಹಿಸಿದ ಕನ್ನಡ ಪರ ಹೋರಾಟಗಾರರು ಪರಸ್ಪರ ಹೊಡೆದಾಡುವ ಮಟ್ಟಕ್ಕೂ ಹೋಗಿದ್ದುಂಟು. ಈ ಕಾರ್ಯಕ್ರಮದ ಶೀರ್ಷಿಕೆ-ಮೆಗಾ ಫೈಟ್. ಇದು ಒಂದು ನಿದರ್ಶನ ಮಾತ್ರ. ಬ್ರೇಕಿಂಗ್ ನ್ಯೂಸ್, ನ್ಯೂಸ್ ಕಿಕ್, ಜೀನ್ಸ್ ಹೀಗೆ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಳಸುವ ಭಾಷೆ ಜನಸಾಮಾನ್ಯರ ಮೇಲೆ ಹೆಚ್ಚಿನ ಪರಿಣಾಮ ಬೀರುವುದನ್ನು

ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಎಫ್‌ಎಂ ಚಾನಲ್‌ಗಳಲ್ಲಿ ಮತ್ತು ಟಿವಿ ವಾಹಿನಿಗಳಲ್ಲಿ ನಿರೂಪಕರು ಬಳಸುವ ಕನ್ನಡ ಆಕ್ರೋಶ ಹುಟ್ಟಿಸುತ್ತದೆ. ಕನ್ನಡ ಪರ ಹೋರಾಟಗಳು ಲೋಪಗಳನ್ನು ಸರಿಪಡಿಸಲು ಹೆಚ್ಚು ಒತ್ತು ನೀಡಬೇಕಾಗಿದೆ. ಆದರೆ ಇಲ್ಲಿ ಅಗೋಚರ ಹಿತಾಸಕ್ತಿಗಳು ನೇಪಥ್ಯದಿಂದಲೇ ನಿಯಂತ್ರಣ ಸಾಧಿಸುವುದು ಗುಟ್ಟಿನ ಮಾತೇನಲ್ಲ. ಹಾಗಾಗಿ ಇದು ಚರ್ಚೆಯ ವಿಷಯವಾಗುವುದೇ ಇಲ್ಲ.

ಇವೆಲ್ಲವೂ ಕ್ಲೀಷೆ ಎಂದೇ ಭಾವಿಸೋಣ. ಇನ್ನೂ ಗಂಭೀರ ಸಮಸ್ಯೆ ಎಂದರೆ ಕನ್ನಡ ವಾಹಿನಿಗಳ ಕಾರ್ಯಕ್ರಮಗಳ ನಿರೂಪಣೆ ಮತ್ತು ಅಂತರ್ಗತ ವಿಚಾರಗಳು. ಒಂದು ವಾರದ ಕಾಲ ಕನ್ನಡ ವಾಹಿನಿಗಳನ್ನು ಗಮನವಿಟ್ಟು ನೋಡಿದರೆ ಕರ್ನಾಟಕದ ಜನತೆಗೆ ಸಮಸ್ಯೆಗಳೇ ಇಲ್ಲ ಎಂದು ಭಾವಿಸುವಂತಾಗುತ್ತದೆ. ಏಕೆಂದರೆ ಈ ವಾಹಿನಿಗಳಲ್ಲಿ ಬಿತ್ತರಿಸುವ ಕಾರ್ಯಕ್ರಮಗಳು ಕೇವಲ ರಂಜನೀಯತೆಗೆ ಒತ್ತು ನೀಡುತ್ತವೆಯೇ ಹೊರತು, ವಾಸ್ತವಗಳಿಗಲ್ಲ. ಬೆಳ್ಳಂಬೆಳಗ್ಗೆ ಭವಿಷ್ಯ, ರ‍ಾಶಿಫಲ ಇತ್ಯಾದಿ ಬೊಗಳೆಗಳು, ಮಧ್ಯಾಹ್ನ ಮಹಿಳೆಯರನ್ನು ಆಕರ್ಷಿಸುವ ಅಡುಗೆ, ಧಾರಾವಾಹಿ ಇತ್ಯಾದಿ, ಸಂಜೆ ಅರ್ಥವೇ ಇಲ್ಲದ ರಾಜಕೀಯ ವಿಶ್ಲೇಷಣೆ ಮತ್ತು ಧಾರಾವಾಹಿಗಳು, ರಾತ್ರಿ ಹತ್ತರ ನಂತರ ಮೂಢನಂಬಿಕೆಗಳನ್ನು ಪೋಷಿಸುವ ದೆವ್ವ, ಭೂತ, ಅತೀತ ಶಕ್ತಿಗಳ ವೈಭವೀಕರಣ. ಇದು ಕನ್ನಡ ವಾಹಿನಿಗಳ ಜೀವಾಳ. ಈ ನಡುವೆ ಬಿತ್ತರಿಸುವ ನಿತ್ಯ ಸುದ್ದಿಗಳಲ್ಲಿ ರಂಜನೀಯತೆ, ಪುನರಾವರ್ತನೆ ಮತ್ತು ವಿಡಂಬನೆಗಳೇ ತುಂಬಿರುವುದೇ ಹೊರತು, ಎಲ್ಲಿಯೂ ಕನ್ನಡದ ಜನತೆ ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳನ್ನು ಬಿಂಬಿಸಲಾಗುವುದಿಲ್ಲ.

ಮಾಧ್ಯಮಗಳ ಈ ವರ್ತನೆಗೂ ಕನ್ನಡ ಭಾಷೆಗೂ ಸಂಬಂಧವೇನು ಎಂಬ ಪ್ರಶ್ನೆ ಉದ್ಭವಿಸಬಹುದು. ಸಂಬಂಧವಿದೆ. ಇಂದು ಒಂದು ಭಾಷೆಯಾಗಿ ಕನ್ನಡ ಎದುರಿಸುತ್ತಿರುವ ಅಪಾಯಗಳಿಗಿಂತಲೂ ಒಂದು ಜನಸಮುದಾಯವಾಗಿ ಕನ್ನಡಿಗರು ಅಂದರೆ ಕರ್ನಾಟಕದ ಜನತೆ ಎದುರಿಸುತ್ತಿರುವ ಸಮಸ್ಯೆಗಳು ಹೆಚ್ಚು ಆತಂಕಕಾರಿಯೂ, ಅಪಾಯಕಾರಿಯೂ ಆಗಿದೆ. ಈ ಸಮಸ್ಯೆಗಳ ಸಮಾಜೋ-ಆರ್ಥಿಕ ವಿಶ್ಲೇಷಣೆಯನ್ನು ಮಾಡದೆಹೋದಲ್ಲಿ ಕರ್ನಾಟಕದ ಜನತೆಯ ಅಸ್ತಿತ್ವಕ್ಕೇ ಧಕ್ಕೆ ಉಂಟಾಗುತ್ತದೆ. ತತ್ಪರಿಣಾಮವಾಗಿ ಕನ್ನಡ ಭಾಷೆಯೂ, ಅಲ್ಲವೇ? ವಿಪರ್ಯಾಸವೆಂದರೆ ಯಾವುದೇ ರಕ್ಷಣಾ ವೇದಿಕೆಗಳು ಈ ಕುರಿತ ಗಂಭೀರ ಚಿಂತನೆ ನಡೆಸಿಲ್ಲ. ಗ್ರಾಮೀಣ ಮಟ್ಟದಲ್ಲಿನ ಉದ್ಯೋಗ ಖಾತರಿ ಯೋಜನೆಯಿಂದ ಇನ್‌ಫೋಸಿಸ್ ನಿರ್ವಹಿಸುವ ಸಾಫ್ಟ್‌ವೇರ್ ಉದ್ಯಮದವರೆಗೂ ಕರ್ನಾಟಕದ ಜನತೆ ಅಭದ್ರತೆ, ಅನಿಶ್ಚಿತತೆ ಮತ್ತು ಆತಂಕಗಳನ್ನು ಎದುರಿಸುತ್ತಿದ್ದಾರೆ. ಕೇವಲ ಅನ್ಯ ಭಾಷಿಕರ ದಾಳಿಯಷ್ಟೇ ಅಲ್ಲದೆ, ಅನ್ಯ ಸಂಸ್ಕೃತಿ, ಅನ್ಯ ರಾಷ್ಟ್ರಗಳ ಆರ್ಥಿಕ ಅಧಿಪತ್ಯವನ್ನೂ ಎದುರಿಸುತ್ತಿದ್ದಾರೆ. ಜೊತೆಗೆ ಆಡಳಿತಾರೂಢರ ಭ್ರಷ್ಟ ಸಂಸ್ಕೃತಿಯ ವಿರುದ್ಧವೂ ಸೆಣಸುತ್ತಿದ್ದಾರೆ. ಈ ಸಮಸ್ಯೆಗಳ ಬಗ್ಗೆ ತುಟಿ ಪಿಟಕ್ ಎನ್ನದ ಮಾಧ್ಯಮಗಳಾಗಲಿ, ಕನ್ನಡಪರ ಸಂಘಟನೆಗಳಾಗಲಿ ಕನ್ನಡ ಭಾಷೆಯ ಸುತ್ತ ಗಿರಕಿ ಹೊಡೆಯುವುದು ಒಂದು ವಿಡಂಬನೆಯಾಗಿಯೇ ಕಾಣುತ್ತದೆ.

ಸಮಾಜೋ-ಆರ್ಥಿಕ ಸ್ಥಿತ್ಯಂತರಗಳು

ಈ ಸಂದರ್ಭದಲ್ಲಿ ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಸಂವಾದವೊಂದರಲ್ಲಿ ವ್ಯಕ್ತವಾದ ಎರಡು ಸ್ಪಷ್ಟ ಅಭಿಪ್ರಾಯಗಳು ಇಲ್ಲಿ ಮಹತ್ವ ಪಡೆಯುತ್ತವೆ. ಮೊದಲನೆಯದು ಕನ್ನಡ ಭಾಷೆ ನಶಿಸುತ್ತಿದೆ ಮತ್ತು ಕನ್ನಡಿಗರಲ್ಲಿ ಸ್ವಾಭಿಮಾನ ಕುಂದುತ್ತಿದೆ ಎಂಬ ಅಳಲು. ಎರಡನೆಯದು ಕನ್ನಡ ನಾಡಿನ ಸಂಪತ್ತು ಅನ್ಯರ ಪಾಲಾಗುತ್ತಿದೆ ಹಾಗಾಗಿ ನಮ್ಮ ಸಂಪನ್ಮೂಲಗಳನ್ನು ಉಳಿಸಿಕೊಳ್ಳಲು ಅಸ್ಸಾಂ ಮಾದರಿಯ ಹೋರಾಟ ಅಗತ್ಯ ಎಂಬ ಆಗ್ರಹ. ಮೊದಲನೆಯ ಅಭಿಪ್ರಾಯದ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ. ಆದರೆ ಕರ್ನಾಟಕದಲ್ಲಿ ಅಸ್ಸಾಂ ಮಾದರಿಯ ಹೋರಾಟ ಅಗತ್ಯವಿದೆ ಎಂಬ ವಾದ ಸದ್ಯದ ಪರಿಸ್ಥಿತಿಯಲ್ಲಿ ಸ್ವೀಕಾರಾರ್ಹವಲ್ಲವೆಂದೇ ನನ್ನ ಅನಿಸಿಕೆ. ಇನ್ನೊಂದು ಹೆಜ್ಜೆ ಮುಂದಿಟ್ಟು ಹೇಳುವುದಾದರೆ, ಆಳ್ವಿಕರ ನಿರ್ಲಕ್ಷ್ಯಕ್ಕೊಳಗಾಗಿರುವ ಕರ್ನಾಟಕದ ಕೆಲವು ಪ್ರಾಂತ್ಯಗಳಲ್ಲಿ ಅಸ್ಸಾಂ ಮಾದರಿಯ ಹೋರಾಟ ರೂಪುಗೊಳ್ಳುವ ಸಾಧ್ಯತೆಗಳಿವೆ. ಇದು ಗಂಭೀರವಾಗಿ ಯೋಚಿಸಬೇಕಾದ ವಿಚಾರ. ಕನ್ನಡ ಪರ ಸಂಘಟನೆಗಳು ಮತ್ತು ಕನ್ನಡಕ್ಕಾಗಿ ಕೈ ಎತ್ತುವವರು ಕರ್ನಾಟಕದ ಔದ್ಯಮಿಕ ಪ್ರಗತಿ ಮತ್ತು ಹಿತಾಸಕ್ತಿಗಳನ್ನು ವಿಭಿನ್ನ ದೃಷ್ಟಿಕೋನದಿಂದ ನೋಡುವ ಅಗತ್ಯತೆ ಇದೆ.

ಕರ್ನಾಟಕದ ಮಟ್ಟಿಗೆ ಅಥವಾ ಕನ್ನಡಿಗರ ಮಟ್ಟಿಗೆ ಹೇಳುವುದಾದರೆ ಕರ್ನಾಟಕದ ಔದ್ಯಮಿಕ ಕ್ಷೇತ್ರ ತನ್ನದೇ ಆದ ಮಾರುಕಟ್ಟೆಯನ್ನು ಸೃಷ್ಟಿಸಿಕೊಂಡಿಲ್ಲ. ಇಲ್ಲಿ ಮಾರುಕಟ್ಟೆ ಎಂದಾಕ್ಷಣ ಜಾಗತೀಕರಣ-ನವ ಉದಾರವಾದ ಪೋಷಿಸುವ ಮಾರುಕಟ್ಟೆ ಎಂದು ಭಾವಿಸಬೇಕಿಲ್ಲ. ಕರ್ನಾಟಕದ ಜನಸಮುದಾಯಗಳ ಅಭ್ಯುದಯಕ್ಕೆ ನೆರವಾಗುವಂತಹ ಮತ್ತು ಈ ಜನಸಮುದಾಯಗಳ ಕನ್ನಡದ ಅಸ್ಮಿತೆಯನ್ನು ಸ್ಥಾಪಿಸುವಂತಹ ಒಂದು ಔದ್ಯಮಿಕ ನೇಗಟ್ಟಿನಲ್ಲಿ ಮಾರುಕಟ್ಟೆಯ ಪರಿಕಲ್ಪನೆಯನ್ನು ರೂಪಿಸಿಕೊಳ್ಳಬೇಕಿದೆ. ಹಾಗೆ ನೋಡಿದರೆ ಕರ್ನಾಟಕದಲ್ಲಿ ಔದ್ಯಮಿಕ ಕೊರತೆ ಇಲ್ಲ. ಔದ್ಯಮಿಕ ಪ್ರಗತಿಗೂ ಕೊರತೆಯಿಲ್ಲ. ಉದ್ಯಮಶೀಲತೆಯಲ್ಲಿ ಕರ್ನಾಟಕ ಎಂದಿಗೂ ಹಿಂದೆ ಬಿದ್ದಿಲ್ಲ. ದೇಶದ ಇಪ್ಪತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನಾಲ್ಕು ಪ್ರಮುಖ ಬ್ಯಾಂಕುಗಳು ಕರ್ನಾಟಕದಲ್ಲೇ ಇರುವುದು ಮತ್ತು ಬೃಹತ್ ಕೈಗಾರಿಕೆಗಳ ಪೈಕಿ ಅನೇಕ ಉದ್ಯಮಗಳು ಇಲ್ಲಿ ನೆಲೆ ಕಂಡಿರುವುದು ರಾಜ್ಯದ ಉದ್ಯಮಶೀಲತೆಯ ದ್ಯೋತಕ.

ಆದರೆ ನೆರೆ ರಾಜ್ಯಗಳಾದ ಆಂಧ್ರ ಮತ್ತು ತಮಿಳುನಾಡಿಗೆ ಹೋಲಿಸಿದಲ್ಲಿ ಕರ್ನಾಟಕದ ಮಾರುಕಟ್ಟೆ ತನ್ನದೇ ಆದ ಅಸ್ಮಿತೆಯನ್ನು ರೂಪಿಸುವ ಒಂದು ಚೌಕಟ್ಟನ್ನು ನಿರ್ಮಿಸಿಕೊಳ್ಳದಿರುವುದು ಸ್ಪಷ್ಟವಾಗಿದೆ. ಉದಾಹರಣೆಗೆ ತಮಿಳುನಾಡಿನ ತಿರುಪ್ಪೂರು-ತಿರುಪತ್ತೂರಿನ ಸಿದ್ಧ ಉಡುಪು ಉದ್ಯಮ, ಕೊಯಂಬತ್ತೂರಿನ ವಿದ್ಯುತ್ ಉಪಕರಣಗಳು, ಶಿವಕಾಶಿಯ ಪಟಾಕಿ, ಕಂಚಿಯ ರೇಷ್ಮೆ ಉದ್ಯಮ ಹೀಗೆ ತನ್ನದೇ ಆದ ಮಾರುಕಟ್ಟೆಯನ್ನು ರೂಪಿಸಿಕೊಳ್ಳುವಲ್ಲಿ ಕರ್ನಾಟಕದ ಯಾವುದೇ ಉದ್ಯಮವೂ ಮುಂದುವರೆದಿಲ್ಲ. ರೇಷ್ಮೆ ಸೀರೆ ಎಂದಾಕ್ಷಣ ಕಂಚಿ ನೆನಪಾಗುತ್ತದೆಯೇ ಹೊರತು, ಕರ್ನಾಟಕದ ಮೊಳಕಾ

ನೆರೆ ರಾಜ್ಯಗಳಾದ ಆಂಧ್ರ ಮತ್ತು ತಮಿಳುನಾಡಿಗೆ ಹೋಲಿಸಿದಲ್ಲಿ ಕರ್ನಾಟಕದ ಮಾರುಕಟ್ಟೆ ತನ್ನದೇ ಆದ ಅಸ್ಮಿತೆಯನ್ನು ರೂಪಿಸುವ ಒಂದು ಚೌಕಟ್ಟನ್ನು ನಿರ್ಮಿಸಿಕೊಳ್ಳದಿರುವುದು ಸ್ಪಷ್ಟವಾಗಿದೆ. ಉದಾಹರಣೆಗೆ ತಮಿಳುನಾಡಿನ ತಿರುಪ್ಪೂರು-ತಿರುಪತ್ತೂರಿನ ಸಿದ್ಧ ಉಡುಪು ಉದ್ಯಮ, ಕೊಯಂಬತ್ತೂರಿನ ವಿದ್ಯುತ್ ಉಪಕರಣಗಳು, ಶಿವಕಾಶಿಯ ಪಟಾಕಿ, ಕಂಚಿಯ ರೇಷ್ಮೆ ಉದ್ಯಮ ಹೀಗೆ ತನ್ನದೇ ಆದ ಮಾರುಕಟ್ಟೆಯನ್ನು ರೂಪಿಸಿಕೊಳ್ಳುವಲ್ಲಿ ಕರ್ನಾಟಕದ ಯಾವುದೇ ಉದ್ಯಮವೂ ಮುಂದುವರೆದಿಲ್ಲ. ರೇಷ್ಮೆ ಸೀರೆ ಎಂದಾಕ್ಷಣ ಕಂಚಿ ನೆನಪಾಗುತ್ತದೆಯೇಹೊರತು, ಕರ್ನಾಟಕದ ಮೊಳಕಾಲ್ಮೂರು, ದೊಡ್ಡಬಳ್ಳಾಪುರ, ಇಳಕಲ್ ನೆನಪಾಗುವುದು ವಿರಳ.

ಲ್ಲೂರು, ದೊಡ್ಡಬಳ್ಳಾಪುರ, ಇಳಕಲ್ ನೆನಪಾಗುವುದು ವಿರಳ. ಈ ಪ್ರದೇಶಗಳಲ್ಲಿ ತಲತಲಾಂತರದಿಂದ ಅಸ್ತಿತ್ವದಲ್ಲಿರುವ ರೇಷ್ಮೆ ಸೀರೆಗಳ ಉದ್ದಿಮೆ ಕೇವಲ ರಾಜ್ಯ ಮಟ್ಟಕ್ಕೆ ಸೀಮಿತವಾಗಿದೆ. ಇದನ್ನು ರಾಷ್ಟ್ರಮಟ್ಟದ ಮಾರುಕಟ್ಟೆಯಾಗಿ ಪರಿವರ್ತಿಸುವ ಪ್ರಯತ್ನ ಸರ್ಕಾರದಿಂದಲೂ ನಡೆದಿಲ್ಲ, ಉದ್ಯಮಿಗಳಿಂದಲೂ ನಡೆದಿಲ್ಲ. ಇದು ಔದ್ಯಮಿಕ ಕ್ಷೇತ್ರದ ವೈಫಲ್ಯ ಮತ್ತು ಆಳ್ವಿಕರ ನಿಷ್ಕ್ರಿಯತೆಯ ದ್ಯೋತಕವಾಗಿಯೇ ಕಾಣುತ್ತದೆ.

ಇಲ್ಲಿ ಹೇಳಲೇಬೇಕಾದ ಸಂಗತಿ ಎಂದರೆ, ಚಿನ್ನದ ಗಣಿಯ ಪಾಡು. ಕೋಲಾರ ಚಿನ್ನದ ಗಣಿಯನ್ನು ಖಾಯಂ ಆಗಿ ಮುಚ್ಚಿಹಾಕಿದಾಗ ಕನ್ನಡಪರ ಸಂಘಟನೆಗಳಿಗೆ ಅದು ಪ್ರಮುಖ ಹೋರಾಟದ ವಿಷಯವಾಗಬೇಕಿತ್ತು. ಏಕೆಂದರೆ ಕನ್ನಡನಾಡು ಚಿನ್ನದ ಬೀಡು ಎಂಬ ಹೆಸರು ಬಂದಿದ್ದೇ ಗಣಿಗಳಿಂದ ಮತ್ತು ಸಾವಿರಾರು ಶ್ರಮಜೀವಿಗಳ ಪರಿಶ್ರಮದಿಂದ. ಆದರೆ ಗಣಿಯನ್ನು ಮುಚ್ಚಿ ಹಾಕಿದಾಗ ಅದು ಯಾವುದೇ ಸಂಚಲನ ಮೂಡಿಸಲಿಲ್ಲ. ಅಲ್ಲಿನ ಶ್ರಮಜೀವಿಗಳು ಮೂಲತಃ ಅನ್ಯಭಾಷಿಕರಾದರೂ ಕರ್ನಾಟಕದ ಅಭ್ಯುದಯಕ್ಕೆ ತಮ್ಮದೇ ಆದ ಕೊಡುಗೆ ನೀಡುವ ಮೂಲಕ ಕನ್ನಡಿಗರೇ ಆಗಿದ್ದಾರೆ. ಈ ಎರಡು ಲಕ್ಷ ಜನ ಬೀದಿಪಾಲಾದ ಸಂದರ್ಭದಲ್ಲಿ ಅದು ಕನ್ನಡಿಗರ ಅಳಿವು ಉಳಿವಿನ ಪ್ರಶ್ನೆ ಆಗಲೇ ಇಲ್ಲ. ಕಾರ್ಮಿಕ ಸಂಘಟನೆಗಳನ್ನು ಹೊರತುಪಡಿಸಿ ಮತ್ತಾವ ಸಂಘಟನೆಯೂ ಚಿನ್ನದ ಗಣಿಯ ಉಳಿವಿಗಾಗಿ ಹೋರಾಟ ರೂಪಿಸಿಲ್ಲ. ಇಂದಿಗೂ ಸಹ. ಮತ್ತೊಂದೆಡೆ ಶೇ. 75ಕ್ಕೂ ಹೆಚ್ಚು ದಲಿತರನ್ನು ಹೊಂದಿರುವ ಈ ಪ್ರದೇಶ ನಿರ್ಗತಿಕ ಸ್ಥಿತಿ ತಲುಪಿದಾಗಲೂ ದಲಿತ ಸಂಘಟನೆಗಳೂ ಇಲ್ಲಿ ಸಕ್ರಿಯವಾಗಿ ಪ್ರತಿಭಟಿಸಲಿಲ್ಲ. ಎಲ್ಲೋ ಒಂದೆಡೆ ಭಾವನಾತ್ಮಕ ಭಾಷಾಭಿಮಾನವೇ ಇಲ್ಲಿ ಮೇಲುಗೈ ಸಾಧಿಸಿರುವಂತೆ ಕಾಣುತ್ತದೆ. ಪರಿಣಾಮ ಕನ್ನಡಿಗರ ಮಹತ್ವದ ಔದ್ಯಮಿಕ ಕ್ಷೇತ್ರವೊಂದರ ಅವಸಾನ. ಇದು ಅಭಿಮಾನದ ಪ್ರಶ್ನೆಗಿಂತಲೂ ಅಳಿವು ಉಳಿವಿನ ಪ್ರಶ್ನೆಯಾಗಿ ನಿಲ್ಲುತ್ತದೆ.

ಇಲ್ಲಿ ಚಿನ್ನದ ಗಣಿಯನ್ನೇ ಪುನರಾರಂಭಿಸುವ ಬಗ್ಗೆ ಹೇಳುತ್ತಿಲ್ಲ. ಒಂದು ಪರ್ಯಾಯ ಉದ್ಯಮವನ್ನು ಸ್ಥಾಪಿಸುವ ನಿಟ್ಟಿನಲ್ಲೂ ರಾಜ್ಯ ಮಟ್ಟದಲ್ಲಿ ಯಾವುದೇ ಕೂಗು ಕೇಳಿಬರಲಿಲ್ಲ. ಏಕೆ ಹೀಗೆ? ಪಟಾಕಿಗಳು ಹಾನಿಕಾರಕ ಎಂದು ಶಿವಕಾಶಿಯ ಉದ್ಯಮಗಳನ್ನು ಮುಚ್ಚಿಹಾಕುವ ಸನ್ನಿವೇಶವನ್ನು ಒಮ್ಮೆ ಊಹಿಸಿಕೊಳ್ಳೋಣ. ಆಗ ಅದು ತಮಿಳರ ಅಸ್ಮಿತೆ, ಆತ್ಮ ಗೌರವದ ಪ್ರಶ್ನೆಯಾಗುತ್ತದೆ. ಇಲ್ಲಿ ಔದ್ಯಮಿಕ ಹಿತಾಸಕ್ತಿ ಮತ್ತು ಲಾಭಗಳ ಪ್ರಶ್ನೆಗಿಂತಲೂ ಒಂದು ರಾಜ್ಯದ ಜನತೆಯ ಅಸ್ಮಿತೆಯ ಪ್ರಶ್ನೆ ಪ್ರಧಾನವಾಗಿ ಕಾಣುತ್ತದೆ. ಕರ್ನಾಟಕದಲ್ಲಿ ಈ ರೀತಿಯ ಒಂದು ಬೆಳವಣಿಗೆ ಕಂಡುಬರುತ್ತಿಲ್ಲ. ರಸ್ತೆ, ಸೇತುವೆ, ಮೆಟ್ರೋ ನಿರ್ಮಾಣಕ್ಕೂ ಸಹ ಹೊರ ರಾಜ್ಯಗಳಿಂದಲೇ ಕಾರ್ಮಿಕರನ್ನು, ಉದ್ಯಮಿಗಳನ್ನು ಬರಮಾಡಿಕೊಳ್ಳಲಾಗುತ್ತಿರುವುದು ಈ ನಿಟ್ಟಿನಲ್ಲಿ ಉತ್ತಮ ನಿದರ್ಶನ. ಕಂಪ್ಯೂಟರ್ ಹಾರ್ಡ್‌ವೇರ್ ಕ್ಷೇತ್ರದಲ್ಲಿ ಎಲ್ಲಿ ನೋಡಿದರೂ ಕೇರಳ–ತಮಿಳುನಾಡಿನವರೇ ತುಂಬಿದ್ದಾರೆ. ಏಕೆ ಕರ್ನಾಟಕದ ಉದ್ಯಮಿಗಳು ರಾಜ್ಯದ ಜನತೆಯನ್ನೇ ತಯಾರು ಮಾಡಲಾಗುವುದಿಲ್ಲವೇ?

ಆಂಧ್ರ, ಕೇರಳ ಮತ್ತು ತಮಿಳುನಾಡಿನಲ್ಲಿ ಚಲನಚಿತ್ರ ರಂಗವೇ ಒಂದು ಉದ್ಯಮವಾಗಿದೆ. ಆದರೆ ಕರ್ನಾಟಕದ ಸಿನಿಮಾ ಲೋಕದ ದಿಗ್ಗಜರು ಒಂದು ಅತ್ಯಾಧುನಿಕ ಸ್ಟುಡಿಯೋ ನಿರ್ಮಿಸಲೂ ವಿಫಲರಾದದ್ದು ವಿಪರ್ಯಾಸ. ರಜತ ಪರದೆಯ ಮೇಲೆ ಆರುಕೋಟಿ ಕನ್ನಡಿಗರ ಕಣ್ಮಣಿಗಳಾಗಿ ಮೆರೆದ ಹೀರೋಗಳು ಸಿನಿಮಾವನ್ನು ಔದ್ಯಮಿಕ ದೃಷ್ಟಿಯಿಂದ ನೋಡಲೇ ಇಲ್ಲ. ಸ್ವಯಂ ಉದ್ಯಮಗಳಾಗಿ ಬೆಳೆದದ್ದಷ್ಟೇ ಭಾಗ್ಯ. ಹಾಗಾಗಿ ಇಂದಿಗೂ ಸಹ ಕನ್ನಡ ಸಿನಿಮಾ, ಸ್ಯಾಂಡಲ್‌ವುಡ್ ಎಂಬ ಹೆಸರು ಪಡೆದಿದ್ದರೂ ಸಹ, ಒಂದು ಸ್ವತಂತ್ರವಾದ ಉದ್ದಿಮೆಯಾಗಿ, ಉದ್ಯೋಗ ಸೃಷ್ಟಿ ಮಾಡುವಂತಹ ಉದ್ದಿಮೆಯಾಗಿ ಬೆಳೆದೇ ಇಲ್ಲ. ಚಿತ್ರೋದ್ಯಮ ಎಂದರೆ ಕೇವಲ ಪರದೆಯ ಮೇಲೆ ಮಿಂಚುವ ನಾಯಕ–ನಾಯಕಿಯರು, ನೇಪಥ್ಯದಲ್ಲಿ ಮರೆಯುವ ನಿರ್ಮಾಪಕ–ನಿರ್ದೇಶಕರು ಮಾತ್ರವಲ್ಲ. ಇವರನ್ನೂ ಮೀರಿದ ಹಾಗೆ ಲಕ್ಷಾಂತರ ಕಲಾವಿದರು, ಕುಶಲಕರ್ಮಿಗಳು ಈ ಉದ್ಯಮವನ್ನೇ ಅವಲಂಬಿಸಿರುತ್ತಾರೆ. ಈ ದೌರ್ಭಾಗ್ಯ ಕನ್ನಡಿಗರ ಅಳಲನ್ನು ಕೇಳುವವರಿರಲಿ, ಇವರ ಸಮಸ್ಯೆಗಳನ್ನು ಬಿಂಬಿಸುವವರೂ ಇಲ್ಲಿ ಕಾಣುವುದಿಲ್ಲ. ಇಲ್ಲಿಯೂ ಸಹ ಮಾಧ್ಯಮಗಳ ಹೊಣೆಗಾರಿಕೆಯನ್ನು ಪ್ರಶ್ನಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಕರ್ನಾಟಕದ ಆಳ್ವಿಕರು ಮತ್ತು ಉದ್ಯಮಿಗಳು ಕನ್ನಡಿಗರ ಮಾರುಕಟ್ಟೆಯೊಂದನ್ನು ಸೃಷ್ಟಿಸುವಲ್ಲಿ ವಿಫಲರಾಗಿರುವುದು ಸ್ಪಷ್ಟ. ಹಾಗಾಗಿ ಆಧುನಿಕ ಐಟಿ–ಬಿಟಿ ಕ್ಷೇತ್ರ ಮತ್ತು ಕಾರ್ಪೋರೇಟ್ ಸಂಸ್ಕೃತಿಗೆ ಬಲಿಯಾಗಿರುವ ಗಣಿ ಉದ್ಯಮ ಸೃಷ್ಟಿಸುವ ಬಂಡವಾಳ ಮತ್ತು ಲಾಭ ಎರಡೂ ಸಹ ಕನ್ನಡಿಗರ ಪಾಲಿಗೆ ಮರೀಚಿಕೆಯಾಗುತ್ತಿದೆ. ಈ ಸಮಸ್ಯೆಗೆ ಪರಿಹಾರ ಅಸ್ಸಾಂ ಮಾದರಿಯ ಹೋರಾಟವಲ್ಲ. ಕೊಡಗು ಪ್ರದೇಶದಲ್ಲಿ ಆಳ್ವಿಕರ ನಿರ್ಲಕ್ಷ್ಯದ ಪರಿಣಾಮವಾಗಿ ಈಗಾಗಲೇ ಅಸ್ಸಾಂ ಮಾದರಿಯ ಹೋರಾಟ ರೂಪುಗೊಳ್ಳುತ್ತಿದ್ದು ಅದನ್ನು ಪರಿಹರಿಸಲು ಕರ್ನಾಟಕದ ಜನತೆ ಪರ್ಯಾಯ ಮಾರ್ಗಗಳನ್ನು ಕುರಿತು ಆಲೋಚಿಸಬೇಕಾಗಿದೆ. ಉಪರಾಷ್ಟ್ರೀಯತೆಯ ಸಮಸ್ಯೆಗಳನ್ನು ಕೇವಲ ಭಾಷೆ–ಸಂಸ್ಕೃತಿಯ ಭಾವನಾತ್ಮಕ ನೆಲೆಗಟ್ಟಿನಲ್ಲೇ ವಿಶ್ಲೇಷಿಸಲಾಗುವುದಿಲ್ಲ. ಆಧುನಿಕ ಜಗತ್ತಿನಲ್ಲಿ ಒಂದು ಭಾಷೆ, ಸಂಸ್ಕೃತಿ ಉಳಿಯಬೇಕಾದಲ್ಲಿ ಜನತೆಯ ಸಮಾಜೋ ಆರ್ಥಿಕ ಸ್ಥಿತ್ಯಂತರಗಳೂ ಅಷ್ಟೇ ಮಹತ್ವ ಗಳಿಸುತ್ತವೆ.

ಕನ್ನಡದ ಅಳಿವು ಉಳಿವಿನ ಪ್ರಶ್ನೆಗಳಿಗಿಂತಲೂ ಕನ್ನಡಿಗರು ಎಂಬ ಚೌಕಟ್ಟಿನೊಳಗೆ ಸೇರುವ ಕರ್ನಾಟಕದ ಸಮಸ್ತ ಜನತೆಯ ಅಸ್ಮಿತೆಯನ್ನೂ, ಹಿತಾಸಕ್ತಿಗಳನ್ನೂ ಕಾಪಾಡುವ ಪ್ರಶ್ನೆ ಇಂದು ಹೆಚ್ಚು ಪ್ರಸ್ತುತ ಎನಿಸುತ್ತದೆ. ಭಾಷೆಯ ಬಳಕೆ ಕ್ಷೀಣಿಸಬಹುದು ಭಾಷೆ ಸಾಯುವುದಿಲ್ಲ. ಆದರೆ ಭಾಷಿಕರ ಸಮಸ್ಯೆಗಳನ್ನು ಸೂಕ್ತ ಸಮಯದಲ್ಲಿ, ಸೂಕ್ತ ರೀತಿಯಲ್ಲಿ ಸುಧಾರಿಸದೆ ಹೋದಲ್ಲಿ ಭಾಷಿಕರು ಸಾಯುತ್ತಾರೆ. ರಾಜ್ಯದಲ್ಲಿ ಆತ್ಮಹತ್ಯೆಗೆ ಶರಣಾಗುತ್ತಿರುವ ಸಾವಿರಾರು ರೈತರನ್ನು ಕನ್ನಡಿಗರು ಎಂಬ ಚೌಕಟ್ಟಿನಲ್ಲಿ ಬಂಧಿಸಿ ನೋಡಿದಾಗ ಈ ವಾಸ್ತವದ ಅರಿವಾಗುತ್ತದೆ. ಭಾಷೆಯ ರಕ್ಷಣೆಗಾಗಿ ಟೊಂಕಕಟ್ಟಿ ನಿಲ್ಲುವ ಕನ್ನಡಪರ ಸಂಘಟನೆಗಳು ಮತ್ತು ಭಾಷೆಯ ಉಳಿವಿಗಾಗಿ ಹೋರಾಡುವ ಚಿಂತಕರು ಮೂಲಭೂತವಾಗಿ ಯೋಚಿಸಬೇಕಾಗಿರುವುದು ಈ ನಿಟ್ಟಿನಲ್ಲಿ. ಒಂದು ಜನಸಮುದಾಯದ ಅಸ್ತಿತ್ವ ನಿರ್ಧಾರವಾಗುವುದು ಸಮಾಜೋ–ಆರ್ಥಿಕ ನೆಲೆಗಟ್ಟಿನಲ್ಲಿ ಮಾತ್ರ. ಈ ಅಸ್ತಿತ್ವವನ್ನು ಕಾಪಾಡಿಕೊಂಡ ನಂತರವೇ ಭಾಷೆಯ ಪ್ರಶ್ನೆ ಪ್ರಧಾನವಾಗುತ್ತದೆ. ಕರ್ನಾಟಕದ ಪ್ರಸ್ತುತ ಸಂದರ್ಭದಲ್ಲಿ ನಮ್ಮ ಆದ್ಯತೆ ಯಾವುದು ಎಂದು ನಿರ್ಧರಿಸಬೇಕಾಗಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯೧
ದೂರವಾಣಿ : ೦೮೦ ೨೮೪೫೬/೫೫೫೫೦೫೫೫೬೦

ವ್ಯವಸ್ಥೆಯ ಗರ್ಭದೊಳಗೆ ಲೀನವಾಗುವ ಧ್ವನಿಗಳು

ರಾಜೇಶ್ ಸಾಲುಮರ

"ನೀನಾರು?" ದೆವ್ವ ಅವನನ್ನು ಕೇಳಿತು.

"ಹುಟ್ಟಿನಿಂದ ನಾನೊಬ್ಬ ದಲಿತ, ಎಲ್ಲ ಬಡವರೂ ನನ್ನ ಒಡಹುಟ್ಟಿದವರು ಓ.. ಈ ಭೂಮಿ ಎಷ್ಟು ಕುರೂಪವಾಗಿದೆ! ಜನರೆಷ್ಟು ದುಃಖಿಗಳಾಗಿದ್ದಾರೆ!"

ಬಿಸಿರಕ್ತದ ತರುಣ ನಾಯಕ ಜನರ ದುಃಖಕ್ಕೆ ಕಾರಣವಾಗಿರುವ ರಾಜನನ್ನು ಅವನಿರುವ ಮಹಲು, ಆ ವ್ಯವಸ್ಥೆಯನ್ನು ನಾಶ ಮಾಡಬೇಕೆಂಬ ಛಲದೊಡನೆ ಹೊರಡುತ್ತಾನೆ. ಆದರೆ ರಾಜನಿರುವ ಜಾಗಕ್ಕೆ ಹೋಗಬೇಕಾದರೆ ಮೂರು ಉಪ್ಪರಿಗೆ ಹತ್ತಿ ಹೋಗಬೇಕು. ಪ್ರತಿ ಉಪ್ಪರಿಗೆಯ ಬಾಗಿಲಲ್ಲಿ ಕಾವಲಿಗೆ ಒಂದು ದೆವ್ವವಿದೆ. ಅವು ಪ್ರತಿ ಬಾಗಿಲಿಗೂ ಲಂಚ ಕೇಳುತ್ತದೆ. ಲಂಚ ಕೊಟ್ಟರೂ ಅಡ್ಡಿಯಿಲ್ಲ. ಉಪ್ಪರಿಗೆ ಹತ್ತಿ ರಾಜನ ಬಳಿ ಹೋಗಬೇಕೆಂದು ತರುಣನ ಹಠ. ಸರಿ. ಮೊದಲ ಉಪ್ಪರಿಗೆ ಮೆಟ್ಟಿಲಿನ ದೆವ್ವ ಅವನ ಕಿವಿಯನ್ನು ಕೇಳುತ್ತದೆ. ಅವ ಕಿವಿಯನ್ನು ಕೊಡುತ್ತಾನೆ. ಕಿವಿ ಕೊಟ್ಟೊಡನೇ ಅವನಿಗೆ ಕೆಳಗೆ ಹಾಹಾಕಾರಪಡುತ್ತಿರುವ ಜನರ ಧ್ವನಿ ಕೇಳದಂತಾಗುತ್ತದೆ. ಎರಡನೇ ಉಪ್ಪರಿಗೆ ಮೆಟ್ಟಿಲಿನ ದೆವ್ವ ಅವನ ಕಣ್ಣನ್ನು ಕೇಳುತ್ತದೆ. ಆತ ನೀಡುತ್ತಾನೆ. ಜನರ ರಕ್ತ ಬಸಿಯುವ ಬೆತ್ತಲೆ ದೇಹಗಳು ಕಾಣದಾಗುತ್ತವೆ. ಮೂರನೇ ಉಪ್ಪರಿಗೆ ಮೆಟ್ಟಿಲ ದೆವ್ವ ಈ ಒಂದೇ ಉಪ್ಪರಿಗೆ ಹತ್ತಿದರೆ ಸೇಡು ತೀರಿಸಿಕೊಳ್ಳುತ್ತೀಯ, ಇದಕ್ಕಾಗಿ ಎರಡರಷ್ಟು ಲಂಚ ಕೊಡಬೇಕಾಗುತ್ತದೆ. ನಿನ್ನ ಹೃದಯ ಮತ್ತು ನೆನಪುಗಳನ್ನು ಕೊಡು ಎನ್ನುತ್ತದೆ. ರಾಜನ ಮೇಲೆ ಸೇಡು ತೀರಿಸಿಕೊಳ್ಳಲು ಏನು ಕೇಳಿದರೂ ಕೊಡಲು ಸಿದ್ಧವಾಗಿದ್ದ ಆತ ಹೃದಯ ಮತ್ತು ನೆನಪುಗಳನ್ನು ನೀಡುತ್ತಾನೆ. ಜನರಿಗೆ ತೀವ್ರವಾಗಿ ಮಿಡಿಯುತ್ತಿದ್ದ ಹೃದಯವನ್ನು, ಜನರ ಸಮುದಾಯದ ಜೊತೆಗಿನ ಎಲ್ಲ ಅನುಭವಗಳ ನೆನಪನ್ನು ಕಳೆದುಕೊಂಡುಬಿಡುತ್ತಾನೆ. ಹಾಗೆ ಕೊನೆ ಮೆಟ್ಟಿಲನ್ನು ಜಿಗಿದು ರಾಜನೊಂದಿಗೆ ನಿಂತು ರಾಜನ ಒಡ್ಡೋಲಗವನ್ನು ನೋಡುತ್ತಾನೆ. ರಾಜನ ವಿರುದ್ಧ ಕೂಗುತ್ತಿದ್ದ ಕಪ್ಪುಜನರ ಅಸಭ್ಯ ಗುಂಪನ್ನೂ ನೋಡುತ್ತಾನೆ. ಅವನಿಗೆ ಪ್ರತಿಭಟಿಸಬೇಕು ಅನಿಸುವುದಿಲ್ಲ. ರಾಜನ ಸ್ನೇಹ ಮಾಡಬೇಕೆನಿಸುತ್ತದೆ. ಆಗ..

"ನೀನಾರು?" ದೆವ್ವ ಅವನನ್ನು ಕೇಳಿತು.

"ಹುಟ್ಟಿನಿಂದ ನಾನೊಬ್ಬ ರಾಜಕುಮಾರ! ದೇವತೆಗಳು ನನ್ನ ಒಡಹುಟ್ಟಿದವರು. ಓ... ಈ ಭೂಮಿ ಎಷ್ಟು ಸುಂದರವಾಗಿದೆ. ಜನರು ಎಷ್ಟು ಸುಖಿಗಳಾಗಿದ್ದಾರೆ!"

ಇದು ಪ್ರೊ. ಬಿ.ವಿ. ವೀರಭದ್ರಪ್ಪನವರು ಅನುವಾದಿಸಿರುವ ಬಲ್ಗೇರಿಯಾದ ಹ್ರಿಸ್ಟೋ ಸ್ಮಿರ್ನೇನ್‌ಸ್ಕಿಯಾ ಬರೆದ 'ಮೂರು ಮೆಟ್ಟಿಲ ಕಥೆ'ಯ ಸಂಕ್ಷಿಪ್ತ ರೂಪ. ಚರಿತ್ರೆಯಲ್ಲಿ ಶಕ್ತಿ ರಾಜಕಾರಣವು ಜನಪರ ಚಳವಳಿಗಳನ್ನು ಚಳವಳಿಗಾರರನ್ನು ಪಳಗಿಸಿ, ತನ್ನ ಪರವಾಗಿ ನಿಲ್ಲುವಂತೆ ಮಾಡಿರುವುದನ್ನು ಈ ಕಥೆ ಮಾರ್ಮಿಕವಾಗಿ ವಿವರಿಸುತ್ತದೆ. ಡಾ.ರಹಮತ್ ತರಿಕೆರೆಯವರು, ಪ್ರಭುತ್ವಗಳನ್ನು ಕಟುವಾಗಿ ವಿಡಂಬಿಸುತ್ತಿದ್ದ, ಜನರ ಅಸಂತೋಷಗಳಿಗೆ ಪ್ರತಿಭಟನೆಯ ರೂಪ ಕೊಡುತ್ತಿದ್ದ ಎಷ್ಟೋ ಸೂಫಿ ಸಂತರಿಗೆ ಮಧ್ಯಕಾಲೀನ ದೊರೆಗಳು ಅರಮನೆ

ಈ ಮೂರು ದಶಕಗಳಲ್ಲಿ ದಲಿತ ಚಳವಳಿ ಸಾಗಿಬಂದ ಹಾದಿಯನ್ನು ಗಮನಿಸಬೇಕು. ಚಳವಳಿಯ ದುರ್ಬಲ ಜಾಗಗಳನ್ನು ಪತ್ತೆ ಮಾಡಿದ ವ್ಯವಸ್ಥೆ ಚಳವಳಿಯನ್ನು ಭ್ರಷ್ಟಗೊಳಿಸಿದ್ದಷ್ಟೇ ಅಲ್ಲ. ನಾಯಕರ ನಾಲಿಗೆಗೆ ಸುಖ ಭೋಗದ ಸಿಹಿಯನ್ನು ತಾಗಿಸಿತು. ಪರಿಣಾಮವಾಗಿ ನಾಯಕರೆಲ್ಲ ರಾಜಕೀಯ ಪಕ್ಷದಲ್ಲಿ ಟಿಕೆಟ್ ಗಿಟ್ಟಿಸಿಕೊಂಡು ಶಾಸಕ, ಮಂತ್ರಿಗಳಾದರು. ದಲಿತ ಬುದ್ಧಿಜೀವಿಗಳೆನಿಸಿಕೊಂಡವರು ಅಕಾಡೆಮಿ, ನಿಗಮ ಮಂಡಳಿ, ಪ್ರಾಧಿಕಾರದ ಅಧ್ಯಕ್ಷರಾಗಿ, ವಿಧಾನ ಪರಿಷತ್‌ನ ಸದಸ್ಯರಾಗಿ ಗೂಟದ ಕಾರು ಪಡೆದುಕೊಂಡರು.

ಯಿಂದ ಸಕಲ ಸೌಲಭ್ಯಗಳನ್ನು ಒದಗಿಸಿ ಅವರ ಗಂಟಲನ್ನು ಪ್ರಭುತ್ವ ಪರವಾಗಿರುವಂತೆ ಮಾಡಿ, ಪಳಗಿಸಿದರ ಬಗ್ಗೆ ದಾಖಲಿಸುತ್ತಾರೆ.

ಈ ಮೇಲಿನ ಕಥೆಯ ನಾಯಕನಂತೆ ಯಾವುದನ್ನು ವಿರೋಧಿ ಸಲಾಗುತ್ತಿತ್ತೋ ಅದೇ ತಾನಾಗಿಬಿಡುವ, ವ್ಯವಸ್ಥೆಯೊಂದಿಗೆ ರಾಜಿಯಾದ ಚಳವಳಿ, ಚಳವಳಿಗಾರರೆಷ್ಟೋ. ನಮ್ಮ ಮುಂದಿರುವ ದಲಿತ ಚಳವಳಿ ಮತ್ತದರ ನಾಯಕರು ಇದಕ್ಕೊಂದು ನಿದರ್ಶನ. ದಲಿತ ಚಳವಳಿ ಹುಟ್ಟಿದಾಗಿನ ಹೋರಾಟದ ವಿಧಾನ, ಅದರ ಘೋಷಣೆ, ಅದು ಕೊಟ್ಟ ಸಾಹಿತ್ಯ ಗಮನಿಸಿದರೆ, ಈ ಕಥೆಯ ನಾಯಕನಾಡಿದ ಮೊದಲ ಮಾತಿನಂತೆ ಕೇಳುತ್ತದೆ. 'ಯಾರಿಗೆ ಬಂತು ಎಲ್ಲಿಗೆ ಬಂತು, ನಲವತ್ತೇಳರ ಸ್ವಾತಂತ್ರ್ಯ?' ಎಂದು ಈ ಸ್ವಾತಂತ್ರ್ಯವೇ ಒಂದು ಕಪಟ ಎನ್ನುತ್ತಿತ್ತು. 'ಭೂಮಿ ದಕ್ಕದೆ ಬಾಧೆ ತೀರದು' ಎಂದು ಭೂ ಹೋರಾಟಕ್ಕೆ ಕರೆ ನೀಡುತ್ತಿತ್ತು. 'ಮತದ ಮದದಲ್ಲಿ ಮಣ್ಣಾಗಬೇಡ' ಎಂದು ಮತಾಂತರ ವಿಮೋಚನೆಯ ದಾರಿಯಲ್ಲ ಎನ್ನುತ್ತಿತ್ತು, 'ಯಾವ ದೇಶವಾದರೂ, ಯಾವ ಭಾಷೆಯಾದರೂ ಬಡವರೆಲ್ಲರೂ ಒಂದೇ, ಬಾಧೆ ಎಲ್ಲವೂ ಒಂದೇ' ಎಂದು ದುಡಿಯುವ ಜನರೆಲ್ಲಾ ಒಟ್ಟಾಗಬೇಕಾದ ಅನಿವಾರ್ಯ ಹಾಗೂ 'ಓಟು ಹಾಕುವುದ ಬಿಟ್ಟು ಹೋರಾಟ ಮಾಡಿರಣ್ಣ' ಎಂದು ಪ್ರತಿಭಟನೆಗೆ ಜನರನ್ನು ಅಣಿಗೊಳಿಸುತ್ತಿತ್ತು. ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕಥೆಯ ಕರಾಳ ನೆನಪನ್ನು ಹೊತ್ತು 'ಸಮ ಸಮಾಜದೆಡೆಗೆ ನಮ್ಮ ನಡಿಗೆ' ಎಂದು ಅಸಮಾನತೆಯನ್ನು ಹೂತುಬಿಡಲು ಭುಗಿಲೆದ್ದ ಬೆಂಕಿಯ ಜ್ವಾಲೆಗಳಾಗಿ ಚಳವಳಿ ಸಾಗುತ್ತಿತ್ತು. ಆಗ ಚಳವಳಿಗೆ ಜನಸಮುದಾಯದೊಂದಿಗೆ ಒಡನಾಟವಿತ್ತು. ನಾಯಕರು ಜನರೊಳಗೆ ಹುಟ್ಟಿ ಬರುತ್ತಿದ್ದರು.

ಆದರೆ ವ್ಯವಸ್ಥೆ ಈ ಕಥೆಯ ದೆವ್ವದಂತೆ ತನಗೆದುರಾಗುವ ಧ್ವನಿಯನ್ನು ಬಹಳ ಜಾಣತನದಲ್ಲಿ ಪಳಗಿಸಿ ತನ್ನ ಪರವಾಗಿರು ವಂತೆಯೂ ಜನರನ್ನು ದ್ವೇಷಿಸುವಂತೆಯೂ ಪರಿವರ್ತಿಸಿಬಿಡುತ್ತದೆ. ಈ ಮೂರು ದಶಕಗಳಲ್ಲಿ ದಲಿತ ಚಳವಳಿ ಸಾಗಿಬಂದ ಹಾದಿಯನ್ನು ಗಮನಿಸಬೇಕು. ಚಳವಳಿಯ ದುರ್ಬಲ ಜಾಗಗಳನ್ನು ಪತ್ತೆ ಮಾಡಿದ ವ್ಯವಸ್ಥೆ ಚಳವಳಿಯನ್ನು ಭ್ರಷ್ಟಗೊಳಿಸಿದ್ದಷ್ಟೇ ಅಲ್ಲ. ನಾಯಕರ ನಾಲಿಗೆಗೆ ಸುಖಭೋಗದ ಸಿಹಿಯನ್ನು ತಾಗಿಸಿತು. ಪರಿಣಾಮವಾಗಿ ನಾಯಕರೆಲ್ಲ ರಾಜಕೀಯ ಪಕ್ಷದಲ್ಲಿ ಟಿಕೆಟ್ ಗಿಟ್ಟಿಸಿಕೊಂಡು ಶಾಸಕ, ಮಂತ್ರಿಗಳಾದರು. ದಲಿತ ಬುದ್ಧಿಜೀವಿಗಳೆನಿಸಿಕೊಂಡವರು ಅಕಾಡೆಮಿ, ನಿಗಮ ಮಂಡಳಿ, ಪ್ರಾಧಿಕಾರದ ಅಧ್ಯಕ್ಷರಾಗಿ, ವಿಧಾನ ಪರಿಷತ್‌ನ ಸದಸ್ಯರಾಗಿ ಗೂಟದ ಕಾರು ಪಡೆದುಕೊಂಡರು. ದಲಿತ ಕವಿ, ಸಾಹಿತಿಗಳೆಲ್ಲ ಪ್ರಭುತ್ವದ ಆಸ್ಥಾನ ಪಂಡಿತರಾಗಿ ಜನರ ನೋವಿಗೆ ಕಿವಿ, ಕಣ್ಣು, ಹೃದಯ ಮತ್ತು ನೆನಪುಗಳನ್ನು ಕಳೆದುಕೊಳ್ಳುತ್ತಾ ಸಾಗಿದರು. ಹಂತಹಂತವಾಗಿ ತನ್ನತನ ಕಳೆದುಕೊಂಡು ವ್ಯವಸ್ಥೆಯೊಂದಿಗೆ ಪ್ರತಿರೋಧ ಕಟ್ಟಿಕೊಳ್ಳದೆ ರಾಜಿಯಾದರು. ನಂತರ ಅವರೊಳಗಿನಿಂದ ಬಂದ ಧ್ವನಿ 'ದಲಿತರೆಲ್ಲ ಬೌದ್ಧ ಧರ್ಮಕ್ಕೆ ಮತಾಂತರವಾಗಬೇಕು', 'ದಲಿತರ ಮಕ್ಕಳಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕು', 'ದಲಿತರು ಬಂಡವಾಳಶಾಹಿಗಳಾಗಬೇಕು', 'ಜಾಗತೀಕರಣ ದಲಿತರಿಗೆ ವರ, ಜಾಗತೀಕರಣ ವಿರೋಧಿಗಳನ್ನು ಗಲ್ಲಿಗೇರಿಸಬೇಕು', 'ಗ್ರಾಮಕ್ಕೊಂದು ಬೌದ್ಧ

ಆಡಳಿತ ಯಂತ್ರಾಂಗದಲ್ಲಿರುವ ದಲಿತ ವ್ಯಕ್ತಿಯು ಇಡೀ ವ್ಯವಸ್ಥೆಯು ದಲಿತ ಪರವಾಗಿರುವಂತೆ ಪ್ರಭಾವ ಬೀರಬಲ್ಲನೆಂದು ನಂಬುವುದು ಅಮಾಯಕತನ. ಬದಲಾಗಿ ವ್ಯವಸ್ಥೆಯೊಂದರಲ್ಲಿ ವ್ಯಕ್ತಿಯೊಬ್ಬ ಏಳಿಗೆಯ ಏಣಿ ಏರುತ್ತಾ ಹೋಗುತ್ತಾನೆಂದರೆ ಅದು ವ್ಯವಸ್ಥೆಯ ಮೌಲ್ಯಗಳನ್ನು ಎತ್ತಿಹಿಡಿದದ್ದಕ್ಕಾಗಿ ವ್ಯವಸ್ಥೆ ಆತನಿಗೆ ಮಾಡುವ ಸನ್ಮಾನವಷ್ಟೇ ಆಗಿರುತ್ತದೆ. ಹೀಗಾಗಿ ಹಲವಾರು ಬಾರಿ ದಲಿತರೇ ಇತರರಿಗಿಂತ ಹೆಚ್ಚಿನ ಉತ್ಸಾಹದಿಂದ ವ್ಯವಸ್ಥೆಯನ್ನು ಎತ್ತಿಹಿಡಿಯುತ್ತಾರೆ. ವ್ಯವಸ್ಥೆಯು ವ್ಯಕ್ತಿಯನ್ನು ತನ್ನ ನಿಷ್ಠಾವಂತ ಸೇವಕನನ್ನಾಗಿ ರೂಪಾಂತರಿಸಿಕೊಳ್ಳುತ್ತದೆ. ವರ್ಗದ ದೃಷ್ಟಿಯಿಂದ ಹೇಳುವುದಾದರೆ, ದಲಿತ ರಾಜಕಾರಣಿಗಳು, ದಲಿತ ಅಧಿಕಾರಿಗಳು, ದಲಿತಪರ ಮಿತ್ರವರ್ಗವಾಗಿಯೇನೂ ಉಳಿಯುವುದಿಲ್ಲ.

ವಿಹಾರ ಕಟ್ಟಿಸಿ, ದಲಿತರು ಧ್ಯಾನ ಮಾಡಲು ಅನುವು ಮಾಡಿಕೊಡಬೇಕು', 'ದಲಿತರು ರಾಜಕೀಯ ಪಕ್ಷ ಕಟ್ಟಿ ದಲಿತ ರಾಜಕಾರಣಿಗಳಿಗೆ ಓಟು ಹಾಕುವುದರ ಮೂಲಕ ರಾಜ್ಯಾಧಿಕಾರ ಹಿಡಿಯಬೇಕು', 'ಖಾಸ ಗೀಕರಣವಿರಲಿ, ಖಾಸಗಿಯಲ್ಲಿ ಮೀಸಲಾತಿ ನೀಡಿ', 'ದಲಿತರು ಉನ್ನತ ಶಿಕ್ಷಣ ಪಡೆದು ಉನ್ನತ ಸರ್ಕಾರಿ ಹುದ್ದೆಗಳಿಗೇರಬೇಕು', 'ಈಗಿನ ವ್ಯವಸ್ಥೆ ವಿರೋಧಿಸ ಬಾರದು, ವಿರೋಧಿಸಿದರೆ ಸಂವಿಧಾನ ವಿರೋಧಿಸಿದಂತೆ, ಸಂವಿಧಾನ ವಿರೋಧಿಸಿದರೆ ಅಂಬೇಡ್ಕರರನ್ನೇ ವಿರೋಧಿಸಿದಂತೆ' ಇತ್ಯಾದಿ ಈ ಧ್ವನಿಗಳೆಲ್ಲ ಕಥೆಯ ನಾಯಕ ಕೊನೆಯಲ್ಲಿ ರಾಜನೊಂದಿಗೆ ರಾಜಿಯಾಗಿ ನುಡಿದ ನುಡಿಗಳಂತೆಯೇ ಕೇಳಿಸುತ್ತವೆ.

ವ್ಯವಸ್ಥೆಗೆ ತಾನು ಮಾಡಬಹುದಾದ ತಪ್ಪುಗಳನ್ನು ತನಗೆ ಹೇಳಬಲ್ಲ ಪಳಗಿದ ಹೋರಾಟಗಾರರು ಬೇಕು. ಅವರು ತೋರಿಸುವ ತನ್ನ ದೋಷಗಳನ್ನು ಸರಿಪಡಿಸಿಕೊಂಡು ಅದು ಮತ್ತಷ್ಟು ಸ್ಥಿರವಾಗುತ್ತದೆ. ತಾನು ಶೋಷಿತರ ಪರವಾಗಿದ್ದೇನೆ. ತಾನು ತಂದಿರುವ ಯೋಜನೆಗಳು ಕಾಯ್ದೆಗಳು ಎಲ್ಲಾ ಶೋಷಿತರ ಪರವಾಗಿದೆ ಎಂಬ ಭ್ರಮೆಯನ್ನು ಜನರಲ್ಲಿ ಹುಟ್ಟಿಸಬೇಕಾದ ಅನಿವಾರ್ಯತೆಯಿದೆ. ಅದಕ್ಕೆ ಅದು ಜನರ ಒಳಗಿನಿಂದಲೇ ನಾಯಕರನ್ನು ಬೇರ್ಪಡಿಸಿ ಪಳಗಿಸಿ, ತಾನು ಹೇಳಬೇಕಾದುದ್ದನ್ನು ಅವರಿಂದ ಹೇಳಿಸುತ್ತದೆ. ದಲಿತ ಚಿಂತಕ ಆನಂದ್ ತೇಲ್‌ತುಂಬ್ಡೆಯವರು ವ್ಯವಸ್ಥೆಯೊಂದಿಗೆ ಸೇರಿ ಹೋಗುವ ಅಪಾಯವನ್ನು ಕುರಿತು ಈ ರೀತಿ ಹೇಳುತ್ತಾರೆ: "ಆಡಳಿತ ಯಂತ್ರಾಂಗದಲ್ಲಿರುವ ದಲಿತ ವ್ಯಕ್ತಿಯು ಇಡೀ ವ್ಯವಸ್ಥೆಯು ದಲಿತ ಪರವಾಗಿರುವಂತೆ ಪ್ರಭಾವ ಬೀರಬಲ್ಲನೆಂದು ನಂಬುವುದು ಅಮಾಯಕತನ. ಬದಲಾಗಿ ವ್ಯವಸ್ಥೆಯೊಂದರಲ್ಲಿ ವ್ಯಕ್ತಿಯೊಬ್ಬ ಏಳಿಗೆಯ ಏಣಿ ಏರುತ್ತಾ ಹೋಗುತ್ತಾನೆಂದರೆ ಅದು ವ್ಯವಸ್ಥೆಯ ಮೌಲ್ಯಗಳನ್ನು ಎತ್ತಿಹಿಡಿದದ್ದಕ್ಕಾಗಿ ವ್ಯವಸ್ಥೆ ಆತನಿಗೆ ಮಾಡುವ ಸನ್ಮಾನವಷ್ಟೇ ಆಗಿರುತ್ತದೆ. ಹೀಗಾಗಿ ಹಲವಾರು ಬಾರಿ ದಲಿತರೇ ಇತರರಿಗಿಂತ ಹೆಚ್ಚಿನ ಉತ್ಸಾಹದಿಂದ ವ್ಯವಸ್ಥೆಯನ್ನು ಎತ್ತಿಹಿಡಿಯುತ್ತಾರೆ. ವ್ಯವಸ್ಥೆಯು ವ್ಯಕ್ತಿಯನ್ನು ತನ್ನ ನಿಷ್ಠಾವಂತ ಸೇವಕನನ್ನಾಗಿ ರೂಪಾಂತರಿಸಿಕೊಳ್ಳುತ್ತದೆ. ವರ್ಗದ ದೃಷ್ಟಿಯಿಂದ ಹೇಳುವುದಾದರೆ, ದಲಿತ ರಾಜಕಾರಣಿಗಳು, ದಲಿತ ಅಧಿಕಾರಿಗಳು, ದಲಿತಪರ ಮಿತ್ರವರ್ಗವಾಗಿಯೇನೂ ಉಳಿಯುವುದಿಲ್ಲ. ಅವರ ಈ ರೀತಿಯ ವರ್ಗಪರಿವರ್ತನೆಯು ಅವರನ್ನು ರಾಜಕೀಯವಾಗಿ ನಿಷ್ಕ್ರಿಯಗೊಳಿಸುತ್ತದೆ"

ಈ ನಿಟ್ಟಿನಲ್ಲಿ ದಲಿತ ಚಳವಳಿಯೊಂದು ಉದಾಹರಣೆಯಷ್ಟೇ. ಇದು ಜಾಗತಿಕ ಚೌಕಟ್ಟುಳ್ಳವಂತಹದ್ದು. ಜಗತ್ತಿನೆಲ್ಲೆಡೆ ರೈತ, ಕಾರ್ಮಿಕ, ಮಹಿಳಾ, ರಾಷ್ಟ್ರೀಯತಾ ಹೋರಾಟ, ಬಂಡಾಯ ಸಾಹಿತ್ಯ ಮುಂತಾದ ಜನಪರ ಚಳವಳಿಗಳೆಲ್ಲಾ ರಾಜಿಯಾಗಿ ಶೋಷಕರ ಪರ ವಕಾಲತ್ತು ವಹಿಸುತ್ತಿರುವುದು ಗೋಚರಿಸುತ್ತದೆ. ಈ ಇಡೀ ಕತೆ ಜನರಿಂದ ಬೇರ್ಪಟ್ಟು ವ್ಯವಸ್ಥೆಯೊಳಗೆ ಸೇರಿ ಅದನ್ನು ಬದಲಾಯಿಸಬಹುದೆಂದು ಹೊರಡುವ ಅಪಾಯದ ಎಚ್ಚರಿಕೆಯನ್ನು ಕೊಡುತ್ತದೆ. ಇದು ಚಳವಳಿಯಲ್ಲಿರುವ ಯುವಪೀಳಿಗೆಗೊಂದು ಪಾಠವಾಗಬೇಕಾಗಿದೆ. □

ಲೇಖಕರಿಗೆ ಸೂಚನೆ

ಲೇಖಕರು ತಮ್ಮ ಲೇಖನದ ಮೂಲ ಪ್ರತಿಯನ್ನು ಮಾತ್ರ ಕಳುಹಿಸಬೇಕು. ಈ ಹಿಂದೆಯೇ ತಿಳಿಸಿದ್ದರೂ ಕೆಲ ಲೇಖಕರು ಝೆರಾಕ್ಸ್ ಪ್ರತಿಗಳನ್ನು ಈಗಲೂ ಕಳುಹಿಸುತ್ತಿದ್ದಾರೆ. ಅವುಗಳನ್ನು ಯಾವ ಕಾರಣಕ್ಕೂ ಪರಿಗಣಿಸುವುದಿಲ್ಲ. ಬೇರೆ ಪತ್ರಿಕೆಗಳಿಗೆ ಕಳುಹಿಸಿದ ಲೇಖನವನ್ನು 'ಸಂವಾದ'ಕ್ಕೂ ಕಳುಹಿಸಿದ್ದಲ್ಲಿ ಆ ಬಗ್ಗೆ ತಿಳಿಸಬೇಕು. 'ಸಂಪಾದಕರೊಂದಿಗೆ ಸಂವಾದ'ಕ್ಕೆ ಬರೆಯುವ ಪತ್ರಗಳು ಕನಿಷ್ಠ ಒಂದು ಸಾವಿರ ಪದಗಳ ಮಿತಿಯಲ್ಲಿರಬೇಕು. ಉಳಿದ ಲೇಖನಗಳು ಎರಡು ಸಾವಿರ ಪದಗಳ ಆಸುಪಾಸಿನಲ್ಲಿರಬೇಕು. ಲೇಖನಗಳನ್ನು ಇ-ಮೈಲ್ ಮೂಲಕ ಕಳುಹಿಸುವವರು 'ನುಡಿ' ತಂತ್ರಾಂಶದಲ್ಲಿ ಟೈಪ್ ಮಾಡಿ Page Maker ಅಥವಾ Word File ನಲ್ಲಿ ಮಾತ್ರ ಇ-ಮೈಲ್ ಮಾಡಬೇಕು.-ಸಂ.

ನಿಷ್ಠುರ ರಾಜಕಾರಣಿ ರಂಗನಾಥ್

ಎಂ. ಜಿ. ರಂಗಸ್ವಾಮಿ

ಪ್ರಸಂಗ: 1

1953ರಿಂದ 1969ರವರೆಗೆ ಪ್ರಜಾ ಸಮಾಜವಾದಿ ಪಕ್ಷ (ಪಿಎಸ್‌ಪಿ)ದ ಪ್ರಧಾನಕಾರ್ಯದರ್ಶಿ ಆಗಿದ್ದ ಕೆ.ಎಚ್.ರಂಗನಾಥ್ 1969ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. 1971-72ರ ನಡುವೆ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷರಾಗಿ ನೇಮಕಗೊಂಡರು. ಪಕ್ಷಕ್ಕೆ ಸೇರ್ಪಡೆಗೊಂಡ ಮೂರೇ ವರ್ಷದಲ್ಲಿ 1972ರಿಂದ 1974ರವರೆಗೆ ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ನೇಮಕಗೊಂಡರು.

ಪ್ರಸಂಗ: 2

1984ರ ಸಂಸತ್ ಚುನಾವಣೆ. ಕೃಷಿ ಸಚಿವರು ಹಾಗೂ ಪ್ರಭಾವಿ ರಾಜಕಾರಣಿ ಬಿ.ಎಲ್.ಗೌಡ ಚಿತ್ರದುರ್ಗ ಸಾಮಾನ್ಯ ಕ್ಷೇತ್ರಕ್ಕೆ ಜನತಾಪಕ್ಷದ ಹುರಿಯಾಳು. ಹಿರಿಯೂರು ಮೀಸಲು ಕ್ಷೇತ್ರದ ಶಾಸಕರಾಗಿದ್ದ ಕೆ.ಎಚ್.ರಂಗನಾಥ್‌ರನ್ನು ಚಿತ್ರದುರ್ಗ ಸಾಮಾನ್ಯ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಪಕ್ಷ ಕಣಕ್ಕಿಳಿಸಿತು. ಸುಮಾರು 56 ಸಾವಿರ ಮತಗಳ ಅಂತರದಿಂದ ಎದುರಾಳಿ ಬಿ.ಎಲ್.ಗೌಡರನ್ನು ಮಣಿಸಿ ಸಾಮಾನ್ಯ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಗೊಂಡ ಪರಿಶಿಷ್ಟ ವರ್ಗದ ವ್ಯಕ್ತಿ ಎಂಬ ಹೆಗ್ಗಳಿಕೆ.

ಮೇಲಿನ ಎರಡು ಪ್ರಸಂಗಗಳು ಅಕ್ಟೋಬರ್ 18, 2011 ರಂದು ನಮ್ಮನ್ನಗಲಿದ ಜಾತ್ಯತೀತ ನಿಲುವಿನ ನೇರ, ನಿಷ್ಠುರ ನಡೆಯ ಮಾಜಿ ಸಚಿವ ಕೆ.ಎಚ್.ರಂಗನಾಥ್(86)ರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಸರಳತೆ, ಸಜ್ಜನಿಕೆಗೆ ಹೆಸರಾದ ಕೆ.ಎಚ್.ಆರ್. ನಾಡುಕಂಡ ಅಪರೂಪದ ರಾಜ ನೀತಿಜ್ಞ, ಗಾಂಧಿ, ಲೋಹಿಯಾ, ಡಾ.ಬಿ.ಆರ್.ಅಂಬೇಡ್ಕರ್, ಕುವೆಂಪು, ಆಚಾರ್ಯ ನರೇಂದ್ರದೇವ್ ಹಾಗೂ ಶಾಂತಿಧೂತ ಭಗವಾನ್ ಬುದ್ಧನ ವಿಚಾರಧಾರೆಯ ಗಾಢ ಪ್ರಭಾವಳಿಯಲ್ಲಿ ಮಾಗಿದವರು.

ಅವಿಭಜಿತ ಚಿತ್ರದುರ್ಗ ಜಿಲ್ಲೆ ಹರಿಹರದಲ್ಲಿ ಅಕ್ಟೋಬರ್ 20, 1926ರಲ್ಲಿ ಹರಿಹರಪ್ಪ-ಸಿದ್ದಮ್ಮ ದಂಪತಿಗಳ ಎರಡನೇ ಮಗನಾಗಿ ಜನಿಸಿದರು. ಹರಿಹರ ಹಾಗೂ ಜಗಳೂರಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣದ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಲ್ಲಿ ಪದವಿ ಹಾಗೂ ಮೈಸೂರು ವಿ.ವಿ.ಯಿಂದ ಕಾನೂನು ಪದವಿ ಪಡೆದರು. ತಂದೆ ಹರಿಹರಪ್ಪ ನವರ ಆಪ್ತ ಒಡನಾಡಿ ಹಾಗೂ ನಿಷ್ಠುರ ನಡೆಯ ನ್ಯಾಯವಾದಿ ಕೆ.ಕೆಂಚಪ್ಪನವರ ಮಾರ್ಗದರ್ಶನದಲ್ಲಿ ಬೆಂಗಳೂರಲ್ಲಿ ವಕೀಲಿ ಹಾಗೂ ರಾಜಕೀಯ "ಓಂ ನಾಮ" ದೀಕ್ಷೆ ಪಡೆದರು. ಎಸ್.ನಿಜಲಿಂಗಪ್ಪ ಮಾಜಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಪ್ರತಿ ಪಕ್ಷ ನಾಯಕರಾಗಿದ್ದ ಕೆ. ಕೆಂಚಪ್ಪನವರು ತಂದೆ ಸಮಾನ ಹಾಗೂ ಪ್ರೇರಕ ಶಕ್ತಿ ಎಂದು ಕೆ.ಎಚ್.ಆರ್. ಹಲವು ಬಾರಿ ಆತ್ಮೀಯರಲ್ಲಿ ಸ್ಮರಿಸಿದ್ದಾರೆ.

1940ರಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡ ಕೆ.ಎಚ್.ಆರ್. 1942ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಸೆರೆವಾಸದ ರುಚಿ ಕಂಡರು. ಸ್ವಾತಂತ್ರ್ಯ ನಂತರ ಏಕೀಕರಣ ಹೋರಾಟಕ್ಕೂ ಮೈಯೊಡ್ಡಿದರು. 1948ರಿಂದ 1952ರವರೆಗೆ ಪ್ರಜಾ ಸೋಷಲಿಸ್ಟ್ ಪಾರ್ಟಿ ಸದಸ್ಯರು. 1953-69ರ ವರೆಗೆ ರಾಜ್ಯ ಪಿಎಸ್‌ಪಿ ಪ್ರಧಾನ ಕಾರ್ಯದರ್ಶಿ. 1969ರಲ್ಲಿ ಕಾಂಗ್ರೆಸ್ ಪಕ್ಷ ಇಬ್ಭಾಗವಾದ ಸಂದರ್ಭದಲ್ಲಿ ಪ್ರಧಾನಿ ಇಂದಿರಾಗಾಂಧಿ ಅವರ ದಕ್ಷತೆ, ಅಭಿವೃದ್ಧಿಗೆ ಮನಸೋತು ಸಂಗಡಿಗರೊಂದಿಗೆ ಭಾರತೀಯ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡು ಕೊನೆತನಕ ಕಾಂಗ್ರೆಸಿಗರಾಗಿದ್ದರು.

1962ರಲ್ಲಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ಮೀಸಲು ಕ್ಷೇತ್ರದಿಂದ ಪಿಎಸ್‌ಪಿ ಉಮೇದುದಾರರಾಗಿ ಸ್ಪರ್ಧಿಸಿ ಪ್ರಥಮ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಇದೇ ಸಂದರ್ಭದಲ್ಲಿ ಇಂದಿನ ಕೇಂದ್ರದ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಪಿಎಸ್‌ಪಿ ಪಕ್ಷದಿಂದ ಶಾಸನ ಸಭೆ ಸದಸ್ಯರಾದರು. ಮತ್ತೆ ಮೂಡಿಗೆರೆ ವಿಧಾನಸಭೆ ಕ್ಷೇತ್ರದಿಂದ 1967ರಲ್ಲಿ ಪುನರಾಯ್ಕೆಗೊಂಡರು.

1969ರಲ್ಲಿ ಭಾರತೀಯ ಕಾಂಗ್ರೆಸ್ ಸೇರಿದ ಕೆ.ಎಚ್.ಆರ್. ಚಿತ್ರದುರ್ಗ ಜಿಲ್ಲೆ ಹಿರಿಯೂರು ಮೀಸಲು ಕ್ಷೇತ್ರದಿಂದ ಆಯ್ಕೆ ಗೊಂಡರು. 1984ರಲ್ಲಿ ಚಿತ್ರದುರ್ಗ ಸಾಮಾನ್ಯ ಲೋಕಸಭಾ ಕ್ಷೇತ್ರದಿಂದ ಆಯ್ಕೆಗೊಂಡು ರಾಷ್ಟ್ರದ ಗಮನ ಸೆಳೆದರು. 1994ರಲ್ಲಿ ಒಮ್ಮೆ ಮಾತ್ರ ಚುನಾವಣಾ ರಾಜಕೀಯದಲ್ಲಿ ವಿಫಲರಾದರು. 1999ರಲ್ಲಿ ಮತ್ತೆ ಆಯ್ಕೆಗೊಂಡು 2004ರ ತನಕ ಸಕ್ರೀಯ ರಾಜಕಾರಣದಲ್ಲಿದ್ದರು.

ನಲವತ್ತು ವರ್ಷಗಳ ಸುದೀರ್ಘ ಅವಧಿಗೆ ಸಕ್ರಿಯ ರಾಜಕಾರಣಿಯಾಗಿದ್ದ ಕೆ.ಎಚ್.ಆರ್.ರವರದ್ದು ಸಾರ್ವಜನಿಕ ಕ್ಷೇತ್ರದಲ್ಲಿ ಸ್ಮರಣೀಯ ಅರ್ಥಪೂರ್ಣ ನಡಿಗೆ. ಚಿತ್ರದುರ್ಗ ಜಿಲ್ಲೆಯಲ್ಲಿ ಶಿಸ್ತು, ದಕ್ಷತೆ, ಸರಳತೆ ಹೆಸರಾಗಿದ್ದ ಮಾಜಿ ಸಂಸದ ಜಗಲೂರು ಇಮಾಂಸಾಬ್, ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ, ಮಾಜಿ ಸಚಿವರಾದ ವಿ.ಮಸಿಯಪ್ಪ, ಬಿ.ಎಲ್.ಗೌಡ, ಹೋ.ಚಿ.ಬೋರಯ್ಯ, ಮುಲ್ಕಾಗೋವಿಂದರೆಡ್ಡಿ ನಂತರದ ಆದರ್ಶ ವ್ಯಕ್ತಿ ಕೆ.ಎಚ್.ರಂಗನಾಥ್. ಅವರು ಸಮಾಜವಾದಿ ಧುರೀಣರಾಗಿ ರೂಪುಗೊಳ್ಳಲು ಲೋಹಿಯಾ, ನರೇಂದ್ರದೇವ್, ಎಸ್.ಎಂ.ಜೋಷಿ, ಎಂ.ಎನ್.ರಾಯ್ ಮುಂತಾದ ಸಮಾಜವಾದಿ ಚಿಂತಕರು ಹಾಗೂ ಸೈದ್ಧಾಂತಿಕ ಬೆಂಬಲ ನೀಡಿದ ಹಿರಿ-ಕಿರಿಯ ಮಿತ್ರರಾದ ಶಾಂತವೇರಿ ಗೋಪಾಲಗೌಡ, ಎಸ್.ಎಂ.ಕೃಷ್ಣ, ಖಾದ್ರಿಶಾಮಣ್ಣ, ಬಾಸು ಕೃಷ್ಣಮೂರ್ತಿ ಸೇರಿದ್ದಾರೆ.

ರಂಗನಾಥ್ ಸಮಷ್ಟಿ ಪ್ರಜ್ಞೆಯ ಜನನಾಯಕ. ಅವರು ದಲಿತ ಸಮಾಜಕ್ಕೆ ಸೇರಿದ್ದು ಕೇವಲ ಆಕಸ್ಮಿಕ ಎಂಬಷ್ಟು ಜನಪರ, ಜೀವಪರ ವ್ಯಕ್ತಿ. 1984ರ ಲೋಕಸಭಾ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಗೊಂಡಿದ್ದು ನಿದರ್ಶನ. ಸವರ್ಣೀಯರ ಪರಿಸರದಲ್ಲಿ ವ್ಯಕ್ತಿತ್ವ ರೂಪಿಸಿಕೊಂಡ ರಂಗನಾಥ್ ಎಂದೂ ಮೇಲ್ಜಾತಿ ಕುರಿತು ಕಿಂಚಿತ್ ಅಸೂಯೆಯಾಗಲೀ, ದ್ವೇಷವಾಗಲಿ ಹೊಂದಿದವರಲ್ಲ. ಹಿಂದುಳಿದವರು, ದಮನಿತರಿಗೆ ಪ್ರಜಾ ಪ್ರಭುತ್ವ ವ್ಯವಸ್ಥೆಯಡಿ ಜೀವಿಸುವ ಅವಕಾಶ

ರಂಗನಾಥ್ ಸಮಷ್ಟಿ ಪ್ರಜ್ಞೆಯ ಜನನಾಯಕ. ಅವರು ದಲಿತ ಸಮಾಜಕ್ಕೆ ಸೇರಿದ್ದು ಕೇವಲ ಆಕಸ್ಮಿಕ ಎಂಬಷ್ಟು ಜನಪರ, ಜೀವಪರ ವ್ಯಕ್ತಿ. ೧೯೮೪ರ ಲೋಕಸಭಾ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಗೊಂಡಿದ್ದು ನಿದರ್ಶನ. ಸವರ್ಣೀಯರ ಪರಿಸರದಲ್ಲಿ ವ್ಯಕ್ತಿತ್ವ ರೂಪಿಸಿಕೊಂಡ ರಂಗನಾಥ್ ಎಂದೂ ಮೇಲ್ಜಾತಿ ಕುರಿತು ಕಿಂಚಿತ್ ಅಸೂಯೆಯಾಗಲೀ, ದ್ವೇಷವಾಗಲಿ ಹೊಂದಿದವರಲ್ಲ. ಹಿಂದುಳಿದವರು, ದಮನಿತರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಜೀವಿಸುವ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ತಮ್ಮ ಜೀವಿತದುದ್ದಕ್ಕೂ ಶ್ರಮಿಸಿದರು.

ಕಲ್ಪಿಸುವ ನಿಟ್ಟಿನಲ್ಲಿ ತಮ್ಮ ಜೀವಿತದುದ್ದಕ್ಕೂ ಶ್ರಮಿಸಿದರು. ಸಮಾಜದ ಅಸಮಾನತೆಗೆ ತಾತ್ವಿಕವಾಗಿ ಸೆಣೆಸಿದವರು. ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಪ್ರಗತಿಪರ ಸಮಾಜವಾದಿ ಚಿಂತನೆಗಳಿಂದ ಉತ್ತೇಜನಗೊಂಡ ಅವರು ಡಿ.ದೇವರಾಜ್ ಅರಸು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಗೇಣಿದಾರರ ಪರವಾಗಿ ಕಾಯ್ದೆ ರೂಪಿಸುವ ಮಹತ್ವದ ಕಾರ್ಯದಲ್ಲಿ ಪಾಲ್ಗೊಂಡು ಬೆಂಬಲಿಸಿದರು.

'ಶಾಸನ ಸಭೆ ರಾಜಕೀಯ ಜ್ಞಾನದ ಜಲಾಶಯ' ಎಂಬ ನಿಲುವಿನ ಕೆ.ಎಚ್.ಆರ್. ಶಾಸನಸಭೆಯಲ್ಲಿ ಸಾಕಷ್ಟು ಹೋಂವರ್ಕ್‌ನೊಂದಿಗೆ ರಚನಾತ್ಮಕ ಟೀಕಾ ಪ್ರಹಾರ ನಡೆಸುತ್ತಿದ್ದರು. ತಮ್ಮದೇ ಪಕ್ಷ ಅಧಿಕಾರದಲ್ಲಿದ್ದಾಗ ಮಂಡಣೆಗೂ ಮುನ್ನ ಬಜೆಟ್ ಪ್ರತಿಗಳು ಸೋರಿಕೆ ಆಗಿದ್ದನ್ನು ದಾಖಲೆ ಸಮೇತ ಸಭೆಯಲ್ಲಿ ದನಿ ಎತ್ತುವ ಮೂಲಕ ಸರಕಾರವನ್ನು ಪೇಚಿಗೆ ಸಿಲುಕಿಸಿದ್ದರು. ಸಾಮಾಜಿಕವಾಗಿ ಅಪಾರ ನಂಬಿಕೆ ಇರಿಸಿಕೊಂಡಿದ್ದ ಅವರು ಮಾನಸಿಕ, ದೈಹಿಕವಾಗಿ ಕ್ಷೋಭೆಯುಂಟಾದರೂ ಸಹ ಸಂಯಮದ ಪರಿಧಿ ದಾಟಿ ವರ್ತಿಸಿದವರಲ್ಲ. ಯಾರನ್ನೇ ಆದರೂ ವ್ಯಕ್ತಿಗತವಾಗಿ ಟೀಕೆ ಮಾಡಿದ್ದಿಲ್ಲ. ಕೆಪಿಸಿಸಿಗೆ ಎರಡನೇ ಅವಧಿಗೆ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅವರ ಮೇಲೆ ದೈಹಿಕ ಹಲ್ಲೆ ನಡೆದಾಗಲೂ ಸಹ ತಮ್ಮ ಸ್ಥೈರ್ಯ ಕಳೆದುಕೊಳ್ಳದೆ ವಿವೇಚನೆ, ಸಂಯಮದಿಂದ ವರ್ತಿಸಿದ್ದು ಅವರ ಘನ ವ್ಯಕ್ತಿತ್ವದ ಪ್ರತೀಕ. ಜನಪರ ಕಾಳಜಿಯ ಕೆ.ಎಚ್.ಆರ್. ದಕ್ಷ ಹಾಗೂ ಕಳಂಕ ಮುಕ್ತ ರಾಜಕಾರಣ ನಡೆಸಿದರು. ರಾಜಕೀಯ ಗದ್ದುಗೆ ಹಿಡಿವ ಸಲುವಾಗಿ ಅಡ್ಡ ಹಾದಿ ಸವೆಸುವ ಜಾಯಮಾನ ಅವರದಾಗಿರಲಿಲ್ಲ. ಪ್ರಚಾರ, ಪ್ರತಿಷ್ಠೆ, ಸ್ವಜನಪಕ್ಷಪಾತದಿಂದ ದೂರವಿದ್ದರು. ಮಕ್ಕಳನ್ನು ರಾಜಕೀಯವಾಗಿ ಪ್ರತಿಷ್ಠಾಪಿಸುವಷ್ಟು ಸ್ವತ: ಪ್ರಭಾವ ಹೊಂದಿದ್ದರೂ ವಂಶಪಾರಂಪರ್ಯ ರಾಜಕಾರಣಕ್ಕೆ, ಕೆಲವೊಮ್ಮೆ ಸ್ನೇಹಿತರ ಆಗ್ರಹಪೂರ್ವಕ ಒತ್ತಡದವಿದ್ದಾಗ್ಯೂ, ಆಶಿಸಲಿಲ್ಲ.

ಪರಿಶಿಷ್ಟರಿಗೆ ಸಂವಿಧಾನ ಕೊಡಮಾಡಿರುವ ಮೀಸಲಾತಿ ಸುಧೀರ್ಘ ಅವಧಿಗೆ ವಿಸ್ತರಣೆಯಾಗಬೇಕೆಂಬ ವಾದದ ಕಟು ವಿರೋಧಿಯಾಗಿದ್ದ ರಂಗನಾಥ್ ಅಪಾರ ನಿಷ್ಠೂರಕ್ಕೂ ಒಳಗಾಗಬೇಕಾಯ್ತು. ಇದು ಅವರ ಖಚಿತ ಜಾತ್ಯತೀತ ನಿಲುವಿಗೆ ಹಿಡಿದ ಕನ್ನಡಿ.

ಸರಿಸುಮಾರು ಮೂರು ದಶಕ ಕಾಲ ರಾಜ್ಯದ ಸಚಿವರಾಗಿದ್ದ ರಂಗನಾಥ್ ಸ್ವಕ್ಷೇತ್ರದ ಅಭಿವೃದ್ಧಿಗಷ್ಟೇ ಗಮನ ಹರಿಸಲಿಲ್ಲ. ರಾಜ್ಯದ ಸಮಗ್ರ ಅಭಿವೃದ್ಧಿಯತ್ತ ಕಣ್ಣು ನೆಟ್ಟರು. ಅಧಿಕಾರ, ಪ್ರಭಾವ ಇದ್ದಾಗ್ಯೂ ಕ್ಷೇತ್ರಕ್ಕೆ ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸಲಿಲ್ಲ ಎಂಬ ಕ್ಷೇತ್ರದ ಜನತೆಯ ಮುನಿಸಿಗೂ ಕಾರಣರಾಗಬೇಕಾಯ್ತು.

ರಂಗನಾಥ್ ಸದಾ ರಾಜಕೀಯವನ್ನೇ ಉಸಿರಾಡಿದವರಲ್ಲ. ಕಲೆ, ಸಂಸ್ಕೃತಿ, ಸಾಹಿತ್ಯ, ಇತಿಹಾಸದ ಬಗ್ಗೆ ಅಪಾರವಾಗಿ ಅರಿವು ಹೊಂದಿದ್ದರು. ಬುದ್ಧ, ಬಸವ, ಡಾ.ಬಿ.ಆರ್.ಅಂಬೇಡ್ಕರ್, ರಾಮಮನೋಹರ ಲೋಹಿಯಾ, ಗಾಂಧಿ, ಕುವೆಂಪು ವಿಚಾರಧಾರೆಯನ್ನು ಆಳವಾಗಿ ಅಧ್ಯಯನ ಮಾಡಿದ್ದರು. ರಾಜಕೀಯ ಜಂಜಾಟದ ನಡುವೆಯೂ ಹೊಸ ಮೌಲಿಕ ಗ್ರಂಥ ಬಿಡುಗಡೆಗೊಂಡಾಗ ಓದಿ ಆತ್ಮೀಯರ ಜತೆ ಚರ್ಚಿಸುವ ವ್ಯವಧಾನ ಹೊಂದಿದ್ದರು. ಸಾಹಿತಿಗಳಾದ ಪ್ರೊ.ಯು.ಆರ್. ಅನಂತಮೂರ್ತಿ, ಡಾ.ಕಾಳೇಗೌಡ, ಪ್ರೊ.ಬರಗೂರು ರಾಮಚಂದ್ರಪ್ಪ, ಮಾಜಿ ಸಚಿವರಾದ ಹಾರನಹಳ್ಳಿ ರಾಮ

ಮಾಜಿಪ್ರಧಾನಿ ಇಂದಿರಾಗಾಂಧಿಯವರೊಂದಿಗೆ ರಂಗನಾಥ್

ಮಾಜಿ ಉಪಪ್ರಧಾನಿ ಜಗಜೀವನರಾಂರೊಂದಿಗೆ

ಮಾಜಿ ರಾಷ್ಟ್ರಪತಿ ಶಂಕರ್‌ದಯಾಳ್ ಶರ್ಮರೊಂದಿಗೆ

ಜೀವನ ಸಂಗಾತಿಯೊಂದಿಗೆ

ಸ್ವಾಮಿ, ಎಂ.ಪಿ.ಪ್ರಕಾಶ್‌ರಂತ ಸಾಹಿತ್ಯ, ರಾಜಕೀಯ ಕ್ಷೇತ್ರದ ಪ್ರಮುಖರು ಕೆ.ಎಚ್.ಆರ್. ಅಭಿಪ್ರಾಯಗಳಿಗೆ ತಲೆದೂಗುತ್ತಿದ್ದರು. ಈ ನನ್ನ ಮಾತಿಗೆ ಸಂವಾದಿಯಾಗಿ ಒಂದು ಪ್ರಸಂಗ ಹೇಳಿದರೆ ಒಳಿತು: ಕನ್ನಡ ವಿಷಯದಲ್ಲಿ ಸ್ನಾತಕ ಪದವಿ ಪಡೆದು ಎಸ್.ಐ. ಹುದ್ದೆಗೆ ಅರ್ಜಿ ಸಲ್ಲಿಸಿದ್ದ ನನ್ನ ಹಿರಿಯ ಮಿತ್ರರೊಬ್ಬರು 1982ರಲ್ಲಿ ರಾಜಕೀಯ ಪ್ರಭಾವಕ್ಕಾಗಿ ವಿಧಾನಸಭೆ ಸ್ಪೀಕರ್ ಆಗಿದ್ದ ಕೆ.ಎಚ್.ಆರ್. ಭೇಟಿ ಆಗಿದ್ದರು. ಬಹುತೇಕ ಇತರೆ ರಾಜಕಾರಣಿಗಳ ರೀತಿ ಹುದ್ದೆ ಗಿಟ್ಟಿಸುವ ಸಲುವಾಗಿ ಆದಾನ–ಪ್ರದಾನ ಕುರಿತು ಅವರು ಮಾತನಾಡಬಹುದೆಂಬ ನಿರೀಕ್ಷೆ ಮಿತ್ರರದ್ದು. ಸಾಹಿತ್ಯ ಪ್ರಿಯರಾದ ಕೆ.ಎಚ್.ಆರ್. ಭೇಟಿ ವೇಳೆ ಕುವೆಂಪು ಅವರ ರಾಮಾಯಣದರ್ಶನಂ, ವಿಚಾರಧಾರೆ ಕುರಿತು ಮಿತ್ರರಿಂದ ಅಭಿಪ್ರಾಯ, ಅನಿಸಿಕೆ ಪಡೆಯಲು ಮುಂದಾಗಿದ್ದರು. ರಾಜಕಾರಣಿ ರಂಗನಾಥ್ ಸಾಹಿತ್ಯ ಕುರಿತು ಹೆಚ್ಚು ಓದಿರಲು ಸಾಧ್ಯವಿಲ್ಲ ಎಂದು ಬಗೆದಿದ್ದ ನನ್ನ ಮಿತ್ರರಿಗೆ ಆಘಾತ ಕಾದಿತ್ತು. ಹೇಗೋ ಅವರಿಂದ ಬಿಡುಗಡೆಗೊಂಡು ಹೊರಬಂದ ಮಿತ್ರರು ಮತ್ತೆಂದೂ ಅವರ ಮನೆಗೆ ಎಡತಾಕಲಿಲ್ಲ. 'ಎಸ್.ಐ. ಆಗೋದು ಬೇಡ, ಏನೂ ಬೇಡ' ಎಂದು ತೀರ್ಮಾನಿಸಿ ಕಾಲೇಜು ಒಂದರಲ್ಲಿ ಉಪನ್ಯಾಸಕರಾಗಿದ್ದಾರೆ. ಇದು ಮಂತ್ರಿ ರಂಗನಾಥ್ ರವರಿಗೆ ಸಿದ್ಧಿಸಿದ್ದ ಸಾಹಿತ್ಯ, ಸಾಮಾಜಿಕ, ರಾಜಕೀಯ ಜ್ಞಾನಕ್ಕೆ ಹಿಡಿದ ಸಣ್ಣ ನಿದರ್ಶನ.

ಶಾಂತಿ ಪ್ರಿಯರಾದ ರಂಗನಾಥ್ ಸಮಾಜದಲ್ಲಿ ಶಾಂತಿ, ಸೌಹಾರ್ದತೆಯ ಶಕ್ತಿಗಳು ಬಲಗೊಳ್ಳುವುದನ್ನು ಬಯಸುತ್ತಿದ್ದರು. ಹಾಗಾಗಿ ಶಾಂತಿ ನಿಯೋಗಗಳ ವಕ್ತಾರರಾಗಿ ರಷ್ಯಾ, ಯೂರೋಪ್ ರಾಷ್ಟ್ರಗಳಿಗೆ ಭೇಟಿ ನೀಡಿದ್ದರು. ಸ್ವಕ್ಷೇತ್ರದಲ್ಲೂ ಜಾತಿ–ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ಸಂಘರ್ಷ ಏರ್ಪಡಲು ಅವಕಾಶ ನೀಡಲಿಲ್ಲ.

ಭ್ರಷ್ಟಾಚಾರದ ಕಡುವಿರೋಧಿಯಾದ ರಂಗನಾಥ್ ತಮ್ಮ ಕ್ಷೇತ್ರದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ನೀಡಿದವರಲ್ಲ. ಅಧಿಕಾರಿ ವರ್ಗದವರ ಮೇಲೆ ಸದಾ ಹಿಡಿತ ಸಾಧಿಸಿದ್ದರು. ಉತ್ತಮ ಕೆಲಸ ಮಾಡುವ ಅಧಿಕಾರಿಗಳನ್ನು ಕರೆಸಿ ಬೆನ್ನು ತಟ್ಟುತ್ತಿದ್ದರು. ಕಾಲಹರಣ ಮಾಡುವ ಅಧಿಕಾರಿ ಅಥವಾ ಬೆಂಬಲಿಗನೇ ಇರಲಿ ಅವರೆಂದೂ ಸಹಿಸುತ್ತಿರಲಿಲ್ಲ. ಪ್ರಚಾರಕ್ಕಾಗಿ ಸಾರ್ವಜನಿಕ ಹಣದಲ್ಲಿ ನಿರ್ಮಿಸಿದ ಕಟ್ಟಡದ ಶಂಕುಸ್ಥಾಪನೆ. ಉದ್ಘಾಟನೆಗೆಂದು ಸರಕಾರಿ ಹಣ ಪೋಲಾಗುವುದನ್ನು ಸಹಿಸಲಿಲ್ಲ. ಪ್ರಚಾರಕ್ಕೆ ಹಂಬಲಿಸದ ಅವರು ಮಾಧ್ಯಮ ಮಿತ್ರರಿಂದ ದೂರವಿದ್ದರೆಂದೇ ಹೇಳಬೇಕು. ಕೆ.ಎಚ್.ಆರ್. ಒಬ್ಬ ಅದೃಷ್ಟವಂತ ರಾಜಕಾರಣಿ ಎಂಬುದು ಕ್ಷೇತ್ರದ ಜನರು ಅನಿಸಿಕೆಯಾಗಿತ್ತು. ಯಾವತ್ತೂ ಒಂದು ರೂ.ನ ನೆರವೂ ನಿರೀಕ್ಷಿಸದೆ ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ನೂರಾರು ಬೆಂಬಲಿಗರನ್ನು ಕ್ಷೇತ್ರದಲ್ಲಿ ಹೊಂದಿದ್ದರೆಂದರೆ ಅತಿಶಯೋಕ್ತಿಯಲ್ಲ. ಪ್ರಚಾರ, ವಾಹನ, ಹಿಂಬಾಲಕರ ವೆಚ್ಚ ಇತ್ಯಾದಿಗೆ ಚುನಾವಣೆ ವೇಳೆ ಸರಕಾರ ನಿಗಧಿಪಡಿಸಿದ ಹಣಕ್ಕಿಂತ ಹೆಚ್ಚು ವೆಚ್ಚ ಮಾಡುವ ಪ್ರಸಂಗ ಅವರಿಗೆ ಒದಗಿ ಬರಲಿಲ್ಲ ಎಂಬುದು ಸೋಜಿಗವಾದರೂ ಸತ್ಯ.

ಆದಾಗ್ಯೂ ರಂಗನಾಥ್ ಅನ್ಯಾಯ, ಭ್ರಷ್ಟಾಚಾರ, ಸೋಮಾರಿತನ ಕಂಡಾಗ ಉರಿದು ಬೀಳುತ್ತಿದ್ದರು. ಭೇಟಿಗೆ ಬಯಸುವ ವ್ಯಕ್ತಿ ಯಾರೇ ಇರಲಿ, ಆತನ ನಡವಳಿಕೆ, ಮಾತು ಚೆನ್ನಾಗಿರಬೇಕು, ಬಟ್ಟೆ ಶುಚಿಯಾಗಿರಬೇಕೆಂದು ನಿರೀಕ್ಷಿಸುತ್ತಿದ್ದರು.

ರಾಷ್ಟ್ರ ಹಾಗೂ ರಾಜ್ಯ ರಾಜಕಾರಣ ರಾಡಿಯಾಗಿರುವ ಈ ದಿನಗಳಲ್ಲಿ ನಿಷ್ಠುರ, ಸೂಕ್ಷ್ಮ ಸಂವೇದನೆಯ ರಂಗನಾಥ್ ರಾಜಕೀಯ ದೊಂಬರಾಟದ ಸಂತೆಯಲ್ಲಿ ನಿಂತ ಸಂತನಂತೆ ಕಾಣುತ್ತಾರೆ. ಅದಕ್ಕಾಗಿಯೇ ಅಭಿಮಾನಿಗಳು 'ಬುದ್ಧಪ್ರಜ್ಞ' ಹಾಗೂ 'ಪರಿಪೂರ್ಣ' ಎಂಬ ಎರಡು ಅರ್ಥಪೂರ್ಣ ಅಭಿನಂದನಾ ಗ್ರಂಥಗಳ ಮೂಲಕ ಅವರಿಗೆ ನುಡಿಕಾಣಿಕೆ ನೀಡಿ ಗೌರವಿಸಿದ್ದಾರೆ. □

ಪರಿಸರ ಸಂರಕ್ಷಣೆ ಯಾರ ಹೊಣೆ?

ರವಿ ಯು. ಎಂ,

ಇಂದು ಪರಿಸರ, ಪರಿಸರ ಸಂರಕ್ಷಣೆ, ಪರಿಸರದ ಬಗೆಗಿನ ಜಾಗೃತಿ, ಜಾಗತಿಕ ತಾಪಮಾನ, ಪರಿಸರ ಕುರಿತ ಚರ್ಚೆಗಳು ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿರುವ ವಿಷಯಗಳಾಗಿವೆ. ಆಧುನೀಕರಣ ಮತ್ತು ಪಾಶ್ಚಾತ್ಯೀಕರಣದ ಪ್ರಭಾವ ದಟ್ಟವಾಗಿ ನಮ್ಮನ್ನು ಕಾಡುತ್ತಿದ್ದು, ದಿನನಿತ್ಯದ ಬದುಕಿನ ಪ್ರತಿ ಹಂತದಲ್ಲೂ ಪ್ರತಿಯೊಬ್ಬರೂ ಒಂದಲ್ಲಾ ಒಂದು ರೀತಿಯಲ್ಲಿ ಮಾಲಿನ್ಯಕಾರಕ ವಸ್ತುಗಳನ್ನು ಬಳಸುವುದು, ಪರಿಸರವನ್ನು ಮಲಿನಗೊಳಿಸುವುದು ಅವಿರತವಾಗಿ ನಡೆಯುತ್ತಿದೆ. ಇದಕ್ಕೆಲ್ಲ ಯಾರು ಹೊಣೆ? ನಮಗೆ ಪರಿಸರ ಕಾಳಜಿ ಏಕಿಲ್ಲ? ಪರಿಸರ ಪ್ರಜ್ಞೆ ಮೂಡುವುದು ಯಾವಾಗ? ಪರಿಸರ ಹಾಳುಮಾಡುವುದರಲ್ಲಿ ರೈತರು, ಅರಣ್ಯವಾಸಿಗಳು, ನಾಗರಿಕರ ಕೊಡುಗೆ ಎಷ್ಟು? ಎಂದು ಚರ್ಚಿಸುತ್ತಾ ಹೋದರೆ ಇದೊಂದು ಗೊಂದಲಮಯ ವಿಷಯವಾಗುತ್ತದೆ. ಒಬ್ಬರು ಮತ್ತೊಬ್ಬರ ಮೇಲೆ ಹೊರಿಸುವ ಪರಿ ಸಾಮಾನ್ಯವಾಗುತ್ತದೆ.

ನಾಗರಿಕತೆ ಬಲ್ಲವರು, ಶಿಕ್ಷಿತರು, ಅಕ್ಷರಸ್ಥರು ಪರಿಸರ ಹಾಳು ಮಾಡುವುದರಲ್ಲಿ ಎಷ್ಟು ಪಾತ್ರವನ್ನು ವಹಿಸುತ್ತಿದ್ದಾರೆ ಎಂಬುದನ್ನು ಗಮನಿಸುವುದಾದರೆ; ಹಾಲಿನಕೆನೆಯನ್ನೇ ತಿಂದು ಬದುಕಬೇಕೆಂಬ ತಮ್ಮ ಅತಿ ಆಸೆಯಿಂದ ದೇಶದ ನಿಸರ್ಗ ಸಂಪತ್ತನ್ನೆಲ್ಲ ವ್ಯಯಿಸಿ ಆಧುನಿಕ ಸಲಕರಣೆ ಸೌಲಭ್ಯಗಳನೆಲ್ಲ ತಮ್ಮ ಹಣ, ಅಧಿಕಾರ ಶಕ್ತಿಯಿಂದ ದೇಶದ ಯಾವ ಮೂಲೆಯಲ್ಲಿ ಇದ್ದರೂ ಪಡೆದುಕೊಳ್ಳುತ್ತಾರೆ. ಹಣದ ಬಲದಿಂದ ದಿನದ 24 ಗಂಟೆಗಳೂ ತಮ್ಮ ಮನೆಯ ಕೊಳವೆಗಳಲ್ಲಿ ನೀರು ಹರಿಯುತ್ತದೆ. ವಿದ್ಯುತ್ ಸಲಕರಣೆಗಳು ಚಾಲಿತವಾಗಿರುತ್ತವೆ. ಬೆಳಗ್ಗೆ ಎದ್ದಾಕ್ಷಣ ಮನೆಬಾಗಿಲಿಗೆ ತಮಗೆ ಬೇಕಾಗಿರುವ ಅಗತ್ಯ ಸರಕುಗಳು ಬಂದು ಬಿದ್ದಿರುತ್ತವೆ. ವಿಶ್ವ ಪರಿಸರ ದಿನ, ವನಮಹೋತ್ಸವ ದಿನ, ವಿಶ್ವ ಭೂದಿನ, ವಿಶ್ವ ಓಜೋನ್ ದಿನ, ವಿಶ್ವ ಪರಿಸರ ಸಂರಕ್ಷಣಾ ದಿನ, ವಿಶ್ವ ಜಲದಿನ, ವಿಶ್ವ ಅರಣ್ಯೀಕರಣ ದಿನ, ವಿಶ್ವ ಹವಾಮಾನ ದಿನ, ವನ್ಯಜೀವಿ ಸಪ್ತಾಹ ದಿನ ಎಂದೆಲ್ಲಾ ವರ್ಷಪೂರ್ತಿ ಒಂದಲ್ಲಾ ಒಂದು ದಿನಾಚರಣೆಗಳನ್ನು ಆಚರಿಸುತ್ತಾರೆ. ಈ ದಿನಗಳಂದು ನಡೆಯುವ ಕಾರ್ಯಕ್ರಮಗಳಲ್ಲಿ ಶೇ 80ರಷ್ಟು ಮಾಲಿನ್ಯಕಾರಕ ವಸ್ತುಗಳನ್ನು ಬಳಸುತ್ತಾ, ಕಾರ್ಯಕ್ರಮದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಕಾಫಿ, ಟೀ ಕುಡಿಯುವ ಪ್ಲಾಸ್ಟಿಕ್ ಲೋಟಗಳಿಂದ ಹಿಡಿದು ಕುಡಿಯುವ ನೀರಿನ ಬಾಟಲ್, ಪ್ರಚಾರ ಸಾಮಗ್ರಿಗಳು, ವೇದಿಕೆಯ ಹಿಂಬದಿಯ ಬ್ಯಾನರ್ ಒಳಗೊಂಡಂತೆ ತಿಂಡಿ, ಊಟ ಮುಗಿಸಿ ಬಿಸಾಡುವ ತಟ್ಟೆಗಳು, ಉಳಿದ ಆಹಾರ ಎಲ್ಲವೂ ಕಾರ್ಯಕ್ರಮದ ಆಸು-ಪಾಸಿನ ಪರಿಸರವನ್ನು ಸಂಪೂರ್ಣ ಹಾಳುಮಾಡಿರುತ್ತದೆ. ಸ್ವಚ್ಛತೆ ಇನ್ನೆಲ್ಲಿ ಬಂತು! ಮಾಲಿನ್ಯ ಕಾಪಾಡುವುದಾದರೂ ಹೇಗೆ?. ಇಷ್ಟೆಲ್ಲಾ ಮಾಡಿದರೂ ಪರಿಸರ ಸಂರಕ್ಷಣೆ ಬಗ್ಗೆ ಬಹುದೀರ್ಘವಾಗಿ ಮಾಧ್ಯಮದೆದುರು ಮಾತನಾಡಿರುತ್ತಾರೆ. ಪತ್ರಿಕೆಗಳಲ್ಲಿ ಪುಟಗಟ್ಟಲೆ ಬರೆಯುತ್ತಾರೆ.

ಬಣ್ಣ-ಬಣ್ಣದಲ್ಲಿ ಬರೆದ ಘೋಷವಾಕ್ಯಗಳನ್ನು ಟೀಶರ್ಟ್, ಕ್ಯಾಪ್‌ಗಳನ್ನು ಧರಿಸಿ ಪರಿಸರ ನಡಿಗೆ-ಜಾಥಾಗಳನ್ನು ನಡೆಸಿ ಮನೆಗೆ ಹಿಂತಿರುಗುತ್ತಾರೆ. ಕೆಲವು ವೇಳೆ ಒಂದೆರಡು ಸಸಿಗಳನ್ನು ನೆಟ್ಟು ಮಾದರಿಯಾಗುತ್ತಾ ವರ್ಷಪೂರ್ತಿ ಪೋಷಣೆಯನ್ನು ಮರೆಯುತ್ತಾರೆ. ಅಲ್ಲಿಗೆ ಪರಿಸರ ಸಂರಕ್ಷಣೆ, ಗಿಡ ನೆಡುವ ಕಾರ್ಯಕ್ರಮ ಮುಗಿಯಿತು! ಇವೆಲ್ಲ ತಮ್ಮ ಮನೆಯಂಗಳಕ್ಕೆ ಮಾತ್ರ ಅನ್ವಯಿಸುವುದಿಲ್ಲ!!. ಸಾವಿರಕ್ಕೆ ಒಂದೆರಡು ಸಾಧನೆಗಳನ್ನೇ ಬಿಚ್ಚಿಡುತ್ತ ಕೇವಲ ತೋರ್ಪಡಿಕೆಗೆ ತಾನೊಬ್ಬ ಪರಿಸರವಾದಿ, ಪರಿಸರ ಹೋರಾಟಗಾರ ಎಂದು ಬಿಂಬಿಸಿಕೊಳ್ಳುವುದು ಸಾಮಾನ್ಯ ಅಂಶವಾಗಿರುತ್ತದೆ. ಬಾಯಿಮಾತಿನ ವಿಚಾರಗಳು ಕೃತಿರೂಪದಲ್ಲಿ ಬರುವುದೇ ಇಲ್ಲ. ಘೋಷವಾಕ್ಯಗಳಂತು ಗೋಡೆಗಳ ಮೇಲೆ, ನಾಮಫಲಕಗಳಲ್ಲಿ, ಪತ್ರಿಕೆಗಳಲ್ಲೆ ಉಳಿದುಬಿಡುತ್ತವೆ. ಮಧ್ಯಮ, ಶ್ರೀಮಂತ ವರ್ಗದ ಮನೆಗಳಂತೂ ಸೌಂದರ್ಯ ಸಾಧನಗಳು, ಪ್ಲಾಸ್ಟಿಕ್ ವಸ್ತುಗಳಿಂದ ತುಂಬಿರುತ್ತವೆ. ಅರ್ಥಂಬರ್ಧ ಬಳಸಿ ಬಿಸಾಡಿದ ಪ್ಲಾಸ್ಟಿಕ್ ಪೌಚ್‌ಗಳು, ಆಹಾರ ಪೊಟ್ಟಣಗಳು, ಬಾಟಲಿಗಳು ನಗರದ; ಮನೆಯ ಸುತ್ತ-ಮುತ್ತಲಿನ ಪರಿಸರವನ್ನು ಹಾಳು ಮಾಡುತ್ತವೆ ಎಂಬ ಪರಿಜ್ಞಾನ ಇರುವುದಿಲ್ಲ. ಪ್ರತಿದಿನ ಬೆಳಗ್ಗೆ ನಗರಗಳಲ್ಲಿ ಮನೆಬಾಗಿಲಿಗೆ ಬರುವ ಕಸದ ಗಾಡಿ ನೋಡಿದರೆ, ನಗರಗಳಲ್ಲಿ ಹುಟ್ಟುವ ಕೊಳಚೆ ನದಿಗಳನ್ನು ನೋಡಿದರೆ (ಬೆಂಗಳೂರಿನ ವೃಷಭಾವತಿ) ಪರಿಸರ ನಾಶದಲ್ಲಿ ನಗರವಾಸಿಗಳ ಪಾಲು ಎಷ್ಟು ಎಂಬುದನ್ನು ನಿತ್ಯವೂ ನೋಡಬಹುದು.

ಹಳ್ಳಿ ವಾಸ ಕರಿಕಂಬಳಿ ಹಾಸ
ನಾನು ಸಂತೋಷ ನನ್ನೆತ್ತು ಸಂತೋಷ
ಪಟ್ಣದ್ ವಾಸ ರತ್ನಗಂಬಳಿ(ಕುರ್ಲಾನ್)ಹಾಸ

'ನಾನು ಉಪವಾಸ ನನ್ನೆತ್ತು ಉಪವಾಸ,' ಎಂಬ ಜನಪದ ಸಾಲುಗಳನ್ನು ಸ್ಮರಿಸಿದರೆ ಹಳ್ಳಿ-ನಗರಗಳ ನಡುವಿನ ವ್ಯತ್ಯಾಸವನ್ನು ಕಾಣಬಹುದು. ಹಳ್ಳಿಗರು ಕಾಳು ಆಹಾರ ಬೇಕೆಂದರೆ ನೆಲವನ್ನು ನೀರಿಗಾಗಿ ಮುಗಿಲಿಗೆ ಮುಖ ಮಾಡುತ್ತಾರೆ. ಅದಕ್ಕಾಗಿಯೆ 'ಆಕಾಶದ

ನಾಗರಿಕತೆ ಬಲ್ಲವರು, ಶಿಕ್ಷಿತರು, ಅಕ್ಷರಸ್ಥರು ಪರಿಸರ ಹಾಳು ಮಾಡುವುದರಲ್ಲಿ ಎಷ್ಟು ಪಾತ್ರವನ್ನು ವಹಿಸುತ್ತಿದ್ದಾರೆ ಎಂಬುದನ್ನು ಗಮನಿಸುವುದಾದರೆ; ಹಾಲಿನಕೆನೆಯನ್ನೇ ತಿಂದು ಬದುಕಬೇಕೆಂಬ ತಮ್ಮ ಅತಿ ಆಸೆಯಿಂದ ದೇಶದ ನಿಸರ್ಗ ಸಂಪತ್ತನ್ನೆಲ್ಲ ವ್ಯಯಿಸಿ ಆಧುನಿಕ ಸಲಕರಣೆ ಸೌಲಭ್ಯಗಳನೆಲ್ಲ ತಮ್ಮ ಹಣ, ಅಧಿಕಾರ ಶಕ್ತಿಯಿಂದ ದೇಶದ ಯಾವ ಮೂಲೆಯಲ್ಲಿ ಇದ್ದರೂ ಪಡೆದುಕೊಳ್ಳುತ್ತಾರೆ. ಕಾಫಿ, ಟೀ ಕುಡಿಯುವ ಪ್ಲಾಸ್ಟಿಕ್ ಲೋಟಗಳಿಂದ ಹಿಡಿದು ಕುಡಿಯುವ ನೀರಿನ ಬಾಟಲ್, ತಿಂಡಿ, ಊಟ ಮುಗಿಸಿ ಬಿಸಾಡುವ ತಟ್ಟೆಗಳು, ಪರಿಸರವನ್ನು ಸಂಪೂರ್ಣ ಹಾಳುಮಾಡಿರುತ್ತದೆ. ಸ್ವಚ್ಛತೆ ಇನ್ನೆಲ್ಲಿ ಬಂತು! ಮಾಲಿನ್ಯ ಕಾಪಾಡುವುದಾದರೂ ಹೇಗೆ?



ಮಳೆ ಭೂಮ್ ತಾಯಿ ಬೆಳೆ' ಎಂಬ ಗಾದೆ ಹುಟ್ಟಿಕೊಂಡಿರುವುದು. ಬೆಳೆದ ಕಾಳನ್ನು ಬೇಯಿಸಬೇಕೆಂದರೆ ಗುಡ್ಡದಿಂದ ಒಂದಿಷ್ಟು ಮರಳೆ, ಒಣಕಟ್ಟಿಗೆ, ಹುಲ್ಲು, ಗರಿ, ಸೊಪ್ಪುಗಳನ್ನು ಬಳಸಿಕೊಂಡು ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತಾರೆ. ಇವರ ಜೀವನ ಬಹುತೇಕ ತಮ್ಮ ಸುತ್ತಲಿನಲ್ಲಿ ನೈಸರ್ಗಿಕವಾಗಿ ಸಿಗುವಂಥ ವಸ್ತುಗಳಿಂದಾದುವು. ಹಲ್ಲು ಉಜ್ಜುವ ಉಪ್ಪು ಮಿಶ್ರಿತ ಇದ್ದಲಿನ ಪುಡಿಯಿಂದ ಹಿಡಿದು ಬೇವಿನಕಡ್ಡಿ, ತಲೆಗೆ ಹಾಕುವ ಸೀಗೇಕಾಯಿ, ಅಂಟುವಾಳ, ಬಿಲ್ವಪತ್ರೆಕಾಯಿ, ವರ್ಷಕ್ಕೆ ಒಂದೆರಡು ಜೊತೆ ಬಟ್ಟೆ, ನೆತ್ತಿಗೆ ಹರಳೆಣ್ಣೆ, ತಾವೇ ಬೆಳೆದು ಸಂಗ್ರಹಿಸಿಟ್ಟ ಕಾಳು-ಕಡ್ಡಿ ಇವಿಷ್ಟೆ ಇವರ ಅಗತ್ಯಗಳು. ಮನೆಯಲ್ಲಿ ತಮ್ಮ ಬದುಕಿಗೆ ಅವಶ್ಯವಾಗಿ ಬೇಕಾದಷ್ಟನ್ನು ಮಾತ್ರ ಇಟ್ಟುಕೊಂಡಿರುತ್ತಾರೆ. ತೋರ್ಪಡಿಕೆಗಾಗಿ ಮನೆ ತುಂಬ ತುಂಬಿಕೊಳ್ಳುವ ಜಾಯಮಾನ ಇವರದಲ್ಲ. ತಮ್ಮ ಹಳ್ಳಿ, ಮನೆಯ ಆಸು-ಪಾಸು ಕಾಡಿದ್ದರೂ, ತಾವೇ ಬೃಹತ್ತಾದ ಮರಗಳನ್ನು ಬೆಳೆದಿದ್ದರೂ ತಮ್ಮ ಮನೆಯಲ್ಲಿ ಯಾವುದೇ ಡೈನಿಂಗ್ ಟೇಬಲ್, ಸೋಪಾಸೆಟ್ಟುಗಳು ಇಲ್ಲದಿರುವುದನ್ನು ನೋಡಿ ಹಳ್ಳಿಗರ ಸರಳತೆ, ಪರಿಸರ ಪ್ರಜ್ಞೆಯನ್ನು ಪ್ರಜ್ಞಾವಂತರು ಕಲಿಯಬೇಕಾಗಿದೆ.

ತಮ್ಮ ಮನೆಗಳನ್ನು ಏಷಿಯನ್ ಪೇಂಟ್, ನೈರೋಲ್ಯಾಕ್, ಬರ್ಗರ್, ಸರ್ಪಕೋಸ್ಟ್, ಆಯಿಲ್ ಪೇಂಟ್‌ಗಳೆಂಬ ಬಣ್ಣಗಳನ್ನು ಬಳಿದು ಅಲಂಕರಿಸಬೇಕು. ಮನೆಗೆ ದುಬಾರಿ ಬೆಲೆಯ ಗ್ರಾನೈಟ್ ಕಲ್ಲುಗಳನ್ನು, ಮನೆಬಾಗಿಲಿಗೆ ಹಾಸುಚಪ್ಪಡಿಗಳನ್ನು ಹಾಕಿ ತಮ್ಮ ಪ್ರತಿಷ್ಠೆಯನ್ನು ಹೆಚ್ಚುಮಾಡಿಕೊಳ್ಳಬೇಕು, ಇದರಿಂದ ಎಷ್ಟು ಪರಿಸರ ಹಾಳಾಗುತ್ತದೆ, ನೈಸರ್ಗಿಕವಾಗಿದ್ದ ಬಂಡೆಗಳು ಹಾಳಾಗಿ ತಮ್ಮ ಮೂಲತನವನ್ನು ಕಳೆದುಕೊಳ್ಳುತ್ತವೆ ಎಂಬ ಸಾಮಾನ್ಯ ಪ್ರಜ್ಞಾವಂತರಿಗೆ ಇಲ್ಲವಾಗಿರುವುದು ದುರಂತವೇ ಸರಿ. ಬಂಡೆಗಳನ್ನು ಸ್ಫೋಟಿಸಲು ಜಿಲೆಟಿನ್‌ನಂತಹ ವಿಶಕಾರಕ ರಾಸಾಯನಿಕಗಳ ಬಳಕೆಯಿಂದ ಬರುವ ಹೊಗೆ, ಧೂಳು ಸುತ್ತಲಿನ ಹೊಲ-ಮನೆಗಳಿಗೆ ಎಷ್ಟು ಹಾನಿಮಾಡುತ್ತದೆ ಎಂಬುದನ್ನು ಯೋಚಿಸುವುದಿಲ್ಲ.

ಕಾಡು, ಕಾಡು ಪ್ರಾಣಿಗಳು ಇರಬೇಕು, ಪರಿಸರವನ್ನು ನಾವೆಲ್ಲ ಸಂರಕ್ಷಿಸಬೇಕು ಎನ್ನುವ ಪರಿಸರ ಪ್ರೇಮಿಗಳು ತಮ್ಮ ಮನೆಯ ಅಂಗಳದಲ್ಲಿ ಒಂದಷ್ಟು ಗಿಡ-ಮರಗಳನ್ನು, ಪ್ರಾಣಿ-ಪಕ್ಷಿಗಳನ್ನು ಸಾಕಿ ಏಕೆ ಮಾದರಿಯಾಗಬಾರದು?. ಇದು ಸಾಧ್ಯವಾಗುವುದಿಲ್ಲ; ಇರುವ ಜಾಗದಲ್ಲಿ ಹತ್ತಾರು ಮನೆಗಳನ್ನು ಕಟ್ಟಿ ಹಣ ಸಂಪಾದಿಸಿ ಸುಖವಾಗಿರಬೇಕು. ಪರಿಸರದ ಬಗ್ಗೆ ಮಾತನಾಡಿ ಬೋಲ್‌ತೆ ಸಂರಕ್ಷಕರಾಗಬೇಕು.

ಹಳ್ಳಿಗರು, ಅರಣ್ಯವಾಸಿಗಳು 'ದೇವರ ಕಾಡು' (ದೈವತ್ವದ ಹೆಸರಿನಲ್ಲಿ ಕಾಡು ರಕ್ಷಣೆ ಮಾಡಿರುವುದು) "ಜಮ್ಮ"(ಜನ್ಮ ಸ್ಥಳ), "ಅಜ್ಜಯ್ಯ"ನ (ಹಿರಿಯರ) ವಾಸಸ್ಥಾನ ಎಂಬ ಹೆಸರಿನಲ್ಲಿ ಕಾಡು ರಕ್ಷಣೆ ಮಾಡುತ್ತಾರೆ. ಇದಕ್ಕೆ ಸಾಕ್ಷಿಯಾಗಿ ಭಟ್ಕಳದ ಬೈಲೂರು ಎಂಬ ಹಳ್ಳಿಯಲ್ಲಿ ವನಕಾನಮ್ಮ ದೇವಿ ಹೆಸರಿನಲ್ಲಿ 700 ವರ್ಷಗಳಿಂದ ಕಾಡು ಉಳಿದಿದೆ. ಕೊಡಗಿನಲ್ಲಿ 1214 ದೇವರ ಕಾಡು ಗುರುತಿಸಲಾಗಿದ್ದು ಇವು 1550 ಹೆಕ್ಟೇರ್ ಕ್ಷೇತ್ರದಲ್ಲಿವೆ. ಹುಣಸೂರು ತಾಲ್ಲೂಕಿನ ಅಯ್ಯನಕೆರೆ ಜೇನುಕುರುಬರ ಹಾಡಿ ವ್ಯಾಪ್ತಿಗೆ ಸೇರಿರುವ ಬಾಣಾರೆ, ಕಾರೆಕಟ್ಟೆ ದೇವಸ್ಥಾನದ ಕಾಡು, ಗಾಡಿಗಯ್ಯ, ಭೀಮನಕಟ್ಟೆ ದೇವರ ಕಾಡುಗಳು ತಮ್ಮ ಜಮ್ಮದ ಹೆಸರಿನಲ್ಲಿ ರಕ್ಷಿತವಾಗಿವೆ.

ಹಾಗೆಯೇ ಭಗವತಿ, ಭದ್ರಕಾಳಿ, ಪಾರ್ವತಿ, ಕಾವೇರಮ್ಮ, ನಾದಮ್ಮ, ದುರ್ಗಿ, ಚಾಮುಂಡಿ, ಮಾದೇವ, ಅಯ್ಯಪ್ಪ, ಗುಳಿಯ, ಭೂತದೇವ, ಮುತ್ತಪ್ಪ, ರಾಮೇಶ್ವರ, ಮಲದೇವ ಮುಂತಾದ ದೇವರುಗಳ ಹೆಸರಿನಲ್ಲಿ ಕಾಡುಗಳು ಉಳಿದಿವೆ. ಇವುಗಳನ್ನು ವಿರಾಜಪೇಟೆ, ಮಡಿಕೇರಿ, ಸೋಮವಾರಪೇಟೆ ಪ್ರದೇಶಗಳಲ್ಲಿ ಗುರುತಿಸಬಹುದು. ಹಳ್ಳಿಗರು ಇನ್ನೂರು ವರ್ಷಗಳ ಹಿಂದೆಯೇ ಕಾಡುಗಳು ಸಂಮೃದ್ಧವಾಗಿರಲು ಹುಲಿರಾಯ ಕಾರಣ ಎಂದೇಳಿ ಹುಲಿಕಲ್ಲುಗಳನ್ನು ಪೂಜಿಸುತ್ತಿದ್ದರು. ಹುಲಿಕಟ್ಟೆಗಳನ್ನು ಕಟ್ಟಿ ಕಾಡನ್ನು ಸಂರಕ್ಷಿಸುತ್ತಿದ್ದರು. ಹುಲಿಕಲ್ಲುಗಳು ಎಲ್ಲೆಲ್ಲಿವೆಯೊ ಅಲ್ಲೆಲ್ಲಾ ವರ್ಷಪೂರ್ತಿ ನೀರಿದ್ದ ಅನೇಕ ಉದಾಹರಣೆಗಳು ಮಲೆನಾಡಿನಾದ್ಯಂತ ಕಾಣಬಹುದಾಗಿದೆ. ಫ್ರಾನ್ಸಿಸ್ ಬುಕಾನನ್ ಕಾರವಾರದ ಕದ್ರಾಕ್ಕೆ ಭೇಟಿನೀಡಿ "ಇಲ್ಲಿ ಮರಗಳು ದೇವರ ಆಸ್ತಿ, ಮರ ಕಡಿಯಲು ಊರ ಗೌಡನ ಅಪ್ಪಣೆ ಬೇಕು" ಎಂದು ಕ್ರಿಶ 1801ರಲ್ಲೇ ತನ್ನ ಪ್ರವಾಸ ವರದಿಯಲ್ಲಿ ಬರೆದಿದ್ದಾನೆ. ನಾಗರಿಕರಾದ ನಾವು ದೇವರ ಹೆಸರಿನಲ್ಲಿ ಎಷ್ಟು ಮರ-ಗಿಡಗಳನ್ನು ಬೆಳೆಸಿದ್ದೇವೆ ಎಂದು ಲೆಕ್ಕಹಾಕುತ್ತಾ ಹೋದರೆನಯಾ ಪೈಸೆಯ ಉತ್ತರವಿರುವುದಿಲ್ಲ. ಅದೇ ಯಾವ ಸ್ಥಳದಲ್ಲಿ ದೇವಾಲಯ ಕಟ್ಟಿದ್ದೇವೆ? ಎಷ್ಟು ಆದಾಯ ಬರುತ್ತದೆ? ಯಾವ ದಿನ ಹೆಚ್ಚು ಭಕ್ತರು ಬರುತ್ತಾರೆ? ಎಂಬ ಪ್ರಶ್ನೆಗಳಿಗೆ ಉತ್ತರ ಸಿಗುತ್ತವೆ.

ಅರಣ್ಯವಾಸಿಗಳಿಗೆ ಕಾಡಿನ ಬಗ್ಗೆ ಕೇಳಿದರೆ, ಕಾಡಿನ ಪ್ರಾಮುಖ್ಯತೆಯನ್ನು, ಕಾಡಿನೊಂದಿಗಿನ ಅನ್ಯೋನ್ಯತೆಯನ್ನು ಈ ರೀತಿ ವಿವರಿಸುತ್ತಾರೆ. ತಲೆ-ತಲಾಂತರದಿಂದಲೂ ನಮಗೆ ಕಾಡೇ ಜೀವ, ಕಾಡು ನಮ್ಮ ಉಸಿರು, ಅದೇ ತಂದೆ ಅದೇ ತಾಯಿ, ಕಾಡು ಕೊಟ್ಟಿದ್ದನ್ನ ತಿಂದು ಬದುಕಿದವರು. ನಾವು ಎಂದು ಎಂದೆಂದಿಗೂ ಕಾಡನ್ನು ಕಿತ್ತು ತಿಂದವರಲ್ಲ. ನಿಜ ಕಾಡು ನಮ್ಮನ್ನು ತಾಯಿಯಂತೆ ಕಾಪಾಡಿದೆ, ನಾವು ಕಾಡನ್ನು ತಾಯಿಯಂತೆ ಕಾಪಾಡಿದೆವು, ನಾವು ಕಾಡನ್ನು ಮಗುವಿನಂತೆ ನೋಡಿಕೊಂಡಿದ್ದೇವೆ. ಇಲ್ಲಿ ಕಾಡು ತಾಯಿಯೋ ಅಥವಾ ನಾವು ತಾಯಿಯೋ ಎನ್ನುವುದು ಗೊತ್ತಿಲ್ಲ. ಅದು ಮುಖ್ಯವೂ ಅಲ್ಲ, ಆದರೆ ಕಾಡಿಗೆ ನೋವಾದರೆ ನಮಗೂ ನೋವಾಗುತ್ತಿತ್ತು. ಕಾಡು ನಲಿಯುತ್ತಿದ್ದರೆ, ನಾವೂ ನಲಿಯುತ್ತಿದ್ದೆವು. ಕಾಡಿನ ಸಕಲ ಪ್ರಾಣಿಗಳಂತೆ ನಾವು ಒಂದು ಜಾತಿಯ ಪ್ರಾಣಿಗಳು ನಾವು ಬಲಿಷ್ಠರು, ಮೇಲು-ಕೀಳೆಂಬ ಭಾವನೆ ಇಲ್ಲದೆ ಕಾಡು ನಮ್ಮನ್ನು ಶತಮಾನಗಳಿಂದ ಬದುಕಿಸಿದೆ. ನಾವು ಕಾಡಿನ ಋಣದಲ್ಲಿ ಬಾಳಿದವರು, ಆ ಋಣವನ್ನು ಎಂದೂ ತೀರಿಸಲು ಸಾಧ್ಯವಿಲ್ಲ ಎಂದು ಬದುಕಿದವರು. ಕಾಡು ನೋವುಂಡರೆ ನಮ್ಮ ಬದುಕಿಲ್ಲ ಎಂದುಕೊಂಡವರು.

ಕಾಡಿನ ಗುಣ ಎಂದರೆ ಸಹಜ ಗುಣ. ಅಲ್ಲಿ ಅತ್ಯಂತ ಸಂತೋಷವಾಗಿದ್ದಾಗಲಿ ಅತ್ಯಂತ ದುಃಖವಾಗಿದ್ದಾಗಲೀ ನೆನಪಿಗೆ ಬರುವುದಿಲ್ಲ. ಹಸಿದಾಗ ಊಟ(ಅರಣ್ಯ ಉತ್ಪನ್ನಗಳು), ನಿದ್ದೆ ಬಂದಾಗ ನಿದ್ದೆ ಕಾಡಿನ ಗುಣ. ಆದರೆ ನಾಡಲ್ಲಿ ಹಾಗಿಲ್ಲವಲ್ಲ. ಹಸಿವಾದಾಗ ಊಟ ಹಾಕುವವರಿಲ್ಲ, ಎಲ್ಲವೂ ಹಣ ಇದ್ದರೆ ಮಾತ್ರ. "ಕಾಡು-ಯಾರಿಗೂ ಮೋಸಮಾಡುವುದಿಲ್ಲ". "ಕಾಡು ಜನರನ್ನು ಸಾಕಿತು, ಆದರೆ ಈಗ ಜನರು ಕಾಡನ್ನೇಕೆ ಸಾಕುತ್ತಿಲ್ಲ?" ಎಂದು ಪ್ರಶ್ನಿಸುತ್ತಾರೆ. ಕಾಡಿನ ರಕ್ಷಣೆ ಅವರಿಗೇನು ಗೊತ್ತು? ಹವಾನಿಯಂತ್ರಿತ ಕಛೇರಿಯಲ್ಲಿ ಕುಳಿತು ಪರಿಸರ ಸಂರಕ್ಷಣೆ ಕುರಿತು ಮಾತಾಡುವುದಲ್ಲ. ಕಾಡಿನ ಜನರೊಂದಿಗೆ ಇದ್ದು ಕಾಡಿನ ಪ್ರಾಮುಖ್ಯತೆಯನ್ನು, ಕಾಡೆಂಬ ದೈವವನ್ನು ಅರಿತುಕೊಳ್ಳಬೇಕಾಗಿದೆ. ಕಾಡಿನ ಜನರಿಗೆ ಅರಿವಿಲ್ಲದ ಕೆಲವು ವಿಚಾರಗಳನ್ನು ಅಕ್ಷರಸ್ಥರು ಕಲಿತ ಜ್ಞಾನದಿಂದ ಮತ್ತಷ್ಟು ಸಂರಕ್ಷಣೆಯ ಅರಿವನ್ನು ಮೂಡಿಸಬೇಕಾಗಿದೆ. "ಹಳ್ಳಿಯ ಜನರು ಅರಣ್ಯವನ್ನು ಬೆಳೆಸಿಕೊಂಡು ಬಳಸಿಕೊಂಡು ಬಂದವರು, ಬುಡಕಟ್ಟು ಜನರು ಅರಣ್ಯವನ್ನು ಅವಲಂಬಿಸಿಯೂ ಸಂರಕ್ಷಿಸಿಕೊಂಡು ಬಂದವರು". ಇವರಿಗೆ ಕಾಡೇ ರಾಜ್ಯ, ಕಾಡಿನ ಗಿಡ-ಮರ ಪ್ರಾಣಿ-ಪಕ್ಷಿಗಳು, ಋತುಮಾನಗಳ ಬದಲಾವಣೆಯೇ ಮನರಂಜನೆ.

ಅಂದು ಸ್ಥಳೀಯ ಸಂಪನ್ಮೂಲಗಳೆಲ್ಲ ಹಳ್ಳಿಗರ ಕೈಯಲ್ಲೆ ಇತ್ತು. ತಮ್ಮ ದಿನನಿತ್ಯದ ಬೇಡಿಕೆಗನುಗುಣವಾಗಿ ಬಳಸುತ್ತಾ ಜತನದಿಂದ ಕಾಪಾಡಿಕೊಂಡು ಬರುತ್ತಿದ್ದರು. ಭವಿಷ್ಯದಲ್ಲಿ ಅವರು ಯಾರನ್ನೂ ಅವಲಂಬಿಸದೆ ಸ್ವಾವಲಂಬಿಗಳಾಗಿ ಬದುಕನ್ನು ಸಾಗಿಸುತ್ತಿದ್ದರು. ಆದರೆ ಇಂದು ಪ್ರಗತಿ ಮತ್ತು ಆಧುನಿಕತೆಯನ್ನು ಬರಮಾಡಿಕೊಳ್ಳುವ ಧಾವಂತದಲ್ಲಿ ಪರಿಸರ ಅಥವಾ ಪ್ರಕೃತಿಯನ್ನು ಸಂಪೂರ್ಣ ಕಡೆಗಣಿಸಿದುದರ ಪರಿಣಾಮವಾಗಿಯೇ ಪರಿಸರ ಸಂರಕ್ಷಣೆ ಅತ್ಯಂತ ದೊಡ್ಡ ಸವಾಲು ಹಾಗೂ ಸಮಸ್ಯೆಯ ಗೂಡಾಗಿದೆ. ಮಹಾತ್ಮಾ ಗಾಂಧೀಜಿಯವರ ಬದುಕು, ಆಚರಣೆಗಳು ನಮಗೆ ದಾರಿದೀಪವಾಗಬೇಕು. ಸರಳತೆ, ನುಡಿದಂತೆ ನಡೆದುಕೊಳ್ಳುವ ಪರಿ ನಮಗೆ ಮಾರ್ಗದರ್ಶಿಯಾಗಬೇಕು. ಸರಳ ಜೀವನವೇ ಪ್ರಕೃತಿಯ ಸೀಮಿತ ಸಂಪನ್ಮೂಲಗಳ ಅಂಥಕ್ಷಣೆ ಎಂಬುದನ್ನು ಅರಿಯಬೇಕು. ನಾವು ಪ್ರಕೃತಿಯಿಂದ ಏನನ್ನು ಪಡೆಯುತ್ತೇವೆಯೊ ಅದನ್ನು ಮರಳಿಸುವಂತೆ ಬಳಸಬೇಕು. ಪ್ರಕೃತಿಯಲ್ಲಿ ದೊರೆಯುವ ಎಲ್ಲವನ್ನು ನಮ್ಮ ಇಚ್ಛೆ ಬಂದಂತೆ ಉಪಯೋಗಿಸಿ ಅದಕ್ಕೆ ತಕ್ಕುದಾದ ಸಂಪನ್ಮೂಲ ಅಷ್ಟೆ ಪ್ರಮಾಣದಲ್ಲಿ ಪುನಃ ಸಮವಾಗುವಂತೆ ನೋಡಿಕೊಳ್ಳಬೇಕು. "ಪರಿಸರವನ್ನು ಪ್ರೀತಿಸಿದವನು ಮನುಷ್ಯನನ್ನು ಪ್ರೀತಿಸುತ್ತಾನೆ" "ಪರಿಸರ ಮಾಲಿನ್ಯದ ಅಪಾಯ ಮಾನವ ಸಂತತಿ ಮುಕ್ತಾಯ" ಎಂಬ ಎಚ್ಚರಿಕೆಯ ನುಡಿಗಳು ನಾಗರಿಕರ ಮುಂದಿದ್ದರೂ ಜಾಗೃತಗೊಳ್ಳುವುದೇ ಇಲ್ಲ. ಒಂದು ಗೇಣು ಜಾಗಕ್ಕಾಗಿ, ಬಿಂದಿಗೆ ನೀರಿಗಾಗಿ ಕಾದಾಡುವ ನಾವು ಮಾಲಿನ್ಯಕಾರಕ ವಸ್ತುಗಳನ್ನು ಬಳಸದಿರಲು ಏಕೆ ನಿರಾಕರಿಸುವುದಿಲ್ಲ? ಎಂಬ ಪ್ರಶ್ನೆಗಳು ನಮಗೆ ಪ್ರತಿಕ್ಷಣವು ಪ್ರತಿಯೊಬ್ಬರನ್ನು ಕಾಡಬೇಕು. ಕಾರ್ಯಗತಕ್ಕೆ ಬರಬೇಕು. ಆಗ ಮಾತ್ರ ಪರಿಸರ ಸಂರಕ್ಷಣೆಗೊಂದು ಅರ್ಥ ಸಿಗುತ್ತದೆ. □

ಉತ್ತರಪ್ರದೇಶದ ನೈಜ ಮಾಯಾಲೋಕ

ವಿ. ಆರ್. ಮೌರ್ಯ

ಮಾಯಾವತಿಯವರು ಕನಿಷ್ಟ ಪಕ್ಷ ಉತ್ತರ ಪ್ರದೇಶದ ದಲಿತರಿಗೆ ನೆಮ್ಮದಿ ನೀಡೇ ನೀಡುತ್ತಾರೆ ಎಂದು ಕನಸು ಕಂಡಿತ್ತು ಈ ದಲಿತ ಲೋಕ. ಆದರೆ ಯು.ಪಿಯಲ್ಲಿನ ದಲಿತರ ಸ್ಥಿತಿ ಬೇರೆಯೆ ಇದೆ. ಬೆಹನ್ ಜೀಯವರ ಆಸಕ್ತಿ ಪ್ರಜಾಪ್ರಭುತ್ವದಲ್ಲಲ್ಲದೆ ಸರ್ವಾಧಿಕಾರದಲ್ಲಿರುವುದು ಇತ್ತೀಚಿನ ದಿನಗಳಲ್ಲಿ ಅವರ ವರ್ತನೆಗಳಿಂದ ಗೋಚರಿಸುತ್ತಿದೆ. ದಲಿತನಿಗೆ ಸೂರಿಲ್ಲದಿರುವಾಗ ಅವರಿಗೆ ಅಂಬೇಡ್ಕರ್ ಪಾರ್ಕ್ ಬೇಕು, ದಲಿತನಿಗೆ ಉಣ್ಣಲು ಕೂಳಿಲ್ಲದಿರುವಾಗ ಅವರಿಗೆ ತಮ್ಮ ಮೂರ್ತಿಗಳನ್ನು ಬೀದಿಗಳಲ್ಲಿ ಪ್ರತಿಷ್ಟಾಪಿಸಬೇಕು. ಮಹಾನ್ ಮೂರ್ತಿ ಭಂಜಕ ಬಾಬಾಸಾಹೇಬರು ಇದನ್ನೇ ದಲಿತರಿಗೆ ಹೇಳಿದ್ದು?

B.J.P is a snake above the grass and CONGRESS is a snake below the grass ಎಂದು ಕಾನ್ಶಿರಾಂರವರು ಎಂಭತ್ತರ ದಶಕದಲ್ಲಿ ಹೇಳಿದಾಗ ಇಡೀ ದಲಿತ ಮತ್ತು ಕಾರ್ಮಿಕ ಕುಟುಂಬ ಮತ್ತೊಮ್ಮೆ ಅಂಬೇಡ್ಕರರಂತಹ ಬೆಂಕಿಯ ಕಿಡಿ ನಮಗೆ ಸಿಕ್ಕಿತು ಎಂದು ಬೀಗಿತು. ನೆನೆಗುದಿಗೆ ಬಿದ್ದಿರುವ ವಿಮೋಚನೆಯ ಹಗಲು ಗನಸು ಕಾಣಹತ್ತಿತು. ಕಾನ್ಶಿರಾಂರವರು ಕಾಂಗ್ರೆಸ್, ಬಿ.ಜೆ.ಪಿ ಮತ್ತು ಸಮಾಜವಾದಿಯಂತಹ ಪಕ್ಷಗಳ ಆಡಳಿತದಿಂದ ಬೇಸತ್ತಿದ್ದ ಉತ್ತರ ಪ್ರದೇಶದ ಜನತೆಗೆ ತೋರಿಸಿದ್ದು ಮದ್ಯಮ ವರ್ಗದ ಶಿಕ್ಷಕಿ ಮಾಯಾವತಿಯವರನ್ನು. ಕಾನ್ಶಿರಾಂರವರು ಬದುಕಿರುವವರೆಗು ಅಂಬೇಡ್ಕರರ ಆದರ್ಶ ತತ್ವಗಳನ್ನೆ ಪಾಲಿಸಿದರು. ಮಾಯಾವತಿಯವರು ಸಹ ಕಾನ್ಶಿರಾಂರವರ ಮಾತುಗಳನ್ನು ಚಾಚುತಪ್ಪದೆ ಪಾಲಿಸಿದರು. ಅಂದು ದಲಿತರಿಗೆ ಪೆರಿಯಾರರ ಮಾದರಿಯಲ್ಲಿ ಇರುವ ಸತ್ಯಗಳನ್ನು ಹಿಂದೂ ಧರ್ಮದ ಹುಳುಕುಗಳನ್ನು ಎತ್ತಿ ತೋರಿಸುತ್ತ, ಜ್ಯೋತಿಬಾಪುಲೆಯವರ ಶೂದ್ರಾತಿಶೂದ್ರರ ಮೇಲಿನ ಪ್ರೀತಿಯನ್ನು ವಿವರಿಸುತ್ತ, ಶಾಹು ಮಹಾರಾಜ, ನಾರಾಯಣಗುರುರವರ ಸಮಾನತೆ ಪ್ರೀತಿಯನ್ನು ಸಾರುತ್ತ ಹೊರಟಿದ್ದು ದಲಿತ ಮನಸುಗಳಿಗೆ ನಾಟಿ 3 ಬಾರಿ ಸಮ್ಮಿಶ್ರ ಸರ್ಕಾರದಲ್ಲಿ ಗದ್ದುಗೆಗೆ ಏರುವಂತಾಯಿತು. ಈ 3 ಬಾರಿಯಲ್ಲು ಬಿ.ಎಸ್.ಪಿ ತನ್ನ ಓಟುಗಳನ್ನು ಹೆಚ್ಚಿಸಿಕೊಂಡಿತ್ತು.

ಬಿ.ಜೆ.ಪಿ ಒಮ್ಮೆ ಕೈಕೊಟ್ಟಾಗಲೂ ಅದನ್ನೇ ನಂಬಿದ್ದು ಮಾತ್ರ ತಿಳಿಗೇಡಿತನ ಹಾಗು ಅದು ಬಿ.ಎಸ್.ಪಿ ಯ ಅಧಿಕಾರದ ಆತುರತೆಯನ್ನ ತೋರಿಸುತಿತ್ತು. ಆಗ ನಾವುಗಳೆಲ್ಲರು "ಇಷ್ಟು ದಿನ ದಲಿತರೆಲ್ಲರ ಸಹಾಯದಲ್ಲಿ ಅವರುಗಳೆಲ್ಲ ಮೆರೆಯುತಿದ್ದರು ಈಗ ಅವರುಗಳ ಸಹಾಯದಿಂದ ಮಾಯಾವತಿ ಮುಖ್ಯಮಂತ್ರಿಯಾಗಿರುವುದು ತಪ್ಪೇ?" ಎಂದು ಎದುರುಗಿರುವವರ ಬಾಯಿ ಮುಚ್ಚಿಸಿದ್ದೆವು. "ನಾನು ಕಾಂಗ್ರೆಸ್‌ನಲ್ಲಿ ಕಾನೂನು ಸಚಿವನಾಗಿದ್ದರು ಸಹ ನೀರಿನಲ್ಲಿರುವ ಕಲ್ಲಿನಂತೆ ನೀರಿನ ದಿಕ್ಕು ಬದಲಿಸುತ್ತೆನೆಯೇ ವಿನಹ ಕರಗುವ ಮಣ್ಣಾಗಲಾರೆ" ಎಂದಿದ್ದ ಬಾಬಾಸಾಹೇಬರ ಮಾತುಗಳನ್ನು ಉದಾಹರಣೆಯಾಗಿ ಹೇಳುತಿದ್ದೆವು. ಬಿ.ಎಸ್.ಪಿ ನಾಯಕರುಗಳಂತು Snake below the grass ಗಿಂತ snake above the grass ಲೇಸು ಎಂದು ಒಂದು ಹೆಜ್ಜೆ ಮುಂದೆ ಹೋಗಿದ್ದರು. ಆದರೆ ಎರಡೂ ಹಾವುಗಳು ವಿಷಪೂರಿತ. ಎರಡು ಬಾರಿ ಕಚ್ಚಿತೂ ಸಹ. ಆದರೆ ಮುಂದೆ ಆಗಿದ್ದೆ ಬೇರೆ. ಅದೂ ಕಾನ್ಶಿರಾಂರವರ ಜೀವಿತ ಕಾಲದಲ್ಲಿಯೇ ಈ ರೀತಿ ಆಗಿದ್ದು ವಿಪರ್ಯಾಸ. ಅದೇನೆ ಇರಲಿ ಮಾಯಾವತಿಯವರು ಅಂತು ಇಂತು ಮೊದಲ ದಲಿತ ಮಹಿಳಾ ಮುಖ್ಯಮಂತ್ರಿಯಾದರು. ಮುಂದೆ ಮಲಾಯಂಸಿಂಗ್ ಯಾದವ ಎಂಬ ಬೇಜವಾಬ್ದಾರಿ ಮನುಷ್ಯನ ಆಡಳಿತದಿಂದ ಬೇಸತ್ತಿದ್ದ ಜನತೆ ದಾಸತನವನ್ನು ಕಳೆದುಕೊಳ್ಳಲು ತಲೆಬಾಗಿದ್ದು ಮಾಯಾವತಿಯವರಿಗೆ. ಆದರೆ ತಲೆಬಾಗುವುದು ಕೂಡ ದಾಸತನವೆಂದು ಇತ್ತೀಚೆಗೆ ಉತ್ತರಪ್ರದೇಶದ ಜನತೆಗೆ ತಿಳಿದಿದೆಯಾದರು ಇನ್ನೂ ಬಿ.ಎಸ್.ಪಿ ಕಾರ್ಯಕರ್ತರಿಗೆ ತಿಳಿಯುತ್ತಿಲ್ಲದಿರುವುದೆ ದುರದೃಷ್ಟಕರದ ಸಂಗತಿ.

ಅಂಬೇಡ್ಕರರ ಬರಹ ಮತ್ತು ಭಾಷಣಗಳನ್ನು ಓದಿಕೊಂಡು ಮನನ ಮಾಡಿಕೊಂಡು ಈ ದೇಶದ ಜಾತಿ ಪದ್ದತಿ, ಬಡತನ, ಮೂಢ ನಂಬಿಕೆ, ಅಸಮಾನತೆಗಳನ್ನು ಎತ್ತಿತೋರಿಸುತ್ತ, ಪ್ರಚಾರ ಮಾಡುತ್ತ ಶೋಷಿತರನ್ನು ಒಂದುಮಾಡುತ್ತಿದ್ದ ಮಾಯಾವತಿ ಮತ್ತು ಪಕ್ಷ ಮುಂದಿನ ಚುನಾವಣೆಯಲ್ಲಿ ಬ್ರಾಹ್ಮಣರಿಗೆ ನೀಡಿದ್ದು 90ಕ್ಕಿಂತ ಹೆಚ್ಚು ಟಿಕೆಟ್ಟುಗಳು. ಚುನಾವಣ ಪ್ರಚಾರದಲ್ಲಿ ಆನೆಯನ್ನು ಗಣೇಶನಿಗೆ ಹೋಲಿಸಿದ್ದು ಮಾಯಾವತಿಯವರ ಗಿಮಿಕ್ಕು ಮತ್ತು ಬದಲಾದ ಮನಸ್ಸಿಗೆ ಸಾಕ್ಷಿ ನೀಡುತ್ತದೆ. ಈ ಪ್ರಕ್ರಿಯೆಯನ್ನು ದೇಶ ಎಂದೂ ಕಂಡರಿಯದ ಜಾತಿ ಸಮೀಕರಣ ಎಂದು ಎಲ್ಲರು ಬೀಗಿದ್ದೇ ಬೀಗಿದ್ದು ಇದಕ್ಕೆ ಸೊಪ್ಪು ಹಾಕುವಂತೆ ಮಾಯಾವತಿ ಪಕ್ಷ ಬಾರಿ ಬಹುಮತದಿಂದ ಜಯಬೇರಿ ಬಾರಿಸಿತು ಮತ್ತು ಮಾಯಾವತಿಯವರು ಮುಖ್ಯಮಂತ್ರಿಯಾಗಿ ಇತಿಹಾಸ ನಿರ್ಮಿಸಿದರು. ದಲಿತರ ಆರು ದಶಕಗಳ ಕನಸು ನನಸಾಗಿತ್ತು. ಇಲ್ಲಿ ನಾವೆಲ್ಲರು ಗಮನಿಸಬೇಕಾದ ಒಂದು ಅಂಶವಿದೆ. ಅದೇನೆಂದರೆ ಮಲಾಯಂಸಿಂಗ್ ಯಾದವ್ ಎಂಬ ಸಮಾಜವಾದಿಯ ಬೇಜವಾಬ್ದಾರಿ ರಾಜಕಾರಣವು ಸಹ ಮಾಯಾವತಿಯವರ ಗೆಲುವಿಗೆ ಗರಿಷ್ಟ ಕೊಡುಗೆ ನೀಡಿತು. ಅದೇನೆ ಇರಲಿ, ಬೀದಿ ಬೀದಿಗಳಲ್ಲಿ ದಲಿತರನ್ನು ಅಟ್ಟಾಡಿಸಿ ಒದೆಯುತ್ತಿದ್ದ, ಕೊಲ್ಲುತ್ತಿದ್ದ, ದಲಿತ ಮಹಿಳೆಯರನ್ನು ಬೀದಿಗಳಲ್ಲೆ ಅತ್ಯಾಚಾರ ಮಾಡುತ್ತಿದ್ದ ಮನುವಾದಿಗಳಿಗೆ ಜಾತೀಯವಾದಿಗಳಿಗೆ ಅಹಂಕಾರಿ ಸವರ್ಣಿಯರಿಗೆ ತಕ್ಕ ಪಾಠ ಕಲಿಸುತ್ತಾಳೆ ನಮ್ಮ ಬೆಹನ್ ಜೀ ಎಂದೇ ಭಾವಿಸಿತ್ತು ದಲಿತಲೋಕ.

ಭಾರತಾದ್ಯಂತ ದಿನಕ್ಕೆ 27 ದೌರ್ಜನ್ಯಗಳು ದಲಿತರ ಮೇಲೆ ನಡೆಯುತ್ತವೆ ಎಂದು ಸರ್ಕಾರವೆ ಒಪ್ಪಿಕೊಳ್ಳುತ್ತಿರುವ ಕಾಲದಲ್ಲಿ ಮಾಯಾವತಿಯವರು ಕನಿಷ್ಟ ಪಕ್ಷ ಉತ್ತರಪ್ರದೇಶದ ದಲಿತರಿಗೆ ನೆಮ್ಮದಿ ನೀಡೇ ನೀಡುತ್ತಾರೆ ಎಂದು ಕನಸು ಕಂಡಿತ್ತು ಈ ದಲಿತ ಲೋಕ. ಆದರೆ ಯು.ಪಿ ಯಲ್ಲಿನ ದಲಿತರ ಸ್ಥಿತಿ ಬೇರೆಯೆ ಇದೆ. ಬೆಹನ್ ಜೀಯವರ ಆಸಕ್ತಿ ಪ್ರಜಾಪ್ರಭುತ್ವದಲ್ಲಲ್ಲದೆ ಸರ್ವಾಧಿಕಾರದಲ್ಲಿರುವುದು ಇತ್ತೀಚಿನ ದಿನಗಳಲ್ಲಿ ಅವರ ವರ್ತನೆಗಳಿಂದ ಗೋಚರಿಸುತ್ತಿದೆ. ದಲಿತನಿಗೆ ಸೂರಿಲ್ಲದಿರುವಾಗ ಅವರಿಗೆ ಅಂಬೇಡ್ಕರ್ ಪಾರ್ಕ್ ಬೇಕು, ದಲಿತನಿಗೆ ಉಣ್ಣಲು ಕೂಳಿಲ್ಲದಿರುವಾಗ ಅವರಿಗೆ

ತಮ್ಮ ಮೂರ್ತಿಗಳನ್ನು ಬೀದಿಗಳಲ್ಲಿ ಪ್ರತಿಷ್ಠಾಪಿಸಬೇಕು. ಮಹಾನ್ ಮೂರ್ತಿ ಭಂಜಕ ಬಾಬಾಸಾಹೇಬರು ಇದನ್ನೇ ದಲಿತರಿಗೆ ಹೇಳಿದ್ದು? ಈ ಧೋರಣೆಯನ್ನೇ ದಲಿತರಿಂದ ಬಾಬಾಸಾಹೇಬರು ಬಯಸಿದ್ದು? ದಲಿತರು ಪ್ರಗತಿ ಹೊಂದಲು ರಾಜಕೀಯ ಶಕ್ತಿಯನ್ನು ಪಡೆಯಬೇಕು, ಅದೇ ನಿಮ್ಮನ್ನು ಬಿಡುಗಡೆಗೊಳಿಸುತ್ತದೆ ಎಂದು ಬಾಬಾಸಾಹೇಬರು ಹೇಳಿದ್ದು ಈ ರೀತಿಯ ರಾಜಕೀಯ ಮಾಡಲಿಕ್ಕೋ? ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮೂಲ ಮಂತ್ರವನ್ನು ಬಿಟ್ಟು ರಾಜಕೀಯ ಒಂದೇ ವಿಮೋಚನೆಗೆ ದಾರಿ ಎಂದು ಹೊರಟಿದ್ದಾರೆ ಇವರುಗಳು, ಅದಕ್ಕೆ ಇಂದು ದಲಿತರ ಮೇಲಿನ ದೌರ್ಜನ್ಯಗಳು ಎಗ್ಗಿಲ್ಲದಂತೆ ನಡೆಯುತ್ತಿವೆ. ಎಷ್ಟೋ ದಲಿತ ಕುಟುಂಬಗಳು ಸಾವಿರ ವರ್ಷಗಳ ಹಿಂದೆ ಹೇಗಿದ್ದವೋ ಹಾಗೆಯೇ ಇವೆ. ದಲಿತರ ರಾಜಕೀಯ ಆ ಪಕ್ಷದ ದಲಿತ ನಾಯಕನನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ (ಸಾಮಾಜಿಕವಾಗಿ ಇವನೂ ಸಹ ವಿಮೋ ಚನೆಗೊಂಡಿಲ್ಲ, ಇವರಿಗೆ ಅದು ಬೇಕಾಗೂ ಇಲ್ಲ) ವಿಮೋಚನೆಗೊಳಿಸಿದೆಯೇ ವಿನಹ ಬಡ ದಲಿತರನ್ನಲ್ಲ! ಅವನು ಆಗಲು ಅನಾಥ ಈಗಲೂ ಅನಾಥ!

ಅದೇನೇ ಇರಲಿ ಯು.ಪಿಯ ದಲಿತರ ಈಗಿನ ಚಿತ್ರಣಕ್ಕೆ ನ್ಯಾಷನಲ್ ಕ್ರೈಮ್ ರಿಪೋರ್ಟ್ ಬ್ಯೂರೊ 2009ರ ಮಾಹಿತಿಯನ್ನು ಗಮನಿಸೋಣ. ಅದರ ಪ್ರಕಾರ 2009ರಲ್ಲಿಯೇ ದಲಿತರ ಮೇಲೆ 33,594 ದೌರ್ಜನ್ಯಗಳಾಗಿವೆ. ಅವುಗಳಲ್ಲಿ ಹೆಚ್ಚೂ ಕಡಿಮೆ ಅತಿ ಹೆಚ್ಚು ದೌರ್ಜನ್ಯಗಳು ನಡೆದಿರುವುದು ಉತ್ತರಪ್ರದೇಶದಲ್ಲಿ!! ಇಡೀ ಭಾರತದಲ್ಲಿ ನಡೆದಿರುವ ದೌರ್ಜನ್ಯಗಳಲ್ಲಿ ಯು.ಪಿ ಯದ್ದು ಶೇಕಡಾ 22.4 ರಷ್ಟು.

ಭಾರತಾದ್ಯಂತ ದಲಿತರ 624 ಕೊಲೆಗಳಾಗಿದ್ದರೆ ಯು.ಪಿ ಪಾಲು 235! ಅಂದರೆ ಶೇ. 37! 1346 ಅತ್ಯಾಚಾರ ಪ್ರಕರಣಗಳಾಗಿದ್ದರೆ ಯು.ಪಿ ಪಾಲು 317! ಅಂದರೆ ಶೇ.23! 512 ಅಪಹರಣ ಮತ್ತು ಕಿರುಕುಳ ಪ್ರಕರಣಗಳಲ್ಲಿ ಯು.ಪಿ ಪಾಲು ಬರೋಬ್ಬರಿ 254! ಅಂದರೆ ಶೇ.50!!

ಇದು ಭಾರತದ ಮೊಟ್ಟಮೊದಲು ಗದ್ದುಗೇರಿದ ದಲಿತ ಪಕ್ಷದ ನೈಜ ಚಿತ್ರಣ. ಮಾಯಾವತಿಯವರ ದಲಿತಪರ ಆಡಳಿತ. ದಲಿತರ ಆಡಳಿತದಲ್ಲಿ ದಲಿತರಿಗೆ ನ್ಯಾಯ ಸಿಗುತ್ತದೆ, ದಲಿತರ ಮೇಲಿನ ದೌರ್ಜನ್ಯ ಕಡಿಮೆ ಆಗುತ್ತದೆ, ದಲಿತರು ತಕ್ಕ ಮಟ್ಟಿಗೆ ನಿರುಮ್ಮಳರಾಗಿರುತ್ತಾರೆ ಎಂದು ಭಾವಿಸುವುದು ಸಹಜ. ಆದರೆ ಇಲ್ಲಿ ಅದೆಲ್ಲವೂ ತಲೆ ಕೆಳಗಾಗಿದೆ. 1997ರಲ್ಲಿ ಈ ಬೆಹನ್ ಜೀಯವರೇ ದಲಿತರಿಗೆ ನ್ಯಾಯ ಒದಗಿಸುವ S.C\S.T PREVENTION OF ATTROCOTIES ACT 1989ನ್ನು ನಿಸ್ತೇಜಗೊಳಿಸಿ ಕೇವಲ ಅತ್ಯಾಚಾರ ಮತ್ತು ಕೊಲೆಗಳಿಗೆ ಮಾತ್ರ ಈ ಕಾಯ್ದೆಯಡಿ ಅಪರಾಧ ದಾಖಲುಗೊಳಿಸಬೇಕೆಂದು ಪೊಲೀಸರಿಗೆ ಸರ್ಕಾರಿ ಆದೇಶ ಹೊರಡಿಸಿದ್ದರು. ಅದಕ್ಕವರು ಕೊಟ್ಟ ಸಮಜಾಯಿಶಿ ಏನೆಂದರೆ "ದಲಿತರು ಈ ಕಾಯ್ದೆಯನ್ನು ತಪ್ಪಾಗಿ ಬಳಸುತ್ತಿದ್ದಾರೆ ಎಂದು" ಆನಂತರ 2003ರಲ್ಲಿ ಆ ಆದೇಶವನ್ನು ರದ್ದುಗೊಳಿಸಿದರಾದರೂ ಆ 6 ವರ್ಷ ದಲಿತರಿಗೆ ಮಾಡಿದ್ದು ಮೋಸವೇ ಅಲ್ಲವೇ? ಇತ್ತೀಚೆಗೆ ಬಿ.ಎಸ್.ಪಿ ಯ ಶಾಸಕರುಗಳೆ ದಲಿತ ಮಕ್ಕಳ, ಮಹಿಳೆಯರ ಮೇಲೆ ಅತ್ಯಾಚಾರವೆಸಗುವ ಧೈರ್ಯ ಮಾಡುತ್ತಿದ್ದಾರೆ. 12 ಜನಕ್ಕಿಂತ ಹೆಚ್ಚು ಬಿ.ಎಸ್.ಪಿ ಸಂಸದರು, ಶಾಸಕರು ದಲಿತರ ಕೊಲೆ ಮತ್ತು ದಲಿತ ಮಹಿಳೆಯರ ಅತ್ಯಾಚಾರ ಪ್ರಕರಣಗಳಲ್ಲಿ ಸಿಲುಕಿಕೊಂಡಿದ್ದಾರೆ. ಆದರೂ ಸಹ ಪೊಲೀಸರು ಇವರ ಕೂದಲನ್ನು ಸಹ ಮುಟ್ಟಿಲ್ಲ. ಕಾರಣ ಇವರುಗಳ ಮೇಲೆ ಬೆಹನ್ ಜೀಯ ಅಭಯ ಹಸ್ತವಿದೆ. ಇದು ಯು.ಪಿಯಲ್ಲಿ ದಲಿತರ ಸುಂದರ ಮಾಯಾ ಲೋಕ. ದಲಿತರ ಆಡಳಿತದಲ್ಲೇ ದಲಿತರಿಗೆ ರಕ್ಷಣೆ ಇಲ್ಲವಾದರೆ ಮನುವಾದಿಗಳ ಬಳಿ ನ್ಯಾಯ ಸಿಗುತ್ತದೆಯೇ? ಇದಕ್ಕೆ ಹೇಳುವುದೇನೋ ಶೋಷಿತರೇ ಮುಂದೆ ಶೋಷಕರಾಗುತ್ತಾರೆಂದು. ಇನ್ನೇನು 2012 ರಲ್ಲಿ ಮತ್ತೆ ಚುನಾವಣೆ ಬರುತ್ತದೆ. ಆದರೆ ದಲಿತರಲ್ಲಿ ಮಾತ್ರ ಕಳೆದ ಬಾರಿ ಇದ್ದ ಉತ್ಸಾಹ ಮಾತ್ರ ಇಲ್ಲ. ಮಾಯಾವತಿಯವರು ಸಹ ಅಂಬೇಡ್ಕರ್‌ರವರ ತತ್ವಗಳನ್ನು ಗಾಳಿಗೆ ತೂರಿದ್ದಾರೆ. ಅವರ ಮುಂದಿನ ಗೆಲುವುಗಳನ್ನು ನಿರ್ದರಿಸುವುದು ಅವರಲ್ಲಿರುವ ಹಣ ಮಾತ್ರ. ಆದರೆ ಬಡಪಾಯಿ ದಲಿತರು ಈಗಲು ತಮ್ಮ ಹೃದಯದ ಮೂಲೆಯಲ್ಲಿ ಮಾಯಾವತಿಯವರ ದಲಿತಪರ ಮಾಯಾಲೋಕವನ್ನೇ ಕನಸು ಕಾಣುತಿದ್ದಾರೆಂಬುದು ಮಾತ್ರ ಸತ್ಯ. □

ಭಾರತಾದ್ಯಂತ ದಿನಕ್ಕೆ 27 ದೌರ್ಜನ್ಯಗಳು ದಲಿತರ ಮೇಲೆ ನಡೆಯುತ್ತವೆ ಎಂದು ಸರ್ಕಾರವೆ ಒಪ್ಪಿಕೊಳ್ಳುತ್ತಿರುವ ಕಾಲದಲ್ಲಿ ಮಾಯಾವತಿಯವರು ಕನಿಷ್ಟ ಪಕ್ಷ ಉತ್ತರಪ್ರದೇಶದ ದಲಿತರಿಗೆ ನೆಮ್ಮದಿ ನೀಡೇ ನೀಡುತ್ತಾರೆ ಎಂದು ಕನಸು ಕಂಡಿತ್ತು ಈ ದಲಿತ ಲೋಕ. ಆದರೆ ಯು.ಪಿ ಯಲ್ಲಿನ ದಲಿತರ ಸ್ಥಿತಿ ಬೇರೆಯೆ ಇದೆ. ಬೆಹನ್‌ಜೀಯವರ ಆಸಕ್ತಿ ಪ್ರಜಾ ಪ್ರಭುತ್ವದಲ್ಲಲ್ಲದೆ ಸರ್ವಾಧಿಕಾರದಲ್ಲಿರುವುದು ಇತ್ತೀಚಿನ ದಿನಗಳಲ್ಲಿ ಅವರ ವರ್ತನೆಗಳಿಂದ ಗೋಚರಿಸುತ್ತಿದೆ. ದಲಿತನಿಗೆ ಸೂರಿಲ್ಲದಿರುವಾಗ ಅವರಿಗೆ ಅಂಬೇಡ್ಕರ್ ಪಾರ್ಕ್ ಬೇಕು, ದಲಿತನಿಗೆ ಉಣ್ಣಲು ಕೂಳಿಲ್ಲದಿರುವಾಗ ಅವರಿಗೆ ತಮ್ಮ ಮೂರ್ತಿಗಳನ್ನು ಬೀದಿಗಳಲ್ಲಿ ಪ್ರತಿಷ್ಠಾಪಿಸಬೇಕು. ಮಹಾನ್ ಮೂರ್ತಿ ಭಂಜಕ ಬಾಬಾಸಾಹೇಬರು ಇದನ್ನೇ ದಲಿತರಿಗೆ ಹೇಳಿದ್ದು? ಈ ಧೋರಣೆಯನ್ನೇ ದಲಿತರಿಂದ ಬಾಬಾಸಾಹೇಬರು ಬಯಸಿದ್ದು? ದಲಿತರು ಪ್ರಗತಿ ಹೊಂದಲು ರಾಜಕೀಯ ಶಕ್ತಿಯನ್ನು ಪಡೆಯಬೇಕು, ಅದೇ ನಿಮ್ಮನ್ನು ಬಿಡುಗಡೆಗೊಳಿಸುತ್ತದೆ.

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.
ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.
ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಅಂಬೇಡ್ಕರ್ – ಮೌಲಾನ ಆಜಾದ್ :
ಕ್ರಿಟಿಕಲ್ ಇನ್‌ಸೈಡರ್‌ಗಳು ವಿಭಿನ್ನತೆ ನಡುವೆ ಹುಡುಕಾಟ

ಇವತ್ತಿನ ಸಂದರ್ಭದ ರಾಜಕಾರಣದಲ್ಲಿ ಅಂಬೇಡ್ಕರ್ ಹಾಗೂ ಆಜಾದ್ ಸರಕಾರಿ ಯಂತ್ರದ ಆಧುನೀಕತೆಯ ಹಾಗೂ ರಾಷ್ಟ್ರ ನಿರ್ಮಾಣದ ರೂಪಕದಿಂದ ಹೊರತಾದ ರೂಪಕವಾಗ ಬೇಕಾಗಿದೆ. ದಲಿತ-ಮುಸ್ಲಿಮರ ನಡುವೆ ಸಂವಾದ, ಹಾಗೂ ಸಮನ್ವಯತೆಯನ್ನು ಸಾಧಿಸಬೇಕಾದರೆ ಕ್ರಿಟಿಕಲ್ ಇನ್‌ಸೈಡರ್‌ನ ರೂಪಕ ಅತೀ ಮುಖ್ಯವೆಂದರೆ ಅತೀಶಯೋಕ್ತಿಯಾಗಲಾರದು. ಅಂಬೇಡ್ಕರ್-ಆಜಾದ್‌ರವರ ಐತಿಹಾಸಿಕ ವೈರುಧ್ಯಗಳ ನಡುವೆ ಹೊಸ ಸಂಕಥನ, ಹೊಸ ಸಮುದಾಯವನ್ನು ಈಕ್ರಿಟಿಕಲ್ ಇನ್‌ಸೈಡರ್‌ನಿಂದ ನಿರ್ಮಿಸಬಹುದು. ಇದು ಭಾರತದಲ್ಲಿ ಹೊಸ ರಾಜಕಾರಣಕ್ಕೆ ದಾರಿ ಮಾಡಿಕೊಡುವುದರಲ್ಲಿ ಸಂಶಯವಿಲ್ಲ.

ಇತ್ತೀಚಿನ ಒಂದು ಚರ್ಚೆ ಈ ಸಂದರ್ಭದಲ್ಲಿ ಬಹಳ ಮಹತ್ವವೆನಿಸುತ್ತದೆ. ಈ ಚರ್ಚೆ ಮೂಲತಃವಾಗಿ ಇಂದಿನ ಸಂದರ್ಭದಲ್ಲಿ ದಲಿತ–ಮುಸ್ಲಿಮರ ನಡುವೆ ಸಾಮಾಜಿಕ ಹಾಗೂ ತಾತ್ವಿಕ ಸಮನ್ವಯತೆಯನ್ನು ಸಾಧಿಸಲು ಅಗತ್ಯವಿದೆಯೇ? ಇದ್ದರೆ ಅದು ಯಾವ ಸ್ವರೂಪದಲ್ಲಿರಬೇಕು?. ಎರಡನೇದಾಗಿ. ಈ ರೀತಿಯ ಸಮನ್ವಯತೆಯನ್ನು ಯಾವ ಸಂಕೇತಗಳನ್ನು ಉಪಯೋಗಿಸಿ ಸಾಧಿಸಬಹುದು? ಸಮುದಾಯಗಳ ಐಡೆಂಟಿಟಿಗಳನ್ನು ಪ್ರತಿನಿಧಿಸುವ ಅಂಬೇಡ್ಕರ್ ಹಾಗೂ ಮೌಲಾನ ಅಬುಲ್ ಕಲಾಂ ಆಜಾದ್‌ರನ್ನು ಸಂಕೇತಗಳಾಗಿ ಉಪಯೋಗಿಸಬಹುದೇ?

ಈ ರೀತಿಯ ಚರ್ಚೆ ಆರಂಭಗೊಳ್ಳಲು ಕಾರಣಗಳಿವೆ. ದಲಿತ ಹಾಗೂ ಮುಸ್ಲಿಮ್ ಸಮುದಾಯಗಳು ಅಭಿವೃದ್ದಿಯ "ಕೊರತೆ", ಐಡೆಂಟಿಟಿ ಪ್ರಶ್ನೆಗಳಿಂದ, ಮಾರುಕಟ್ಟೆಯ ಅವಕಾಶಗಳಿಂದ, ಗುರುತಿಸುವಿಕೆ ರಾಜಕಾರಣದಿಂದ ಬಳಲುತ್ತಿದ್ದರೂ ಅವರಿಬ್ಬರ ನಡುವೆ ಸಂವಾದಗಳು ಏಕೆ ಅಸಾಧ್ಯವಾಗುತ್ತಿದೆ? ಅವರಿಬ್ಬರ ನಡುವಿನ ಅಂತರ ಏಕೆ ಇನ್ನಷ್ಟು ಹೆಚ್ಚಾಗುತ್ತಿದೆ? ಇದಕ್ಕೆ ಉತ್ತರವನ್ನು ದಿನನಿತ್ಯದ ದೌರ್ಜನ್ಯದ ಸಂದರ್ಭದಲ್ಲಿ, ಎದುರಿಸುತ್ತಿರುವ ವೈರುಧ್ಯಗಳಲ್ಲಿ, ಅವಕಾಶಗಳ ನಷ್ಟಗಳಲ್ಲಿ ನೋಡಬಹುದು. ದಲಿತರ ಮೇಲೆ ಜಾತಿಯ ದೌರ್ಜನ್ಯಗಳು ನಡೆದ ಸಂದರ್ಭದಲ್ಲಿ ಮುಸ್ಲಿಮರು ಪ್ರತಿಕ್ರಿಯಿಸುವುದೇ ಇಲ್ಲ. ಅದೇ ರೀತಿ ಮುಸ್ಲಿಮರ ಮೇಲೆ ದೌರ್ಜನ್ಯಗಳು ನಡೆದಾಗಲೆಲ್ಲ ದಲಿತರು ಮೌನಿಗಳಾಗುತ್ತಾರೆ., ಪ್ರತಿಕ್ರಿಯಿಸುವುದಿಲ್ಲ, ಇದಕ್ಕೆ ಕಾರಣಗಳೇನು?

ಇದಕ್ಕೆ ಕಾರಣಗಳನ್ನು ಹುಡುಕಬಹುದು. ದಲಿತರು ಮತ್ತು ಮುಸ್ಲಿಮರು ಇರುವ ಪ್ರದೇಶ ಹೆಚ್ಚು ಕಡಿಮೆ ಬೇರೆ ಬೇರೆ. ನಗರ ಪ್ರದೇಶಗಳಲ್ಲಿ ಅಧಿಕವಾಗಿ ಎದುರು ಬದುರಾಗಿ ಜೀವಿಸುವುದು ಈ ಸಮುದಾಯಗಳು ಸ್ಲಂಗಳಲ್ಲಿ. ಅದರರ್ಥ ದಲಿತರು ಹಾಗೂ ಮುಸ್ಲಿಮರು ಸಮಷ್ಟಿಯಾದ ಸಮುದಾಯವಾಗಿ ಜೀವಿಸುತ್ತಿದ್ದಾರೆ ಎಂದರ್ಥವಲ್ಲ. ವಾಸ್ತವವಾಗಿ ದಲಿತರಿಗೂ–ಮುಸ್ಲಿಮರ ಜೀವನ ಬದುಕಿಗೂ ವ್ಯತ್ಯಾಸಗಳಿವೆ. ಮುಸ್ಲಿಮರು ದಲಿತರ ಪ್ರಾಥಮಿಕ ವಿರೋಧಿಗಳಲ್ಲ ಅಥವಾ ವೈರುಧ್ಯಗಳಿಲ್ಲ ಅದರೊಂದಿಗೆ ಈ ಸತ್ಯವನ್ನು ಕೂಡ ಅರಿಯಬೇಕು. ದಲಿತರೆಲ್ಲ ಸ್ವತಂತ್ರಗೊಂಡ ಸ್ವಾಯತ್ತ ಸಮುದಾಯಗಳಲ್ಲ. ಹಳ್ಳಿಗಳಲ್ಲಿ ಈಗಲೂ ದಲಿತರ ವಿಮೋಚನೆ ಸಂಪೂರ್ಣಗೊಳ್ಳದ ಪ್ರಕ್ರಿಯೆ. ಅವರಿಗೆ ಭೂ ಸಂಬಂಧಿ ವಿಷಯಗಳು ಈಗಲೂ ಪ್ರಮುಖ. ಅವರ ಪ್ರಾಥಮಿಕ ವಿರೋಧಿಗಳು ಈಗಲೂ ಸವರ್ಣೀಯರು, ಭೂ ಮಾಲೀಕರು, ಹಾಗೂ ಮೇಲ್ಜಾತಿಗಳು. ಆದ ಕಾರಣ ಗ್ರಾಮೀಣ ಪ್ರದೇಶದಲ್ಲಿ, ಜಾತಿಯ ಸಂಘರ್ಷದ ಆಳದಲ್ಲಿ ಭೂ ಸಂಬಂಧಿ ವಿಷಯಗಳಿರುವುದು ಅಷ್ಟೇ ಸ್ಪಷ್ಟ.

ಮುಸ್ಲಿಮರು ಒಂದು ಸ್ವಾಯತ್ತ ಸಮುದಾಯ. ಅವರಿಗೆ ಭೂ ಸಂಬಂಧಿ ವಿಷಯಗಳು, ಹಾಗೂ ಅದರೊಟ್ಟಿಗೆ ಸೇರಿ ಕೊಂಡಿರುವ ಶೋಷಣೆ ಪ್ರಮುಖ ವಿಷಯವಾಗುವುದೇ ಇಲ್ಲ. ಅದರ ನೋವು, ಗಂಭೀರತೆ ಹಾಗೂ ಅದರ ಇತಿಹಾಸ ಮುಸ್ಲಿಮರಿಗೆ ಇಲ್ಲ. ಭೂ ಸಂಬಂಧಿ ಸಂಘರ್ಷಗಳು ನಡೆದಾಗಲೆಲ್ಲ ಮುಸ್ಲಿಮರು ಈ ಕಾರಣಕ್ಕಾಗಿಯೇ ಮೌನವಾಗುತ್ತಾರೆ.



ಮುಸ್ಲಿಮರ ಶೋಷಣೆಯ ರೂಪ ಹಾಗೂ ವೈರುಧ್ಯಗಳು ದಲಿತರಿಗಿಂತ ವಿಭಿನ್ನ. ಮುಸ್ಲಿಮರು ಅತೀ ಚಿಕ್ಕ ಮಾರುಕಟ್ಟೆಯಿಂದ ವಿಶಾಲವಾದ ಮಾರುಕಟ್ಟೆಯಲ್ಲಿ ಕಂಡುಬರುವುದು ಸಹಜ. ಗ್ರಾಮೀಣ ಪ್ರದೇಶದಲ್ಲಿ ಚಿಕ್ಕ ಪುಟ್ಟ ವ್ಯಾಪಾರಿಗಳಾಗಿ ಕಂಡು ಬಂದರೆ, ನಗರ ಪ್ರದೇಶಗಳಲ್ಲಿ ಈ ಸ್ಥಿತಿಗಿಂತ ವಿಭಿನ್ನವೇನಿಲ್ಲ. ವಿಚಿತ್ರವೆಂದರೆ ಬಹಳಷ್ಟು ಕೋಮು ಸಂಘರ್ಷಗಳು ನಡೆಯುವುದು ಮಾರುಕಟ್ಟೆಯ ವಿಷಯದ ಮೇಲೆ. ಮೇಲ್ನೋಟಕ್ಕೆ ಕೋಮುಗಲಭೆಗಳು ವೈಯಕ್ತಿಕ ನೆಲೆಯಲ್ಲಿ ನಡೆಯಬಹುದು–ಇಲ್ಲವೇ ಧಾರ್ಮಿಕ ನೆಲೆಗಟ್ಟಿನಲ್ಲಿ ನಡೆಯಬಹುದು–ಇಲ್ಲವೇ ಹೆಣ್ಣು– ಗಂಡು ವಿಷಯ ಕುರಿತು ಆಗಿರಬಹುದು. ಆದರೆ ಆಳದಲ್ಲಿ ಆರ್ಥಿಕತೆ ಹಾಗೂ ಮಾರುಕಟ್ಟೆಯ ವಿಷಯಗಳು ಪ್ರಮುಖವಾಗಿರುತ್ತವೆ. ಇದನ್ನು ಬೇರೆ ಬೇರೆ ಕೋಮುಸಂಘರ್ಷದ ಸಂದರ್ಭದಲ್ಲಿ ನೋಡಬಹುದು. (ಉದಾಹರಣೆಗೆ ಮಂಗಳೂರಿನ ಕೋಮುಗಲಭೆ, ಬೆಂಗಳೂರಿನ ಕೋಮುಗಲಭೆ ಅಥವಾ ಕೊಡಗಿನ ಕೋಮುಗಲಭೆ). ದುರಂತವೆಂದರೆ ದಲಿತರಿಗೆ ವಿಶಾಲ ಮಾರುಕಟ್ಟೆಯ ಅನುಭವಗಳಿಲ್ಲ, ಮಾರುಕಟ್ಟೆಯ ಶೋಷಣೆ ಹಾಗೂ ಸ್ಪರ್ಧೆಯ ಅನುಭವಗಳಿಲ್ಲ. ವಿರೋಧಾಭಾಸವೆಂದರೆ ಮಾರುಕಟ್ಟೆಯ ಯಜಮಾನರು ದಲಿತರಲ್ಲ. ವಿಚಿತ್ರವೆಂದರೆ ದಲಿತರಿರುವುದು ಸರಕಾರಿ ಶಾಲೆಗಳಲ್ಲಿ, ಕಚೇರಿಗಳಲ್ಲಿಯೇ ಹೊರತು ಮಾರುಕಟ್ಟೆಗಳಲ್ಲಿ ಅಲ್ಲ. ನಗರ ಪ್ರದೇಶದಲ್ಲಿರುವ ಮಾಲ್‌ಗಳಲ್ಲಿ, ವಾಣಿಜ್ಯ ಕೇಂದ್ರಗಳಲ್ಲಿ, ಹೋಟೆಲ್‌ಗಳಲ್ಲಿ, ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಲ್ಲಿ, ಹೈಪರ್ ಮಾರ್ಕೆಟ್‌ಗಳಲ್ಲಿ ಅವರ ಹಿಡಿತವಿಲ್ಲ. ಈ ರೀತಿಯ ಅನುಭವದ ಕೊರತೆಯಿಂದಾಗಿ ದಲಿತರು ಕೋಮುಗಲಭೆ ಸಂದರ್ಭದಲ್ಲಿ ಮುಸ್ಲಿಮರ ಪರವಾಗಿ ನಿಲ್ಲುವುದಿಲ್ಲ. ಹಾಗೂ ಇವರಿಬ್ಬರ ನಡುವೆ ಯಾವುದೇ ಸಂವಾದಗಳು ನಡೆಯುವುದೇ ಇಲ್ಲ.

ಈ ಸಂವಾದವನ್ನು ಹೇಗೆ ನಿರ್ಮಿಸಬಹುದು? ಎರಡು ರಾಷ್ಟ್ರೀಯತೆ, ಉದಾರವಾಗಿ ಹಾಗೂ ಐಡೆಂಟಿಟಿಗಳ ಸಂಕೇತಗಳನ್ನು ವರ್ತಮಾನದಲ್ಲಿ ಉಪಯೋಗಿಸಿ ಈ ರೀತಿಯ ಪ್ರಯತ್ನಗಳನ್ನು ಮಾಡಲು ಸಾಧ್ಯವೆ? ಎಂಬ ಪ್ರಶ್ನೆ ಎದುರಾಗುವುದು ಸಹಜ. ಇದೇ ಸಂದರ್ಭದಲ್ಲಿ ಅಂಬೇಡ್ಕರ್ ಹಾಗೂ ಮೌಲಾನ ಅಬುಲ್ ಕಲಾಂ ಆಜಾದ್‌ರ ಸಂಕೇತಗಳನ್ನು ಉಪಯೋಗಿಸಲು ಸಾಧ್ಯವೆ? ಎಂಬ ಪ್ರಶ್ನೆ ಕೂಡ ಉದ್ಭವಿಸುತ್ತದೆ.

ಅಂಬೇಡ್ಕರ್ – ಮೌಲಾನ ಅಬುಲ್ ಕಲಾಂ ಆಜಾದ್: ವಿಭಿನ್ನತೆ ನಡುವೆ ಹುಡುಕಾಟ

ಮೇಲ್ನೋಟಕ್ಕೆ ಅಂಬೇಡ್ಕರ್ ಹಾಗೂ ಆಜಾದ್ ಇಬ್ಬರೂ ಉದಾರವಾದಿಗಳು, ಒಂದು ರೀತಿಯ ಸಮಾಜವಾದವನ್ನು ಒಪ್ಪಿದವರು, ಪ್ರಜಾಪ್ರಭುತ್ವವನ್ನು ಗಟ್ಟಿಯಾಗಿ ಒಪ್ಪಿದವರು ಹಾಗೂ ಕೋಮುವಾದದ ವಿರೋಧಿಗಳು. ಆದರೆ

ಕಾಂಗ್ರೆಸ್ ಹಾಗೂ ಗಾಂಧಿಯ ವಿಷಯ ಬಂದಾಗಲೆಲ್ಲ ಪರ-ವಿರೋಧಿಗಳಾಗುತ್ತಾರೆ. ಅಂಬೇಡ್ಕರ್‌ರವರಿಗೆ ಅಂದಿನ ಕಾಂಗ್ರೆಸ್ ರಾಜಕಾರಣದೊಂದಿಗೆ ಮೂಲಭೂತ ಭಿನ್ನಭಿಪ್ರಾಯವಿದ್ದದ್ದು ಎಲ್ಲರಿಗೂ ತಿಳಿದ ವಿಷಯ. ಅದು ಎರಡನೇ ಸುತ್ತಿನ ದುಂಡುಮೇಜಿನ ಪರಿಷತ್ತಿನ ಸಂದರ್ಭದಲ್ಲಿ, ಪೂನಾ ಒಪ್ಪಂದದಲ್ಲಿ ಇತ್ಯಾದಿಗಳಲ್ಲಿ ನಿಚ್ಚಳವಾಗಿ ಕಂಡು ಬರುತ್ತದೆ.

ಅಂಬೇಡ್ಕರ್ ಪ್ರಕಾರ, ಗಾಂಧಿಯೊಬ್ಬ ಮಹಾ "ಅಂಹಕಾರಿ"ಈಗೋಯಿಸ್ಟಿಕ್), ಒಬ್ಬ "ಹಿಂದೂ ನಾಯಕ," ಭಾರತದ ರಾಜಕಾರಣವನ್ನೇ ಸ್ವಂತಿಕೆಯ ಜಗಳದ ವಿಷಯವನ್ನಾಗಿ ಪರಿವರ್ತಿಸಿದವರು, ಅಲ್ಲದೇ ಗಾಂಧಿ ಯಾವತ್ತೂ ಟೀಕೆಗಳನ್ನು ಸಂತೋಷದಿಂದ ಒಪ್ಪಿದವರಲ್ಲ ಅಥವಾ ಎದುರಿಸಿದವರಲ್ಲ. ಈ ರೀತಿಯ ಕಲ್ಪನೆ ಆಜಾದ್‌ರಲ್ಲಿ ಕಂಡು ಬರುವುದಿಲ್ಲ. ದುರಂತವೆಂದರೆ ಗಾಂಧಿ-ಅಂಬೇಡ್ಕರ್ ಚರ್ಚೆಯಲ್ಲಿ ಆಜಾದ್ ಎಲ್ಲಿಯೂ ಮುಖಾಮುಖಿಯಾಗುವುದಿಲ್ಲ. ಆಜಾದ್‌ರ ನಿಷ್ಠೆ ಮೂಲತಃವಾಗಿ ಗಾಂಧಿಗೆ ಹಾಗೂ ಕಾಂಗ್ರೆಸ್‌ಗೆ ಇದ್ದದ್ದು ಸರ್ವ ಸತ್ಯ. ಆದಕಾರಣವೇ ಅವರು ಮೂರು ಬಾರಿ ಕಾಂಗ್ರೆಸ್‌ನ ಅಧ್ಯಕ್ಷರಾದರು. ಹತ್ತು ಹಲವು ಬಾರಿ ಕಾಂಗ್ರೆಸಿಗರಂತೆ ವಿವಿಧ ಚಳವಳಿಗಳಿಗೆ ಕೈಜೋಡಿಸಿದರು, ಸೆರೆಮನೆವಾಸ ಕೈಗೊಂಡಿದ್ದರು. ಅವರಿಗೆ ಕಾಂಗ್ರೆಸ್ ಉಸಿರಾಗಿತ್ತು. ಅವರೆಂದೂ ಕಾಂಗ್ರೆಸ್ ಅನ್ನು ವಿರೋಧಿಸಲಿಲ್ಲ ಅಥವಾ ಟೀಕಿಸಲಿಲ್ಲ, ಆದರೆ ಕಾಂಗ್ರೆಸ್‌ನ ಕೆಲವರೊಂದಿಗೆ ಅವರ ಭಿನ್ನಾಬಿಪ್ರಾಯ ಇದ್ದದ್ದು ತಿಳಿದ ಸಂಗತಿ. ಅವರ ಭಿನ್ನಾಭಿಪ್ರಾಯ ಬಹಳ ಮುಖ್ಯವಾಗಿ ಇದ್ದದ್ದು ವಲ್ಲಭ ಬಾಯಿ ಪಟೇಲ್‌ರೊಂದಿಗೆ. ಪಟೇಲ್‌ರ ಅಲ್ಪಸಂಖ್ಯಾಕ ವಿರೋಧಿ ಧೋರಣೆ ಅವರಿಗೆ ಸೂಕ್ಷ್ಮವಾಗಿ ತಿಳಿದಿತ್ತು. ವಾಸ್ತವವಾಗಿ ಅವರನ್ನು ಕಾಂಗ್ರೆಸ್ ತನ್ನ ಜಾತ್ಯತೀತತೆಯ ಪ್ರತೀಕವೆಂಬಂತೆ ಪ್ರತಿಬಿಂಬಿಸಿತ್ತು. ಈ ಕಾರಣಕ್ಕಾಗಿಯೇ ಅವರನ್ನು ಜಿನ್ನಾ "ಶೋ ಬಾಯ್" ಎಂದು ಕರೆದರು. ವಾಸ್ತವವಾಗಿ ವಸಾಹತುಶಾಹಿ ಸಂದರ್ಭದಲ್ಲಿ ಅವರೊಬ್ಬ ಮುಸ್ಲಿಂ ಉದಾರವಾದಿ ಮುಖವೂ ಆಗಿದ್ದರು, ಇದೇ ಕಾರಣಕ್ಕಾಗಿ ಅವರು ಮುಸ್ಲಿಮ್‌ರ ಏಕದ್ವಿತೀಯ ನಾಯಕನಾಗಲು ಅಸಾಧ್ಯವಾಯಿತು. ಇದಕ್ಕೆ ಕಾರಣವಿದೆ: ಒಂದೆಡೆ ಜಿನ್ನಾ ಆ ಸ್ಥಾನವನ್ನು ಕಬಳಿಸಿದರೆ, ಇನ್ನೊಂದೆಡೆ ಮೌಲನಾ ಅಬುಲ್ ಕಲಾಂ ಆಜಾದ್‌ಗೆ ಗಟ್ಟಿಯಾದ ಸಾಮಾಜಿಕ ತಳಹದಿ ಇರಲ್ಲಿಲ್ಲ. ಎಲ್ಲಾ ಮುಸ್ಲಿಮರನ್ನು ಅವರು ಪ್ರತಿನಿಧಿಸಲು ಅವರಿಗೆ ಇದೇ ಕಾರಣಕ್ಕಾಗಿ ಸಾಧ್ಯವಾಗಲಿಲ್ಲ. ದುರಂತವೆಂದರೆ ಅವರೊಬ್ಬ ಭಾರತ ವಿಭಜನೆಯನ್ನು ವಿರೋಧಿಸುವ ಒಂದು ಕ್ಷೀಣ ಧ್ವನಿಯಾಗಿದ್ದರು. ಇದೇ ಕಾರಣಕ್ಕಾಗಿ ಅವರನ್ನು ರಾಷ್ಟ್ರ ನಿರ್ಮಾಣ ಹಾಗೂ ಜಾತ್ಯತೀತತೆಯ ರೂಪಕವಾಗಿ ಬಳಸಲಾಗುತ್ತಿದೆ.

ಎರಡನೇ ವಿಚಿತ್ರವೆಂದರೆ ಮೌಲಾನ ಆಜಾದ್-ಅಂಬೇಡ್ಕರ್ ತಮ್ಮ ಸಮುದಾಯಗಳನ್ನು ಏಕರೂಪಿಯಾಗಿ ಗುರುತಿಸುವುದಿಲ್ಲ. ಆಜಾದ್ ಮುಸ್ಲಿಮರನ್ನು ಏಕರೂಪಿಯಾದ ಸಮುದಾಯ ಅಥವಾ "ಖೋಮ್" ಆಗಿ ಗುರುತಿಸುವುದಿಲ್ಲ. ಅವರಲ್ಲಿ ವಹಬಿಗಳು, ಶಿಯಾ, ಸುನ್ನಿಗಳು ಇತ್ಯಾದಿಗಳಿರುವುದನ್ನು ಗುರುತಿಸಿದರೂ, ಅವರಲ್ಲಿರುವ ವಿವಿಧ ಜಾತಿಗಳನ್ನು ಗುರುತಿಸದೇ ಹೋಗುತ್ತಾರೆ. ಇದು ಅವರ ಸೋಲು ಕೂಡ ಹೌದು. ದುರಂತವೆಂದರೆ ಮುಸ್ಲಿಮರಲ್ಲಿ ದಲಿತ ಸಮುದಾಯಕ್ಕೆ ಸೇರಿರುವ ಅರ್ಜಲ್ಸ್‌ಗಳಿರುವುದನ್ನು 1935ರ ಸುಮಾರಿಗೆ ಗುರುತಿಸಿದ್ದು ಅಂಬೇಡ್ಕರ್. ದುರಂತವೆಂದರೆ ಅಂಬೇಡ್ಕರ್‌ರ ಎಲ್ಲಾ ವಾದಗಳು "ಹಿಂದೂ" ಸಮಾಜದ "ಜಾತಿಗಳ" ವಿಶ್ಲೇಷಣೆಯಿಂದ ಆರಂಭಗೊಳ್ಳುತ್ತವೆ. ಅದು ಮತಾಂತರದ ಕಾಲದ ನಂತರವೂ ನಡೆಯುತ್ತಾ ಹೋಗುತ್ತದೆ. ಹಿಂದೂ ಧರ್ಮ ಅವರ ಪ್ರಕಾರ ಏಕರೂಪಿಯಲ್ಲ, ಅವರು ಮನು ಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟಾಗ ಅವರ ಸಿಟ್ಟು ಇಲ್ಲಿ ವ್ಯಕ್ತವಾಗುತ್ತದೆ.

ಮೌಲಾನ ಆಜಾದ್ ಡಾ. ಬಿ.ಆರ್ ಅಂಬೇಡ್ಕರ್

ಮೌಲಾನ ಆಜಾದ್- ಅಂಬೇಡ್ಕರ್ ತಮ್ಮ ಸಮುದಾಯಗಳನ್ನು ಏಕರೂಪಿಯಾಗಿ ಗುರುತಿಸುವುದಿಲ್ಲ. ಆಜಾದ್ ಮುಸ್ಲಿಮರನ್ನು ಏಕ ರೂಪಿಯಾದ ಸಮುದಾಯ ಅಥವಾ "ಖೋಮ್" ಆಗಿ ಗುರುತಿಸುವುದಿಲ್ಲ. ಅವರಲ್ಲಿ ವಹಬಿಗಳು, ಶಿಯಾ, ಸುನ್ನಿಗಳು ಇತ್ಯಾದಿಗಳಿರುವುದನ್ನು ಗುರುತಿಸಿದರೂ, ಅವರಲ್ಲಿರುವ ವಿವಿಧ ಜಾತಿಗಳನ್ನು ಗುರುತಿಸದೇ ಹೋಗುತ್ತಾರೆ. ಇದು ಅವರ ಸೋಲು ಕೂಡ ಹೌದು. ದುರಂತ ವೆಂದರೆ ಮುಸ್ಲಿಮರಲ್ಲಿ ದಲಿತ ಸಮುದಾಯಕ್ಕೆ ಸೇರಿರುವ ಅರ್ಜಲ್ಸ್‌ಗಳಿರುವುದನ್ನು 1935ರ ಸುಮಾರಿಗೆ ಗುರುತಿಸಿದ್ದು ಅಂಬೇಡ್ಕರ್.

ಮೂರನೆಯದಾಗಿ ರಾಷ್ಟ್ರ ನಿರ್ಮಾಣದ ಸಂದರ್ಭದಲ್ಲಿ ಇವರಿಬ್ಬರೂ ಒಂದಾಗುತ್ತಾರೆ. ಅದಕ್ಕೆ ಪೂರಕವಾಗಿ ನೆಹರೂರವರ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗುತ್ತಾರೆ. ಅಂಬೇಡ್ಕರ್ ನೆಹರೂರವರ ಸಂಪುಟದಲ್ಲಿ ಕಾನೂನು ಮಂತ್ರಿಯಾದರೂ ತಮ್ಮ ಕ್ರಿಟಿಕಲ್ ಇನ್‌ಸೈಡರ್ (ಆಂತರಿಕ ವಿಮರ್ಶಕ) ಚಿಂತನೆಗಳನ್ನು ಬಿಟ್ಟುಕೊಡುವುದಿಲ್ಲ. ಅದು ಬಹಳ ಮುಖ್ಯವಾಗಿ ವ್ಯಕ್ತವಾಗುವುದು ಅವರು ಕ್ಯಾಬಿನೆಟ್‌ಗೆ 1951ರಲ್ಲಿ ರಾಜೀನಾಮೆ ನೀಡುವ ಸಂದರ್ಭದಲ್ಲಿ. ಈ ರೀತಿಯ ರಾಜಕೀಯದ ಕ್ರಿಟಿಕಲ್ ಇನ್‌ಸೈಡರ್ ಆಗಿ ಆಜಾದ್‌ರಲ್ಲೂ ಕಂಡುಬರುತ್ತದೆ. ಇದು ಸಾಧ್ಯವಾಗುವುದು ಅವರ ಭಾರತ ವಿಭಜನೆಯ ವಿರೋಧಿ ಭಾವನೆಯಲ್ಲಿ ಹಾಗೂ ಪಾಕಿಸ್ತಾನದ ಭವಿಷ್ಯದ ಕಲ್ಪನೆಯಲ್ಲಿ ಹೊರತು ಕಾಂಗ್ರೆಸ್‌ನ ಮೂಲಭೂತ ಧೋರಣೆಗಳನ್ನು ವಿರೋಧಿಸುವುದರಲ್ಲಿ ಅಥವಾ ವಿಮರ್ಶಾತ್ಮಕ ಚಿಂತನೆಗಳಲ್ಲಿ ಅಲ್ಲ. ಆಜಾದ್ ಮೂಲತಃವಾಗಿ ಸಾಮಾಜೊ-ಧಾರ್ಮಿಕ ಕ್ರಿಟಿಕಲ್ ಇನ್‌ಸೈಡರ್ ಎಂದರೂ ತಪ್ಪಾಗಲಾರದು. ಸಮುದಾಯದ ಆಧುನಿಕತೆಗೆ ಸಮಾಜೋ-ಧಾರ್ಮಿಕ ಕ್ರಿಟಿಕಲ್ ಇನ್‌ಸೈಡರ್ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ರಾಜಕೀಯ ಕ್ರಿಟಿಕಲ್ ಇನ್‌ಸೈಡರ್. ಅಂಬೇಡ್ಕರ್‌ರವರಲ್ಲಿ ಇವೆರಡು ಯಥೇಚ್ಛವಾಗಿತ್ತು.

ಕ್ರಿಟಿಕಲ್ ಇನ್‌ಸೈಡರ್(ಆಂತರಿಕ ವಿಮರ್ಶಕರು)

ಆಜಾದ್‌ರ ರಾಜಕಾರಣ ಆರಂಭಗೊಳ್ಳುವುದು ಹಿಂದೂ -ಮುಸಿಂ ಐಕ್ಯತೆ ವಾದದಿಂದ. 1923 ರಂದು ತಮ್ಮ ಪ್ರಪ್ರಥಮ ಅಧ್ಯಕ್ಷೀಯ ಬಾಷಣದಲ್ಲಿ ಇದೇ ವಾದವನ್ನು ಮುಂದಿಡುತ್ತಾರೆ,: "Today, if an angel descends from the sky and declared from the heights of Delhi's Qutub Minar that India can get Swaraj in twenty-four hours provided she gives up the idea of Hindu-Muslim unity, I will forego the Swaraj rather than the Hindu-Muslim unity, because if Swaraj is delayed it will be a loss of India alone but if this unity is lost it will be a loss of the entire humanity of the world." ಇದೇ ವಾದವನ್ನು ಮೌಲಾನ ಆಜಾದ್ 1947ರ ಸಂದರ್ಭದಲ್ಲಿ ಕೂಡ ಮಾಡುತ್ತಾರೆ, ಆಸಕ್ತಿಯ ವಿಷಯವೆಂದರೆ ಈ ವಾದಗಳು ಸ್ವಾತಂತ್ರ್ಯ ಬಂದ ವರುಷ ನಿಂತುಬಿಡುತ್ತವೆ. ಅವರಿಗೆ ಸ್ವಾತಂತ್ರೋತ್ತರ ಕಾಲಾವಧಿಯಲ್ಲಿ "ವರ್ಗ" ಪ್ರಶ್ನೆ ಪ್ರಮುಖವಾಗುತ್ತದೆ, ಅವರೇ ಹೇಳುವಂತೆ." ಸ್ವಾತಂತ್ರ್ಯದ ನಂತರ ಭಾರತದಲ್ಲಿ ಕೋಮುವಾದಿ ಸಮಸ್ಯೆಗಳಿರುವುದಿಲ್ಲ, ಹೊರತು ಸಮಸ್ಯೆಗಳು ಆರ್ಥಿಕವಾಗಿರುತ್ತದೆ".

ಭಾರತದ ವಿಭಜನೆಯನ್ನು ವಿರೋಧಿಸಲು ಅವರಿಗೆ ಕಾರಣವಿತ್ತು. ಅವರ ಪ್ರಕಾರ ಭಾರತದ ವಿಭಜನೆ ಹಿಂದೂ ಮುಸ್ಲಿಮ್ ಸಮಸ್ಯೆಗಳಿಗೆ ಪರಿಹಾರವಲ್ಲ. ಖುರಾನ್ ಧರ್ಮದಾರಿತವಾಗಿ ಪ್ರದೇಶಗಳನ್ನು ವಿಭಜಿಸುವಂತೆ ಪ್ರೇರೇಪಿಸುವುದಿಲ್ಲ ಹಾಗೂ ಅನುಮತಿ ನೀಡುವುದಿಲ್ಲ. ಧಾರ್ಮಿಕತೆ ಆಧಾರದ ವಿಭಜನೆ ವೈಮನಸ್ಸನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆಯೇ ಹೊರತು ನಾಶ ಮಾಡುವುದಿಲ್ಲ. ವಿಭಜನೆ ಭೌಗೋಳಿಕತೆಯ ಆಧಾರದ ಮೇಲಾಗಬೇಕೇ ಹೊರತು ಧರ್ಮದ ಮೇಲಲ್ಲ. ಪಾಕಿಸ್ತಾನ ಎಲ್ಲಾ ಮುಸ್ಲಿಮರನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳುವುದು ಕಷ್ಟ. ಮುವತ್ತು ಕೋಟಿ ಮುಸ್ಲಿಮರು ಭಾರತದಲ್ಲಿ ಬಡತನದಲ್ಲಿ ಬದುಕಬೇಕಾದ ಸ್ಥಿತಿ ಉಂಟಾಗಬಹುದು. ಪಾಕಿಸ್ತಾನದ ಕುರಿತು ಆಜಾದ್‌ಗೆ ಇದ್ದಷ್ಟು ಸ್ಪಷ್ಟತೆ ಉಳಿದ ರಾಷ್ಟ್ರೀಯ ನಾಯಕರಿಗಿರಲಿಲ್ಲ. ಪಾಕಿಸ್ತಾನದ ಭವಿಷ್ಯವನ್ನು ಅತ್ಯಂತ ಸ್ಪಷ್ಟವಾಗಿ ಹಾಗೂ ನಿಚ್ಚಳವಾಗಿ ಆಜಾದ್ ಕಂಡಿದ್ದರು. ಇಲ್ಲಿ ಆಜಾದ್ ಒಬ್ಬ ಆಂತರಿಕ ವಿಮರ್ಶಕನಾಗಿ ನಿಚ್ಚಳವಾಗಿ ಕಂಡುಬರುತ್ತಾರೆ. 1947ರ ಸುಮಾರಿಗೆ ಲಾಹೋರ್ ಪತ್ರಿಕೆಗೆ ಅವರು ನೀಡಿದ ಸಂದರ್ಶನದಲ್ಲಿ ಅವರ ಭಾರತದ ವಿಭಜನೆಯ ವಿರೋಧ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಸಂದರ್ಶನ ಅವರ ಜೀವಿತ ಕಾಲದಲ್ಲಿ ಪ್ರಕಟವಾಗಲೇ ಇಲ್ಲ.

ಅವರ ಪ್ರಕಾರ ಪಾಕಿಸ್ತಾನ ಭವಿಷ್ಯದಲ್ಲಿ ಅಂತರ ರಾಷ್ಟ್ರೀಯ ಶಕ್ತಿಗಳ ಕಾರಾಸ್ತಾನದ ಭಾಗವಾಗುತ್ತದೆ. ಅವುಗಳು ಪಾಕಿಸ್ತಾನವನ್ನು ತಮ್ಮ ಹತೋಟಿಯಲ್ಲಿಡಲು ಯತ್ನಿಸಿ ಯಶಸ್ವಿಯಾಗುತ್ತವೆ. ಆಜಾದ್‌ರ ಇನ್ನೊಂದು

ಭವಿಷ್ಯವೆಂದರೆ ಪಾಕಿಸ್ತಾನದ ಪುನಃಹ ಪುನಃಹ ವಿಭಜನೆ ಪೂರ್ವ ಪಾಕಿಸ್ತಾನ (ಈಗಿನ ಬಾಂಗ್ಲಾದೇಶ) ಪಶ್ಚಿಮ ಪಾಕಿಸ್ತಾನದಿಂದ ಬೇರ್ಪಡೆಯಾಗುತ್ತದೆ. ಯಾಕೆಂದರೆ ಪೂರ್ವ ಪಾಕಿಸ್ತಾನದ ಸಂಸ್ಕೃತಿ, ಸಾಮಾಜಿಕ ಜೀವನ ಹಾಗೂ ರಾಜಕೀಯ ಜೀವನ ಪಶ್ಚಿಮ ಪಾಕಿಸ್ತಾನಕ್ಕಿಂತ ವಿಭಿನ್ನ. ಆದಕಾರಣ ಪಾಕಿಸ್ತಾನ ಪುನರ್ ವಿಭಜನೆ ಅನಿವಾರ್ಯ. ಪಶ್ಚಿಮ ಪಾಕಿಸ್ತಾನದಲ್ಲೂ ಇದೇ ರೀತಿಯ ಪುನರಾವರ್ತನೆಯಾಗುವುದರಲ್ಲಿ ಸಂಶಯವಿಲ್ಲ. ಯಾಕೆಂದರೆ ಪಂಜಾಬಿ, ಸಿಂಧ್, ಹಾಗೂ ಇನ್ನಿತರ ಪ್ರಾಂತೀಯ ಸಮಸ್ಯೆ ಇವುಗಳಿಗೆ ಇಂಬು ನೀಡಬಹುದು. ಅಲ್ಲಿರುವ ಬಲಹೀನ ನಾಯಕತ್ವದಿಂದಾಗಿ ಮಿಲಿಟರಿ ಆಡಳಿತ ಅನಿವಾರ್ಯವಾಗುತ್ತದೆ. ಶ್ರೀಮಂತರು ಹಾಗೂ ಕೈಗಾರಿಕೋದ್ಯಮಿಗಳು ದೇಶದ ಸಂಪತ್ತನ್ನು ಸೂರೆಗೊಂಡು ದೇಶವನ್ನು ಸಾಲದ ದೇಶವನ್ನಾಗಿ ಪರಿವರ್ತಿಸುತ್ತಾರೆ. ಇಲ್ಲಿ ಧಾರ್ಮಿಕ ಸಂಯಮವೆನ್ನುವುದು ಒಂದು ಮರೀಚಿಕೆಯಾಗುತ್ತದೆ. ವಾಸ್ತವವಾಗಿ ಪಾಕಿಸ್ತಾನದ ಭವಿಷ್ಯವನ್ನು ನಿಚ್ಚಳವಾಗಿ ನೋಡಿದ ವ್ಯಕ್ತಿ ಎಂದರೆ ತಪ್ಪಾಗಲಾರದು.

ಮೌಲನ ಆಜಾದ್ ಸಮಾಜೋ-ಧಾರ್ಮಿಕ ಕ್ರಿಟಿಕಲ್ ಇನ್‌ಸೈಡರ್ ಆಗಿ ಕಂಡು ಬರುವುದು ಮೂರು ಹಂತದಲ್ಲಿ. ಅವರು ಎತ್ತಿದ ಕೆಲವು ಧಾರ್ಮಿಕ ಪ್ರಶ್ನೆಗಳು ವಾಸ್ತವವಾಗಿ ಅವರನ್ನು ಹೆಚ್ಚು ಕಡಿಮೆ ಒಬ್ಬ ಸೂಫಿ ಸಂತರನ್ನಾಗಿ ನಮ್ಮ ಮುಂದಿಡುತ್ತದೆ. ಇಸ್ಲಾಂನ ಕೆಲವು ಐತಿಹಾಸಿಕ ತಪ್ಪುಗಳನ್ನು ಅವರು ಮಾಡುವ ಪಟ್ಟಿ ಪ್ರಥಮ ಹಂತವೆನ್ನಬಹುದು. ಅದಕ್ಕೆ ಅವರು ನೀಡುವ ಕೆಲವು ಉದಾಹರಣೆಗಳನ್ನು ಇಲ್ಲಿ ಉಲ್ಲೇಖಿಸುವುದು ಉತ್ತಮ." In Karbala the family members of the Holy Prophet were martyred by those Muslims who claimed companionship of the Prophet. Was that right? Hajjaj was a Muslim general and he subjected the holy mosque at Makka to brutal attack. Was that right? No sacred words can justify or sanctify a false motive.

ಎರಡನೇದಾಗಿ ಅವರು ಮುಸ್ಲಿಂ ಗುಂಪುಗಳು ಇಸ್ಲಾಂ ಅನ್ನು ಒಂದು ನಿರ್ದಿಷ್ಟ "ವ್ಯವಸ್ಥೆಯಾಗಿ", "ಚಲನಹೀನ" ಹಾಗೂ, "ವಂಶಪಾರಂಪರ್ಯ" ಧರ್ಮವಾಗಿ ಮಾರ್ಪಡಿಸುವುದರ ಕುರಿತು ಕಟು ಟೀಕೆಯನ್ನು ಮಾಡುತ್ತಾರೆ. ಇದೇ ರೀತಿ ಅವರು ಮುಸ್ಲಿಂ ಧರ್ಮಗುರುಗಳಾದ ಉಲೇಮಗಳ ಕುರಿತು ಕೂಡ ಟೀಕೆಗಳನ್ನು ಮಾಡುತ್ತಾರೆ. ಮೂರನೇ ಹಂತದಲ್ಲಿ ಅವರು ಇಸ್ಲಾಂ ಅನ್ನು ಬೇರೆ ಬೇರೆ ಧರ್ಮಗಳೊಂದಿಗೆ ಸಮೀಕರಿಸುತ್ತಾರೆ: ಜೈನ, ಬೌದ್ಧ, ಕ್ರಿಶ್ಚಿಯಾನಿಟಿ, ಜೋರಾಸ್ಟ್ರಿಯನ್ ಇತ್ಯಾದಿ. ಇದನ್ನು ಮೂಲಭೂತವಾಗಿ ಇಸ್ಲಾಂನ ಚಿಂತಕರು ಒಪ್ಪುವುದಿಲ್ಲ. ಆದರೆ ಮೌಲಾನ ಆಜಾದ್‌ರ ಹೆಜ್ಜೆ ಒಂದು ರೀತಿಯ ಕ್ರಾಂತಿಯ ಹೆಜ್ಜೆ ಎಂದರೆ ತಪ್ಪಾಗಲಾರದು. ಒಂದೆಡೆ ಧರ್ಮಗಳ ನಡುವೆ ಐಕ್ಯತೆಯನ್ನು ವಾದಿಸುತ್ತಾ, ಇನ್ನೊಂದೆಡೆ ಇನ್ನಿತರ ಧರ್ಮದೊಂದಿಗೆ ಸಮೀಕರಿಸುವುದು ಅವರ ಕ್ರಿಟಿಕಲ್ ಇನ್‌ಸೈಡರ್ ಮುಖವನ್ನು ಎತ್ತಿ ತೋರಿಸುತ್ತದೆ. ಅವರ ಸಮೀಕರಣವನ್ನು ವಹದತ್ ಎ ದಿನ್ ಎಂದೆಲ್ಲಾ ಕರೆಯುತ್ತಾರೆ.

ಇದಕ್ಕೆ ತೀರಾ ವಿರುದ್ಧವಾಗಿರುವುದು ಅಂಬೇಡ್ಕರ್‌ರ ರಾಜಕಾರಣ. ಅವರ ರಾಜಕಾರಣ ಆರಂಭಗೊಳ್ಳುವುದು ಹಿಂದೂ-ಮುಸ್ಲಿಂ ಐಕ್ಯತೆಗಿಂತಲೂ ಜಾತಿ ಹಾಗೂ ಹಿಂದೂ ಧರ್ಮದ ವಿಶ್ಲೇಷಣೆಯಿಂದ. ಅವರ ಪ್ರಕಾರ ಹಿಂದೂ "ಸಂಯಮ ಶೀಲ" ಧರ್ಮವಲ್ಲ. ಅವರಲ್ಲಿ ಹಿಂದೂ-ಮುಸ್ಲಿಂ ಐಕ್ಯತೆ ಅಸಾಧ್ಯವೆಂಬ ಪರಿಕಲ್ಪನೆ ಇತ್ತೇ ಎಂಬ ಗುಮಾನಿ ಆಗಾಗ ಬರುವುದು ಸಹಜ. ಇದಕ್ಕೆ ಪೂರ್ವಕವಾಗಿ ಪಾಕಿಸ್ತಾನದ ಸ್ಥಾಪನೆಗೆ ಅವರು ನೀಡಿದ ಬೆಂಬಲ-ಭಾರತದ ಉಳಿವಿಗಾಗಿ ಹಾಗೂ ಮುಸ್ಲಿಮರು ಬಯಸಿದರೆ ನೀಡಬೇಕೆಂಬ ವಾದ ಇಲ್ಲಿ ಪ್ರಸ್ತುತ. ಅಲ್ಲದೇ ಅವರು ದಕ್ಷಿಣಾ ಏಷ್ಯಾದ ಇಸ್ಲಾಂ ಕುರಿತು ಸ್ವಲ್ಪ ಮಟ್ಟಿಗೆ ಟೀಕೆಯನ್ನು ಕೂಡ ಮಾಡಿದ್ದರು, ಅದರಲ್ಲೂ ಇಸ್ಲಾಂನಲ್ಲಿ ಮಹಿಳಾ ಸ್ವಾತಂತ್ರ್ಯದ ಕುರಿತು, ಬಾಲ್ಯ ವಿವಾಹ ಕುರಿತು ಅವರಿಗೆ ತಮ್ಮದೇ ಆದ ಅಭಿಪ್ರಾಯಗಳಿದ್ದವು. ಸ್ವಾತಂತ್ರ್ಯದ ನಂತರ ಮುಸ್ಲಿಂ ಚುನಾವಣಾ ಕ್ಷೇತ್ರದ ಕುರಿತು ಅವರ ಸಂದೇಹ ಇಲ್ಲಿ ಸೇರಿಸಬೇಕು. ಅಲ್ಲದೇ ಬೌದ್ಧ ಧರ್ಮ ಭಾರತದಲ್ಲಿ ನಶಿಸಲು ಬ್ರಾಹ್ಮಣರೊಂದಿಗೆ, ಮುಸ್ಲಿಮರು ಕೂಡ ಕಾರಣ ಎಂದು ನಂಬಿದ್ದರು. ಈ ಎಲ್ಲಾ ಟೀಕೆಗಳನ್ನು, ವಿಮರ್ಶೆಗಳನ್ನು ಮಾಡುವಾಗ ಮೌಲಾನ ಆಜಾದ್ ಹಾಗೂ ಅಂಬೇಡ್ಕರ್ ಎಂದೂ ಮುಖಾಮುಖಿಯಾಗಿರಲಿಲ್ಲ. ಇದು ಬೌದ್ಧಿಕ ದುರಂತವೂ ಹೌದು.

ಅವರ ಧರ್ಮದ ವಿಶ್ಲೇಷಣೆ ಮತಾಂತರ ಸಂದರ್ಭದಲ್ಲೂ ಕಂಡು ಬರುತ್ತದೆ. ಅವರಿಗೆ ಬೌದ್ಧ ದರ್ಮ ಆಕರ್ಷಣೆಯಾಗಲು ಅದರಲ್ಲಿದ್ದ ಮೂರು ತತ್ವಗಳು ಕಾರಣ. ಈ ತತ್ವಗಳು ಹಿಂದೂ ಧರ್ಮದಲ್ಲಿರಲಿಲ್ಲ ಎಂಬ ವಾದವನ್ನು ಈ ಸಂದರ್ಭದಲ್ಲಿ ಮಂಡಿಸುತ್ತಾರೆ. ಪ್ರಜ್ಞಾ, ಕರುಣಾ ಹಾಗೂ ಸಮತಾ. ಹಿಂದೂ ಧರ್ಮವನ್ನು ವಿರೋಧಿಸಲು ಅದರಲ್ಲಿರುವ ಜಾತಿ ಹಾಗೂ ಚಾತುರ್ವರ್ಣ ವ್ಯವಸ್ಥೆ ಕೂಡ ಅಷ್ಟೇ ಕಾರಣವೆಂದರೂ ತಪ್ಪಾಗಲಾರದು.

ಪಾಕಿಸ್ತಾನದ ಕುರಿತು ಆಜಾದ್‌ಗೆ ಇದ್ದಷ್ಟು ಸ್ಪಷ್ಟತೆ ಉಳಿದ ರಾಷ್ಟ್ರೀಯ ನಾಯಕರಿಗಿರಲಿಲ್ಲ. ಪಾಕಿಸ್ತಾನದ ಭವಿಷ್ಯವನ್ನು ಅತ್ಯಂತ ಸ್ಪಷ್ಟವಾಗಿ ಹಾಗೂ ನಿಚ್ಚಳವಾಗಿ ಆಜಾದ್ ಕಂಡಿದ್ದರು. ಇಲ್ಲಿ ಆಜಾದ್ ಒಬ್ಬ ಆಂತರಿಕ ವಿಮರ್ಶಕನಾಗಿ ನಿಚ್ಚಳವಾಗಿ ಕಂಡುಬರುತ್ತಾರೆ. 1947ರ ಸುಮಾರಿಗೆ ಲಾಹೋರ್ ಪತ್ರಿಕೆಗೆ ಅವರು ನೀಡಿದ ಸಂದರ್ಶನದಲ್ಲಿ ಅವರ ಭಾರತದ ವಿಭಜನೆಯ ವಿರೋಧ ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಸಂದರ್ಶನ ಅವರ ಜೀವಿತ ಕಾಲದಲ್ಲಿ ಪ್ರಕಟವಾಗಲೇ ಇಲ್ಲ. ಅವರ ಪ್ರಕಾರ ಪಾಕಿಸ್ತಾನ ಭವಿಷ್ಯದಲ್ಲಿ ಅಂತರ ರಾಷ್ಟ್ರೀಯ ಶಕ್ತಿಗಳ ಕಾರಾಸ್ತಾನದ ಭಾಗವಾಗುತ್ತದೆ. ಅವುಗಳು ಪಾಕಿಸ್ತಾನವನ್ನು ತಮ್ಮ ಹತೋಟಿಯಲ್ಲಿಡಲು ಯತ್ನಿಸಿ ಯಶಸ್ವಿಯಾಗುತ್ತವೆ. ಪ್ರಾಂತೀಯ ಸಮಸ್ಯೆ ಹಾಗೂ ಅಲ್ಲಿರುವ ಬಲಹೀನ ನಾಯಕತ್ವದಿಂದಾಗಿ ಮಿಲಿಟರಿ ಆಡಳಿತ ಅನಿವಾರ್ಯವಾಗುತ್ತದೆ.

1916 ಇಸವಿಯಲ್ಲಿ ಕೊಲಂಬಿಯಾ ವಿ.ವಿಯಲ್ಲಿ ನಡೆದ ಸೆಮಿನಾರ್‌ರೊಂದರಲ್ಲಿ CASTES IN INDIA: Their Mechanism, Genesis and Development ಎಂಬ ಪ್ರಬಂಧವನ್ನು ಮಂಡಿಸುವ ಸಂದರ್ಭದಲ್ಲಿ ಅವರ ಕ್ರಿಟಿಕಲ್ ಇನ್‌ಸೈಡರ್ (ಆಂತರಿಕ ವಿಮರ್ಶಕ) ಸ್ಪಷ್ಟವಾಗಿ ಕಂಡುಬರುತ್ತದೆ. ಇದನ್ನು ಪ್ರಥಮ ಹಂತವೆನ್ನಬಹುದು. ಜಾತಿಯ ವಿಶ್ಲೇಷಣೆಯ ಸಂದರ್ಭದಲ್ಲಿ ಅಂಬೇಡ್ಕರ್ ಯೋಚನೆಗಳು ಸಂಶೋಧಕನ ರೂಪದಲ್ಲಿ ಕಂಡು ಬರುವುದು ಸಹಜ. ಅವರು ಮೂಲಭೂತವಾಗಿ ಒಬ್ಬ ಸಮಾಜ ಶಾಸ್ತ್ರದ ಸಂಶೋಧಕ. ಆದಕಾರಣವೇ ಅವರ ವಾದಗಳು ತಾರ್ಕಿಕತೆಯಿಂದ ಕೂಡಿದ್ದವು. ಈ ರೀತಿಯ ತಾರ್ಕಿಕತೆ ಗಾಂಧಿಯಲ್ಲಾಗಲಿ, ಆಜಾದ್‌ರಲ್ಲಿ ಕಂಡು ಬರುವುದಿಲ್ಲ.

ಕ್ರಿಟಿಕಲ್ ಇನ್‌ಸೈಡರ್‌ನ ಎರಡನೇ ಹಂತವೆಂದರೆ ದೇವಸ್ಥಾನದ ಪ್ರವೇಶದ ಸಂದರ್ಭ. ಆ ಸಂದರ್ಭದಲ್ಲಿ ಅವರು ಹೇಳಿದ ಮಾತು ಉಲ್ಲೇಖನೀಯ, "ದೇವಸ್ಥಾನ ಪ್ರವೇಶವು ಗ್ರೇಡೆಡ್ ಅಸಮಾನತೆಯನ್ನು ಕಡಿಮೆ ಮಾಡುವುದಿಲ್ಲ, ಚಾತುರ್ವರ್ಣ ವ್ಯವಸ್ಥೆಯನ್ನು ನಾಶಮಾಡುವುದೇ ಇದಕ್ಕೆ ಪರಿಹಾರ". ಇದರ ಪಟ್ಟಿಗೆ ವಾಲ್ಮೀಕಿ ರಾಮಾಯಣದ ವಿಮರ್ಶೆಯನ್ನು, ಮನು ಸ್ಮೃತಿಯ ವಿಮರ್ಶೆ ಕೂಡ ಸೇರಿಸಬೇಕು.

ಅಂಬೇಡ್ಕರ್‌ರವರು ರಾಜಕೀಯ ಕ್ರಿಟಿಕಲ್ ಇನ್‌ಸೈಡರ್ (ಆಂತರಿಕ ವಿಮರ್ಶಕ)ನಾಗಿ ಕಂಡು ಬರುವುದು ನೆಹರು ಮಂತ್ರಿಮಂಡಲಕ್ಕೆ ರಾಜೀನಾಮೆ ನೀಡುವ ಸಂದರ್ಭದಲ್ಲಿ ಹಾಗೂ ಸಂವಿಧಾನ ರಚನಾ ಸಮಿತಿಯ ವಿವಿಧ ಚರ್ಚೆಗಳಲ್ಲಿ. ಅಂಬೇಡ್ಕರ್‌ರವರ ರಾಜೀನಾಮೆ ವಿಷಯ ಬಂದಾಗಲೆಲ್ಲಾ ಒಂದು ವಾದವನ್ನು ಸರ್ವೆಸಾಮಾನ್ಯವಾಗಿ ತೇಲಿ ಬಿಡಲಾಗುತ್ತದೆ. ಅದು ಮೂಲತಃವಾಗಿ ನೆಹರೂ ಹಾಗೂ ಅಂಬೇಡ್ಕರ್‌ರವರ ನಡುವೆ ಹಿಂದೂ ಕೊಡ್ ಬಿಲ್ ಕುರಿತು ಇದ್ದ ಭಿನ್ನಾಭಿಪ್ರಾಯದ ಸುತ್ತಾ ಕೇಂದ್ರೀಕರಣಗೊಳ್ಳುತ್ತದೆ. ಈ ಸಂದರ್ಭದಲ್ಲಿ ಅಂಬೇಡ್ಕರ್ ಹೇಳಿದ ಮಾತು ಉಲ್ಲೇಖನೀಯ: did not know how I could carry on with those who have never been my friends." ವಾಸ್ತವವಾಗಿ ಹಿಂದೂ ಕೋಡ್ ಬಿಲ್ಲನೊಂದಿಗೆ ಅವರ ರಾಜೀನಾಮೆಗೆ ಬೇರೆ ಕಾರಣಗಳಿದ್ದವು. ಯೋಜನಾ ಡಿಪಾರ್ಟ್‌ಮೆಂಟ್ ಅನ್ನು ನೀಡುವ ಭರವಸೆಯನ್ನು ನೀಡಿದರೂ, ಅವರಿಗೆ ನಿರಾಕರಿಸಲಾಯಿತು. ಅಲ್ಲದೇ ಅವರು ಹೇಳುವಂತೆ. "I was not even appointed to be a member of main Committees of the Cabinet such as Foreign Affairs Committee, or the Defence Committee. When the Economics Affairs Committee was formed".

ನೆಹರೂರವರು ಅಲ್ಪಸಂಖ್ಯಾತರಿಗೆ ತೋರಿಸುತ್ತಿದ್ದ ಕಾಳಜಿ, ದಲಿತರ ಕುರಿತು ಇಲ್ಲದಿರುವುದು ಕೂಡ ಬಹು ಮುಖ್ಯ ಕಾರಣವಾಗಿತ್ತು. ಅದರಲ್ಲೂ ಸಂವಿಧಾನಿಕ ಗ್ಯಾರಂಟಿಗಳ ಬಗ್ಗೆ ನೆಹರೂರವರ ನಿರಾಸಕ್ತಿ ಇಲ್ಲಿ ಪ್ರಮುಖ ಕಾರಣವಾಗಿತ್ತು. □

ವಾಸ್ತವವಾಗಿ ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಅಂಬೇಡ್ಕರ್ ಬಹುರೂಪಿಯಾಗುತ್ತಾ ಹೋದರೆ, ಆಜಾದ್ ಸೀಮಿತಗೊಂಡ ರೂಪಕರಾದರು. ವಾಸ್ತವವಾಗಿ ಅಂಬೇಡ್ಕರ್ ಐದು ರೂಪಕವಾಗುತ್ತಾ ಹೋದರು. ಸರಕಾರಿ ಯಂತ್ರದ ರಾಷ್ಟ್ರ ನಿರ್ಮಾಣದ ರೂಪಕ, ದಲಿತ ಆಧುನಿಕತೆಯ ರೂಪಕ, ದಲಿತ ನಾಗರಿಕ ಸಮಾಜದ ರೂಪಕ, ದಲಿತ ಪರ್ಯಾಯ ರಾಜಕಾರಣದ ರೂಪಕ, ಹಾಗೂ ದಲಿತ ಐಡೆಂಟಿಟಿಯ ರೂಪಕ. ಈ ರೂಪಕಗಳಿಂದಾಗಿ ಇವತ್ತು ಸಾವಿರಾರು ದಲಿತ ಚಿಂತಕರನ್ನು, ದಲಿತ ಸಂಘಟನೆಗಳನ್ನು, ದಲಿತ ರಾಜಕೀಯ ಪಕ್ಷಗಳನ್ನು, ದಲಿತ ಪರ್ಯಾಯ ರಾಜಕಾರಣವನ್ನು ನೋಡಲು ಸಾಧ್ಯವಾಗಿದೆ. ಇದೇ ಸಂದರ್ಭದಲ್ಲಿ ಅಂಬೇಡ್ಕರ್‌ರವರ ಛಾಪು ಜಗತ್ತಿನ ವಿವಿಡೆಡೆಯ ಹೋರಾಟಗಳಲ್ಲಿ, ನಾಗರಿಕ ಸಮಾಜದಲ್ಲಿ ಹರಡುತ್ತಿರುವುದು ವಾಸ್ತವ. ಸರಕಾರಿ ಯಂತ್ರ ಕೂಡ ಅವರನ್ನು ತನ್ನ ರಾಷ್ಟ್ರ ನಿರ್ಮಾಣದ ರೂಪಕವಾಗಿ ಬಳಸುತ್ತಾ ಹೋಯಿತು. ಇದು ಅದಕ್ಕೆ ಅನಿವಾರ್ಯವಾಗಿತ್ತು ಹಾಗೂ ಅವಶ್ಯಕವೂ ಆಗಿತ್ತು.

ದುರಂತವೆಂದರೆ ಮೌಲಾನ ಆಜಾದ್ ಸರಕಾರಿ ಯಂತ್ರದ ರಾಷ್ಟ್ರ ನಿರ್ಮಾಣದ ರೂಪಕವಾಗುತ್ತಾ ಹೋದರೆ ಹೊರತು ಇನ್ನಿತರ ರೂಪಕವಾಗಲಿಲ್ಲ. ಅವರು ಇವತ್ತಿಗೂ ಉರ್ದು ಭಾಷಿಕರ, ಉತ್ತರ ಭಾರತದ ಚಿಂತಕರಾದರೇ ಹೊರತು ಅಖಿಲ ಭಾರತದ ಕೆಳಸ್ತರದ ಮುಸ್ಲಿಮರ ರೂಪಕವಲ್ಲ. ಸರಕಾರಿ ಯಂತ್ರ ಅವರ ಹೆಸರಿನಲ್ಲಿ ಶಾಲೆ, ವಿಶ್ವವಿದ್ಯಾನಿಲಯ, ಕಟ್ಟಡ, ರಸ್ತೆ, ಆಸ್ಪತ್ರೆ, ಇತ್ಯಾದಿಗಳನ್ನು ನಿರ್ಮಾಣ ಮಾಡುತ್ತಾ ಹೋಯಿತು. ಇದರೊಂದಿಗೆ ಸಾವಿರಾರು ವಿದ್ಯಾರ್ಥಿವೇತನಗಳು ಇತ್ಯಾದಿಗಳನ್ನು ನೀಡುತ್ತಾ ಹೋಯಿತು. ಆಜಾದ್ ಮುಸ್ಲಿಂ-ಆಧುನಿಕತೆಯ, ನಾಗರಿಕತೆಯ, ಕೆಳಸ್ತರದ ರೂಪಕವಾಗುವ ಜರೂರು ಇಂದಿನ ಅವಶ್ಯಕತೆಗಳಲ್ಲಿ ಒಂದು ಎಂದರೂ ತಪ್ಪಾಗಲಾರದು.

ವಿಚಿತ್ರವೆಂದರೆ ಸರಕಾರಿ ಯಂತ್ರದ ಆಧುನಿಕತೆಯ ಸಂದರ್ಭದಲ್ಲಿ ಆಜಾದ್ "ಕ್ರಿಟಿಕಲ್ ಇನ್‌ಸೈಡರ್" (ಆಂತರಿಕ ವಿಮರ್ಶಕ)ನಾಗಿ ನಿರ್ಮಾಣಗೊಳ್ಳಲಿಲ್ಲ ಹಾಗೂ ಪ್ರತಿನಿಧಿಸಲಿಲ್ಲ. ಇದನ್ನು ಸರಕಾರಿ ವಿಸ್ಮೃತಿ ಎಂದರೆ ತಪ್ಪಾಗಲಾರದು. ಮುಸ್ಲಿಂ ಆಧುನಿಕತೆಗೆ "ಕ್ರಿಟಿಕಲ್ ಇನ್‌ಸೈಡರ್" (ಆಂತರಿಕ ವಿಮರ್ಶಕ) ಅತೀ ಅವಶ್ಯಕವೆಂದು ಮನಗಂಡಿದ್ದರೂ, ಅದನ್ನು ಪ್ರಜ್ಞಾಪೂರ್ವಕವಾಗಿ ಮರೆಮಾಚಲಾಯಿತು. ಇದೇ ರೀತಿಯ ರಾಜಕಾರಣವನ್ನು ಅಂಬೇಡ್ಕರ್‌ರೊಂದಿಗೆ ಮಾಡಲು ಸಾಧ್ಯವಾಗಲಿಲ್ಲ. ಅದು ಸಾಧ್ಯಾನೂ ಇರಲಿಲ್ಲ. ಇವತ್ತಿನ ಸಂದರ್ಭದ ರಾಜಕಾರಣದಲ್ಲಿ ಅಂಬೇಡ್ಕರ್ ಹಾಗೂ ಆಜಾದ್ ಸರಕಾರಿ ಯಂತ್ರದ ಆಧುನೀಕತೆಯ ಹಾಗೂ ರಾಷ್ಟ್ರ ನಿರ್ಮಾಣದ ರೂಪಕದಿಂದ ಹೊರತಾದ ರೂಪಕವಾಗಬೇಕಾಗಿದೆ. ದಲಿತ-ಮುಸ್ಲಿಮರ ನಡುವೆ ಸಂವಾದ, ಹಾಗೂ ಸಮನ್ವಯತೆಯನ್ನು ಸಾಧಿಸಬೇಕಾದರೆ ಕ್ರಿಟಿಕಲ್ ಇನ್‌ಸೈಡರ್‌ನ ರೂಪಕ ಅತೀ ಮುಖ್ಯವೆಂದರೆ ಅತಿಶಯೋಕ್ತಿಯಾಗಲಾರದು. ಅದನ್ನು ಪ್ರಾಥಮಿಕ ರೂಪಕವೆಂದರೂ ತಪ್ಪಲ್ಲ. ಅಂಬೇಡ್ಕರ್-ಆಜಾದ್‌ರವರ ಐತಿಹಾಸಿಕ ವೈರುಧ್ಯಗಳ ನಡುವೆ ಹೊಸ ಸಂಕಥನ, ಹೊಸ ಸಮುದಾಯವನ್ನು ಈ ಕ್ರಿಟಿಕಲ್ ಇನ್‌ಸೈಡರ್‌ನಿಂದ ನಿರ್ಮಿಸಬಹುದು. ಇದು ಭಾರತದಲ್ಲಿ ಹೊಸ ರಾಜಕಾರಣಕ್ಕೆ ದಾರಿ ಮಾಡಿಕೊಡುವುದರಲ್ಲಿ ಸಂಶಯವಿಲ್ಲ. □

ಕನ್ನಡದ ಅನ್ನ ಕೊಡುವ ಭಾಷೆ

(7ನೇ ಪುಟದಿಂದ)

ದುರ್ಬಳಕೆ ಮಾಡಿಕೊಂಡು ಕೊಬ್ಬಿರುವ ಇಂಗ್ಲಿಷ್ ಮಾಧ್ಯಮ ಶಾಲೆಗಳ ಲಾಭಕೋರತನವನ್ನು ತಡೆಯದೇ ಹೋದರೆ ಸರ್ಕಾರಿ ಶಾಲೆಗಳಿಗೆ ಉಳಿಗಾಲವೇ ಇಲ್ಲ. ಸರ್ಕಾರದಲ್ಲಾಗಲಿ, ಕನ್ನಡ ಪರ ಮನಸ್ಸುಗಳಲ್ಲಾಗಲಿ ಅವುಗಳನ್ನು ಉಳಿಸುವ ಯಾವುದೇ ಕಾರ್ಯಕ್ರಮಗಳು, ಮಾರ್ಗೋಪಾಯಗಳು ಇಲ್ಲ. ಹಾಗಾಗಿ ಇಂಗ್ಲಿಷ್ ಮಾಧ್ಯಮವನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇಲ್ಲ, ಎಲ್ಲ ಶಾಲೆಗಳಲ್ಲೂ ಕನ್ನಡದೊಂದಿಗೆ ಇಂಗ್ಲಿಷ್ ಮಾಧ್ಯಮವನ್ನೂ ಆರಂಭಿಸಬೇಕು. ಸಂವಿಧಾನ ತಿದ್ದುಪಡಿ ಹೊರತಾಗಿ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಲು ಸಾಧ್ಯವೇ ಇಲ್ಲದ ಕಾರಣ ಹಾಗೂ ಈ ವಿಚಾರದಲ್ಲಿ ಸಂವಿಧಾನ ತಿದ್ದುಪಡಿ ಅಸಾಧ್ಯವಾದ ಕಾರಣ ಇಂಥ ನಿರ್ಧಾರಗಳಿಗೆ ಸರ್ಕಾರ ಮುಂದಾಗಬೇಕು. ಸಾಂಸ್ಕೃತಿಕ ವಲಯದ ಕನ್ನಡ ಪರ ಮನಸ್ಸುಗಳೂ ಇದನ್ನು ಒಪ್ಪಲು ಸಿದ್ಧರಾಗಬೇಕು. ಒಂದು ಪಕ್ಷ ಎಲ್ಲ ಶಾಲೆಗಳಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮಕ್ಕೆ ಅವಕಾಶ ಮಾಡಿಕೊಟ್ಟರೆ ಏನಾಗಬಹುದು? ಬಹುತೇಕರು ಅಂದು ಕೊಂಡಂತೆ ಕನ್ನಡ ನಾಶವಾಗುತ್ತದೆಯೇ? ಯಾವಕಾರಣಕ್ಕೂ ಕನ್ನಡ ನಾಶವಾಗುವುದಿಲ್ಲ. ಎಲ್ಲ ಶಾಲೆಗಳಲ್ಲಿ ಒಂದು ವಿಷಯವಾಗಿ ಕನ್ನಡವನ್ನು ಕಡ್ಡಾಯ ಮಾಡಬಹುದು. ಆಡಳಿತ ಭಾಷೆಯಾಗಿ ಕನ್ನಡವನ್ನು ಕಡ್ಡಾಯಗೊಳಿಸಬಹುದು. ಉದ್ಯೋಗಕ್ಕಾಗಿ ಕನ್ನಡವನ್ನು ಕಡ್ಡಾಯ ಮಾಡಬಹುದು. ಪ್ರಾಮಾಣಿಕವಾಗಿ ಹೀಗೆ ಮಾಡುವುದರಿಂದ ಪ್ರತಿಯೊಬ್ಬರೂ ಕನ್ನಡವನ್ನು ಕಲಿಯಲೇ ಬೇಕಾಗುತ್ತದೆ. ಆಗ ಕನ್ನಡ 'ಅನ್ನದ ಭಾಷೆ' ಯಾಗುತ್ತದೆ. ಕನ್ನಡ ಸಂಸ್ಕೃತಿ ಬೆಳೆಯುತ್ತದೆ. ಜನರ ಆಡು ಭಾಷೆಯಾಗಿರುವುದರಿಂದ ಕನ್ನಡಕ್ಕೇನೂ ಧಕ್ಕೆ ಆಗುವುದಿಲ್ಲ.

5. ಕರ್ನಾಟಕದಲ್ಲಿ ಯಾವ ಕಾರಣಕ್ಕೂ ಕೇಂದ್ರೀಯ ಪಠ್ಯಕ್ರಮದ ಶಾಲೆಗಳ ಆರಂಭಕ್ಕೆ ಅವಕಾಶ ಮಾಡಿ ಕೊಡಬಾರದು. ಸರ್ಕಾರ ತುಂಬಾ ನಾಜೂಕಾಗಿ ಮಾಡುತ್ತಿರುವ ಮಹಾದ್ರೋಹ ಇದು. ಕೇಂದ್ರ ಸರ್ಕಾರಿ ನೌಕರರ ಮಕ್ಕಳ ಸಂಖ್ಯೆಗಿಂತ ಹೆಚ್ಚಿರುವ ಇಂಥ ಎಲ್ಲ ಶಾಲೆಗಳನ್ನು ಕೂಡಲೇ ಮುಚ್ಚಿ, ಅಲ್ಲಿನ ಮಕ್ಕಳಿಗೆ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಅವಕಾಶ ಕಲ್ಪಿಸಬೇಕು. ಕೇಂದ್ರ ಪಠ್ಯಕ್ರಮಕ್ಕಿಂತ ರಾಜ್ಯ ಪಠ್ಯಕ್ರಮ ಗುಣಮಟ್ಟದಲ್ಲಿ ಕಡಿಮೆ ಇದ್ದರೆ ಅದನ್ನು ಹೆಚ್ಚಿಸಬೇಕೇ ಹೊರತು ಕೇಂದ್ರ ಪಠ್ಯ ಕ್ರಮದ ಶಾಲೆಗಳಿಗೆ ಅನುಮತಿ ನೀಡಬಾರದು.

6. ನಾವೆಲ್ಲ ಎಷ್ಟೇ ಪ್ರತಿಭಟನೆ ಹೋರಾಟ ಮಾಡಿದರೂ 5–10 ಮಕ್ಕಳಿಗೆ ಒಂದು ಶಾಲೆಯನ್ನು ನಡೆಸುವುದು ಕಾರ್ಯ ಸಾಧುವಲ್ಲದ ಮಾತಾಗುತ್ತದೆ. ಇದಕ್ಕಿರುವ ಏಕೈಕ ಪರಿಹಾರವೆಂದರೆ, ಸರ್ಕಾರ ಇಂಥ ಶಾಲೆಗಳ ಮಕ್ಕಳಿಗೆ ಕಡ್ಡಾಯವಾಗಿ ಉಚಿತ ಸಾರಿಗೆ ವ್ಯವಸ್ಥೆಮಾಡಿ ಅಕ್ಕ ಪಕ್ಕದ ಶಾಲೆಗಳಿಗೆ ಕರೆತಂದು ಶಿಕ್ಷಣ ನೀಡುವು ದೊಂದೇ. ಹೀಗೆ ಮಾಡುವುದರಿಂದ ಯಾವ ಮಕ್ಕಳಿಗೂ ತೊಂದರೆ ಯಾಗುವುದಿಲ್ಲ. ಅದು ಸರ್ಕಾರಿ ಶಾಲೆಯಾಗಲಿ, ಖಾಸಗಿ ಶಲೆಯಾಗಲಿ 5–10 ಮಕ್ಕಳಿಗಾಗಿ ಶಾಲೆ ನಡೆಸುವುದು ಅವಾಸ್ತವಿಕ ಮಾತ್ರವಲ್ಲ, ಮಕ್ಕಳ ಮನೋವಿಕಾಸಕ್ಕೆ ಕೂಡ ಅದು ಮಾರಕ. ಇದನ್ನು ನಾವೆಲ್ಲಾ ನಿರ್ಭಾವುಕರಾಗಿ ಅರ್ಥಮಾಡಿಕೊಳ್ಳಬೇಕು.

7. ಇಂಗ್ಲಿಷ್ ನಮಗೀಗ ಅನಿವಾರ್ಯವಾದ ಸಂಪರ್ಕ ಭಾಷೆ, ಜೊತೆಗೆ ಇಂದಿನ ಅನ್ನದ ಭಾಷೆ ಕೂಡ ಹೌದು. ಇದನ್ನು ಯಾವುದೇ ಪೂರ್ವಾಗ್ರಹವಿಲ್ಲದೆ, ಮೋಹ-ಭಾವ ಇಲ್ಲದೆ ಒಪ್ಪಿಕೊಳ್ಳಬೇಕು. ಇನ್ನು ಕನ್ನಡ ಮರೆಯಾಗುತ್ತದೆ ಎಂಬುದೂ ನಮ್ಮ ಭ್ರಮೆ. ಅಲ್ಲದೆ ಒಂದು ಭಾಷೆ ಕಾಲಾನುಕ್ರಮದಲ್ಲಿ ನಶಿಸಿಹೋಗುತ್ತದೆ ಎನ್ನುವುದಾದರೆ ಅದನ್ನು ತಡೆಯಲು ಹೇಗೆ ಸಾಧ್ಯ? ಜಗತ್ತಿನ ಶ್ರೇಷ್ಠ ಮಹಾಕಾವ್ಯಗಳ ರಚನೆಗೆ ಬಳಸಿದ್ಧ ಸಂಸ್ಕೃತ ಭಾಷೆ ಇಂದು ಏನಾಗಿದೆ? ಬದಲಾವಣೆ ಒಂದು ನೈಸರ್ಗಿಕ ಕ್ರಿಯೆ, ಮನುಷ್ಯನ ಅನ್ನಕ್ಕೆ-ಬದುಕಿಗೆ ಆಸರೆಯಾಗದ ಯಾವುದೂ ಉಳಿಯುವುದೂ ಇಲ್ಲ, ಬೆಳೆಯುವುದೂ ಇಲ್ಲ! ಭಾಷೆ ಮನುಷ್ಯರಿಗಾಗಿಯೇ ಹೊರತು, ಭಾಷೆಗಾಗಿ ಮನುಷ್ಯ ಅಲ್ಲ. ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಯಾವುದೂ ಶಾಶ್ವತವಲ್ಲ.

8. ನಮಗೆ ಇಂದು ಅಗತ್ಯವಾಗಿ ಬೇಕಾಗಿರುವುದು ಸಮಾನ ಶಿಕ್ಷಣ. ಭಾಷೆ ಅಲ್ಲ. ಎಲ್ಲ ಶಾಲೆಗಳಲ್ಲಿ ಒಂದೇ ಗುಣಮಟ್ಟದ ಶಿಕ್ಷಣ ಸಿಗುವಂತೆ ಮಾಡಬೇಕಾದ ಅಗತ್ಯ ಈಗಿನ ತುರ್ತಾಗಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕಲು ಇಂಥ ಶಿಕ್ಷಣ ಅನಿವಾರ್ಯವಾಗಿದೆ. ಅಸಮಾನ ಶಿಕ್ಷಣ ವ್ಯವಸ್ಥೆಯಿಂದಾಗಿ, ಬಡವರು, ದುರ್ಬಲರು ವಿಶೇಷವಾಗಿ ಗ್ರಾಮೀಣ ಪ್ರದೇಶದ ಮಕ್ಕಳು ಕೀಳರಿಮೆಯಿಂದ ನರಳುವಂತಾಗಿದೆ. ಉದ್ಯೋಗವಕಾಶಗಳಿಂದ ವಂಚಿತರಾಗಬೇಕಾಗಿದೆ. ನಗರ ಪ್ರದೇಶದ ಶ್ರೀಮಂತ ಮಕ್ಕಳಿಗೆ ಸಿಗುವಂಥ ಗುಣಮಟ್ಟದ ಶಿಕ್ಷಣ ಎಲ್ಲ ವರ್ಗದ ಎಲ್ಲ ಪ್ರದೇಶದ ಮಕ್ಕಳಿಗೂ ಸಿಕ್ಕಬೇಕು. ಉತ್ತಮ ಸಮಾನ ಶೈಕ್ಷಣಿಕ ವಾತಾವರಣ ಕಲ್ಪಿಸಿದರೆ ಎಲ್ಲ ವರ್ಗದ ಮಕ್ಕಳೂ ಸಮಾನ ಸ್ಪರ್ಧೆಗೆ ಸಿದ್ಧರಾಗುತ್ತಾರೆ.

9. ಒಟ್ಟು ಉದ್ಯೋಗಾವಕಾಶಗಳಲ್ಲಿ ಸರ್ಕಾರಿ ಉದ್ಯೋಗಗಳ ಪಾಲು ಕೇವಲ ಶೇ. ಒಂದೂವರೆಯಿಂದ ಎರಡರಷ್ಟು ಮಾತ್ರ. ಉಳಿದೆಲ್ಲಾ ಖಾಸಗಿ ಕ್ಷೇತ್ರಕ್ಕೆ ಸೇರಿದವು. ಖಾಸಗಿ ಕ್ಷೇತ್ರದಲ್ಲಿ ಇಂಗ್ಲಿಷ್ ಇಲ್ಲದೇ ಯಾವ ಕೆಲಸಗಳೂ ಸಿಗುವುದಿಲ್ಲ. ಕನ್ನಡದ ಬಗ್ಗೆ ಮಾತನಾಡುವ ನಾವ್ಯಾರೂ ಉದ್ಯೋಗದಾತರಲ್ಲ. ಉದ್ಯೋಗ ದೊರಕಿಸಿ ಕೊಡುವ ಶಕ್ತಿ ಇರುವವರೂ ಅಲ್ಲ. ಈ ಕಟು ವಾಸ್ತವವನ್ನು ಅರ್ಥಮಾಡಿಕೊಳ್ಳದಿದ್ದರೆ ನಾವು ಯಾರಿಗೆ ಅನ್ಯಾಯ ಮಾಡುತ್ತಿದ್ದೇವೆಂದು ನಮಗೇ ಅರ್ಥವಾಗುವುದಿಲ್ಲ. ಹಳೆತಲೆಮಾರಿನ ಕರ್ಮಠರಂತೆ ಈಗಲೂ ನಾವು ಚಿಂತಿಸುವುದರಿಂದ ಕನ್ನಡಿಗರನ್ನು ಅವಕಾಶ ವಂಚಿತರನ್ನಾಗಿಸುತ್ತೇವೆಂಬ ತಿಳವಳಿಕೆ ನಮಗೆಲ್ಲ ಬರಬೇಕಾಗಿದೆ.

10. ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವುದೆಂದರೆ ಅದು ತಳಸಮುದಾಯದ ಎಲ್ಲರನ್ನು ಉಳಿಸಿಕೊಂಡಂತೆ. ಅಲಕ್ಷಿತ ಗ್ರಾಮೀಣ ಸಮುದಾಯವನ್ನು, ಆ ಮೂಲಕ ಕನ್ನಡಿಗರನ್ನು ಉಳಿಸಿಕೊಂಡಂತೆ. ಸರ್ಕಾರಿ ಶಾಲೆಗಳು ಉಳಿಯಬೇಕಾದರೆ ಪ್ರಾಥಮಿಕ ಹಂತದಿಂದಲೇ ಇಂಗ್ಲಿಷ್ ಕಲಿಸುವುದು ಅನಿವಾರ್ಯ. ಎಲ್ಲ ವರ್ಗ ಹಾಗೂ ಸಮುದಾಯಗಳ ಕನ್ನಡಿಗರೆಲ್ಲ ಇಡಿಯಾಗಿ ಇಂಗ್ಲಿಷ್ ಬೇಕೆಂದು ಕೇಳುತ್ತಿರುವಾಗ ನಾವು ಕೆಲವರು ಮಾತ್ರ ಅದು ಬೇಡವೆಂದರೆ ಅದು ಹೇಗೆ ಜನಪರವಾಗುತ್ತದೆ? ನಾವೆಲ್ಲಾ ಸ್ವಲ್ಪ ವಾಸ್ತವವಾಗಿ ಚಿಂತಿಸುವುದು ಒಳ್ಳೆಯದಲ್ಲವೇ? □

ಭ್ರಷ್ಟಾಚಾರ ವಿರೋಧಿ ಆಂದೋಲನ:
ಅಸಲಿ ಮತ್ತು ನಕಲಿ ಹೋರಾಟಗಳು

ಹೋರಾಟಗಳ ಯುಗ

ಇದು ಹೋರಾಟಗಳ ಕಾಲ ಅಥವಾ ಇದು ಹೋರಾಟಗಳ ಯುಗ. ಒಂದು ಸಣ್ಣ ಓಣಿಯಿಂದ ಹಿಡಿದು, ಜಿಲ್ಲಾ ಪಂಚಾಯತ್, ವಿಧಾನಸಭೆ ಮತ್ತು ಲೋಕಸಭೆಯವರೆಗೆ ಇದರ ವಿಸ್ತಾರ ಇದೆ. ಕೃಷಿ, ಕೈಗಾರಿಕೆ, ಶಿಕ್ಷಣ, ಸರಕಾರಿ ವಲಯ, ಖಾಸಗಿ ವಲಯ ಹೀಗೆ ವಿವಿಧ ವಲಯಗಳಲ್ಲಿ, ಶೋಷಕರು ತಮ್ಮ ಮೇಲೆ ನಡೆಸಲಾದ ಅನ್ಯಾಯಗಳ ವಿರುದ್ಧ ಜನರು ಬೇರೆ ಬೇರೆ ವಿಧಾನಗಳಲ್ಲಿ ಪ್ರತಿಭಟನೆ, ಹೋರಾಟ ಮುಂತಾದುವುಗಳನ್ನು ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಹೋರಾಟ, ಪ್ರತಿಭಟನೆ ಇಲ್ಲದ ಯಾವ ದಿನವನ್ನೂ ಕಾಣುವಂತಿಲ್ಲ. ಇವುಗಳಲ್ಲಿ ಕೆಲವು ಸುದ್ದಿಯಾಗುತ್ತವೆ. ಮತ್ತೆ ಕೆಲವು ಸುದ್ದಿಯಾಗುವುದಿಲ್ಲ. ಇವುಗಳಲ್ಲಿ ಕೆಲವು ಸುದ್ದಿಯಾಗಲೆಂದೆ ನಡೆಸಲಾಗುವ ಹೋರಾಟಗಳು.

ಇನ್ನೂ ಕೆಲವು ಹೋರಾಟಗಳು ನಡೆಯುತ್ತವೆ. ಅವು ಎಲ್ಲಿಯೂ ಸುದ್ಧಿಯಾಗುವುದಿಲ್ಲ. ಅವಕ್ಕೆ ಸುದ್ದಿಯಾಗಲು ಅವಕಾಶ, ಸೌಲಭ್ಯ ಮತ್ತು ಸಾಮರ್ಥ್ಯಗಳು ಇರುವುದಿಲ್ಲ. ಅಥವಾ ಇವು ಇದ್ದರೂ ಆ ಹೋರಾಟಗಳನ್ನು ಯಾವುದೇ ಕಾರಣಕ್ಕೂ ಸುದ್ದಿ ಮಾಡುವುದೇ ಇಲ್ಲ. ಯಾಕೆಂದರೆ ಅವನ್ನು ಸುದ್ದಿ ಮಾಡಲು ಅವು ಬಯಸುವುದಿಲ್ಲ. ಜನಪದರಲ್ಲಿ ಕೆಲವು ಮಂತ್ರಗಳನ್ನು ಗುಪ್ತವಾಗಿ ಹೇಳುವ ಪದ್ಧತಿ ಇದೆ. ಅದಕ್ಕೆ ಭಾಷೆಯನ್ನು ಬಳಸಲಾಗುತ್ತದೆ. ಆದರೆ ಆ ಭಾಷೆ ಶಬ್ಧವಾಗುವುದಿಲ್ಲ ಅಥವಾ ಅವನ್ನು ಶಬ್ಧಗಳನ್ನಾಗಿ ಉಚ್ಚರಿಸಬಾರದು. ಅವು ಆಯಾ ಸಮುದಾಯಗಳ ನಂಬಿಕೆಗಳು.

ಮದ್ದು ಹಾಕುವುದು, ಮಾಟ–ಮಂತ್ರ ಮಾಡಿಸುವುದು, ದೈಯ್ಯ ಮತ್ತು ದೇವರಿಗೆ ಹುಯಿಲು ಹಾಕುವುದು ಮುಂತಾದ ನಂಬಿಕೆಗಳು ಇವತ್ತಿಗೂ ರೂಢಿಯಲ್ಲಿವೆ. ಇವೂ ಕೂಡ ಎದುರಾಳಿಯ ವಿರುದ್ಧ ಹೋರಾಟದ ಕೆಲವು ಮಾದರಿಗಳು. ಅವನ್ನು ಸುದ್ದಿ ಮಾಡಿದರೆ ಅವು ಫಲ ಕೊಡುವುದಿಲ್ಲ ಎಂಬುದು ಅಲ್ಲಿಯ ನಂಬಿಕೆ. ಹಾಗಾಗಿ ಈ ಬಗೆಯ ಗುಪ್ತ ಹೋರಾಟಗಳು ಎಲ್ಲಿಯೂ ಸುದ್ದಿ ಯಾಗುವುದೂ ಇಲ್ಲ; ಅವನ್ನು ಸುದ್ದಿ ಮಾಡುವುದೂ ಇಲ್ಲ. ಸುದ್ದಿ ಮಾಡುವುದು ಅವುಗಳ ಗುರಿ ಅಲ್ಲವೇ ಅಲ್ಲ.

ಇನ್ನೊಂದು ಬಗೆಯ ಹೋರಾಟಗಳು ನಡೆಯುತ್ತವೆ. ಅವುಗಳು ಎಷ್ಟು ಸುದ್ದಿಯಾದವು ಎಂದು ಪತ್ರಿಕೆಗಳಲ್ಲಿ ಸೆಂಟಿಮೀಟರ್ ಮತ್ತು ಮಿಲಿಮೀಟರ್‌ಗಳಲ್ಲಿ ಅಳತೆ ಮಾಡಲಾಗುತ್ತದೆ. ಟಿವಿ ಮುಂತಾದ ಮಾಧ್ಯಮಗಳಲ್ಲಿ ಎಷ್ಟು ನಿಮಿಷ ಮತ್ತು ಎಷ್ಟು ಸೆಕೆಂಡ್ ಪ್ರಚಾರ ಪಡೆದವು ಎಂದು ಲೆಕ್ಕಹಾಕಲಾಗುತ್ತದೆ. ಹೋರಾಟಗಳನ್ನು ಸುದ್ದಿ ಮಾಡಲು ಬೇರೆ ಬೇರೆ ಉದ್ದೇಶಗಳು ಇರಬಹುದು. ಹೋರಾಟಗಳನ್ನು ಮತ್ತು ಅವುಗಳ ವಿಚಾರಗಳನ್ನು ಪ್ರಚಾರ ಮಾಡುವುದು, ಜನರನ್ನು ಹೋರಾಟಗಾರರನ್ನಾಗಿ ಪರಿವರ್ತಿಸುವುದು, ಹೋರಾಟಗಾರರನ್ನು ಪ್ರಭಾವಿಸುವುದು, ಪ್ರಚೋದಿಸುವುದು, ಸಂಘಟಿಸುವುದು. ಹೋರಾಟಗಳಲ್ಲಿ ಅವರ ಬದ್ಧತೆಯನ್ನು ಗಟ್ಟಿಗೊಳಿಸುವುದು ಇತ್ಯಾದಿ ಕಾರಣಗಳು ಇರಬಹುದು. ಸಾಮಾಜಿಕ, ರಾಜಕೀಯ ಸಮಸ್ಯೆಗಳತ್ತ ಜನರ ಗಮನ ಸೆಳೆಯುವುದು, ಶತ್ರು ವಲಯಕ್ಕೆ ಬಿಸಿ ಮುಟ್ಟಿಸುವುದು, ಮಿತ್ರ ವಲಯವನ್ನು ಸಂಘಟಿಸಿಕೊಳ್ಳುವುದು ಮತ್ತು ವಿಸ್ತರಿಸಿಕೊಳ್ಳುವುದು ಹೀಗೆ ಇದರ ಪಟ್ಟಿ ಬೆಳೆಯುತ್ತದೆ. ಆದರೆ ಕೆಲವು ಹೋರಾಟಗಳನ್ನು ಕೇವಲ ಪ್ರಚಾರಕ್ಕಾಗಿಯೇ ಮತ್ತು ಸುದ್ದಿ ಮಾಡುವುದಕ್ಕಾಗಿಯೇ ಮಾಡಲಾಗುತ್ತದೆ.



ಅಣ್ಣಾ ಹಜಾರೆ ಅವರ ನೇತೃತ್ವದಲ್ಲಿ ನಡೆಸಲಾದ 'ಭ್ರಷ್ಟಾಚಾರ ವಿರೋಧಿ ಹೋರಾಟ'ವನ್ನು ಇದರಲ್ಲಿ ಯಾವುದಕ್ಕೆ ಸೇರಿಸಬೇಕು ಎಂದು ಆಲೋಚನೆ ಮಾಡಬೇಕಾಗಿದೆ. 'ಆ ಹೋರಾಟ ಏನು ಫಲ ಕೊಟ್ಟಿತು?' ಎಂಬ ಪ್ರಶ್ನೆಯನ್ನು ಕೇಳಬೇಕಾಗಿದೆ. ಇದಕ್ಕೆ ಕೆಲವರು ಬೇರೆ ಬೇರೆ ಉತ್ತರವನ್ನು ಕೊಡಬಹುದು. ಆ ಹೋರಾಟ ಏನು ಮಾಡದಿದ್ದರೂ ಭಾರತದಾದ್ಯಂತ ಸುದ್ದಿ ಮಾಡಿತು. ಆ ಹೋರಾಟವನ್ನು ವ್ಯಾಪಕವಾಗಿ ಪ್ರಚಾರ ಮಾಡಲಾಯಿತು. ಆ ಹೋರಾಟಕ್ಕೆ ವ್ಯಾಪಕ ಪ್ರಚಾರ ಕೊಡುತ್ತಿದ್ದ ಕಾಲದಲ್ಲೆ ನಡೆದ ಅನೇಕ ಸಂಗತಿಗಳು ಪ್ರಚಾರದಿಂದ ದೂರ ಉಳಿದವು. ಹಾಗಾಗಿ 'ಭ್ರಷ್ಟಾಚಾರ ವಿರೋಧಿ ಹೋರಾಟ'ದ ಮೂಲಕ ನಡೆಸಲಾದ ಸುದ್ದಿ ಮತ್ತು ಅದರ ಪರಿಣಾಮಗಳನ್ನು ಕುರಿತು ಚರ್ಚೆ ಮಾಡುವುದಷ್ಟೆ ಈಗ ಉಳಿದಿರುವ ಕೆಲಸ.

ಆ ಹೋರಾಟವನ್ನು ವರ್ಣಿಸಿರುವ ಭಾಷೆ, ಅದನ್ನು ವೈಭವೀಕರಿಸಿರುವ ಆಲಂಕಾರಿಕ ಪದಗಳು, ಮೌಲ್ಯಮಾಪನ ಮಾಡಲು ಬಳಸಿದ ವಿಶೇಷಣಗಳು ಇವೆಲ್ಲವೂ ಈಗ ಆ ಹೋರಾಟವನ್ನು ಕುರಿತು ಮೂಲ ಆಕರಗಳಾಗಿ ಪರಿಣಮಿಸಿವೆ. ಆ ಹೋರಾಟದಲ್ಲಿ ಮೇಲು ಮಧ್ಯಮ ವರ್ಗ, ಶ್ರೀಮಂತ ವರ್ಗದ ಅನೇಕರನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು, ಟೀನ್ ಏಜಿನ ವಿದ್ಯಾರ್ಥಿ ಸಮೂಹವನ್ನು ಬಲಾತ್ಕಾರವಾಗಿ ಭಾಗವಹಿಸುವಂತೆ ಮಾಡಲಾಯಿತು. 'ಇಡೀ ಭಾರತವೇ ಹೋರಾಟದಲ್ಲಿ ಒಂದಾಗಿ ಹೋರಾಟಕ್ಕೆ ಧುಮುಕಿ[illegible] ಎಂಬಂತೆ ಬಿಂಬಿಸಲಾಯಿತು. ಅದನ್ನು 'ಎರಡನೇ ಸ್ವಾತಂತ್ರ್ಯ ಹೋರಾಟ' ಎಂದೂ, ಅಣ್ಣಾ ಹಜಾರೆಯನ್ನು 'ಎರಡನೇ ಗಾಂಧಿ' ಎಂದೂ ವರ್ಣಿಸಲಾಯಿತು. ಜೊತೆಗೆ ಅಣ್ಣಾ ಹಜಾರೆ ತಂಡದ ಅಪೇಕ್ಷೆಯ 'ಜನಲೋಕಪಾಲ ಮಸೂದೆ' ಜಾರಿಗೆ ಬಂದರೆ ಇಡೀ ಭಾರತದ ಈಗಿನ ಚಿತ್ರಣವೇ ಬೆಳಗಾಗುವುದರಲ್ಲೆ ಬದಲಾಗಿ ಬಿಡುತ್ತದೆ ಎಂದು ಪ್ರಚಾರ ಮಾಡಲಾಯಿತು.

ಆ ಹೋರಾಟದ ಬಗ್ಗೆ ಯಾವ ಪ್ರತಿಕ್ರಿಯೆ ನೀಡಬಹುದು ಎಂಬುದು ಈಗ ಉಳಿದಿರುವ ಸಾಮಾನ್ಯ ಪ್ರಶ್ನೆ. ಆ ಹೋರಾಟವು ಅಂತಿಮ ಹಂತದಲ್ಲಿ ಏನು ಫಲ ಕೊಟ್ಟಿತು, ಏನು ಫಲ ಕೊಡಲಿಲ್ಲ ಎಂಬುದು ಒಂದು ಆಯಾಮ. ಇದು ಆ ಹೋರಾಟದ ಪ್ರತಿಫಲ ಅಪೇಕ್ಷೆಯ ಮೌಲ್ಯಮಾಪನದ ಮಾದರಿ. ಇದಲ್ಲದೆ ಆ ಹೋರಾಟವನ್ನು ನೋಡಲು ಇನ್ನೊಂದು ಆಯಾಮ ಕೂಡ ಸಾಧ್ಯ. ಅದು ಆ ಹೋರಾಟದ ಸಮಯದಲ್ಲಿ ನಿರ್ಮಾಣ ಮಾಡಿರುವ ಭಾಷಿಕ ನಿರೂಪಣೆ ಮತ್ತು ದಾಖಲೆಯ ಸ್ವರೂಪ ಯಾವುದು ಎಂಬುದು.

ಅಣ್ಣಾ ಹಜಾರೆ ತಂಡವು ಭ್ರಷ್ಟಾಚಾರ ವಿರೋಧಿ ಎಂಬ ನಕಲಿ ಹೋರಾಟವನ್ನು ಮಾಡುವುದರ ಮೂಲಕ ವ್ಯಾಪಕ ಪ್ರಚಾರ ಪಡೆಯಿತು. ಕಾರ್ಪೋರೇಟ್ ಕುಟುಂಬಗಳು, ಬಹುರಾಷ್ಟ್ರೀಯ ಕಂಪನಿಗಳು ಅಣಾ ತಂಡದ ಮೂಲಕ ಈ ಹೋರಾಟವನ್ನು ಮಾಡಿಸಿದವು. ಈ ಹೋರಾಟವು ತಾನು ಎಷ್ಟು ನಕಲಿ ಎಂಬುದನ್ನು ತೋರಿಸುವುದರ ಜೊತೆಗೇ ನಕಲಿ ಹೋರಾಟಗಳ ತಂತ್ರಗಳನ್ನೂ ಮತ್ತು ಅವುಗಳ ಹಿಂದಿರುವ ಶಕ್ತಿಗಳನ್ನೂ ತೆರೆದು ತೋರಿಸಿದೆ.

ಡಾ. ಬಿ. ಎಂ. ಪುಟ್ಟಯ್ಯ

ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಬಿ. ಎಂ. ಪುಟ್ಟಯ್ಯನವರು ಈಗಾಗಲೇ ನಾಡಿನ ಅಕಡೆಮಿಕ್ ವಲಯಕ್ಕೆ ಪರಿಚಿತರು. ಶೈಕ್ಷಣಿಕ ಮತ್ತು ಸೈದ್ಧಾಂತಿಕ ವಿಷಯಗಳಲ್ಲಿ ಎಂದೂ ರಾಜಿ ಮನೋಭಾವ ತೋರದ ಇವರು ಸಂಘಟನೆ-ಹೋರಾಟಗಳಲ್ಲಿ ತೊಡಗಿಸಿಕೊಂಡು ತಾವೂ ಕಲಿತು, ಹೋರಾಟಗಾರರನ್ನು ಸೃಷ್ಟಿ ಮಾಡಿದ ಹೆಗ್ಗಳಿಕೆ ಪಡೆದಿದ್ದಾರೆ.

ಇದುವರೆಗಿನ ಅಧ್ಯಯನಗಳಿಗಿಂತ ಮತ್ತು ಸಂಶೋಧನೆಗಳಿಗಿಂತ ಹೊಸದಾದುದನ್ನು ಹಾಗೂ ಭಿನ್ನವಾದುದನ್ನು ಖಚಿತವೂ, ಸ್ಪಷ್ಟವೂ ಆದ ರೀತಿಯಲ್ಲಿ ಹೇಳುವ ಶಕ್ತಿಶಾಲಿ ಗುಣವನ್ನು ದಕ್ಕಿಸಿಕೊಂಡಿದ್ದಾರೆ. ನಾಡಿನಾದ್ಯಂತ ವಿವಿಧ ಗೋಷ್ಠಿ, ಸಭೆ, ಸಮಾರಂಭಗಳಲ್ಲಿ ವಿಚಾರ ಪ್ರಚೋದಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ಶಿಕ್ಷಣ, ಹೋರಾಟ, ಚಳವಳಿ, ರಾಜಕೀಯ, ಆರ್ಥಿಕ ವಿಷಯಗಳಲ್ಲದೆ ರೈತರು, ದಲಿತರು, ಮಹಿಳೆಯರು, ಮತ್ತು ಕಾರ್ಮಿಕರ ಸ್ಥಿತಿಗತಿಯ ಬಗ್ಗೆ ಪರಿಣಾಮಕಾರಿ ವಿಚಾರಗಳನ್ನು ಮಂಡಿಸಿದ್ದಾರೆ.

ನಾಡಿನಾದ್ಯಂತ ಉತ್ತಮ ವಾಗ್ಮಿ, ಶಕ್ತಶಾಲಿ ಚಿಂತಕ ಎಂಬ ಹೆಸರಿಗೆ ಪುಟ್ಟಯ್ಯ ಪಾತ್ರರಾಗಿದ್ದಾರೆ. 60ಕ್ಕೂ ಹೆಚ್ಚು ಸಂಶೋಧನೆ ಮತ್ತು ವಿಮರ್ಶೆ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರ ವಿಚಾರಗಳಿಂದ ವಿದ್ಯಾರ್ಥಿ, ಯುವಜನರು ಹಾಗೂ ಬುದ್ಧಿಜೀವಿಗಳು ಸ್ಫೂರ್ತಿ ಪಡೆದಿದ್ದಾರೆ. ಹಸಿವು, ಅಪಮಾನ, ಅಸಮಾನತೆ ಮತ್ತು ಶೋಷಣೆ ಇಲ್ಲದ ಸಮಾಜ ನಿರ್ಮಾಣಕ್ಕಾಗಿ ದುಡಿಯುವುದೇ ಅಕಾಡೆಮಿಕ್ ಕೆಲಸ ಎಂದು ಇವರು ಭಾವಿಸಿದ್ದಾರೆ. ಈ ಸಂಚಿಕೆಯಿಂದ 'ಬತ್ತದ ಬಯಲು' ಅಂಕಣದ ಮೂಲಕ ಅವರ ಚಿಂತನೆಗಳು 'ಸಂವಾದ'ದಲ್ಲಿ ಅನಾವರಣಗೊಳ್ಳಲಿವೆ.

ಒಂದು ಘಟನೆ ನಡೆದ ಮೇಲೆ ಅದನ್ನು ಕುರಿತು ಸೃಷ್ಟಿ ಮಾಡುವ ಭಾಷಿಕ ದಾಖಲೆ ಮಾತ್ರ ಗಟ್ಟಿಯಾಗಿ ಉಳಿಯುತ್ತದೆ. ಮುಂದೆ ಅದನ್ನು ಪ್ರಶ್ನಾತೀತವಾಗಿ ನಂಬಿಕೊಂಡು ಹೋಗಲಾಗುತ್ತದೆ. 'ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಚಿನ್ನ-ಬೆಳ್ಳಿಯನ್ನು ಅಳೆದು ಮಾರುತ್ತಿದ್ದರಂತೆ' ಎಂಬುದು ಅಂತಹ ಒಂದು ಭಾಷಿಕ ದಾಖಲೆ. ಅದು ಚರಿತ್ರೆಯ ಒಂದು ಮಾಹಿತಿ. ಅದು ಚರಿತ್ರೆಯ ಒಂದು ಮೌಲ್ಯ, ಅದು ಚರಿತ್ರೆಯನ್ನು ಕುರಿತ ಒಂದು ನಂಬಿಕೆ. ಅಂದರೆ ಒಂದು ಘಟನೆಯ ಸುತ್ತ ನಿರ್ಮಾಣ ಮಾಡುವ ಭಾಷಿಕ ದಾಖಲೆಯು ಕೇವಲ ಮಾಹಿತಿಯಾಗಿ ಉಳಿಯದೆ, ಮೌಲ್ಯವಾಗಿ, ನಂಬಿಕೆಯಾಗಿ ರೂಪಾಂತರ ಪಡೆಯುತ್ತದೆ. 'ಚಿನ್ನ-ಬೆಳ್ಳಿ ಅಳೆದು ಮಾರುತ್ತಿದ್ದರು' ಎಂಬುದು 'ಆಗ ಅಲ್ಲಿ ಎಲ್ಲರೂ ಸುಖವಾಗಿದ್ದರು' ಎಂಬುದರ ಮತ್ತೊಂದು ಹೇಳಿಕೆಯಾಗಿ ಭಾಸವಾಗುತ್ತದೆ. ಅಂದರೆ 'ಚಿನ್ನ-ಬೆಳ್ಳಿಯನ್ನೆ ಅಳೆದು ಮಾರುತ್ತಿದ್ದರೆಂದರೆ ಆಗ ಅಲ್ಲಿ ಯಾರಿಗೂ ಅನ್ನಕ್ಕೆ ಕೊರತೆ ಇರಲಿಲ್ಲ; ಎಲ್ಲರಿಗೂ ಸುಖ ಇತ್ತು, ನೆಮ್ಮದಿ ಇತ್ತು' ಎಂಬ ಭಾವನೆ ಬಂದುಬಿಡುತ್ತದೆ. ಇದೇ ಆಯಾಮದಲ್ಲಿ ಅಣ್ಣಾ ಹಜಾರೆ ಅವರ ನೇತೃತ್ವದಲ್ಲಿ ನಡೆಸಲಾದ ಹೋರಾಟವನ್ನು ಗ್ರಹಿಸಬೇಕಾಗಿದೆ. ಈ ಹೋರಾಟವನ್ನು ಗ್ರಹಿಸುವಾಗ ಭಾರತದಲ್ಲಿ ನಡೆಸಿರುವ ಕೆಲವು ಮುಖ್ಯ ಹೋರಾಟಗಳ ಸಾಮಾನ್ಯ ಗುಣಪಾಠಗಳ ರಾಜಕೀಯ ಹಿತಾಸಕ್ತಿಗಳು ನಮ್ಮ ತಾತ್ವಿಕ ನೆರವಿಗೆ ಬರುತ್ತವೆ. 1947ರ ಅಧಿಕಾರ ಹಸ್ತಾಂತರದ ನಂತರ ಭಾರತದಲ್ಲಿ ಕೆಲವು ಮುಖ್ಯ ಹೋರಾಟಗಳನ್ನು ನಡೆಸಲಾಗಿದೆ. ವೀರ ತೆಲಂಗಾಣ ಹೋರಾಟ, ಜೆ.ಪಿ. ನೇತೃತ್ವದ ಸಂಪೂರ್ಣ ಕ್ರಾಂತಿ, ಟಾಟಾ ಕಂಪನಿ ವಿರುದ್ಧ ಪಶ್ಚಿಮ ಬಂಗಾಳದಲ್ಲಿ ರೈತರು ನಡೆಸಿದ ಸಿಂಗೂರು ಹೋರಾಟ. ಇಂತಹ ಕೆಲವು ಹೋರಾಟಗಳನ್ನು ಗಮನಿಸಬಹುದು.

ಹೋರಾಟಗಳನ್ನು ಪರಿಚಯಿಸುವ, ವಿಮರ್ಶಿಸುವ ಮತ್ತು ಮೌಲ್ಯಮಾಪನ ಮಾಡುವ ತಾತ್ವಿಕ ವಿಧಾನಗಳು ಯಾವುವು ಎಂಬುದಕ್ಕೆ ಗಂಭೀರವಾದ ಸೈದ್ಧಾಂತಿಕ ಮಾನದಂಡಗಳನ್ನು ನಿರ್ಮಾಣ ಮಾಡಲಾಗಿಲ್ಲ. ಹಾಗಾಗಿ ಅನೇಕ ಸಲ ಹೋರಾಟಗಳ ಮೌಲ್ಯಮಾಪನ ಎಂಬುದು ಅವುಗಳನ್ನು ವೈಭವೀಕರಿಸುವ ಭಾಷಿಕ ದುಂದುವೆಚ್ಚವಾಗಿ ಮಾರ್ಪಟ್ಟಿದೆ. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಿತ್ತರಿಸಲಾಗುವ ಸುದ್ದಿಗಳನ್ನೇ ಅವುಗಳ ಮೌಲ್ಯಮಾಪನಗಳೆಂದು ನಂಬಲಾಗುತ್ತಿದೆ ಮತ್ತು ನಂಬಿಸಲಾಗುತ್ತಿದೆ. 12ನೇ ಶತಮಾನದಲ್ಲಿ ಕನ್ನಡನಾಡಿನಲ್ಲಿ ನಡೆಸಲಾದ ಹೋರಾಟವನ್ನು ಈಗಲೂ ಕೂಡ ಭಾಷಿಕ ದುಂದುವೆಚ್ಚ ಮಾಡಿ ವೈಭವೀಕರಿಸಲಾಗುತ್ತಿದೆ. ಇದು ವೈಚಾರಿಕವಾಗಿ ಮುಜುಗರ ಎನಿಸುತ್ತಲೇ ಇಲ್ಲ. ಇದಕ್ಕೆ ವಿರುದ್ಧವಾಗಿ ಕರ್ನಾಟಕದಲ್ಲಿ ನಡೆಸಲಾದ ದಲಿತ ಹೋರಾಟವನ್ನು ವಾಚಾಮಗೋಚರವಾಗಿ ತೆಗಳುವ ಕೆಲಸ ನಡೆಯುತ್ತಿದೆ. ಈ ಎರಡೂ ಬಗೆಯ ಅತಿರೇಕಗಳು ಹೋರಾಟಗಳನ್ನು ವಿಮರ್ಶಿಸುವ ಮತ್ತು ಮೌಲ್ಯಮಾಪನ ಮಾಡುವ ಸೈದ್ಧಾಂತಿಕ ಉಪಕರಣಗಳ ದೌರ್ಬಲ್ಯವನ್ನು ಎತ್ತಿ ತೋರಿಸುತ್ತಿದೆ.

ನಕಲಿ ಹೋರಾಟಗಳು ಮತ್ತು ಅಸಲಿ ಹೋರಾಟಗಳು

ಹೋರಾಟವೊಂದು ಅಂತಿಮವಾಗಿ ಏನು ಫಲ ಕೊಟ್ಟಿತು ಎಂಬುದು ಒಂದು ಅಪೇಕ್ಷಿತ ನಿಲುವು. ಅದಕ್ಕಿಂತ ಹೆಚ್ಚಾಗಿ ಒಂದು ಹೋರಾಟದ ಹಿಂದೆ ಯಾವ ವರ್ಗದ ಹಿತಾಸಕ್ತಿ ಅಡಗಿದೆ ಎಂಬುದನ್ನು ಗುರುತಿಸಬೇಕಾಗಿದೆ. ಹೋರಾಟವೊಂದರ ಹಿಂದಿರುವ ವರ್ಗ ಹಿತಾಸಕ್ತಿಯನ್ನು ಗುರುತಿಸದಿದ್ದರೆ ಬೆಳ್ಳಗಿರುವುದೆಲ್ಲ ಹಾಲು ಎಂದು ಹೇಳುವ ದುಃಸ್ಥಿತಿ ಬಂದುಬಿಡುತ್ತದೆ. ಇಂತಹ ಒಂದು ಉದಾಹರಣೆಯನ್ನು ಗಮನಿಸೋಣ. 1946 ರಿಂದ 1952ರ ವರೆಗೆ ಹೈದರಾಬಾದ್ ಪ್ರಾಂತ್ಯದಲ್ಲಿ ತೆಲಂಗಾಣ ಹೋರಾಟವನ್ನು ನಡೆಸಲಾಯಿತು. ಅದನ್ನು ಭೂರಹಿತರು ಮತ್ತು ಕೃಷಿ ಕೂಲಿಕಾರ್ಮಿಕರು ನಡೆಸಿದರು. ಭೂಮಾಲೀಕರ ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ಹಂಚಬೇಕು ಎಂಬ ಮುಖ್ಯ ರಾಜಕೀಯ ಹಕ್ಕೊತ್ತಾಯವನ್ನು ಇಟ್ಟುಕೊಂಡು ಆ ಹೋರಾಟವನ್ನು ನಡೆಸಲಾಯಿತು. 'ಉಳುವವನೆ ಭೂ ಒಡೆಯ' ಎಂಬ ಘೋಷಣೆಯನ್ನು ಆ ಹೋರಾಟವು ಭಾರತದ ರೈತರಿಗೆ ಕೊಟ್ಟಿತು. ಸತ್ಯವಾಗಿಯೂ ಈ ಘೋಷಣೆಯನ್ನು ಕಾಗೋಡು ಹೋರಾಟ ಕೊಟ್ಟದ್ದಲ್ಲ. ತೆಲಂಗಾಣದಲ್ಲಿ ಭೂರಹಿತರು ಭೂಮಿ ಪಡೆಯಲು ಹೋರಾಟವನ್ನು ನಡೆಸುತ್ತಿದ್ದ ಸಮಯದಲ್ಲೆ ಭಾರತದ ಪ್ರಭುತ್ವ ಅದಕ್ಕೆ ಪ್ರತಿಯಾಗಿ ಮತ್ತೊಂದು ಹೋರಾಟವನ್ನು ಕುತಂತ್ರ ವಿಧಾನದಲ್ಲಿ ಸೃಷ್ಟಿಸಿತು. ಅದು ವಿನೋಬಾ ಭಾವೆ ಅವರ ನೇತೃತ್ವದಲ್ಲಿ ಮಾಡಿಸಲಾದ (ಮಾಡಿದ್ದು ಅಲ್ಲ) 'ಭೂ ದಾನ ಚಳುವಳಿ'. ಈ 'ಭೂದಾನ' ಎಂಬ ಪದವೇ ಅತ್ಯಂತ ಭೀಕರವಾಗಿದೆ. ಅದರ ಸ್ವರೂಪ ಇಷ್ಟೆ. ಶ್ರೀಮಂತ ಭೂಮಾಲೀಕರು ತಮ್ಮಲ್ಲಿರುವ ಹೆಚ್ಚುವರಿ ಭೂಮಿಯನ್ನು 'ಭೂದಾನ ಚಳವಳಿ'ಗೆ ನೀಡಬೇಕು. ನಂತರ ಅದು ಭೂರಹಿತರಿಗೆ ಆ ಭೂಮಿಯನ್ನು ಹಂಚುತ್ತದೆ. ಇದು ಅದರ ಸ್ವರೂಪವಾಗಿತ್ತು. ಇದರ ಹಿಂದೆ ಯಾವ ವರ್ಗದ ಹಿತಾಸಕ್ತಿ ಇತ್ತು ಎಂಬುದನ್ನು ಗುರುತಿಸಬೇಕು. ಇದರ ಹಿಂದೆ ಭಾರೀ ಭೂಮಾಲಿಕ ವರ್ಗದ ಹಿತಾಸಕ್ತಿ ಇತ್ತು. ಜೊತೆಗೆ 'ರೈತರು ನಡೆಸುತ್ತಿದ್ದ ಹೋರಾಟದ ಅಗತ್ಯವಿಲ್ಲ' ಅಥವಾ 'ರೈತರು ಹೋರಾಟ ಮಾಡುವ ಅಗತ್ಯವಿಲ್ಲ' ಎಂದು ಹೇಳುವ ಕುತಂತ್ರವಿತ್ತು. ಅದು ಭಾರತದಲ್ಲಿ ಅಸಲಿ ಹೋರಾಟಕ್ಕೆ ಪ್ರತಿಯಾಗಿ ಹುಟ್ಟುಹಾಕಿದ ನಕಲಿ ಹೋರಾಟವಾಗಿತ್ತು. ಬಹುಶಃ ಅಂದಿನಿಂದಲೇ ಭಾರತದಲ್ಲಿ ಚಾರಿತ್ರಿಕವಾಗಿ ನಕಲಿ ಹೋರಾಟದ ಕರಾಳ ಚರಿತ್ರೆಯನ್ನು ಶುರುಮಾಡಲಾಯಿತು. ಈ ನಕಲಿ ಹೋರಾಟಗಳ ಕರಾಳ ಚರಿತ್ರೆಯನ್ನು ಈಗಲೂ ಮುಂದುವರಿಸಲಾಗುತ್ತಿದೆ.

ವಸ್ತು ಜಗತ್ತಿನಲ್ಲಿ ಮತ್ತು ವೃತ್ತಿ ಜಗತ್ತಿನಲ್ಲಿ 'ಇದು ನಕಲಿ, ಇದು ಅಸಲಿ' ಎಂದು ತೀರ್ಮಾನಿಸುವ ಪದ್ಧತಿ ಇದೆ. ಉದಾಹರಣೆಗೆ, ನಕಲಿ ವೈದ್ಯ, ನಕಲಿ ಸ್ವಾಮಿ, ನಕಲಿ ಔಷಧಿ, ನಕಲಿ ಕ್ರಿಮಿನಾಶಕ, ನಕಲಿ ಮದ್ಯ, ನಕಲಿ ನೋಟು ಇತ್ಯಾದಿ. ವೈಚಾರಿಕ ಜಗತ್ತು, ಅಕಡೆಮಿಕ್ ಜಗತ್ತು, ರಾಜಕಾರಣ ಮತ್ತು ಹೋರಾಟಗಳ ಜಗತ್ತಿನಲ್ಲಿ ಈ ಅಸಲಿ ಮತ್ತು ನಕಲಿಗಳ ಪರಿಸ್ಥಿತಿ ಇದೆ. ಆದರೆ ಅದನ್ನು ಹಾಗೆಂದು ಗುರುತಿಸುವ ಕೆಲಸ ಮಾಡಲು ಮುಂದಾಗಿಲ್ಲ. ವಸ್ತು ಜಗತ್ತು ಮತ್ತು ವೃತ್ತಿ ಜಗತ್ತಿನಲ್ಲಿ ಗುರುತಿಸಿದಷ್ಟು ಸುಲಭವಾಗಿ ಉಳಿದ ಕಡೆಗಳಲ್ಲಿ ಇದನ್ನು ಗುರುತಿಸಲು ಆಗುತ್ತಿಲ್ಲ.

ಕಳ್ಳರೇ ಕಳ್ಳರನ್ನು ಹಿಡಿಯಲು ಹೊರಟಾಗ

ಯಾವುದೇ ಹೋರಾಟಕ್ಕೆ ಒಂದು ಉದ್ದೇಶ, ಗುರಿ ಮತ್ತು ದಾರಿಗಳು ಇರುತ್ತವೆ. 'ನ್ಯಾಯ'ವನ್ನು ಕೇಳುವುದು ಮತ್ತು ಒತ್ತಾಯಿಸುವುದು ಯಾವುದೇ ಹೋರಾಟಗಳ ಸಾಮಾನ್ಯ ಉದ್ದೇಶ ಮತ್ತು ಗುರಿಯಾಗಿರುತ್ತದೆ. ಆ 'ನ್ಯಾಯ'ವನ್ನು ಪಡೆಯಲು ತುಳಿಯುವ ದಾರಿಗಳು ಬೇರೆ ಬೇರೆ ಇರುತ್ತವೆ. ಹಾಗಾಗಿ ಹೋರಾಟಗಳಿಗೆ ದಾರಿ ಮತ್ತು ಗುರಿಗಳು ಪ್ರತ್ಯೇಕವಾಗಿದ್ದು ಅವು ಒಂದನ್ನೊಂದು ಪ್ರಭಾವಿಸುತ್ತ ಹೋಗುತ್ತವೆ.

ಹೋರಾಟಗಳ ಮೂಲಕ 'ನ್ಯಾಯ' ಕೇಳುವವರು ಅಥವಾ ಅವರು ಪ್ರತಿನಿಧಿಸುವ ವರ್ಗವು 'ಅನ್ಯಾಯ'ಕ್ಕೆ ಒಳಗಾಗಿರಬೇಕು. 'ಅನ್ಯಾಯ'ಕ್ಕೆ ಒಳಗಾದವರಿಗೆ ಮಾತ್ರವೇ 'ನ್ಯಾಯ' ಕೇಳಲು ರಾಜಕೀಯವಾಗಿ ಹಕ್ಕಿರುತ್ತದೆ. ಈಗ ಪ್ರಶ್ನೆ ಹುಟ್ಟುವುದು 'ಅನ್ಯಾಯ'ಕ್ಕೆ ಒಳಗಾಗಿ

ರುವವರು ಯಾರು? ಎಂಬುದು. ಜೊತೆಗೆ ಯಾವ ರೂಪದಲ್ಲಿ ಅನ್ಯಾಯ ನಡೆದಿದೆ ಎಂಬುದು. ಇವೆರಡೂ ಸ್ಪಷ್ಟವಾಗದ ಹೊರತು ಅನ್ಯಾಯವನ್ನು ನ್ಯಾಯದಿಂದಲೂ; ನ್ಯಾಯವನ್ನು ಅನ್ಯಾಯದಿಂದಲೂ ಬೇರ್ಪಡಿಸಲು ಆಗುವುದಿಲ್ಲ.

ಇದಕ್ಕೆ ಇತ್ತೀಚಿನ ವರ್ಷಗಳಲ್ಲಿ ಮಲೆನಾಡಿನಲ್ಲಿ ನಡೆದ ಒಂದು ಘಟನೆಯನ್ನು ವಿವರಿಸಬಹುದು. ಮಲೆನಾಡಿನಲ್ಲಿ ಆಯಾ ಊರುಗಳ ಜನರು ತಮ್ಮ ಊರುಗಳಲ್ಲೇ ಜಮೀನ್ದಾರರ ಮನೆಗಳಲ್ಲಿ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಅದು ಸ್ವಲ್ಪ ಬದಲಾಗಿದೆ. ಒಂದು ಊರಿನ ಜನರು ಬೇರೆ ಯಾವುದಾದರೂ ಊರಿಗೆ ಹೋಗಿ ಕೆಲಸ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯಿಂದಾಗಿ ಕೆಲವು ಊರಿನ ಜಮೀನ್ದಾರರಿಗೆ ಅದೇ ಊರಿನ ಕೆಲಸಗಾರರು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಆಗ ಜಮೀನ್ದಾರರು 'ಒಂದು ಊರಿನ ಜನರು ಬೇರೆ ಊರುಗಳಿಗೆ ಕೆಲಸಕ್ಕೆ ಹೋಗಬಾರದು' ಎಂದು ಮೌಖಿಕ ಆಜ್ಞೆ ಹೊರಡಿಸಿದರು. ಇದು ಒಂದು ಹಂತ. ಇದನ್ನು ಯಾರೂ ಪಾಲಿಸಲಿಲ್ಲ. ಒಂದು ಊರಿನಿಂದ ಮತ್ತೊಂದು ಊರಿಗೆ ಕೆಲಸಕ್ಕೆ ಹೋಗುವವರು ದೊಡ್ಡ ಆಟೋಗಳಲ್ಲಿ ಹೋಗುತ್ತಿದ್ದರು. ಅಂತಹ ಆಟೋಗಳಿಗೆ ಇಂತಿಷ್ಟು ದೂರ ಓಡಿಸಬೇಕು ಎಂಬ ಒಂದು ಸಾಮಾನ್ಯ ನಿರ್ಬಂಧವಿರುತ್ತದೆ. ಇದನ್ನು ಗಟ್ಟಿಯಾಗಿ ಹಿಡಿದುಕೊಂಡ ಭೂಮಾಲೀಕರು, 'ಆಟೋಗಳನ್ನು 10ಕಿ.ಮೀ.ಗಳಿಗಿಂತ ಹೆಚ್ಚು ದೂರ ಓಡಿಸಬಾರದು' ಎಂಬ ಒತ್ತಾಯವನ್ನು ಸಂಬಂಧಪಟ್ಟ ಅಧಿಕಾರಿಗಳ (ಡಿ.ಸಿ. ಮತ್ತು ಆರ್.ಟಿ.ಓ.) ಮುಂದೆ ಇಟ್ಟರು. ಇದು ನಡೆದ ಘಟನೆ. ಅದರ ವಿವರಗಳ ಅಗತ್ಯವಿಲ್ಲ. ಸಾರಾಂಶವೇನೆಂದರೆ ಈ ಘಟನೆಯಲ್ಲಿ ಅನ್ಯಾಯ ಆಗಿರುವುದು ಯಾರಿಗೆ ಮತ್ತು ನ್ಯಾಯ ಕೇಳಬೇಕಾದವರು ಯಾರು ಎಂಬುದು ಪ್ರಧಾನ ಪ್ರಶ್ನೆ.

ಒಂದು ಊರಿನ ಕೆಲಸಗಾರರನ್ನು ಅದೇ ಊರಿನಲ್ಲಿ ಕಡಿಮೆ ಸಂಬಳಕ್ಕೆ ದುಡಿಸಿಕೊಳ್ಳಬೇಕು ಎಂಬುದು ಭೂಮಾಲಿಕರು ಕೇಳುತ್ತಿರುವ ನ್ಯಾಯ. ಒಂದು ಊರಿನ ಕೆಲಸಗಾರರು ಅದೇ ಊರಿನಲ್ಲಿ ಕೆಲಸ ಮಾಡಿದರೆ ಸಂಬಳ ಕಡಿಮೆ ಕೊಡುತ್ತಾರೆ; ಅದಕ್ಕಾಗಿ ಬೇರೆ ಊರುಗಳಿಗೆ ಕೆಲಸಕ್ಕೆ ಹೋಗಬೇಕು ಎಂಬುದು ಕೆಲಸಗಾರರು ಕೇಳುತ್ತಿರುವ ನ್ಯಾಯ. ಕೆಲಸಗಾರರನ್ನು ಶೋಷಣೆ ಮಾಡಿ, ಲಾಭವನ್ನು ಹೆಚ್ಚಿಸಿಕೊಳ್ಳಬೇಕು ಎಂಬುದು ಒಂದು ಕಡೆಯ ನ್ಯಾಯದ ಕಲ್ಪನೆ. ಮಾಡಿದ ಕೆಲಸಕ್ಕೆ ಸ್ವಲ್ಪ ಜಾಸ್ತಿ ಸಂಬಳ ಪಡೆಯಬೇಕು ಎಂಬುದು ಮತ್ತೊಂದು ಕಡೆಯ ನ್ಯಾಯದ ಕಲ್ಪನೆ.

ಬಂಡವಾಳಶಾಹಿ ಆರ್ಥಿಕ ಚಟುವಟಿಕೆಗಳ ಇತ್ತೀಚಿನ ಬೆಳವಣಿಗೆಗಳು ಅವರ ನಿರೀಕ್ಷೆಯ ಪ್ರಮಾಣದ ಲಾಭವನ್ನು ಹೆಚ್ಚು ಮಾಡಿಕೊಳ್ಳಲು ಹೆಣಗಾಡುತ್ತಿವೆ. ಅವರ ಲಾಭದಲ್ಲಿ ಅಲ್ಪಸ್ವಲ್ಪ ಏರುಪೇರು ಕಂಡರೂ ಕೂಡ ಅದನ್ನೇ ಇಡೀ ಜಗತ್ತಿನ ಸಮಸ್ಯೆ ಎಂದು ಬಿಂಬಿಸಲಾಗುತ್ತಿದೆ. ಹಾಗಾಗಿ ಒಂದು ವರ್ಗದ ಸಮಸ್ಯೆಯನ್ನು ಮತ್ತೊಂದು ವರ್ಗದ ಸಮಸ್ಯೆ ಎಂದು ತಪ್ಪಾಗಿ ತಿಳಿಯುವಂತೆ ಮತ್ತು ತೀರ್ಮಾನಿಸುವಂತೆ ಮಾಡಲಾಗಿದೆ. ಇದನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ ಶ್ರೀಮಂತರ ಸಮಸ್ಯೆಯನ್ನು ಬಡವರ ಸಮಸ್ಯೆ ಎಂದು ತಿಳಿಯುವಂತೆಯೂ, ಮಾಲಿಕರ ಸಮಸ್ಯೆಯನ್ನು ಕಾರ್ಮಿಕರ ಸಮಸ್ಯೆ ಎಂದು ತಿಳಿಯುವಂತೆಯೂ, ಪುರುಷರ

ವಾಸ್ತವವಾಗಿ ಭಾರತ ಎಂಬ ದೇಶ ನಡೆಯುತ್ತಿರುವುದು ಭಾರತ ದೇಶದ ಆಡಳಿತ ಮತ್ತು ಅಧಿಕಾರಿಗಳಿಂದ ಅಲ್ಲ. ಅಮೆರಿಕಾದ ಸರ್ವಾಧಿಕಾರಿ ಸೂಚನೆಗಳ ಮೇರೆಗೆ ಇಲ್ಲಿಯ ಆಡಳಿತ ಮತ್ತು ಸರಕಾರಿ ವಲಯಗಳು ಕೆಲಸ ಮಾಡುತ್ತಿವೆ. ಕಳೆದ 90ರ ದಶಕದಲ್ಲಿ ನವ ವಸಾಹತುಶಾಹಿ ಒಪ್ಪಂದಗಳಿಗೆ ಭಾರತವನ್ನು ಒತ್ತೆ ಇಟ್ಟದ್ದೇ ಬಹುದೊಡ್ಡ ಭ್ರಷ್ಟಾಚಾರ. ಇವತ್ತು ದೇಶದ ಸಾಮಾನ್ಯ ಜನತೆ ಅನುಭವಿ ಸುತ್ತಿರುವ ಬಡತನ, ನಿರುದ್ಯೋಗ, ಬೆಲೆ ಏರಿಕೆ ಮುಂತಾದ ಸಮಸ್ಯೆಗಳಿಗೆ ಮೂಲಭೂತ ಕಾರಣವೇ ಭಾರತದ ಆಳುವ ವರ್ಗವು ಸಾಮ್ರಾಜ್ಯಶಾಹಿಗಳೊಂದಿಗೆ ಮಾಡಿಕೊಂಡ ದೇಶ ವಿರೋಧಿ ಒಪ್ಪಂದಗಳಿಂದ. ಭಾರತವನ್ನು ಸಾಮ್ರಾಜ್ಯಶಾಹಿಗಳಿಗೆ ಅರ್ಪಣೆ ಮಾಡಿ, ಇಡೀ ದೇಶದ ಸಂಪತ್ತನ್ನು ಅವರಿಗೆ ಒತ್ತೆ ಇಟ್ಟಿರುವುದು ಅಣ್ಣಾ ಹಜಾರೆ ತಂಡಕ್ಕೆ ಮುಖ್ಯವಾಗುವುದಿಲ್ಲ. ವಾಸ್ತವವಾಗಿ ಸಾಮ್ರಾಜ್ಯಶಾಹಿ ನವ ವಸಾಹತು ಸುಲಿಗೆ ಮತ್ತು ದಬ್ಬಾಳಿಕೆಗಳನ್ನು ಸಂಪೂರ್ಣ ಮುಚ್ಚಿಡುವ ಉನ್ನತ ತಂತ್ರ ಮತ್ತು ಕುತಂತ್ರ ಅಣ್ಣಾ ತಂಡದೊಳಗೆ ಕೆಲಸ ಮಾಡಿದೆ.

ಸಮಸ್ಯೆಯನ್ನು ಮಹಿಳೆಯರ ಸಮಸ್ಯೆ ಎಂದು ತಿಳಿಯುವಂತೆಯೂ ಮಾಡಲಾಗಿದೆ.

ಅನ್ಯಾಯ ಮಾಡಿದವರೆ, ಶೋಷಣೆ ಮಾಡಿದವರೇ ನ್ಯಾಯ ಕೇಳುವಂತಹ ಪರಿಸ್ಥಿತಿಯು ನಿರ್ಮಾಣವಾಗಿದೆ. ಇದು ಯಾವುದೇ ಸಮಾಜದ ಅತ್ಯಂತ ಅನಾರೋಗ್ಯಕರ ಪರಿಸ್ಥಿತಿಯ ಪರಮಾವಧಿ. ಯಾಕೆಂದರೆ ನಿಜವಾಗಿಯೂ ಯಾರು ನ್ಯಾಯವನ್ನು ಕೇಳಬೇಕಾಗಿತ್ತೋ ಅವರು ನ್ಯಾಯ ಕೇಳಲು ಆಗುವುದಿಲ್ಲ. ಯಾರು ನಿಜವಾಗಿಯೂ ಅನ್ಯಾಯ ಮಾಡಿದ್ದಾರೋ ಅವರ ಅನ್ಯಾಯವನ್ನು ಗುರುತಿಸಲು ಆಗುವುದಿಲ್ಲ. ಅಂದರೆ ಶೋಷಣೆ ಮಾಡುವವರೇ ಶೋಷಿತರ ವೇಷದಲ್ಲಿ ನಟಿಸುವ ರಂಗಭೂಮಿಯೊಂದು ನಿರ್ಮಾಣವಾಗಿದೆ. ಆ ಮೂಲಕ ಅನ್ಯಾಯ ಮಾಡಿದವರೇ ನ್ಯಾಯ ಕೇಳುವಂತಹ ನಕಲಿ ಪರಿಸ್ಥಿತಿ ನಿರ್ಮಾಣವಾಗಿದೆ.

ಭ್ರಷ್ಟಾಚಾರದ ಮೂಲ ಎಲ್ಲಿದೆ? ಹೇಗಿದೆ?

ವಾಸ್ತವವಾಗಿ ಭ್ರಷ್ಟಾಚಾರ ಎಂದರೆ ಏನು ಮತ್ತು ಅದರ ಸ್ವರೂಪ ಯಾವುದು ಎಂಬ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಅಣ್ಣಾ ಹಜಾರೆ ತಂಡದ ಹೋರಾಟವು ಯಾವ ವಲಯದಲ್ಲಿ ಭ್ರಷ್ಟಾಚಾರವನ್ನು ಗುರುತಿಸಿ, ಅದನ್ನು ಟಾರ್ಗೆಟ್ ಮಾಡಿತು ಮತ್ತು ಯಾವ ವಲಯದಲ್ಲಿ ಭ್ರಷ್ಟಾಚಾರವನ್ನು ಗುರುತಿಸಲಿಲ್ಲ ಮತ್ತು ಟಾರ್ಗೆಟ್ ಮಾಡಲಿಲ್ಲ ಎಂಬುದು ಚರ್ಚೆಗೆ ಮುಖ್ಯವಾದ ಕೇಂದ್ರ. ಈ ತಂಡಕ್ಕೆ ಆಡಳಿತ ಮತ್ತು ಸರಕಾರಿ ವಲಯದಲ್ಲಿ ನಡೆಸುತ್ತಿರುವ ಭ್ರಷ್ಟಾಚಾರ ಮಾತ್ರವೇ ಮುಖ್ಯವಾಯಿತು. ಉಳಿದ ವಲಯಗಳು ಇವರ ಗ್ರಹಿಕೆಯಿಂದ ಹೊರಗುಳಿದವು. ಇಡೀ ದೇಶವನ್ನು ನಡೆಸುತ್ತಿರುವುದು ಭಾರತದೊಳಗಿನ ಆಡಳಿತ ಮತ್ತು ಸರಕಾರಿ ವಲಯ ಎಂಬುದು ಆ ತಂಡದ ಗ್ರಹಿಕೆ.

ವಾಸ್ತವವಾಗಿ ಭಾರತ ಎಂಬ ದೇಶ ನಡೆಯುತ್ತಿರುವುದು ಭಾರತ ದೇಶದ ಆಡಳಿತ ಮತ್ತು ಅಧಿಕಾರಿಗಳಿಂದ ಅಲ್ಲ. ಅಮೆರಿಕಾದ ಸರ್ವಾಧಿಕಾರಿ ಸೂಚನೆಗಳ ಮೇರೆಗೆ ಇಲ್ಲಿಯ ಆಡಳಿತ ಮತ್ತು ಸರಕಾರಿ ವಲಯಗಳು ಕೆಲಸ ಮಾಡುತ್ತಿವೆ. ಕಳೆದ 90ರ ದಶಕದಲ್ಲಿ ನವವಸಾಹತುಶಾಹಿ ಒಪ್ಪಂದಗಳಿಗೆ ಭಾರತವನ್ನು ಒತ್ತೆ ಇಟ್ಟದ್ದೇ ಬಹುದೊಡ್ಡ ಭ್ರಷ್ಟಾಚಾರ. ಇವತ್ತು ದೇಶದ ಸಾಮಾನ್ಯ ಜನತೆ ಅನುಭವಿಸುತ್ತಿರುವ ಬಡತನ, ನಿರುದ್ಯೋಗ, ಬೆಲೆ ಏರಿಕೆ ಮುಂತಾದ ಸಮಸ್ಯೆಗಳಿಗೆ ಮೂಲಭೂತ ಕಾರಣವೇ ಭಾರತದ ಆಳುವ ವರ್ಗವು ಸಾಮ್ರಾಜ್ಯಶಾಹಿಗಳೊಂದಿಗೆ ಮಾಡಿಕೊಂಡ ದೇಶ ವಿರೋಧಿ ಒಪ್ಪಂದಗಳಿಂದ. ಭಾರತವನ್ನು ಸಾಮ್ರಾಜ್ಯಶಾಹಿಗಳಿಗೆ ಅರ್ಪಣೆ ಮಾಡಿ, ಇಡೀ ದೇಶದ ಸಂಪತ್ತನ್ನು ಅವರಿಗೆ ಒತ್ತೆ ಇಟ್ಟಿರುವುದು ಅಣ್ಣಾ ಹಜಾರೆ ತಂಡಕ್ಕೆ ಮುಖ್ಯವಾಗುವುದಿಲ್ಲ. ವಾಸ್ತವವಾಗಿ ಸಾಮ್ರಾಜ್ಯಶಾಹಿ ನವವಸಾಹತು ಸುಲಿಗೆ ಮತ್ತು ದಬ್ಬಾಳಿಕೆಗಳನ್ನು ಸಂಪೂರ್ಣ ಮುಚ್ಚಿಡುವ ಉನ್ನತ ತಂತ್ರ ಮತ್ತು ಕುತಂತ್ರ ಅಣ್ಣಾ ತಂಡದೊಳಗೆ ಕೆಲಸ ಮಾಡಿದೆ.

ಕೆಲವೇ ಕೆಲವು ಕಾರ್ಪೊರೇಟ್ ಕುಟುಂಬಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಭಾರತದ ರಾಜಕೀಯವನ್ನು ಮತ್ತು ಆರ್ಥಿಕತೆಯನ್ನು ತಮಗೆ ಅನುಕೂಲವಾಗುವಂತೆ ರೂಪಿಸುತ್ತಿವೆ; ನಿರ್ಧರಿಸುತ್ತಿವೆ. ಅವರು ತಾವು ಮಾಡುವ ಸುಲಿಗೆಯನ್ನು ಸುಧಾರಣೆ ಎಂತಲೂ, ತಮ್ಮ ಲಾಭಕ್ಕೆ ಮಾಡಿಕೊಳ್ಳುವ ಕೆಲಸಗಳನ್ನು ಪ್ರಗತಿ ಮತ್ತು ಅಭಿವೃದ್ಧಿ ಎಂತಲೂ ಬಣ್ಣಿಸುತ್ತಿದ್ದಾರೆ. ಅಣ್ಣಾ ಹಜಾರೆ ತಂಡದ ಹೋರಾಟದ ಸುದ್ದಿಯು ಸಾಮ್ರಾಜ್ಯಶಾಹಿ ಶಕ್ತಿಗಳು ನಡೆಸುತ್ತಿರುವ ಸುಲಿಗೆ ಮತ್ತು ದಬ್ಬಾಳಿಕೆಗಳನ್ನು ಮುಚ್ಚಿಡುತ್ತದೆ.

ಭ್ರಷ್ಟಾಚಾರ : ನೈತಿಕ ಆಯಾಮ ಮತ್ತು ರಾಜಕೀಯ, ಆರ್ಥಿಕ ಆಯಾಮ

ಭ್ರಷ್ಟಾಚಾರವನ್ನು ನೈತಿಕ ಚೌಕಟ್ಟಿನಲ್ಲಿ ಪರಿಭಾವಿಸುವುದು ಬೇರೆ. ಅದನ್ನು ರಾಜಕೀಯ ಆರ್ಥಿಕ ಚೌಕಟ್ಟಿನಲ್ಲಿ ಪರಿಭಾವಿಸುವುದು ಬೇರೆ. ಭ್ರಷ್ಟಾಚಾರದ ಪ್ರಸ್ತಾಪ ಬಂದಾಗಲೆಲ್ಲ ಅದನ್ನು ಕೇವಲ ಉದಾರವಾದಿ ನೆಲೆಯಲ್ಲಿ ಗ್ರಹಿಸುವ ಪರಿಪಾಠವಿದೆ. ಈ ಉದಾರವಾದಿ ಗ್ರಹಿಕೆಯ ವಿಧಾನವೇ ಬಹಳ ಅಪಾಯಕಾರಿಯಾದುದು. ಹಾಗಾಗಿ ಭ್ರಷ್ಟಾಚಾರವನ್ನು ರಾಜಕೀಯ ಆರ್ಥಿಕ ನೆಲೆಯಲ್ಲಿ ಪರಿಭಾವಿಸಬೇಕಾಗಿದೆ. ಹಣವು ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುವ ಪ್ರಕ್ರಿಯೆಯನ್ನು ಭ್ರಷ್ಟಾಚಾರ ಎಂದು ಸಧ್ಯಕ್ಕೆ ಹೆಸರಿಸಲಾಗಿದೆ. ಸಮಾಜದಲ್ಲಿ ಹಣ ಮಾತ್ರ ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುವುದಿಲ್ಲ. ಸಂಪತ್ತು ಎಂದು ಕರೆಯುವ ಎಲ್ಲವೂ, ಉತ್ಪಾದನೆಯ

ಕೆಲಸದಲ್ಲಿ ತಯಾರಿಸುವ ಎಲ್ಲ ವಸ್ತುಗಳೂ ಕೂಡ ಒಬ್ಬರಿಂದ ಮತ್ತೊಬ್ಬರಿಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುತ್ತಿವೆ. ಭೂಮಾಲೀಕರ ಜಮೀನಿನಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರ ಶ್ರಮದ ಬಹುಭಾಗ ಭೂಮಾಲೀಕರಿಗೇ ಸೇರುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯ ವಿವಿಧ ವಲಯಗಳಲ್ಲಿ ಕೆಲಸ ಮಾಡುವ ಕೈಗಾರಿಕಾ ಕಾರ್ಮಿಕರ ಶ್ರಮದ ಬಹುಭಾಗವು ಅಲ್ಲಿಯ ಮಾಲಿಕನಿಗೇ ಸೇರುತ್ತಿದೆ. ಈ ಎಲ್ಲಾ ವಲಯಗಳಲ್ಲಿ ಶ್ರಮ ಹಾಕಿ, ಬೆವರು ಸುರಿಸಿ ದುಡಿಯುವವರು ಶ್ರಮಿಕರು, ಕಾರ್ಮಿಕರು ಮತ್ತು ದುಡಿಯುವ ಜನರು. ದುಡಿಯುವ ಜನರಿಗೆ ಅವರ ಶ್ರಮಕ್ಕೆ ನ್ಯಾಯವಾಗಿ ಸಲ್ಲಬೇಕಾಗಿರುವ ಪ್ರತಿಫಲವನ್ನು ದುಡಿಸಿಕೊಳ್ಳುವ ಮಾಲೀಕ ವರ್ಗ ಕೊಡುತ್ತಿಲ್ಲ. ಅವರನ್ನು ಸುಲಿಗೆ ಮಾಡುತ್ತಿದೆ; ಶೋಷಣೆ ಮಾಡುತ್ತಿದೆ. ಇದು ಮಾನವ ಸಮಾಜದ ಮೂಲಭೂತ ಭ್ರಷ್ಟಾಚಾರ. ಸಮಾಜವನ್ನು ನೋಡುವಾಗ ಅದನ್ನು ಬಿಡಿಬಿಡಿಯಾಗಿ ಗ್ರಹಿಸುವುದು ಒಂದು ವಿಧಾನ. ಸಮಾಜವನ್ನು ಇಡಿಯಾಗಿ ಗ್ರಹಿಸುವುದು ಮತ್ತೊಂದು ವಿಧಾನ. ಇಡೀ ಸಾಮಾಜಿಕ ರಚನೆಯೇ ಶೋಷಣೆ, ಅಸಮಾನತೆ ಮತ್ತು ಅನ್ಯಾಯಗಳಿಂದ ರಚನೆಯಾಗಿದೆ. ಅಲ್ಪಸಂಖ್ಯೆಯ ಶೋಷಕರು ಬಹುಪ್ರಮಾಣದ ಶೋಷಿತರನ್ನು ಸುಲಿಗೆ ಮಾಡುತ್ತಲೇ ಸಾಗಿದ್ದಾರೆ. ವ್ಯವಸ್ಥೆಯು ತನ್ನೊಳಗೆ ಅನ್ಯಾಯ, ಅಸಮಾನತೆ ಮತ್ತು ಶೋಷಣೆಗಳನ್ನು ಮುಂದುವರಿಸುತ್ತಿದೆ.

ಇದನ್ನು ಬೇರೊಂದು ಆಯಾಮದಲ್ಲಿ ಚರ್ಚೆ ಮಾಡಬಹುದು. ಒಬ್ಬ ವ್ಯಕ್ತಿಗೆ ದೊಡ್ಡರೋಗ ಬಂದಿದೆ ಎಂದು ತಿಳಿಯೋಣ. ಆ ರೋಗ ಬಂದಿರುವ ಕಾರಣಕ್ಕೆ ಅವನ ಮೈ ಬಿಸಿಯಾಗಿರುತ್ತದೆ. ಮೈ ಬಿಸಿಯಾಗಿರುವುದರಿಂದ ಜ್ವರ ಬಂದಿದೆ ಎಂದು ತಿಳಿದು ಜ್ವರಕ್ಕೆ ಔಷಧಿ ಕೊಟ್ಟರೆ, ಆ ರೋಗ ವಾಸಿಯಾಗುವುದಿಲ್ಲ. ಆ ರೋಗವು ಮತ್ತಷ್ಟು ಉಲ್ಬಣಗೊಂಡು ಮುಂದುವರಿಯುತ್ತದೆ. ರೋಗಿಯನ್ನು ರೋಗದಿಂದಲೂ ಮತ್ತು ರೋಗವನ್ನು ರೋಗಿಯಿಂದಲೂ ಬೇರ್ಪಡಿಸಲು ಆಗುವುದಿಲ್ಲ. ಯಾಕೆ ಈ ಕೆಲಸ ಆಗುವುದಿಲ್ಲ ಎಂದರೆ, ರೋಗದ ಲಕ್ಷಣವನ್ನು ರೋಗದ ಗುಣವೆಂದು ತಪ್ಪು ತಿಳಿಯಲಾಗಿದೆ. ಹೀಗೆ ತಪ್ಪು ತಿಳಿದು ರೋಗಕ್ಕೆ ಔಷಧಿ ಕೊಟ್ಟಿದ್ದೇವೆ ಎಂಬ ಭ್ರಮೆಯಲ್ಲಿ ಕೇವಲ ರೋಗದ ಲಕ್ಷಣಕ್ಕೆ ಔಷಧಿ ಕೊಡುವ ಕೆಲಸ ನಡೆದಿರುತ್ತದೆ. ಹಾಗಾಗಿ ರೋಗಿಯ ರೋಗವು ವಾಸಿಯಾಗುವುದಿಲ್ಲ.

ಮೇಲಿನ ತಾತ್ವಿಕ ಚರ್ಚೆಯನ್ನು ಬೇರೆ ಬೇರೆ ಉದಾಹರಣೆಗಳ ಮೂಲಕ ವಿಸ್ತರಿಸಿಕೊಳ್ಳುವ ಕೆಲಸವನ್ನು ಮಾಡಬಹುದು. ಒಂದು ಕಾಲಕ್ಕೆ ಜಾತಿ ಸಮಸ್ಯೆಗೆ ಅಂತರ್ಜಾತಿಯ ಮದುವೆಗಳೇ ಔಷಧಿ ಎಂಬ ತೀರ್ಮಾನ ಮತ್ತು ಹೇಳಿಕೆ ಇತ್ತು. ಈ ಹೇಳಿಕೆಗೆ ಕನಿಷ್ಠ 40 ವರುಷ ಗಳ ಇತಿಹಾಸವಿದೆ. ಆ ಹೇಳಿಕೆಯನ್ನು ಈಗ ಮರು ಆಲೋಚನೆ ಮಾಡಬೇಕಾದ ಸಾಮಾಜಿಕ ಪರಿಸ್ಥಿತಿ ನಿರ್ಮಾಣವಾಗಿದೆ. ಕೇವಲ ಅಂತರಜಾತಿಯ ಮದುವೆಗಳು ಮಾತ್ರ ಜಾತಿ ಸಮಸ್ಯೆಯನ್ನು ಸಡಿಲಗೊಳಿಸಲಾರವು ಎಂಬುದು ಈವರೆಗಿನ ಬೆಳವಣಿಗೆಯಿಂದ ಅರಿವಾಗಿದೆ. ಅಥೇ ರೀತಿಯಲ್ಲಿ ಮೂಢನಂಬಿಕೆಗಳು ಪ್ರಗತಿಗೆ ಅಡ್ಡಿಯಾಗಿವೆ ಎಂಬ ಹೇಳಿಕೆಯೊಂದಿತ್ತು. ಅದರ ನಿವಾರಣೆಗೆ ವೈಜ್ಞಾನಿಕ ಆಲೋಚನೆಯನ್ನು ಅಳವಡಿಸಿಕೊಳ್ಳಬೇಕು ಎಂಬ ಸಲಹೆಯನ್ನು ಕೊಡಲಾಯಿತು. ಈಗ ಆ ಹೇಳಿಕೆಗೂ ಕನಿಷ್ಠ 40 ವರುಷಗಳ ಇತಿಹಾಸವಿದೆ. ಇವತ್ತು ಮೂಢನಂಬಿಕೆಗಳ ವಿರುದ್ಧದ ಹೋರಾಟವಾಗಲಿ, ಅಂತರ್ಜಾತಿಯ ಮದುವೆಗಳ ಪ್ರಸ್ತುತತೆಯ ಚರ್ಚೆಯಾಗಲಿ ಅಪ್ರಸ್ತುತ ಎನಿಸುತ್ತಿದೆ.

ತಿರುಗಿ ನಮ್ಮ ಕೇಂದ್ರ ಚರ್ಚೆಗೆ ಮರಳೋಣ. ಅಣ್ಣಾ ಹಜಾರೆ ತಂಡವು ಭ್ರಷ್ಟಾಚಾರವನ್ನು ಕೇವಲ ಸೀಮಿತ ಚೌಕಟ್ಟಿನಲ್ಲಿ ಗ್ರಹಿಸಿಕೊಂಡಿದೆ. ಅದರಲ್ಲೂ ಅದನ್ನು ಕೇವಲ ಆಡಳಿತ ಮತ್ತು ಅಧಿಕಾರಿ ವಲಯದಲ್ಲಿ ಮಾತ್ರ ಗುರುತಿಸುವುದಕ್ಕೆ ಸೀಮಿತವಾಗಿದೆ. ಹೀಗೆ ಭ್ರಷ್ಟಾಚಾರವನ್ನು ಕೇವಲ ಒಂದಂಶದ ಯಾಂತ್ರಿಕ ವಿಷಯವಾಗಿ ಗ್ರಹಿಸುತ್ತ, ಅದೊಂದೇ ದೇಶದ ದೊಡ್ಡ ಸಮಸ್ಯೆ ಎಂದು ಬಿಂಬಿಸುವ ಕೆಲಸವನ್ನು ಮಾಡಿತು. ಇದನ್ನು ಎಲ್ಲಾ ಮಾಧ್ಯಮಗಳೂ ಮುತುವರ್ಜಿಯಿಂದ ಅತ್ಯಂತ ಅಬ್ಬರದಲ್ಲಿ ಪ್ರಚಾರ ಮಾಡಿದವು. ಹೀಗೆ ಭ್ರಷ್ಟಾಚಾರವೊಂದನ್ನೇ ದೇಶದ ಕೇಂದ್ರ ಸಮಸ್ಯೆ ಎಂದು ಬಿಂಬಿಸುತ್ತಲೇ ಉಳಿದೆಲ್ಲ ಮುಖ್ಯ ಸಮಸ್ಯೆಗಳನ್ನು ಸಮಸ್ಯೆಗಳೇ ಅಲ್ಲ ಎಂಬುದನ್ನು ಪರೋಕ್ಷವಾಗಿ ಬಿಂಬಿಸಿದವು.

ಭ್ರಷ್ಟಾಚಾರವನ್ನು ನೈತಿಕ ಚೌಕಟ್ಟಿನಲ್ಲಿ ಪರಿಭಾವಿಸುವುದು ಬೇರೆ. ಅದನ್ನು ರಾಜಕೀಯ ಆರ್ಥಿಕ ಚೌಕಟ್ಟಿನಲ್ಲಿ ಪರಿಭಾವಿಸುವುದು ಬೇರೆ. ಭ್ರಷ್ಟಾಚಾರದ ಪ್ರಸ್ತಾಪ ಬಂದಾಗಲೆಲ್ಲ ಅದನ್ನು ಕೇವಲ ಉದಾರವಾದಿ ನೆಲೆಯಲ್ಲಿ ಗ್ರಹಿಸುವ ಪರಿಪಾಠವಿದೆ. ಈ ಉದಾರವಾದಿ ಗ್ರಹಿಕೆಯ ವಿಧಾನವೇ ಬಹಳ ಅಪಾಯಕಾರಿಯಾದುದು. ಹಾಗಾಗಿ ಭ್ರಷ್ಟಾಚಾರವನ್ನು ರಾಜಕೀಯ ಆರ್ಥಿಕ ನೆಲೆಯಲ್ಲಿ ಪರಿಭಾವಿಸಬೇಕಾಗಿದೆ. ಹಣವು ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುವ ಪ್ರಕ್ರಿಯೆಯನ್ನು ಭ್ರಷ್ಟಾಚಾರ ಎಂದು ಸಧ್ಯಕ್ಕೆ ಹೆಸರಿಸಲಾಗಿದೆ. ಸಮಾಜದಲ್ಲಿ ಹಣ ಮಾತ್ರ ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುವುದಿಲ್ಲ. ಸಂಪತ್ತು ಎಂದು ಕರೆಯುವ ಎಲ್ಲವೂ, ಉತ್ಪಾದನೆಯ ಕೆಲಸದಲ್ಲಿ ತಯಾರಿಸುವ ಎಲ್ಲ ವಸ್ತುಗಳೂ ಕೂಡ ಒಬ್ಬರಿಂದ ಮತ್ತೊಬ್ಬರಿಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುತ್ತಿವೆ. ಭೂಮಾಲೀಕರ ಜಮೀನಿನಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರ ಶ್ರಮದ ಬಹುಭಾಗ ಭೂಮಾಲೀಕರಿಗೇ ಸೇರುತ್ತಿದೆ.

ಸಾಮ್ರಾಜ್ಯಶಾಹಿಯ ನವವಸಾಹತು ಲೂಟಿಕೋರ ನೀತಿಗಳು ಈ ದೇಶಕ್ಕೆ ದೊಡ್ಡ ಸಮಸ್ಯೆಗಳು. ಭಾರತದ ಆಳುವ ವರ್ಗ ಈ ದೇಶಕ್ಕೆ ಬಹಳ ದೊಡ್ಡ ಕಂಟಕವಾಗಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ ಅಸಮಾನತೆಗಳು ಈ ದೇಶದ ಮೂಲಭೂತ ಸಮಸ್ಯೆಗಳು. ಇವುಗಳಿಂದ ದೇಶದ ಸಾಮಾನ್ಯ ಜನತೆ ಅಸಹನೆಗೊಂಡಿದೆ; ರೋಸಿಹೋಗಿದೆ. ನವವಸಾಹತು ಲೂಟಿಕೋರ ನೀತಿಗಳ ವಿರುದ್ಧ, ಆಳುವ ವರ್ಗಗಳ ವಿರುದ್ಧ ಸಾಮಾನ್ಯ ಜನರು, ರೈತರು, ನಿರುದ್ಯೋಗಿಗಳು, ಆದಿವಾಸಿ ಬುಡಕಟ್ಟು ಜನರು ಬಿಡಿಬಿಡಿಯಾಗಿ ಪ್ರತಿರೋಧಗಳನ್ನು ಒಡ್ಡುತ್ತಿದ್ದಾರೆ. ಅವರು ಬೇರೆ ಬೇರೆ ನೆಲೆಗಳಲ್ಲಿ ಸಂಘಟಿತರಾಗುತ್ತಿದ್ದಾರೆ. ಅವರು ರಾಜಕೀಯ ಮತ್ತು ಆರ್ಥಿಕ ಅಸಮಾನತೆಯ ವಿರುದ್ಧವೇ ಸೆಟೆದು ನಿಂತಿದ್ದಾರೆ. ದೇಶದ ಕೆಲವು ಕಡೆಗಳಲ್ಲಿ ತ್ಯಾಗ-ಬಲಿದಾನಗಳಿಗೂ ಸಿದ್ಧರಾಗುತ್ತಿದ್ದಾರೆ. ಆಳುವ ವರ್ಗಕ್ಕೆ ಮತ್ತು ಕಾರ್ಪೊರೇಟ್ ಪರಿವಾರಕ್ಕೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಇದು ನುಂಗಲಾರದ ತುತ್ತಾಗುವ ಪರಿಸ್ಥಿತಿಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲಿ ಈ ಶೋಷಿತ ಜನತೆಯ ವ್ಯವಸ್ಥೆಯ ವಿರೋಧಿ ಭಾವನೆಗಳನ್ನು ಮತ್ತು ಅವರ ವಿಚಾರಗಳನ್ನು ಬೇರೆ ಕಡೆಗೆ ತಿರುಗಿ ಸಬೇಕಾಗಿದೆ. ಹೀಗೆ ತಿರುಗಿಸದಿದ್ದರೆ ಅವರ ವಿರುದ್ಧವೇ ಸಂಘಟಿತ ರೂಪದ ಸಾಮಾಜಿಕ ಅಭಿಪ್ರಾಯ ನಿರ್ಮಾಣ ವಾಗುತ್ತದೆ. ಆ ಸಾಮಾಜಿಕ ಅಭಿಪ್ರಾಯವು ರಾಜಕೀಯ ಹಿತಾಸಕ್ತಿಯ ರೂಪವನ್ನು ಪಡೆಯುತ್ತದೆ. ಈ ಬೆಳವಣಿಗೆ ಶೋಷಕ ವರ್ಗಕ್ಕೆ ಬೇಡವಾಗಿದೆ. ಅಣ್ಣಾ ಹಜಾರೆ ತಂಡವು ಶೋಷಿತರ ವ್ಯವಸ್ಥೆಯ ವಿರೋಧಿ ಭಾವನೆಗ ಳನ್ನು ಆಲೋಚನೆಗಳನ್ನು ನಯವಾಗಿ ದಿಕ್ಕುತಪ್ಪಿಸುವ ಕೆಲಸಕ್ಕೆ ಮುಂದಾಯಿತು. 'ಶೋಷಣೆಯ ವಿರೋಧಿ ರಾಜಕೀಯ ಹಾಗೂ ಸಾಮಾಜಿಕ ಸಮಾನತೆಗಾಗಿ ಹೋರಾಡುವುದು ಬೇಡ. ಅದರ ಬದಲು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿ, ಜನ ಲೋಕಪಾಲ ಮಸೂದೆಯನ್ನು ಜಾರಿಗೆ ತಂದರೆ ಸಾಕು; ಆಗ ಎಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆ' ಎಂಬ ಭ್ರಮೆಯನ್ನು ಬಿಂಬಿ ಸುವ ಕೆಲಸ ನಡೆದು ಹೋಯಿತು.

ದೇಶದ ಬೇರೆ ಬೇರೆ ವಲಯಗಳ ಶೋಷಿತರು ಸಂಘಟಿತರಾಗಿ, ಅನ್ಯಾಯ, ಅಸಮಾನತೆ ಮತ್ತು ಶೋಷಣೆಯ ವಿರುದ್ಧ ಹೋರಾಡಲು ಪರಿಸ್ಥಿತಿ ಹೆಚ್ಚು ಹೆಚ್ಚು ಪಕ್ವವಾಗುತ್ತಿದೆ. ಇದು ನಿಜವಾಗಿಯೂ ನಡೆಸಬೇಕಿರುವ ಅಸಲೀ ಹೋರಾಟ. ಆದರೆ ಅಣ್ಣಾ ಹಜಾರೆ ತಂಡವು ಭ್ರಷ್ಟಾಚಾರ ವಿರೋಧಿ ಎಂಬ ನಕಲಿ ಹೋರಾಟವನ್ನು ಮಾಡುವುದರ ಮೂಲಕ ವ್ಯಾಪಕ ಪ್ರಚಾರ ಪಡೆಯಿತು. ಆ ಮೂಲಕ ನಕಲಿ ಹೋರಾಟವು ಅಸಲಿ ಹೋರಾಟಗಳನ್ನು ಪರೋಕ್ಷವಾಗಿ ಮೂಲೆಗುಂಪು ಮಾಡಿತು ಇಲ್ಲವೆ ಆ ದಾರಿಯಲ್ಲಿ ಆಲೋಚನೆ ಮಾಡದ ಹಾಗೆ ಮಾಡಿತು. ಕಾರ್ಪೊರೇಟ್ ಕುಟುಂಬಗಳು, ಬಹುರಾಷ್ಟ್ರೀಯ ಕಂಪನಿಗಳು ಅಣಾ ತಂಡದ ಮೂಲಕ ಈ ಹೋರಾಟವನ್ನು ಮಾಡಿಸಿದವು. ಈ ಹೋರಾಟವು ತಾನು ಎಷ್ಟು ನಕಲಿ ಎಂಬುದನ್ನು ತೋರಿಸುವುದರ ಜೊತೆಗೇ ನಕಲಿ ಹೋರಾಟಗಳ ತಂತ್ರಗಳನ್ನೂ ಮತ್ತು ಅವುಗಳ ಹಿಂದಿರುವ ಶಕ್ತಿಗಳನ್ನೂ ತೆರೆದು ತೋರಿಸಿದೆ. □

ಮೊಲೆವಾಲು ನಂಜಾಗಿ..

ಡಾ|| ಎಚ್. ಎಸ್. ಅನುಪಮಾ

೨

ಪ್ರಪಂಚದ ಒಟ್ಟೂ ಬಾಲಕಾರ್ಮಿಕರಲ್ಲಿ ಅರ್ಧದಷ್ಟು ಜನ ಭಾರತದಲ್ಲಿದ್ದಾರೆ ಎಂದು ಹೇಳಲಾಗುತ್ತದೆ. ಬಾಲ ಕಾರ್ಮಿಕ ಸಮಸ್ಯೆಯ ಒಟ್ಟಾರೆ ಅಗಾಧತೆಯ ಕುರಿತು ಕರಾರುವಾಕ್ ಅಂಕಿ-ಅಂಶಗಳು ಲಭ್ಯವಿಲ್ಲ. ಹಾಗಾಗಿಯೇ ಸರ್ಕಾರಿ ದಾಖಲೆಗಳು ಎಂದೂ ವಾಸ್ತವವನ್ನು ಬಿಂಬಿಸುವುದಿಲ್ಲ. ಭಾರತದಲ್ಲಿ ಬಾಲಕಾರ್ಮಿಕರು ೧೦ ಕೋಟಿ ದಾಟಿರುವ ಅಂದಾಜಿದೆ. ೫-೧೫ ವರ್ಷ ವಯೋಮಾನದ ಪ್ರತಿ ನಾಲ್ಕರಲ್ಲಿ ಒಂದು ಮಗು ಬಾಲಕಾರ್ಮಿಕ. ಬಾಲಕಾರ್ಮಿಕರಲ್ಲಿ ೨೧% ನಗರದಲ್ಲಿದ್ದರೆ ಉಳಿದವರು ಗ್ರಾಮೀಣ ಪ್ರದೇಶದಲ್ಲಿದ್ದಾರೆ.

ಮೊನ್ನೆ ಮೈಸೂರಿಗೆ ಹೋಗಿದ್ದಾಗ ಅಲ್ಲಿನ ಪ್ರಸಿದ್ಧ ದೇಸಿ ಹೋಟೆಲೊಂದಕ್ಕೆ ಊಟಕ್ಕೆ ಹೋದೆವು. ಅಂದು ಭಾನುವಾರ. 11-12 ವಯಸ್ಸಿನ ಪೋರನೊಬ್ಬ ತಟ್ಟೆ-ಲೋಟ ತೆಗೆದು ಆಚೆಗಿರಿಸಿ ಟೇಬಲ್ ಒರೆಸುತ್ತಿದ್ದ. ಅವನ ಎಳೆಯ ಪ್ರಾಯ ಗಮನಿಸಿದ ನಮ್ಮ ಜೊತೆಗಿದ್ದ ಕವಿಮಿತ್ರರು ಬಾಲಕಾರ್ಮಿಕರನ್ನು ಕೆಲಸಕ್ಕಿಟ್ಟುಕೊಂಡ ಬಗ್ಗೆ ಹೋಟೆಲ್ ಮಾಲೀಕರ ಬಳಿ ತಕರಾರು ತೆಗೆದರು. ಅದಕ್ಕವರು, 'ಆ ಹುಡುಗನಿಗೆ ಯಾರೂ ದಿಕ್ಕಿಲ್ಲ. ನಾನೇ ಬಟ್ಟೆ, ಫೀಸು ಕೊಟ್ಟು ಶಾಲೆಗೆ ಕಳಿಸುತ್ತಿದ್ದೇನೆ. ಇವತ್ತು ಭಾನುವಾರ ಎಂದು ಹೋಟೆಲಿಗೆ ಕೆಲಸಕ್ಕೆ ಬಂದಿದ್ದಾನೆ' ಎಂದು ಕೊಂಚ ಅಸಮಾಧಾನ, ಸಿಟ್ಟಿನಿಂದ ಹೇಳಿದರು.

ಅವರ ಮಾತಲ್ಲಿ ನಿಜವೆಷ್ಟು ಸುಳ್ಳೆಷ್ಟು ಎಂದು ಪರೀಕ್ಷಿಸಲು ಸಾಧ್ಯವಾಗಲಿಲ್ಲ. ಒಂದುವೇಳೆ ಅವನನ್ನು ಹಣ ಖರ್ಚುಮಾಡಿ ಅವರು ಶಾಲೆಗೆ ಕಳಿಸುತ್ತಿರುವುದು ನಿಜವಿದ್ದರೂ ಭಾನುವಾರದಂದು ಹೋಟೆಲ್ ಕೆಲಸಕ್ಕೆ ಬಳಸಿಕೊಳ್ಳಬಹುದೆ? ನಮ್ಮ ಮಕ್ಕಳನ್ನು ಭಾನುವಾರ ಶಾಲೆಗೆ ರಜೆ ಎಂದು ನಮ್ಮದೇ ಉದ್ಯಮದಲ್ಲಿ ದುಡಿಯಲು ಹಚ್ಚುತ್ತೇವೆಯೆ?

ಬಿಹಾರದ ಕಲ್ಲಿದ್ದಲು ಗಣಿಗಳಲ್ಲಿ ಕೆಲವು ಅಕ್ಷರಶಃ ಪಾತಾಳದ ಬಿಲಗಳು. ಅವೆಷ್ಟು ಆಳವಾಗಿ, ಕಿರಿದಾಗಿವೆಯೆಂದರೆ ಅದರಲ್ಲಿಳಿದು ಅದಿರು ಹೊರತೆಗೆಯಲು ದೊಡ್ಡವರಿಗೆ ಸಾಧ್ಯವೇ ಇಲ್ಲ. ಆ ಕಿರಿದಾದ ಬಿಲಗಣಿಯೊಳಗೆ (ರ್‍ಯಾಟ್ ಹೋಲ್ ಮೈನ್ಸ್) ನಿಲ್ಲಲಾಗುವುದಿಲ್ಲ, ತೆವಳುತ್ತ ಒಳನುಸುಳಿ ಕೆಲಸ ಮಾಡಬೇಕು. ಇದು ಅತ್ಯಂತ ಅಪಾಯ ಕಾರಿ ಕೆಲಸ. ಇಂತಹ ನೂರಾರು ಗಣಿಗಳು ಕೆಲಸ ಮಾಡಲು ಯೋಗ್ಯವಲ್ಲವೆಂದು ಎಂದೋ ಮುಚ್ಚಬೇಕಾಗಿತ್ತು. ಆದರೆ ಕಡಿಮೆ ಕೂಲಿಗೆ ಸಿಗುವ, ಹೆದರಿಸಿ ಕೆಲಸ ತೆಗೆಸಬಹುದಾದ, ಬೇಕಾದಷ್ಟು ಸಂಖ್ಯೆಯಲ್ಲಿರುವ ಬಡಮಕ್ಕಳು ಇವುಗಳನ್ನು ಇನ್ನೂ ಜೀವಂತ ಇಟ್ಟಿದ್ದಾರೆ. ಬಿಹಾರದಲ್ಲಿ ಗಣಿ ಮಾಫಿಯಾ ಪರ್ಯಾಯ ಆರ್ಥಿಕ ವ್ಯವಸ್ಥೆ ಸೃಷ್ಟಿಸುವಷ್ಟು ಬಲಶಾಲಿಯಾಗಿದ್ದು ಮಕ್ಕಳನ್ನು ಅನಧಿಕೃತವಾಗಿ ಕೆಲಸಕ್ಕೆ ಬಳಸಿಕೊಳ್ಳುತ್ತ ಎಳೆಯ ಪ್ರಾಯದಲ್ಲೇ ಅವರಿಗೆ ರೋಗದ ಬಳುವಳಿ ನೀಡುತ್ತಿದೆ. ಜನದಟ್ಟಣೆಯ, ಅತಿ ಬಡತನ-ಅರಾಜಕತೆಯ ರಾಜ್ಯದಲ್ಲಿ ಇದು ಅಪರಾಧವೆಂದೂ ಯಾರಿಗೂ ಅನಿಸುವುದಿಲ್ಲ, ಗಣಿದೊರೆಗಳು ಕಾನೂನಿನ ಕೈಗೆ ಸಿಗುವುದೂ ಇಲ್ಲ.

ಮೆಡಿಕಲ್ ಕಾಲೇಜು ಹಾಸ್ಟೆಲಿನ ಹಿಂಭಾಗದಲ್ಲೇ ಆಳೆತ್ತರದ ಕಾಂಪೌಂಡಿನೊಳಗಡೆ ಇದ್ದ ಬಳ್ಳಾರಿಯ ರಿಮ್ಯಾಂಡ್‌ಹೋಮ್‌ಗೆ ವೈದ್ಯಕೀಯ ತಪಾಸಣೆ ನಿಮಿತ್ತ ಪದೇಪದೇ ಹೋಗಬೇಕಾದ ಪ್ರಸಂಗ ಬರುತ್ತಿತ್ತು. ಅಲ್ಲಿ ಉತ್ತರ ಕರ್ನಾಟಕ – ಅದರಲ್ಲೂ ಗುಲ್ಬರ್ಗ ಕಡೆಯ ಮಕ್ಕಳೇ ಹೆಚ್ಚಿದ್ದರು. ಅವರು ಬಾಲಾಪರಾಧಿಗಳು ಎನ್ನಲು ಮನಸ್ಸೇ ಬರುತ್ತಿರಲಿಲ್ಲ, ಅಂಥ ಎಳೆಯ ಅಮಾಯಕ ಮುಖಗಳು. ಅವರೆಲ್ಲ ಅದೆಂಥ ಅಪರಾಧ ಮಾಡಿರಬಹುದು ಎಂದು ಆಶ್ಚರ್ಯವಾಗಿ ಸೂಪರಿಂಟೆಂಡೆಂಟರನ್ನು ಕೇಳಿದಾಗ ಅವರು ಕೊಟ್ಟ ಉತ್ತರ ದಂಗುಬಡಿಸಿತ್ತು. ಆ ಮಕ್ಕಳಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಸುಳ್ಳು ಆಪಾದನೆ ಹೊತ್ತು ರಿಮ್ಯಾಂಡ್‌ಹೋಮನ್ನೇ ಬಯಸಿ ಪ್ರವೇಶ ಪಡೆದವರು. ಅವರ ತಾಯ್ತಂದೆಯರು ತಾವು ನಿರಾಳವಾಗಿ ಕೆಲಸಕ್ಕೆ ವಲಸೆ ಹೊರಡುವ ಮೊದಲು ಮಕ್ಕಳ ಊಟ, ತಿಂಡಿ, ಶಿಕ್ಷಣಕ್ಕೆ ತೊಂದರೆಯಿಲ್ಲವೆಂದು ರಿಮ್ಯಾಂಡ್ ಹೋಮಿಗೆ ಹೇಗಾದರೂ ಕಳಿಸಲು ಪ್ರಯತ್ನಿಸಿದ್ದರು! ಮಕ್ಕಳನ್ನು ರಿಮ್ಯಾಂಡ್ ಹೋಮಿಗೆ ಸೇರಿಸುವ ಒಂದು ಜಾಲವೇ ಉತ್ತರ ಕರ್ನಾಟಕದಲ್ಲಿದೆಯೆಂದೂ ಅವರು ಹೇಳಿದರು. ಹೊಟ್ಟೆಪಾಡಿಗಾಗಿ ಇಲ್ಲದ ಅಪರಾಧವನ್ನು ತಮ್ಮ ಸ್ವಂತ ಮಕ್ಕಳ ಮೇಲೆ ಹೇರಲು ತಾಯ್ತಂದೆಯರೇ ಸಿದ್ಧರಾದರೆ, ವ್ಯವಸ್ಥೆ ಅದನ್ನು ಬೆಂಬಲಿಸಿದರೆ ಮಕ್ಕಳನ್ನು ಕಾಪಾಡುವವರಾರು?

ಜೀತಕ್ಕಿದ್ದವರನ್ನು ಬಂಧಮುಕ್ತಗೊಳಿಸಿದ ಬಗೆಗೆ ಪತ್ರಿಕೆಗಳಲ್ಲಿ ಇತ್ತೀಚೆಗೆ ವರದಿಯಾಗಿತ್ತು. ಢಾಬಾವೊಂದರಲ್ಲಿ ಜೀತಕ್ಕಿದ್ದ, ಕೈಕಾಲುಗಳನ್ನು ಸರಪಳಿಯಲ್ಲಿ ಬಂಧಿಸಿಟ್ಟಿದ್ದ ಹುಡುಗನ ಕತೆ ಓದಿದಾಗ ವ್ಯವಸ್ಥೆಯ ಕುರಿತು ಜಿಗುಪ್ಸೆ ಹುಟ್ಟುವಂತಾಯಿತು. ತಾನು ಮಾಡಿದ ಸಾಲಕ್ಕೆ ಮಗನನ್ನು ಜೀತಕ್ಕಿಟ್ಟಿದ್ದ ಅಪ್ಪ ಹುಡುಗ ತಪ್ಪಿಸಿಕೊಂಡು ಓಡಿ ಹೋದಾಗಲೆಲ್ಲ ಹಿಡಿಹಿಡಿದು ತಂದುಕೊಟ್ಟು ಅವನ ಬಾಲ್ಯ, ಶಿಕ್ಷಣ, ಕನಸು ಎಲ್ಲವನ್ನು ನುಚ್ಚುನೂರು ಮಾಡಿದ್ದ. ಸರಪಳಿಯಲ್ಲಿ ಬಂಧಿತನಾಗಿ ಮುಚ್ಚಿದ ಕೋಣೆಯಲ್ಲಿ ಶಿಕ್ಷೆ ಅನುಭವಿಸುತ್ತಾ, ಕೆಲಸ ಗೇಯುವ ಎಳೆಯ ಹುಡುಗನ ದಾರುಣ ಕತೆಯೇ ಎಷ್ಟೋ ಬಡಮಕ್ಕಳ ಕತೆಯಾಗಿರಬಹುದು. ಜೀತಪದ್ಧತಿ ವಿರೋಧಿಸಿ, ಬಾಲಕಾರ್ಮಿಕ ಪದ್ಧತಿ ನಿಷೇಧಿಸಿ ಎಷ್ಟೋ ವರ್ಷಗಳಾದವು. ಆದರೂ ಬಾಲಕಾರ್ಮಿಕರ ಸಂಖ್ಯೆ ಕಡಿಮೆಯಾಗಿರುವಂತೆ ಕಾಣುವುದಿಲ್ಲ.

'ತೆಹೆಲ್ಕಾ' ಪತ್ರಿಕೆ ವರ್ಷದ ಕೆಳಗೆ ಆಧುನಿಕ ಶಿಕ್ಷಣದಿಂದ ವಂಚಿತರಾದ, ಬಾಲ್ಯ ಕಳೆದುಕೊಳ್ಳುತ್ತಿರುವ ಬಾಲಕಾರ್ಮಿಕರ ಬಗೆಗೆ ವರದಿಯೊಂದನ್ನು ಪ್ರಕಟಿಸಿತ್ತು. ಧರ್ಮ, ದೇಶ, ಕಾಲದ ವ್ಯತ್ಯಾಸವಿಲ್ಲದೆ ಹೇಗೆ ಸಮಾಜಗಳು ದುರ್ಬಲರ ಶೋಷಣೆಗೆ ಹೊಸದಾರಿಗಳನ್ನು ಶೋಧಿಸುತ್ತ, ನವೀಕರಣಗೊಳಿಸುತ್ತ ಬಂದಿವೆ ಎಂದು ಆ ಬರಹ ಓದಿದ ಮೇಲೆ ಗಟ್ಟಿಯಾಯಿತು. ಎನ್‌ಜಿಒ ಒಂದರ ಕಾರ್ಯಕರ್ತರಂತೆ ಐದು ತಿಂಗಳು ಸುತ್ತಾಡಿ ವರದಿಗಾರರು ಸಂಗ್ರಹಿಸಿದ ವಿವರಗಳು ಬಡಮಕ್ಕಳ ಬಾಲ್ಯವನ್ನೂ, ಶಿಕ್ಷಣದ ಅವಕಾಶವನ್ನೂ ಕಸಿದುಕೊಳ್ಳುತ್ತಿರುವ ಆಧುನಿಕ, ನಾಗರಿಕ ಜೀವನದ ಕರಾಳ ಪರಿಣಾಮಗಳ ಬಗೆಗೆ ತಿಳಿಸುತ್ತವೆ. ಆ ವರದಿಯ ಸಾರಾಂಶ ರೂಪ ಇಲ್ಲಿದೆ:

ಅತಿಹೆಚ್ಚು ಜನಸಾಂದ್ರತೆಯ ಹಾಗೂ ಅತಿ ಹಿಂದುಳಿದ ರಾಜ್ಯಗಳಾದ ಉತ್ತರ ಪ್ರದೇಶ ಮತ್ತು ಬಿಹಾರಗಳಿಂದ ಲಕ್ಷಾಂತರ ಮಕ್ಕಳು ಸಾವಿರಾರು ಮೈಲಿ ಪ್ರಯಾಣಿಸಿ ಮತ್ತೆಲ್ಲೋ ಕೆಲಸಕ್ಕೆ ಬರುತ್ತಾರೆ. ತೀರಾ ಬಡಕುಟುಂಬಗಳ ಮಕ್ಕಳನ್ನು ಗುಂಪುಗುಂಪಾಗಿ ಕರೆತರುವ 'ಚಾಚೂ'ಗಳು ಅವರ ಪಾಲಕರಿಗೆ ಎರಡು ಹೊತ್ತು ಊಟ, ಪುಕ್ಕಟೆ ಶಿಕ್ಷಣ, ಕೊನೆಗೆ ಕೆಲಸ ಎಂಬ ಆಮಿಷ ತೋರಿಸಿ ಕರೆತರುತ್ತಾರೆ.

ಹಾಗೆ ಕರೆತಂದವರಲ್ಲಿ ಬಹುಪಾಲು ಮಕ್ಕಳು ವರ್ಷಾನುಗಟ್ಟಲೆ ತಮ್ಮ ಮನೆಯ ಮುಖ ಮತ್ತೆ ನೋಡಲಾರರು. ಈ ಮಕ್ಕಳು ಕಲಿಕೆಯ ಜೊತೆಗೆ ಸಂಬಳವಿಲ್ಲದ ಸತತ ದುಡಿಮೆಗೆ ತಯಾರಾಗಬೇಕು. ಗಾರ್ಮೆಂಟ್, ಬಿಸ್ಕತ್, ಝರಿ, ಶೂ, ಬೆಳ್ಳಿ ಕಿವಿಯೋಲೆ, ಬಿಂದಿ ಮುಂತಾದ ಕಡಿಮೆ ಶ್ರಮ ಆದರೆ ಸತತ ಕೆಲಸ ಬೇಡುವ ಫ್ಯಾಕ್ಟರಿ ಕೆಲಸಗಳಿಗೆ ಅವರನ್ನು ಕಳಿಸಲಾಗುತ್ತದೆ. ಬಹಳಷ್ಟು ಮಕ್ಕಳು 11-14 ವಯಸ್ಸಿನ ಆಸುಪಾಸಿನವರಾಗಿದ್ದು ಏಳೆಂಟು ವರ್ಷ ವಯಸ್ಸಿನ ಮಕ್ಕಳೂ ಕೆಲಸ ಮಾಡುವವರಿದ್ದಾರೆ. ಅವರನ್ನು

ಪೂರೈಸುವ ದಲ್ಲಾಳಿಗೆ ಸಂಬಳ ಸಂದಾಯವಾಗುತ್ತದೆ. ಆತ ಮನೆಗೆ ಹೋಗುವಾಗ ಒಮ್ಮೆಗೇ ಕೊಡುತ್ತೇನೆಂದು ಹಣ ಇಟ್ಟು ಕೊಳ್ಳುತ್ತಾನೆ. ಮಕ್ಕಳನ್ನು ಅತಿ ಸಣ್ಣ ಗೋಡೌನಿನಂತಹ ಕೋಣೆಗಳಲ್ಲಿ ತುರುಕಿ, ಊಟ ತಿಂಡಿ ಪೂರೈಸಿ, ಕೆಲಸಕ್ಕೆ ಹಚ್ಚುತ್ತಾರೆ. ಇಲ್ಲೊಂದು ಸೂಕ್ಷ್ಮವಿದೆ: ಅವರಲ್ಲಿ ಹೆಚ್ಚಿನವರು ಮುಸ್ಲಿಂ ಮಕ್ಕಳು. ಮುಂದೆ ಹಾಫೀಜ್ ಅಥವಾ ಮೌಲ್ವಿ ಕೆಲಸ ಕೊಡಿಸುತ್ತೇವೆಂದು ಹೇಳಿ ಮದರಸಾಗಳಿಗೆ ಕರೆತಂದು ಕೆಲಸಕ್ಕೆ ಬಳಸಿ ಕೊಳ್ಳಲಾಗುತ್ತದೆ. ಭಾನುವಾರ ಒಂದೆರೆಡು ತಾಸು ಅರೇಬಿಕ್, ಪರ್ಷಿಯನ್, ಕುರಾನ್ ಕಲಿತು ಬಂದರೆ ಮುಗಿಯಿತು, ಉಳಿದಂತೆ ದುಡಿಮೆ.

ಆ ಮಕ್ಕಳ ಬದುಕನ್ನು ಅರಿಯಲು ಅವರ ಮಾತುಗಳನ್ನೇ ಕೇಳಿ:

'ಬೆಳಿಗ್ಗೆ 9ಕ್ಕೆ ಖಾಲಿಹೊಟ್ಟೆಯಲ್ಲೇ ಹೊರಡುತ್ತೇನೆ. ಅಲ್ಲಿ ಸೇಟು ಎರಡು ತುಂಡು ಅಯೋಡೆಕ್ಸ್ ಸವರಿದ ಬ್ರೆಡ್ ಕೊಡುತ್ತಾರೆ. ಅದರ ಪರಿಮಳ ನಮಗೆಲ್ಲ ಇಷ್ಟ. ತಿಂದ ನಂತರ ಬಾಯಿ, ಹೊಟ್ಟೆಯೆಲ್ಲ ಮೊದಮೊದಲು ಉರಿಯಾಗಿ ನಂತರ ಥಂಡಾ ಆಗಿ ಮಜಾ ಬರುತ್ತದೆ. ಮಧ್ಯಾಹ್ನ ಮತ್ತು ರಾತ್ರಿ ಎರಡು ಚಪಾತಿ ಮತ್ತು ಮಾಂಸದ ತುಂಡು ಕೊಡುತ್ತಾರೆ. ಅಕ್ಷಯ್ ಕುಮಾರ್ ಫೋಟೋ ಬರುತ್ತಲ್ಲ, ನಾವೇ ಆ ಜೀನ್ಸ್ ಹೊಲಿಯುತ್ತೇವೆ. ನಾನೀಗ ಒಂದು ಗಂಟೆಯಲ್ಲಿ ಹತ್ತು ಪ್ಯಾಂಟುಗಳಿಗೆ ಕಿಸೆ ಹೊಲಿಯಬಲ್ಲೆ ಗೊತ್ತಾ? ನಾನಿನ್ನೂ ಟ್ರೈನೀ. ಸಂಬಳವಿಲ್ಲ. ಇನ್ನೊಂದು ವರ್ಷದ ಬಳಿಕ ತಿಂಗಳಿಗೆ 1200 ರೂ ಕೊಡುವೆನೆಂದು ಹೇಳಿದ್ದಾರೆ.'

–ಮೊಹಮದ್ ಕಲಂ, 11 ವರ್ಷ.

'ಬೆಳಿಗ್ಗೆ 9ರಿಂದ ರಾತ್ರಿ 9.30ರವರೆಗೆ ಶೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ. ಸುಸ್ತಾದಾಗ ಲಿಕ್ವಿಡ್ ಶೂ ಪಾಲಿಷ್ ವಾಸನೆ ಎಳೆದುಕೊಂಡರೆ ಹೊಸಶಕ್ತಿ ಬರುತ್ತದೆ. ಆಗ ಕೆಲಸ ಮಾಡಲೂ ಬೇಸರ ಬರುವುದಿಲ್ಲ. ನನಗೆ ತಿಂಗಳಿಗೆ 3000 ರೂ. ಸಂಬಳ ಇದೆಯಂತೆ. ಮಾಲಿಕ ಹೇಳಿದ್ದಾನೆ, ನಾನು ಹಳ್ಳಿಗೆ ಹೋಗುವಾಗ ಎಲ್ಲ ಲೆಕ್ಕಮಾಡಿ ಒಟ್ಟಿಗೇ ಕೊಡುತ್ತಾನಂತೆ.'

–ಅನೀಸ್, 13 ವರ್ಷ

'ಒಮ್ಮೆ ಪೋಲೀಸ್ ರೈಡ್ ಸಮಯದಲ್ಲಿ ನನ್ನನ್ನು ಗೋಣಿಚೀಲದಲ್ಲಿ ಹಾಕಿ ಗೋಡೌನಿನಲ್ಲಿ ತುಂಬಿಬಿಟ್ಟರು. ಅವರು ರಾತ್ರಿ ಗೋಡೌನಿನ ಬೀಗ ತೆಗೆದಾಗ ನನಗೆ ಪ್ರಜ್ಞೆಯೇ ಇರಲಿಲ್ಲ. ನಾನು ಬೆಳಿಗ್ಗೆ 8ರಿಂದ ರಾತ್ರಿ 10ರ ತನಕ ಝರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ.'

– ಜುನೇದ್, 9 ವರ್ಷ

'ನಾನು 4 ವರ್ಷಗಳಿಂದ ಝರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ. ಬೆಳಿಗ್ಗೆ 7ರಿಂದ ರಾತ್ರಿ 10–12ರ ತನಕವೂ ಕೆಲಸ ಇರುತ್ತದೆ. ಊಟ–ತಿಂಡಿ ಎಲ್ಲ ಅಲ್ಲೇ. ಒಮ್ಮೆ ಕೆಲಸ ಹೆಚ್ಚಾಗಿ ಮಾಲೀಕರ ಬಳಿ ಮಾಡಲು ಸಾಧ್ಯವಿಲ್ಲವೆಂದು ಹೇಳಿದೆ, ಆತ ನನ್ನ ಬಟ್ಟೆ ಬಿಚ್ಚಿಸಿ ಅತ್ಯಾಚಾರ ಮಾಡಿದ. ಉಳಿದವರ ಬಳಿ ಹೇಳಿದಾಗ ಅವರು 'ಮಜಾ ಅನಿಸಲಿಲ್ಲವೆ ನಿನಗೆ?' ಎಂದು ನಗಾಡಿಬಿಟ್ಟರು.'

–ಸದ್ದಾಂ, 12 ವರ್ಷ

'ನಾನಿಲ್ಲಿ ಬಂದು ಎರಡು ವರ್ಷವಾಯಿತು. ಮೊದಲು ದಿನಕ್ಕೆ 20–30 ಬಿಂದಿ ಪ್ಯಾಕ್ ಮಾಡುತ್ತಿದ್ದೆ. ಒಂದು ದಿನ ಉಳಿದ ಹುಡುಗರ ಬಳಿ ನನಗೆ ಪಾಠ ಕಲಿಸಲು ಮಾಲಿಕರು ಹೇಳಿದರು. ಅವರೆಲ್ಲ ನನ್ನ ಮೇಲೆ ಉಗಿದು, ಉಚ್ಚೆ ಹೊಯ್ದರು. ಅವತ್ತಿಡೀ ವಾಂತಿ ಮಾಡಿದೆ. ಈಗ ನಾನು ಒಂದು ದಿನಕ್ಕೆ ಹರಳು ಕೂರಿಸಿ 100 ಬಿಂದಿ ಪ್ಯಾಕೆಟ್ ಮಾಡುವೆ ಗೊತ್ತಾ? ಚಿನ್ನಿ–ದಾಂಡು ಆಡಲು ನನಗಿಷ್ಟ. ಆದರೆ ಇಲ್ಲಿ ಟೆರೇಸಿಗೆ ಹೋಗಲೂ ನಮ್ಮನ್ನು ಬಿಡುವುದಿಲ್ಲ. ನಾವು ಈ ಕೋಣೆಯಲ್ಲೇ ಕೆಲಸ ಮಾಡುತ್ತೇವೆ. ಪ್ರತಿ ಭಾನುವಾರ ಅವರು ಕೊಡುವ 50 ರೂಪಾಯಿಯಲ್ಲಿ ಹೊರಗೆ ತಿಂದು ಬರುತ್ತೇವೆ.'

ಬಾಲಕಾರ್ಮಿಕರ ಸಮಸ್ಯೆ ಕಾನೂನಿನ ಸಮಸ್ಯೆ ಅಲ್ಲ. ರಾಜಕೀಯ ಸಮಸ್ಯೆಯೂ ಅಲ್ಲ. ಇದು ಸಾಮಾಜಿಕ ಸಮಸ್ಯೆ. ಹಾಗಾಗಿಯೇ ಹಲವು ಆಯಾಮಗಳನ್ನೊಳಗೊಂಡಿರುವಂಥದು. ಕಾನೂನಿನಲ್ಲೂ ಬಾಲಕಾರ್ಮಿಕರು ಯಾರೆಂದು ವ್ಯಾಖ್ಯಾನಿಸಲು ಗೊಂದಲಗಳಿವೆ. ತಮ್ಮ ಅಥವಾ ತಮ್ಮ ಕುಟುಂಬದ ನಿರ್ವಹಣೆಗಾಗಿ ಎಳೆ ವಯಸ್ಸಿನಲ್ಲೇ ಅಪಾಯಕಾರಿ ಉದ್ಯೋಗಗಳನ್ನು ಮಾಡುವ 15 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವರು ಬಾಲ ಕಾರ್ಮಿಕರು ಎನಿಸಿಕೊಳ್ಳುತ್ತಾರೆ. ಹಣಕ್ಕಾಗಿ ಅವರ ಬಳಿ ಕೆಲಸ ಮಾಡಿಸುವುದನ್ನು ಕಾನೂನು ನಿಷೇಧಿಸುತ್ತದೆ. ಇದು ಸಮಸ್ಯೆ ಏಕೆಂದರೆ ದುಡಿಯುವ ಮಕ್ಕಳು ಬಾಲ್ಯದ ಹಕ್ಕು, ವಿದ್ಯಾಭ್ಯಾಸ, ಸವಲತ್ತುಗಳಿಂದ ವಂಚಿತರಾಗುತ್ತಾರೆ.

–ಅಕ್ಮಲ್, 9 ವರ್ಷ

ಅವರಲ್ಲಿ ಹೆಚ್ಚಿನ ಮಕ್ಕಳು ಲಿಕ್ವಿಡ್ ಶೂ ಪಾಲಿಷ್ ಮೂಸಿ ನೋಡಿದರೆ ತಮಗೆ ಶಕ್ತಿ ಬರುವುದೆಂದು ಹೇಳಿದ್ದಾರೆ. ಮತ್ತೆ ಕೆಲವರಿಗೆ ಅಯೋಡೆಕ್ಸ್. ಅಯೊಡೆಕ್ಸ್ ಕ್ಲೋರೋಫಾರ್ಮ್‌ನ್ನು ಹೊಂದಿದೆ. ಇದು ಖಾದ್ಯ ವಸ್ತುವಲ್ಲ. ತುಂಬ ದಿನ ಬಳಸಿದರೆ ಕಿಡ್ನಿಗೆ ಹಾನಿಕಾರಕ. ಆದರೆ ದಿನದಿನವೂ ಇದನ್ನೇ ತಿನ್ನಿಸಿಬಿಟ್ಟರೆ ಒಂದು ಬಗೆಯ ಅಮಲಿಗೊಳಗಾಗುವ ಮಕ್ಕಳು ಯಂತ್ರಗಳಂತೆ ಕೆಲಸ ಮಾಡಬಲ್ಲವರಾಗುತ್ತಾರೆ. ಬಾಲ್ಯಸಹಜ ಚಂಚಲತೆ ಮಾಯವಾಗುತ್ತದೆ. ಇದು ಮಾದಕವಸ್ತು ಅವಲಂಬನೆಯ ಮೊದಲ ಹೆಜ್ಜೆ. ಇದೇ ಮುಂದುವರಿದರೆ ಮಾದಕ ದ್ರವ್ಯದ ಚಟ ಅಂಟಿ ಅಂಥ ಮಕ್ಕಳು ಮಾದಕವ್ಯಸನಿಗಳಾಗುತ್ತಾರೆ. ಇದ್ದ ಜಾಗ ಬಿಟ್ಟೋಡುತ್ತಾರೆ. ಹಣಕ್ಕಾಗಿ ಸಣ್ಣಪುಟ್ಟ ಅಪರಾಧಗಳಲ್ಲಿ ಭಾಗಿಯಾಗುತ್ತಾರೆ. ಸಮಾಜ ವಿರೋಧಿ ಗುಂಪುಗಳ ಕೈಯಲ್ಲಿ ಸಿಕ್ಕಿಬಿದ್ದರೆ ಯಾವ್ಯಾವುದೋ ಕೆಲಸಗಳಿಗೆ ದುರ್ಬಳಕೆಯಾಗುತ್ತಾರೆ. ಇದೊಂದು ವಿಷವರ್ತುಲ.

ಈ ಮಕ್ಕಳ ಹಿನ್ನೆಲೆ, ಕೆಲಸದ ವಾತಾವರಣ, ಶಿಕ್ಷೆಯ ಬಗೆಗೆ ಓದಿದರೆ ಅವರ ಹಿತ ಕಾಪಾಡುವಲ್ಲಿ ಸಮಾಜ ವಿಫಲವಾಗಿರುವುದು ಮೇಲ್ನೋಟಕ್ಕೆ ತಿಳಿಯುತ್ತದೆ. ಮಕ್ಕಳ ಬದುಕನ್ನೇ ನಾಶಮಾಡುವ ಉದ್ಯೋಗದಿಂದ ಲಾಭ ಯಾರಿಗೆ? ಅವರನ್ನು ಕೆಲಸಕ್ಕೆ ಕಳಿಸುವ ದಲ್ಲಾಳಿಗಳಿಗೆ, ಪುಡಿಗಾಸಿನಲ್ಲಿ ಕೆಲಸ ಮಾಡಿಸಿಕೊಳ್ಳುವ ವ್ಯಾಪಾರಿಗೆ ಹಾಗೂ ಕಡಿಮೆ ರೇಟಿಗೆ ವಸ್ತು ಕೊಂಡೆನೆಂಬ ಖುಷಿಯ ಗ್ರಾಹಕನಿಗೆ. ಕವಡೆ ಕಿಮ್ಮತ್ತಿಗೆ ತಮ್ಮ ಮಕ್ಕಳ ಬಾಲ್ಯವನ್ನೇ ಮಾರಿಕೊಳ್ಳುವ ಪಾಲಕರ ತಪ್ಪು ಇಲ್ಲವೆ? ಮಕ್ಕಳ ಹಿತಕಾಯುವಲ್ಲಿ ವಿಫಲವಾದ ತಾಯ್ತಂದೆಯರಿಗೆ ಯಾವ ಶಿಕ್ಷೆ ಹೇಗೆ ಕೊಡುವುದು? ಅವರಿಗೇ ತಿನ್ನಲು ಅರೆಹೊಟ್ಟೆಯಾಗಿರುವಾಗ ಮಕ್ಕಳಿಗೆ ದುಡಿಯಲು ಕೆಲಸ ಸಿಕ್ಕು, ಹೊಟ್ಟೆ ತುಂಬ ತಿಂದುಕೊಂಡಿರಲಿ ಎಂದು ಭಾವಿಸುವಂತಹ ಸನ್ನಿವೇಶ ನಿರ್ಮಾಣವಾಗಿರುವುದಕ್ಕೆ ಯಾರು ಹೊಣೆ? ಈ ಮಕ್ಕಳ ಸ್ಥಿತಿ 'ಶಿಕ್ಷಣ ಮೂಲಭೂತ ಹಕ್ಕು' ಎನ್ನುವ ಸರ್ಕಾರದ ಮಾತುಗಳ ಅಣಕದಂತೆ ತೋರುವುದಿಲ್ಲವೆ? ಅತಿ ಕಡಿಮೆ ಸಮಯ ಮತ್ತು ಖರ್ಚಿನಲ್ಲಿ ಕೆಲಸವನ್ನು ಮಾಡಿ ಮುಗಿಸುವುದೇ ಮುಖ್ಯವಾದ ಮಾಲಿಕ–ಉತ್ಪಾದಕರಿಗೆ ಸಾಮಾಜಿಕ ದೃಷ್ಟಿಕೋನ ಎಂದಾದರೂ ಹುಟ್ಟಲು ಸಾಧ್ಯವೆ?

ಒಂದಂತೂ ನಿಚ್ಚಳ.

ದುರ್ಬಲರ ಪರವಾಗಿ ದೇವರು ನಿಲ್ಲಲಾರ, ನಿಂತರೆ ಮನುಷ್ಯ ನಿಲ್ಲಬೇಕು ಅಷ್ಟೆ.

ಸಿಗ್ನಲ್ ಲೈಟಿನಲ್ಲಿ ಕೆಂಪುಬಣ್ಣ ಬಂದೊಡನೆ ಕಾರುಗಳ ನಡುವೆ ನುಸುಳುತ್ತ ಕೈಯಲ್ಲಿ ಥರಾವರಿ ವಸ್ತುಗಳನ್ನು ಹಿಡಿದು ಓಡಿಬರುವ ಚಂಚಲ ಕಣ್ಣುಗಳ ಚಿಣ್ಣರು; ಘಟ್ಟದ ರಸ್ತೆ, ಹೈವೇಗಳಲ್ಲಿ ಚುಮುಚುಮು ಬೆಳಿಗ್ಗೆ ವಾಹನದ ಶಬ್ದವಾದದ್ದೇ ಓಡಿಬಂದು ಹೂಮಾಲೆ ಹಿಡಿದು ನಿಲ್ಲುವ ಹುಡುಗರು; ನಡುಹಗಲು ಶಾಲೆಯ ಸಮವಸ್ತ್ರ ತೊಟ್ಟೇ ಅಮ್ಮನ ಜೊತೆ ಜಲ್ಲಿ ಕುಟ್ಟುವ ಮಕ್ಕಳು; ರೇಲ್ವೆ ಸ್ಟೇಷನ್ನಿನಲ್ಲಿ ಬೇಡುವ ಮಕ್ಕಳು; ಹೊಗೆಯುಗುಳುವ ಮಂಡಕ್ಕಿ ಭಟ್ಟಿಗಳ ಎದುರು ಅಕ್ಷರಶಃ ಬೇಯುವ, ಆಕಸ್ಮಿಕವಾಗಿ ಬಿದ್ದು ಜೀವ ಕಳೆದುಕೊಳ್ಳುವ ಮಕ್ಕಳು; ಭಾರತದ ವೇಶ್ಯಾವಾಟಿಕೆಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿರುವ ಅಪ್ರಾಪ್ತ ವಯಸ್ಸಿನ ಬಾಲಕಿಯರು..

ಅವರೆಲ್ಲರ ಬಾಲ್ಯ ಎಲ್ಲಿ ಕಳೆದುಹೋಯಿತು? ಎಚ್.ಪಿ.' ಬ್ಲಾವಟ್‌ಸ್ಕಿ 'ಮನುಕುಲ ಮಕ್ಕಳಲ್ಲೇ ಮುಕ್ತಿ ಪಡೆಯಬೇಕು' ಎನ್ನುತ್ತಾನೆ. 'ಮಕ್ಕಳನ್ನು ಪ್ರೀತಿಸುವುದೆಂದರೆ ದೇವರನ್ನು ಪ್ರೀತಿಸಿದಂತೆ' ಎಂದರು ಥೆರೇಸಾ. ಎಲ್ಲ ಧರ್ಮಗಳೂ ಮಕ್ಕಳ ಬಗೆಗೆ ಉದಾತ್ತ ಮಾತುಗಳನ್ನೇ ಹೇಳುತ್ತವೆ. ಇಂಥ ಯಾವ ತಾತ್ವಿಕ ಹಿನ್ನೆಲೆಯೂ ಬೇಡ, ನಿಸರ್ಗ ಸಹಜ ಪೊರೆಯುವಿಕೆಯ ಭಾವನೆ ತನ್ನ ಸಂತತಿ ಕುರಿತು ಮಾನವನಿಗೆ ಇರುವುದಿಲ್ಲವೆ?

ಬಾಲಕಾರ್ಮಿಕರ ಸಮಸ್ಯೆ ಕಾನೂನಿನ ಸಮಸ್ಯೆ ಅಲ್ಲ. ರಾಜಕೀಯ ಸಮಸ್ಯೆಯೂ ಅಲ್ಲ. ಇದು ಸಾಮಾಜಿಕ ಸಮಸ್ಯೆ. ಹಾಗಾಗಿಯೇ ಹಲವು ಆಯಾಮಗಳನ್ನೊಳಗೊಂಡಿರುವಂಥದು. ಕಾನೂನಿನಲ್ಲೂ ಬಾಲಕಾರ್ಮಿಕರು ಯಾರೆಂದು ವ್ಯಾಖ್ಯಾನಿಸಲು ಗೊಂದಲಗಳಿವೆ. ತಮ್ಮ ಅಥವಾ ತಮ್ಮ ಕುಟುಂಬದ ನಿರ್ವಹಣೆಗಾಗಿ ಎಳೆ ವಯಸ್ಸಿನಲ್ಲೇ ಅಪಾಯಕಾರಿ ಉದ್ಯೋಗಗಳನ್ನು ಮಾಡುವ 15 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವರು ಬಾಲಕಾರ್ಮಿಕರು ಎನಿಸಿಕೊಳ್ಳುತ್ತಾರೆ. ಹಣಕ್ಕಾಗಿ ಅವರ ಬಳಿ ಕೆಲಸ ಮಾಡಿಸುವುದನ್ನು ಕಾನೂನು ನಿಷೇಧಿಸುತ್ತದೆ. ಇದು ಸಮಸ್ಯೆ ಏಕೆಂದರೆ ದುಡಿಯುವ ಮಕ್ಕಳು ಬಾಲ್ಯದ ಹಕ್ಕು, ವಿದ್ಯಾಭ್ಯಾಸ, ಸವಲತ್ತುಗಳಿಂದ ವಂಚಿತರಾಗುತ್ತಾರೆ.

ಭಾರತ ಸಂವಿಧಾನ ಹಾಗೂ 1986ರ ಬಾಲಕಾರ್ಮಿಕ ಕಾನೂನು ಬಾಲಕಾರ್ಮಿಕನಿಗೆ 14 ವರ್ಷವನ್ನು 'ಗರಿಷ್ಠ ವಯೋಮಿತಿ' ಎಂದು ಗುರುತಿಸಿದೆ. ಆದರೆ ಪ್ಲಾಂಟೇಷನ್ ಆಕ್ಟ್ – 1951 ಕೆಲಸಕ್ಕೆ ಸೇರುವ ವಯೋಮಿತಿ ಕನಿಷ್ಠ 12 ವರ್ಷ ಎಂದು ಹೇಳುತ್ತದೆ. ಮೋಟಾರ್ ಟ್ರಾನ್ಸ್‌ಪೋರ್ಟ್ ಆಕ್ಟ್ ಹಾಗೂ ಮೈನ್ಸ್ ಆಕ್ಟ್ ಇದನ್ನು 15 ವರ್ಷ ಎಂದು ಪರಿಗಣಿಸಿವೆ. ಸರ್ಕಾರಿ ದಾಖಲೆಗಳಲ್ಲಿ ಕಂಡುಬರುವ ಈ ವಯಸ್ಸಿನ ವ್ಯತ್ಯಾಸಗಳು ಈ ಸಮಸ್ಯೆಯನ್ನು ತಡೆಯಲು ಇರುವ ಅಡ್ಡಗಾಲುಗಳಾಗಿ ಉದ್ಯೋಗದಾತರಿಗೆ ತಪ್ಪಿಸಿಕೊಳ್ಳಲು ಅವಕಾಶ ಕಲ್ಪಿಸಿವೆ.

ಪ್ರಪಂಚದ ಒಟ್ಟೂ ಬಾಲಕಾರ್ಮಿಕರಲ್ಲಿ ಅರ್ಧದಷ್ಟು ಜನ ಭಾರತದಲ್ಲಿದ್ದಾರೆ ಎಂದು ಹೇಳಲಾಗುತ್ತದೆ. ಬಾಲಕಾರ್ಮಿಕ ಸಮಸ್ಯೆಯ ಒಟ್ಟಾರೆ ಅಗಾಧತೆಯ ಕುರಿತು ಕರಾರುವಾಕ್ ಅಂಕಿ–ಅಂಶಗಳು ಲಭ್ಯವಿಲ್ಲ. ಹಾಗಾಗಿಯೇ ಸರ್ಕಾರಿ ದಾಖಲೆಗಳು ಎಂದೂ ವಾಸ್ತವವನ್ನು ಬಿಂಬಿಸುವುದಿಲ್ಲ. ಭಾರತದಲ್ಲಿ ಬಾಲಕಾರ್ಮಿಕರು 10 ಕೋಟಿ ದಾಟಿರುವ ಅಂದಾಜಿದೆ. 5–15 ವರ್ಷ ವಯೋಮಾನದ ಪ್ರತಿ ನಾಲ್ಕರಲ್ಲಿ ಒಂದು ಮಗು ಬಾಲಕಾರ್ಮಿಕ. ಬಾಲಕಾರ್ಮಿಕರಲ್ಲಿ 21% ನಗರದಲ್ಲಿದ್ದರೆ ಉಳಿದವರು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ನಮ್ಮ ದೇಶದ ಒಟ್ಟು ಕಾರ್ಮಿಕರಲ್ಲಿ ಬಾಲಕಾರ್ಮಿಕರು 18.8% ಇದ್ದರೆ, ಬಾಂಗ್ಲಾದೇಶದಲ್ಲಿ 19.5%, ಇಂಡೋನೇಷ್ಯಾ 12.4%, ಥೈಲ್ಯಾಂಡ್ 20.5%, ಟರ್ಕಿ 27.3%, ಪಾಕಿಸ್ತಾನ 16.6%, ಈಜಿಪ್ಟ್ 8.2%, ಶ್ರೀಲಂಕಾ 4.9% ಬಾಲಕಾರ್ಮಿಕರನ್ನು ಹೊಂದಿವೆ. ಆಶ್ಚರ್ಯವೆಂದರೆ ಭಾರತ ಉಪಖಂಡದ ದೇಶಗಳಲ್ಲಿ ಬಾಲಕಾರ್ಮಿಕರ ಸಂಖ್ಯೆ ಹೆಚ್ಚಿದ್ದರೆ ಪ್ರಪಂಚದಲ್ಲೇ ಅತಿ ಕಡಿಮೆ ಪ್ರಮಾಣ ಶ್ರೀಲಂಕಾದಲ್ಲಿದೆ. ಆಫ್ರಿಕಾ, ಲ್ಯಾಟಿನ್ ಅಮೆರಿಕಾಗಳು ಹೆಚ್ಚು ಬಾಲಕಾರ್ಮಿಕರನ್ನು ಹೊಂದಿವೆ.

ಚೀನಾದಲ್ಲಿ 10–20% ಕಾರ್ಮಿಕರು ಬಾಲಕಾರ್ಮಿಕರಾಗಿದ್ದಾರೆ. 16 ವರ್ಷದವರೆಗೆ ಶಿಕ್ಷಣ ಕಡ್ಡಾಯ ಎಂದಿದ್ದರೂ ವರ್ಷದಿಂದ ವರ್ಷಕ್ಕೆ ಬಾಲಕಾರ್ಮಿಕರ ಸಂಖ್ಯೆ ಅಲ್ಲಿ ಹೆಚ್ಚುತ್ತಿದೆ. ಪಾಲಕರೂ ಶಾಲಾ ಕಲಿಕೆ ಬದುಕಿನ ದಾರಿ ತೋರಿಸುವುದಿಲ್ಲ ಎಂದೇ ನಂಬಿ ದುಡಿಯಲು ಕಳಿಸುತ್ತಿದ್ದಾರೆ. ಸರ್ಕಾರವೂ ಬಡತನ ನಿರ್ಮೂಲನೆಗೆ ಮಕ್ಕಳ ದುಡಿಮೆಯೂ ಒಂದು ಮಾರ್ಗ ಎಂದು ನಂಬಿದೆ. ಉತ್ಪಾದನಾ ಘಟಕಗಳು ಪ್ರಗತಿಯ ಗುರಿಯನ್ನಿಟ್ಟುಕೊಳ್ಳುತ್ತವೆಯೇ ಹೊರತು ಕಾರ್ಮಿಕರು ಯಾರಾಗಿರಬೇಕೆಂಬ ಬಗೆಗೆ ನಿಶ್ಚಿತ ನಿಲುವು ಹೊಂದಿರುವುದಿಲ್ಲ. ಮಕ್ಕಳಾದರೆ ಮಕ್ಕಳು. ಕಡಿಮೆ ಬೆಲೆಗೆ, ಕಡಿಮೆ ಸಮಯದಲ್ಲಿ, ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವಾಗುವುದೇ ಅವರ ಗುರಿ. ಸರ್ಕಾರ ಅಂಥವರ ಮೇಲೆ ಕಠಿಣ ಕ್ರಮಗಳಿಗೆ ಮುಂದಾಗುವುದಿಲ್ಲ. ಹಾಗೆ ನೋಡಿದರೆ ಚೀನಾದಂತೆ ಭಾರತದ ಕಾನೂನು ಬಾಲಕಾರ್ಮಿಕ ಪದ್ಧತಿಯನ್ನು ಒಪ್ಪುವುದಿಲ್ಲ. ಆದರೆ ಅನಧಿಕೃತವಾಗಿ ಮಕ್ಕಳ ಬಳಿ ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ.

ಯುನಿಸೆಫ್ ಪ್ರಕಾರ 18 ವರ್ಷದ ಕೆಳಗಿನವರೆಲ್ಲ ಮಕ್ಕಳೇ. ಆದರೆ 12 ವರ್ಷದ ಮೇಲ್ಪಟ್ಟು ಶಿಕ್ಷಣಕ್ಕೆ ತೊಂದರೆಯಾಗದಂತೆ ಲಘು ಉದ್ಯೋಗ ಮಾಡುತ್ತಿದ್ದಲ್ಲಿ ಅವರನ್ನು ಬಾಲಕಾರ್ಮಿಕ ಎಂದು ಪರಿಗಣಿಸಲಾಗುವುದಿಲ್ಲ. ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾಗಳಲ್ಲಿ ಹೆಚ್ಚು ಬಾಲಕಾರ್ಮಿಕರಿದ್ದಾರೆ. ಏಷ್ಯಾದಲ್ಲಿ ಜೀವತುಂಬ ಅಗ್ಗ. ಏಷ್ಯಾದಲ್ಲಿ 61%, ಆಫ್ರಿಕಾದಲ್ಲಿ 30%, ಲ್ಯಾಟಿನ್ ಅಮೆರಿಕಾದಲ್ಲಿ 7%, ಅಮೆರಿಕಾ ಕೆನಡಾ ಯೂರೋಪ್ ಮುಂತಾದ ಮುಂದುವರಿದ ರಾಷ್ಟ್ರಗಳಲ್ಲಿ 1% ಬಾಲಕಾರ್ಮಿಕರಿದ್ದಾರೆ.

ಮಕ್ಕಳನ್ನೇ ಹುಡುಕಿ ಕೆಲಸಕ್ಕೆ ತೆಗೆದುಕೊಳ್ಳಲೂ ಕಾರಣಗಳಿವೆ. ಮಕ್ಕಳು ಸಂಘ ಕಟ್ಟಲಾರರು. ಬೇಡಿಕೆ ಮುಂದಿಟ್ಟು ಮುಷ್ಕರ ನಡೆಸಲಾರರು. ಕೆಲಸ ಕಾಯಂ ಮಾಡಿ ಎನ್ನಲಾರರು. ಅವರನ್ನು ಸುಲಭವಾಗಿ ಗದರಿಸಿ ಶಿಸ್ತಿಗೊಳಪಡಿಸಬಹುದು. ಕಡಿಮೆ ವೇತನಕ್ಕೆ, ಕಡಿಮೆ ಅವಧಿಗೆ ದೊರೆಯುತ್ತಾರೆ. ಕಷ್ಟದ ಕೆಲಸವನ್ನೂ ಗೊಣಗುಟ್ಟದೇ ಮಾಡುತ್ತಾರೆ. ಹೀಗಾಗಿ ಎಷ್ಟೋ ಉದ್ಯೋಗಗಳು ಮಕ್ಕಳನ್ನೇ ಹುಡುಕಿ ಬರುತ್ತವೆ. ವಿಶ್ವಾದ್ಯಂತ 70% ಬಾಲಕಾರ್ಮಿಕರು ಕೃಷಿಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಸಾವು–ನೋವಿನ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡರೆ ಗಣಿ, ಕಟ್ಟಡ ನಿರ್ಮಾಣ, ಕೃಷಿ ಈ ಮೂರೂ ಅತಿ ಅಪಾಯಕಾರಿ ಉದ್ಯೋಗಗಳು. ಅದರಲ್ಲೂ ಮಕ್ಕಳಿಗೆ ತುಂಬ ಅಪಾಯಕಾರಿಯಾದವು. ಆದರೆ ಈ ಮೂರೂ ಕ್ಷೇತ್ರಗಳಲ್ಲಿ ಅನಧಿಕೃತವಾಗಿ ಕೋಟ್ಯಂತರ ಮಕ್ಕಳು ದುಡಿಯುತ್ತಿರುವ ಕಟುವಾಸ್ತವ ನಮ್ಮ ಮುಂದಿದೆ. ಅಷ್ಟೇ ಅಲ್ಲ; ಪಟಾಕಿ, ರೇಷ್ಮೆ, ಬೆಂಕಿಪೊಟ್ಟಣ, ಗಾಜು ತಯಾರಿಕೆ, ಬಳೆ, ಬೀಗ, ಸ್ಲೇಟ್, ಜರಿ, ಹರಳು ಮತ್ತು ವಜ್ರ ಸಾಣೆ ಉದ್ಯಮಗಳಲ್ಲಿ ಮಕ್ಕಳನ್ನು ವ್ಯಾಪಕವಾಗಿ ಬಳಸಿ ಕೊಳ್ಳಲಾಗುತ್ತಿದೆ. ಮನೆ ಕೆಲಸ, ರಸ್ತೆಬದಿ ಮಾರಾಟ, ಹೋಟೆಲ್ ಇನ್ನಿತರ ಉದ್ಯೋಗವಲ್ಲದ ಉದ್ಯೋಗಗಳಲ್ಲಿ ಎಷ್ಟು ಮಕ್ಕಳು ದುಡಿಯುತ್ತಿದ್ದಾರೆನ್ನುವುದು ಊಹೆಗೆ ಬಿಟ್ಟ ವಿಚಾರ.

ಬಾಲಕಾರ್ಮಿಕ ನಿಷೇಧ ಕಾಯಿದೆ ಕಾನೂನುಗಳಿಗೇನೂ ನಮ್ಮಲ್ಲಿ ಬರವಿಲ್ಲ. 1938ರಲ್ಲಿ ಎಂಪ್ಲಾಯ್‌ಮೆಂಟ್ ಆಫ್ ಚಿಲ್ಡ್ರನ್ ಆಕ್ಟ್ ಬಂದು ಅದನ್ನು ಹೋಲುವ ಚೈಲ್ಡ್ ಲೇಬರ್ (ಪ್ರೊಹಿಬಿಷನ್ ಅಂಡ್ ರೆಗ್ಯುಲೇಷನ್) ಆಕ್ಟ್ 1986 ಜಾರಿಗೆ ಬಂತು. ಅದನ್ನು ಆಧರಿಸಿ ರಾಜ್ಯಗಳು ಪ್ರತ್ಯೇಕ ನಿಯಮಾವಳಿ ರಚಿಸುವಾಗ ಅನೇಕ ಗೊಂದಲಗಳು ಎದುರಾದವು. ಮಾರ್ಗದರ್ಶಿ ಸೂತ್ರಗಳನ್ನು ಅನುಷ್ಠಾನಗೊಳಿಸಲು ನೇಮಕಗೊಂಡ ಸಿಬ್ಬಂದಿ ಕೊರತೆ ಹಾಗೂ ಸೂಕ್ತ ತರಬೇತಿ ಕೊರತೆ ಮತ್ತೊಂದು ಸಮಸ್ಯೆಯಾಗಿದೆ. 1996ರಲ್ಲಿ ಸುಪ್ರೀಂ ಕೋರ್ಟ್ ಮಕ್ಕಳನ್ನು ಅಪಾಯಕಾರಿ ಉದ್ಯೋಗಗಳಲ್ಲಿ ನೇಮಿಸಿಕೊಳ್ಳುವುದನ್ನು ವಿರೋಧಿಸಿ ತೀರ್ಪು ನೀಡಿತು. 2000ನೇ ಇಸವಿ ಹೊತ್ತಿಗೆ ಅಪಾಯಕಾರಿ ಉದ್ಯೋಗಗಳಲ್ಲಿ ಬಾಲಕಾರ್ಮಿಕರು ಇರದಂತೆ, 2010ನೆಯ ಇಸವಿ ವೇಳೆಗೆ ಯಾವ ಉದ್ಯೋಗದಲ್ಲೂ ಬಾಲಕಾರ್ಮಿಕರು ಇಲ್ಲದಂತೆ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಹೇಳಿತ್ತು. ಬಾಲಕಾರ್ಮಿಕ ಶೋಷಣೆ ತಪ್ಪಿಸುವ ಸಲುವಾಗಿ 14 ವರ್ಷದವರೆಗೆ ಕಡ್ಡಾಯ ಶಿಕ್ಷಣಕ್ಕೆ ಅವಕಾಶ ಹಾಗೂ ಶಿಕ್ಷಣವು ಹಕ್ಕೆಂದು ಪರಿಗಣಿತವಾಯ್ತು. ಆದರೆ 2011ನೇ ಇಸವಿ ಬಂದರೂ ಪೇಪರಿನ ಮೇಲೆ ಕಾಣದ ಬಾಲಕರು ಕಾರ್ಮಿಕರಾಗಿ ಎಲ್ಲ ಅಪಾಯಕಾರಿ ಉದ್ಯೋಗಗಳಲ್ಲಿ ಅದೃಶ್ಯವಾಗಿ ದುಡಿಯುತ್ತಲೇ ಇದ್ದಾರೆ.

ಮಕ್ಕಳನ್ನೇ ಹುಡುಕಿ ಕೆಲಸಕ್ಕೆ ತೆಗೆದುಕೊಳ್ಳಲೂ ಕಾರಣಗಳಿವೆ. ಮಕ್ಕಳು ಸಂಘ ಕಟ್ಟಲಾರರು. ಬೇಡಿಕೆ ಮುಂದಿಟ್ಟು ಮುಷ್ಕರ ನಡೆಸಲಾರರು. ಕೆಲಸ ಕಾಯಂ ಮಾಡಿ ಎನ್ನಲಾರರು. ಅವರನ್ನು ಸುಲಭವಾಗಿ ಗದರಿಸಿ ಶಿಸ್ತಿಗೊಳಪಡಿಸಬಹುದು. ಕಡಿಮೆ ವೇತನಕ್ಕೆ, ಕಡಿಮೆ ಅವಧಿಗೆ ದೊರೆಯುತ್ತಾರೆ. ಕಷ್ಟದ ಕೆಲಸವನ್ನೂ ಗೊಣಗುಟ್ಟದೇ ಮಾಡುತ್ತಾರೆ. ಹೀಗಾಗಿ ಎಷ್ಟೋ ಉದ್ಯೋಗಗಳು ಮಕ್ಕಳನ್ನೇ ಹುಡುಕಿ ಬರುತ್ತವೆ. ವಿಶ್ವಾದ್ಯಂತ 70% ಬಾಲಕಾರ್ಮಿಕರು ಕೃಷಿಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.

ಬೆಳೆಯುತ್ತಿರುವ ನಗರಗಳು, ನಗರದ ಸ್ಲಂಗಳು, ನಗರ ಜೀವನದ ಆಮಿಷಗಳು ಈ ಎಲ್ಲವೂ ಬಡತನ ಹೆಚ್ಚುತ್ತಿರುವ ಬಾಲಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸುತ್ತಿರುವ ವಾಸ್ತವ ನಮ್ಮೆದುರಿಗಿದೆ. 37% ಬಡವರಿರುವ ಈ ದೇಶದಲ್ಲಿ, ಕೋಟ್ಯಂತರ ಸಂಖ್ಯೆಯ ಬಡ ಜನಮುದಾಯ ಜೀವನೋಪಾಯಕ್ಕಾಗಿ, ಹೊಟ್ಟೆಪಾಡಿಗಾಗಿ ಮಕ್ಕಳನ್ನು ಬಳಸಿಕೊಳ್ಳುವುದೇನೂ ಆಶ್ಚರ್ಯವಲ್ಲ. ಬಡತನ ಇರುವಷ್ಟು ದಿನ ಇಂಥ ಸಮಸ್ಯೆಗಳೂ ಮುಂದುವರೆಯುತ್ತವೆ. ನಮ್ಮ ದೇಶದಲ್ಲಿ ಕಾನೂನುಗಳೇನೋ ಭರ್ಜರಿಯಾಗಿವೆ. ಆದರೆ ಅವು ಜನಮುಖಿಯಾಗಿವೆ. ತಪ್ಪಿತಸ್ಥರಿಗೆ ಶಿಕ್ಷೆ ನೀಡುವುದರ ಕುರಿತೇ ಅವು ಹೆಚ್ಚು ಉತ್ಸುಕವಾಗಿವೆ. ತಪ್ಪು ಸಂಭವಿಸಲು ಕಾರಣವಾದ ವ್ಯವಸ್ಥೆಯ ಬಗೆಗೆ ಅದು ಜವಾಬ್ದಾರನಲ್ಲ, ಆಸಕ್ತಿಯನ್ನೂ ಹೊಂದಿಲ್ಲ. ಹಾಗಾಗಿಯೇ ಯಾವ ಸುಧಾರಣೆಯೂ ಸುಲಭಸಾಧ್ಯವಲ್ಲ.

ನಾನೊಂದು ಮಗು..

ನಾನೊಂದು ಮಗು,
ನನ್ನ ಬರವಿಗೆ ಇಡೀ ಜಗತ್ತು ಕಾಯುತ್ತದೆ.
ನಾನು ಏನಾಗುತ್ತೇನೆ ಎಂದು
ಇಡೀ ಭೂಮಿ ಕುತೂಹಲದಿಂದ ನೋಡುತ್ತದೆ
ನಾನು ಏನಾಗಿದ್ದೇನೆ, ಏನಾಗುತ್ತೇನೆ
ಎಂಬುದರ ಮೇಲೆ ನಾಗರಿಕತೆಯ ತಕ್ಕಡಿ ನಿಂತಿದೆ.

ನಾನೊಂದು ಮಗು,
ನನ್ನ ಭವಿಷ್ಯ ನಿಮ್ಮ ಕೈಯಲ್ಲಿದೆ.
ನನ್ನ ಸೋಲು ಗೆಲುವುಗಳು ಬಹುತೇಕ
ನಿಮ್ಮಿಂದ ನಿರ್ಧಾರವಾಗುತ್ತವೆ.
ಅದಕ್ಕೇ
ಸಂತೋಷ ಉಂಟಾಗುವಂಥದನ್ನು ಕೊಡಿ.
ಇದು ನನ್ನ ಪ್ರಾರ್ಥನೆ–
ದಯವಿಟ್ಟು ಕಲಿಸಿಕೊಡಿ,
ಈ ಜಗತ್ತಿಗೆ ನಾನೊಂದು ವರವಾಗುವಂತೆ

–ಮ್ಯಾಮಿ ಜೆನಿ ಕೋಲ್ ☐



ಶ್ರೀ ಡಿ.ವಿ. ಸದಾನಂದಗೌಡ
ಮಾನ್ಯ ಮುಖ್ಯಮಂತ್ರಿಗಳು

ರಾಜ್ಯದ ಜನತೆಗೆ ಗುಣಮಟ್ಟದ ಆರೋಗ್ಯ ಸೇವೆ ಸದಾ ದೊರೆಯುವಂತೆ ಮಾಡಲು ಸರಕಾರ ಆದ್ಯತೆ ನೀಡಿ ಕಾರ್ಯಪ್ರವೃತ್ತವಾಗಿದೆ. ಕಳೆದ 3 ವರ್ಷಗಳಲ್ಲಿ ಯಶಸ್ವಿಯಾದ ವಿವಿಧ ಯೋಜನೆಗಳ ಹಿನ್ನೋಟ ಇಲ್ಲಿದೆ.

ಆಯುರ್ವೇದ

★ ಮೈಸೂರಿನಲ್ಲಿ ರೂ. 3 ಕೋಟಿ ವೆಚ್ಚದ 100 ಹಾಸಿಗೆಗಳ ಹೈಟೆಕ್ ಪಂಚಕರ್ಮ ಆಸ್ಪತ್ರೆಗಾಗಿ ರೂ. 2 ಕೋಟಿ ಬಿಡುಗಡೆ.

★ ಬೆಂಗಳೂರು, ಮೈಸೂರು ಮತ್ತು ಬಳ್ಳಾರಿಗಳ ಸರಕಾರಿ ಆಯುರ್ವೇದ ಆಸ್ಪತ್ರೆಗಳ ಉನ್ನತೀಕರಣ.

★ ಬೆಂಗಳೂರಿನಲ್ಲಿ ನಡೆದ 4ನೇ ವಿಶ್ವ ಆಯುರ್ವೇದ ಸಮ್ಮೇಳನ ಯಶಸ್ವಿ, 26 ದೇಶಗಳ ಪ್ರತಿನಿಧಿಗಳ ಭಾಗವಹಿಸುವಿಕೆ.

★ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಆಯುಷ್ ಘಟಕ ಪ್ರಾರಂಭಕ್ಕೆ ಕ್ರಮ, ರೂ. 5 ಕೋಟಿ ಒದಗಿಸಲಾಗಿದೆ.

★ ಶಿವಮೊಗ್ಗದಲ್ಲಿ ಆಯುರ್ವೇದ ಕಾಲೇಜು ಪ್ರಾರಂಭಕ್ಕೆ ಆಯವ್ಯಯದಲ್ಲಿ ರೂ. 10 ಕೋಟಿ ನಿಗದಿ.

★ ಶಿವಮೊಗ್ಗದಲ್ಲಿ ರೂ. 2 ಕೋಟಿ ವೆಚ್ಚದ 60 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ ಕಟ್ಟಡ ನಿರ್ಮಾಣ ಪೂರ್ಣಗೊಂಡಿದೆ.

ಸುವರ್ಣ ಆರೋಗ್ಯ ಚೈತನ್ಯ

ರಾಜ್ಯದ ಸರಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿನ ವಿದ್ಯಾರ್ಥಿಗಳನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿ, ಅವರುಗಳಿಗೆ ಶಸ್ತ್ರಚಿಕಿತ್ಸೆಯು ಅವಶ್ಯವಿರುವ ಕಡೆ ಖಾಸಗಿ ಮತ್ತು ಸರಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು.

★ 5769 ಶಾಲಾ ವಿದ್ಯಾರ್ಥಿಗಳಿಗೆ ಶಸ್ತ್ರಚಿಕಿತ್ಸೆ

★ ರೂ. 23.58 ಕೋಟಿ ವೆಚ್ಚ.

ಸಂಚಾರಿ ವೈದ್ಯಕೀಯ ಸೇವೆ

ಮೂಲ ಪ್ರಾಥಮಿಕ ಆರೋಗ್ಯ ಸೌಲಭ್ಯವನ್ನು ರಾಜ್ಯದ ದುರ್ಗಮ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಒದಗಿಸುವ ನಿಟ್ಟಿನಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಸಂಚಾರಿ ವೈದ್ಯಕೀಯ ಘಟಕಗಳನ್ನು ಪ್ರಾರಂಭಿಸಲಾಗಿದೆ.

★ 97 ಸಂಚಾರಿ ವೈದ್ಯಕೀಯ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ.

ಆರೋಗ್ಯ ಬಂಧು

ರಾಜ್ಯದಲ್ಲಿ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯವಿರುವ ಸಿಬ್ಬಂದಿಗಳನ್ನು ಒದಗಿಸಲು ಸಾಧ್ಯವಾಗದ ಕಡೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಸಹಯೋಗದೊಂದಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಆರೋಗ್ಯ ಬಂಧು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

★ ಗ್ರಾಮೀಣ ಭಾಗದಲ್ಲಿ ಹೊಸದಾಗಿ 117 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆರಂಭ

★ ರಾಜ್ಯದ ಎಲ್ಲಾ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೂ ಯೋಜನೆ ವಿಸ್ತಾರ

★ 1737 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಮತ್ತು 5863 ಅರೆವೈದ್ಯಕೀಯ ಸಿಬ್ಬಂದಿ ನೇಮಕ

ನಿರಂತರ 24X7 ವೈದ್ಯಕೀಯ ಸೇವೆ

ರಾಜ್ಯದಲ್ಲಿನ ಒಟ್ಟು 2310 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 988 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ದಿನದ 24 ಗಂಟೆ ಆರೋಗ್ಯ ಸೇವೆ ಒದಗಿಸುವ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ

ರಾಜ್ಯದ ಒಟ್ಟು 328 ಸಮುದಾಯ ಆರೋಗ್ಯ ಕೇಂದ್ರಗಳ ಪೈಕಿ 150 ಕೇಂದ್ರಗಳನ್ನು ಪ್ರಥಮ ಪ್ರಸ್ತಾವ ಕೇಂದ್ರ (First Referral Unit) ಗಳಾಗಿ ಪರಿವರ್ತಿಸಿದ್ದು, ಹೆರಿಗೆ, ಅರವಳಿಕೆ ಮತ್ತು ಮಕ್ಕಳ ತಜ್ಞರ ಸೇವೆಗಳ ಜೊತೆ ದಿನದ 24 ಗಂಟೆಗಳ ಆರೋಗ್ಯ ಸೇವೆಯನ್ನು ಒದಗಿಸುತ್ತಿವೆ.

ಸರ್ವರಿಗೂ ಆರೋಗ್ಯ – ಸಮಗ್ರ ಹಾಗೂ ಸಾರ್ವತ್ರಿಕ

ಮೇಲ್ಜಾತಿಗಳ ಮೇಧಾಶಕ್ತಿ



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಬಹಳ ಮೇಧಾವಿಗ ಆಗಿ ಹುಟ್ಟಿದ ಮೇಲ್ಜಾತಿಗಳು ಭ್ರಷ್ಟತೆಯ ಈ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವು ದರಲ್ಲಿ ಏಕೆ ಸೋತಿದ್ದಾರೆ? ಸಮಾಜವೆ ಸಂಪೂರ್ಣವಾಗಿ ಭ್ರಷ್ಟವಾದಾಗ, ಭ್ರಷ್ಟತೆಯನ್ನು ಅತಿ ಸಾಮಾನ್ಯವೆಂಬಂತೆ ಸಮಾಜ ಪರಿಗಣಿಸಿದಾಗ, ಭ್ರಷ್ಟರಿಗೇ ಹೆಚ್ಚು ಗೌರವ ದೊರೆಯುವಂತಾದಾಗ ಕಾನೂನು ಅಥವಾ ಸಾಂಸ್ಥಿಕ ಪರಿಹಾರಗಳು ಹೇಗೆ ತಾನೆ ಭ್ರಷ್ಟಾಚಾರವನ್ನು ಹೊಡೆದೋಡಿಸಬಲ್ಲದು? ಈ ಪ್ರಶ್ನೆಯನ್ನು ನಮ್ಮನ್ನೇ ನಾವು ಕೇಳಿಕೊಂಡು ಉತ್ತರ ಕಂಡುಕೊಳ್ಳದಿದ್ದಲ್ಲಿ ಭ್ರಷ್ಟಾಚಾರವನ್ನು ಸಮರ್ಪಕವಾಗಿ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ.

ತಮ್ಮನ್ನು ತಾವು ಕಂಡುಕೊಂಡಂತೆ ಮೇಲ್ಜಾತಿಗಳು ಎಂದುಕೊಂಡವರು ಆ್ಯನ್‌ಸ್ಟಿನ್ನನ ನಂತರದಲ್ಲಿ ನಿಲ್ಲುತ್ತಾರೆ. ಬುದ್ಧಿಮತ್ತೆಯುಳ್ಳವರೂ ಮತ್ತು ಅರ್ಹತಾ ಪಟ್ಟಿಯನ್ನು ಆಕ್ರಮಿಸಿಕೊಂಡವರು ಆದ ಈ ಮೇಲ್ಜಾತಿಯವರು ಮಾತ್ರ, ಕೇವಲ 7ನೇ ತರಗತಿಯವರೆಗೆ ಓದಿದ, ಕಸುಬಿನಲ್ಲಿ ಟ್ರಕ್ ಚಾಲಕನಾದ ನಾಯಕನೊಬ್ಬನ ಬಗ್ಗೆ ಹೆಮ್ಮೆ ಪಡಬಲ್ಲರು.

ವೆಬ್‌ನಲ್ಲಿನ ಪ್ರತಿಕ್ರಿಯೆಯನ್ನು ಆಧಾರವಾಗಿಟ್ಟುಕೊಂಡರೆ ಬಹಳಷ್ಟು ಜನ ಮೇಲ್ಜಾತಿಯ ಓದುಗರು ಅಣ್ಣಾ ಹಜಾರೆಯವರ ವಿದ್ಯಾಭ್ಯಾಸದ ಬಗೆಗಿನ ನನ್ನ ಹೇಳಿಕೆಯಿಂದ ಕೋಪಗೊಂಡಿದ್ದಾರೆ. ಅವರ ಬಗ್ಗೆ ನನಗೆ ಅಯ್ಯೋ ಎನಿಸುತ್ತದೆ. ಇದೇ ಮೇಲ್ಜಾತಿ ಜನ ದಲಿತರ ಅರ್ಹತಾ ಮಟ್ಟವನ್ನು ಪ್ರಶ್ನೆಮಾಡುವುದರಲ್ಲಿ ಖುಷಿ ಪಡುವವರು! ಆದರೆ ನಾನು ಅವರ ನಾಯಕನ ಬುದ್ಧಿಮಟ್ಟವನ್ನು ಪ್ರಶ್ನಿಸಿದಾಗ ಅವರು ಕಸಿವಿಸಿಗೊಳ್ಳುತ್ತಾರೆ.

ಹಾಗೆಂದ ಮಾತ್ರಕ್ಕೆ ವಿದ್ಯಾಭ್ಯಾಸದ ವೈಭೋಗವನ್ನು ಪಡೆಯದ ಸಾಮಾನ್ಯರನ್ನು ನಾನು ಪರಿಹಾಸ್ಯ ಮಾಡುತ್ತಿದ್ದೇನೆ ಎಂದಲ್ಲ. ಹಾಗೆಯೇ ಇದು ಟ್ರಕ್ ಚಾಲಕರುಗಳ ಬಗೆಗಿನ ತಾತ್ಸಾರವೂ ಅಲ್ಲ. ಹೆಚ್ಚು ಓದು-ಬರಹವಿಲ್ಲದ ಪ್ರಜೆಗಳು ಮತ್ತು ಟ್ರಕ್ ಚಾಲಕರು ರಾಷ್ಟ್ರೀಯ ಒಟ್ಟು ಆದಾಯಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡುತ್ತಾರೆ. ನನ್ನ ಉದ್ದೇಶ ಒಂದು ಅಂಶವನ್ನು ವಿವರಿಸುವ ಪ್ರಯತ್ನ ಮಾತ್ರ ಆಗಿದೆ.

ಅದೆಂದರೆ ಓದು-ಬರಹವಿಲ್ಲದ ಪ್ರಜೆಗಳಾಗಲಿ ಮತ್ತು ಕೆಳಮಟ್ಟದ್ದೆಂದು ತಿಳಿಯಲಾದ ಕಸುಬುಗಳನ್ನು ಅವಲಂಬಿಸಿರುವ ಟ್ರಕ್ ಚಾಲಕರಂತ ಪ್ರಜೆಗಳಾಗಲಿ ಭಾರತದ ಸಂವಿಧಾನವನ್ನು ಪುನಃ ಪರಿಶೀಲಿಸಿ ಪ್ರಜಾಪ್ರಭುತ್ವಕ್ಕೆ ವ್ಯಾಖ್ಯಾನ ನೀಡುತ್ತೇವೆ ಎಂದು ಹೇಳಿಕೊಳ್ಳುವುದಿಲ್ಲ. ಅಣ್ಣಾ ಹಜಾರೆ ಹೀಗೆ ಹೇಳಿಕೊಳ್ಳುತ್ತಾರೆ.

ಕೆಲವು ಸಣ್ಣ ಸಣ್ಣ ಅಂಶಗಳನ್ನು ಈಗ ಪರಿಶೀಲಿಸೋಣ. ಜನಲೋಕಪಾಲ್ ಸಂಸ್ಥೆ ಭಾರತದಲ್ಲಿ ಭ್ರಷ್ಟಾಚಾರವನ್ನು ಕೊನೆಗಾಣಿಸಬಲ್ಲುದೆ? ಭ್ರಷ್ಟಾಚಾರ ಎಂಬುದು ಕಾನೂನಿಗೆ ಸಂಬಂಧಿಸಿದ ವಿಷಯವೆ ಅಥವಾ ಸಂಸ್ಥೆಗೆ ಸಂಬಂಧಿಸಿದುದೆ? ಸಂಸ್ಥೆಗೆ ಸಂಬಂಧಪಟ್ಟುದು ಎಂದು ನಂಬಲು ಮೇಲ್ಜಾತಿಗಳ ಮೇಧಾಶಕ್ತಿ ಹೊಂದಿರಬೇಕಾಗುತ್ತದೆ.

2ನೇ ಮಹಾಯುದ್ಧದ ನಂತರ ಪಶ್ಚಿಮ ಯುರೋಪ್ ಅತ್ಯಂತ ಭ್ರಷ್ಟವಾಯಿತು. ಹಾಗಾಗಲು ಕಾರಣ ಮಾರ್ಷಲ್ ಯೋಜನೆ. ಸಂಯುಕ್ತ ಸಂಸ್ಥಾನದ ವಿದೇಶಾಂಗ ಕಾರ್ಯದರ್ಶಿ ಜಾರ್ಜ್ ಮಾರ್ಷಲ್ ಹೆಸರಿನಲ್ಲಿ ಜಾರಿಗೆ ತಂದ ಈ ಯೋಜನೆ ಯುದ್ಧದಿಂದ ನಾಶಗೊಂಡ ಪಶ್ಚಿಮ ಯುರೋಪ್‌ನ ಪುನರ್ನಿರ್ಮಾಣಕ್ಕೆ ಮಾಡಲಾದ ಯೋಜನೆಯಾಗಿತ್ತು. ಇದಕ್ಕಾಗಿ 13 ಬಿಲಿಯನ್ ಡಾಲರ್ ಸಹಾಯಧನವನ್ನು ಯು.ಎಸ್. ನೀಡಿತು. ಈ 13 ಬಿಲಿಯನ್ ಡಾಲರ್ ಇಂದಿನ ಪರಿಸ್ಥಿತಿಯಲ್ಲಿ ಬಹಳ ಸಣ್ಣದಾಗಿ ಕಾಣುತ್ತದೆ. ಆದರೆ 1948ರಲ್ಲಿ ಯು.ಎಸ್. ನ ವಾರ್ಷಿಕ ರಾಷ್ಟ್ರೀಯ ಆದಾಯ 258 ಬಿಲಿಯನ್ ಡಾಲರ್‌ಗಳಿದ್ದುದನ್ನು ಗಮನದಲ್ಲಿಟ್ಟುಕೊಂಡರೆ 13 ಬಿಲಿಯನ್ ಡಾಲರ್ ಆ ದಿನಗಳಲ್ಲಿ ಬಹುದೊಡ್ಡ ಮೊತ್ತವಾಗಿತ್ತು. ಅಷ್ಟು ಹಣ ನೋಟಿನ ರೂಪದಲ್ಲಿ ಹರಿದು ಬಂದಾಗ ಹಲವು ಅಧಿಕಾರಿಗಳು ಮತ್ತು ರಾಜಕಾರಣಿಗಳು ಆ ಸಹಾಯಧನವನ್ನು ಲೂಟಿ ಮಾಡಲು ಪ್ರಾರಂಭಿಸಿದರು.

ಜಪಾನ್ ಸಹ 2ನೇ ಮಹಾಯುದ್ಧದಲ್ಲಿ ತೀವ್ರ ನಷ್ಟಕ್ಕೊಳಗಾಗಿತ್ತು. 1965ರಲ್ಲಿ ಜಪಾನಿನ ರಾಷ್ಟ್ರೀಯ ಆದಾಯ ಸುಮಾರು 91 ಬಿಲಿಯನ್ ಡಾಲರ್ ಆಗಿತ್ತು. 1980ರಲ್ಲಿ ಜಪಾನಿನ ರಾಷ್ಟ್ರೀಯ ಆದಾಯ 1 ಟ್ರಿಲಿಯನ್ ಡಾಲರ್ ದಾಟಿತು. ಈ ಆರ್ಥಿಕ ಪವಾಡದ ಕಾಲದಲ್ಲಿ ಜಪಾನ್ ಸಮಾಜ ಅತ್ಯಂತ ಭ್ರಷ್ಟ ಸಮಾಜವಾಗಿ ಮಾರ್ಪಾಡಾಯಿತು. ಸಂಪತ್ತು ಸ್ಫೋಟಗೊಳ್ಳುತ್ತಿದ್ದಂತೆ ಲೂಟಿ ಮಾಡುವವರ ಸಂಖ್ಯೆಯೂ ಬೆಳೆಯಿತು.

ಭಾರತದಲ್ಲಿ ಸಹ ಅಂತಹುದೆ ಒಂದು ಸ್ಥಿತಿ ಉಂಟಾಗುತ್ತಿದೆ. 1990ರ ನಂತರ ಭಾರತದ ಸಂಪತ್ತು ಸಹ ಸ್ಫೋಟಗೊಳ್ಳುತ್ತಿದೆ. ಲೂಟಿ ಕೋರರ ಸಂಖ್ಯೆ ಸಹ ಅಗಾಧವಾಗಿ ಹೆಚ್ಚುತ್ತಿದೆ. ಇದೊಂದು ಸಾಮಾಜಿಕ-ಮನೋವೈಜ್ಞಾನಿಕ ಸ್ಥಿತಿ. ಭಾರತದ ಚರಿತ್ರೆಯ ಒಂದು ಮುಖ ಇದು. ಸುಮಾರು ಒಂದೆರಡು ದಶಕಗಳು ಈ ಸ್ಥಿತಿ ಉಳಿಯಬಹುದು.

ಮೇಧಾವಿಗಳಾಗಿ ಹುಟ್ಟಿರುವ ಭಾರತದ ಮೇಲ್ಜಾತಿಗಳು ಮನೋವಿಜ್ಞಾನವನ್ನು ಸಮಾಜ ಶಾಸ್ತ್ರದ ಮತ್ತು ಇತಿಹಾಸವನ್ನು ಇಂದಿನ ಹಾಗುಹೋಗುಗಳ ಹತ್ತಿರ ತರುವುದರಲ್ಲಿ ಸೋತಿದ್ದಾರೆ. ಎಲ್ಲಾ ಸಮಾಜಗಳೂ ಹತ್ತಾರು ಅವಸ್ಥೆಗಳನ್ನು ಹಾದುಹೋಗುತ್ತವೆ. ಇವುಗಳಲ್ಲಿ ಕೆಲವು ಆಹ್ಲಾದಕರವಾದುವು ಮತ್ತು ಭರವಸೆ ನೀಡುವಂತಹವು. ಮತ್ತೆ ಕೆಲವು ನೋವನ್ನುಂಟುಮಾಡುವಂತವು. ಭಾರತ ಇಂದು ಅಷ್ಟು ಖುಷಿಕೊಡದ ಆದರೆ ಭರವಸೆ ನೀಡುವ ಒಂದು ಸ್ಥಿತಿಯನ್ನು ಹಾದು ಹೋಗುತ್ತಿದೆ.

ಕೇವಲ ಎರಡು ದಶಕಗಳ ಅಂತರದಲ್ಲಿ ಭಾರತದ ಕೆಳವರ್ಗಗಳ ಆಹಾರ ಮೂಲಗಳು ನಾಟಕೀಯವಾಗಿ ಮಾರ್ಪಾಡು ಹೊಂದಿವೆ. ಎರಡು ದಶಕಗಳ ಹಿಂದೆ ಬಡಜನರು ತಿನ್ನುತ್ತಿದ್ದ ಆಹಾರ ಇಂದು ದನಗಳ ಮೇವಾಗಿದೆ. ಇಂತಹ ಒಂದು ಭರವಸೆಗಾಗಿ ಭಾರತದ ಕೆಳವರ್ಗಗಳು ಶತಮಾನಗಳ ಕಾಲ ಕಾದಿದ್ದುವು. ಭಾರತದ ಮೇಲ್ವರ್ಗ ಮತ್ತು ಮಧ್ಯಮ ವರ್ಗ ಇಂದು ತಮ್ಮ ಟೂತ್‌ಬ್ರಷ್‌ಗಳು ಮತ್ತು ಸ್ನಾನದ ಟವೆಲ್‌ಗಳನ್ನು ಮೇಲಿಂದ ಮೇಲೆ ಬದಲಾಯಿಸುತ್ತಾರೆ. ಹವಾನಿಯಂತ್ರಣವಿಲ್ಲದ ಬೆಡ್‌ರೂಂಗಳು ಭೂತಕಾಲಕ್ಕೆ ಸೇರಿದುವಾಗಿವೆ. ಜನರೂ ಕೂಡ ತಮ್ಮ ಆರೋಗ್ಯದ ಬಗ್ಗೆ ಅತಿ ಕಾಳಜಿಯುಳ್ಳವರಾಗಿದ್ದಾರೆ. ಅವರ ಆಹಾರ ಪದ್ಧತಿ ಕೂಡ ಮಹತ್ತರವಾದ ಬದಲಾವಣೆಯನ್ನು ಹೊಂದಿದೆ. ಹಣ್ಣುಗಳು, ಹಣ್ಣಿನ ರಸ, ಹಸಿರು ಸೊಪ್ಪು ಮತ್ತು ತರಕಾರಿಗಳಿಗೆ ಬೇಡಿಕೆ ಬಹಳಷ್ಟು ಹೆಚ್ಚಾಗಿದೆ. ಹಿಂದೊಮ್ಮೆ ತಮ್ಮ ಮನೆ ಕೆಲಸದವರು ಮತ್ತು ವಾಹನ ಚಾಲಕರುಗಳಿಗೆ ಅಳಿದುಳಿದ ಆಹಾರ ನೀಡುತ್ತಿದ್ದ ಮೇಲ್ವರ್ಗದ ಜನ ಇಂದು ತಮ್ಮ ಟಿ.ವಿ ಸೆಟ್‌ಗಳನ್ನು ನೀಡುತ್ತಿದ್ದಾರೆ. ಗೋಡೆಗೆ ಅತುನಿಂತ ಟಿ.ವಿ.ಗಳು ಹೊಸ ಮಾದರಿಗಳಾಗಿವೆ.

ಇದೆಲ್ಲದರ ಜೊತೆಗೆ ದುರಾಸೆಯೂ ದೊಡ್ಡದಾಗಿ ಹರಡಿಕೊಂಡಿದೆ. ದೊಡ್ಡ ದೊಡ್ಡ ಮನೆಗಳು ಮತ್ತು ದುಬಾರಿ ಬೆಲೆಯ ಕಾರುಗಳು ತತ್‌ಕ್ಷಣವೇ ಬೇಕು. ಚಿನ್ನದ ನೆಕ್‌ಲೇಸ್ ಮಾತ್ರ ಸಾಲದು, ಅದು ವಜ್ರ ಖಚಿತವಾಗಿರಬೇಕು. ಹೀಗೇ ಮತ್ತಿನ್ನೇನೇನೋ ಬಯಕೆಗಳು. ಇವೆಲ್ಲವೂ ಸರಿದಾರಿ ಮೂಲಕ ಸಿಕ್ಕದಿದ್ದಲ್ಲಿ ತಪ್ಪುದಾರಿಯ ಉಪಯೋಗವಾಗುತ್ತದೆ. ಸುತ್ತಮುತ್ತ ಹರಿಯುತ್ತಿರುವ ಹಣದ ಹೊಳೆಯಿಂದ

ವಾರ್ತಾ ವಾಹಿನಿಗಳು ಧ್ವನಿವರ್ಧಕಗಳಾದಾಗ

ಆದಷ್ಟೂ ಬಾಚಿಕೊಳ್ಳೋಣ ಎಂಬ ಆತುರ. ಹೊಸ ಯುಗದ ಭ್ರಷ್ಟತೆ ಹೊರಹೊಮ್ಮಿದೆ. ರಾಜಕಾರಣಿಗಳು ಮತ್ತು ಸರ್ಕಾರಿ ನೌಕರರು ಮಾತ್ರ ಭ್ರಷ್ಟರಲ್ಲ. ಸರಾಸರಿ ಮಧ್ಯಮ ವರ್ಗದ ಮನುಷ್ಯನೂ ಭ್ರಷ್ಟ. ತೆರಿಗೆ ಕಟ್ಟಬೇಕಾದವರು ತಾವು ನಿಜವಾಗಿ ಕಟ್ಟಬೇಕಾದ ತೆರಿಗೆಯಿಂದ ತಪ್ಪಿಸಿಕೊಳ್ಳಲು ತಜ್ಞರನ್ನು ಬಳಸುತ್ತಾರೆ.

7ನೇ ತರಗತಿ ಓದಿದ ನಾಯಕ ಬೇರೆ ರೀತಿ ಯೋಚಿಸುತ್ತಾನೆ. ಅಣ್ಣಾ ಭಾರತವನ್ನು ಅರಿತುಕೊಂಡಿರುವ ಮತ್ತು ಅರ್ಥಮಾಡಿಕೊಂಡಿರುವ ರೀತಿ ಮತ್ತು ಭಾರತ ಇಂದು ಹಾದು ಹೋಗುತ್ತಿರುವ ಸ್ಥಿತಿ ಇವುಗಳ ಬಗ್ಗೆ ನನ್ನದೇನು ಸಮಸ್ಯೆಯಿಲ್ಲ. ಅವರ ವಿದ್ಯಾಭ್ಯಾಸದ ಹಿನ್ನೆಲೆಯನ್ನು ನೋಡಿದರೆ ಅವರು ಈ ದೇಶದ ಸಮಸ್ಯೆಗಳ ಬಗ್ಗೆ ಸರಿಯಾದ ನಿರ್ಧಾರಕ್ಕೆ ಬರುತ್ತಾರೆ ಎಂದು ನನಗೆ ಭರವಸೆಯಿಲ್ಲ.

ಆದರೆ ಬಹಳ ಮೇಧಾವಿಗಳಾಗಿ ಹುಟ್ಟಿದ ಮೇಲ್ಜಾತಿಗಳು ಭ್ರಷ್ಟತೆಯ ಈ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಏಕೆ ಸೋತಿದ್ದಾರೆ? ಸಮಾಜವೆ ಸಂಪೂರ್ಣವಾಗಿ ಭ್ರಷ್ಟವಾದಾಗ, ಭ್ರಷ್ಟತೆಯನ್ನು ಅತಿ ಸಾಮಾನ್ಯವೆಂಬಂತೆ ಸಮಾಜ ಪರಿಗಣಿಸಿದಾಗ, ಭ್ರಷ್ಟರಿಗೇ ಹೆಚ್ಚು ಗೌರವ ದೊರೆಯುವಂತಾದಾಗ ಕಾನೂನು ಅಥವಾ ಸಾಂಸ್ಥಿಕ ಪರಿಹಾರಗಳು ಹೇಗೆ ತಾನೆ ಭ್ರಷ್ಟಾಚಾರವನ್ನು ಹೊಡೆದೋಡಿಸಬಲ್ಲದು?

ಭ್ರಷ್ಟತೆ ಒಂದು ಸಾಮಾಜಿಕ ಸ್ಥಿತಿಯಂತೆ ಕಾಣಬರುತ್ತಿದ್ದು ಇನ್ನೂ ಕೆಲ ದಶಕಗಳ ಕಾಲ ಮುಂದುವರೆಯುವಂತೆ ಕಾಣುತ್ತಿರುವಾಗ ಭಾರತ ತನ್ನಲ್ಲಿ ಅಂತರ್ಗತವಾಗಿರುವ ನೀತಿ ಸಂಹಿತೆಯ ಬಗ್ಗೆ ಪರ್ಯಾಲೋಚಿಸಬೇಕು. ನಮ್ಮ ಸಮಾಜಕ್ಕೆ ನಾವು ಯಾವುದಾದರೂ ನೀತಿಯುತ ತಳಪಾಯವನ್ನು ಕಟ್ಟಿಕೊಟ್ಟಿದ್ದೇವೆಯೆ?

ಈ ಪ್ರಶ್ನೆಯನ್ನು ನಮ್ಮನ್ನೇ ನಾವು ಕೇಳಿಕೊಂಡು ಉತ್ತರ ಕಂಡುಕೊಳ್ಳದಿದ್ದಲ್ಲಿ ಭ್ರಷ್ಟಾಚಾರವನ್ನು ಸಮರ್ಪಕವಾಗಿ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಒಂದು ಸಮಾಜವಾಗಿ ನಾವು ಈ ಪ್ರಶ್ನೆಯನ್ನು ಸಮರ್ಪಕವಾಗಿ ನಿರ್ವಹಿಸದಿದ್ದಲ್ಲಿ ಯಾವ ಜನಲೋಕಪಾಲವೂ ಅದನ್ನು ಸರಿಯಾಗಿ ನಿರ್ವಹಿಸಲಾಗುವುದಿಲ್ಲ.

ಮೇಲ್ಜಾತಿಗಳು ಮಾತ್ರ ನಂಬಲಸಾಧ್ಯವಾದುದನ್ನು ನಂಬಬಲ್ಲರು. ಅದೆಂದರೆ ಭಾರತದಿಂದ ಭ್ರಷ್ಟತೆಯನ್ನು ತೊಲಗಿಸಲು ಜನ್‌ಲೋಕಪಾಲ್ ಸಾಕು ಎಂಬುದು. ಇದೊಂದು ನಿಜವಾದ ದುರಂತ.

* * * * * * *

ಮಾಧ್ಯಮಗಳು ಉಲ್ಲಂಘಿಸಲಾಗದ ಕೆಲ ಸುವರ್ಣ ನೀತಿಗಳನ್ನು ಅನುಸರಿಸಿಕೊಂಡು ವಿಕಾಸ ಹೊಂದಿವೆ. ಪತ್ರಿಕಾ ಮಾಧ್ಯಮವನ್ನೆ ತೆಗೆದುಕೊಳ್ಳಿ. ನಿನ್ನೆ ನಡೆದ ಘಟನೆಗಳನ್ನು ಪತ್ರಿಕೆಗಳು ತಮ್ಮ ಮುಖ್ಯವಾದ ಭಾಗದಲ್ಲಿ ತಮ್ಮ ಓದುಗರಿಗೆ ವರದಿ ಮಾಡಬೇಕು. ಪತ್ರಿಕೆಗಳು ಘಟನೆಗಳಲ್ಲಿ ಭಾಗಿಗಳಲ್ಲ, ಅವುಗಳ ಕೆಲಸ ವರದಿ ಮಾಡುವುದು ಮಾತ್ರ, ಪತ್ರಿಕೆಗಳು ಅಭಿಪ್ರಾಯ ನೀಡುವ ಪುಟ ಬೇರೆ ಇರುತ್ತದೆ. ಘಟನೆಗಳ ಬಗ್ಗೆ ವಿಶ್ಲೇಷಿಸಿ ಬರೆಯುವ ಬರಹಗಳನ್ನು ಹೊರಗಿನ ಬುದ್ಧಿಜೀವಿಗಳು ಮತ್ತು ಆ ಪತ್ರಿಕೆಯ ವರದಿಗಾರರೆ ಮಾಡುತ್ತಾರೆ. ಆ ಅಭಿಪ್ರಾಯಗಳು ಆ ಬರಹಗಾರರ ಸ್ವಂತ ಅಭಿಪ್ರಾಯಗಳೆ ಹೊರತು ಆ ಪತ್ರಿಕೆಯ ಅಬಿಪ್ರಾಯಗಳಲ್ಲ.

ತಮ್ಮ ಸಂಪಾದಕೀಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳುವ ಹಕ್ಕು ಪತ್ರಿಕೆಗಳಿಗಿದೆ. ತಮ್ಮ ಸಂಪಾದಕೀಯಗಳಲ್ಲಿ ಪತ್ರಿಕೆಗಳು ಸಮಾಜವನ್ನು ಕಾಡುತ್ತಿರುವ ವಿಷಯಗಳ ಬಗ್ಗೆ ತಮ್ಮ ಚಿಂತನೆಗಳನ್ನು ನೀಡುತ್ತಾರೆ. ಪತ್ರಿಕೆಗಳು ತಮ್ಮ ಓದುಗರಿಗೂ ಸಹ ಸ್ಥಳವನ್ನು ನೀಡುತ್ತವೆ. ಸಂಪಾದಕರಿಗೆ ಬರೆಯುವ ಪತ್ರಗಳ ವಿಭಾಗದಲ್ಲಿ ಓದುಗರು ಯಾವುದೆ ವಿಷಯದ ಮೇಲೆ ತಮ್ಮ ಅಭಿಪ್ರಾಯವನ್ನು ನೀಡಬಹುದು. ಸಂಪಾದಕರು ಈ ಪತ್ರಗಳನ್ನು ಪರಾಮರ್ಶಿಸಿ ಉತ್ತಮವಾದವುಗಳಲ್ಲಿ ಕೆಲವನ್ನು ಪ್ರಕಟಿಸುತ್ತಾರೆ. ಪತ್ರಿಕೆಗಳೂ ಕೆಲವು ವೇಳೆ ಸತ್ಯಾಸತ್ಯತೆ ತಿಳಿಯಲು ಆಳವಾದ ತನಿಖೆ ಮಾಡಿ ತನಿಖಾ ವರದಿಗಳನ್ನು ಪ್ರಕಟಿಸುತ್ತವೆ.

ಪತ್ರಿಕಾ ಮಾಧ್ಯಮ ಮೇಲಿನ ಅತ್ಯಮೂಲ್ಯವಾದ ನೀತಿಯನ್ನು ಶತಮಾನಗಳ ಕಾಲ ಪಾಲಿಸುತ್ತಾ ವಿಕಾಸ ಹೊಂದಿದೆ. ಆದರೆ ಪತ್ರಿಕೆಗಳು ಸಹ ಈ ಅತ್ಯಮೂಲ್ಯ ನಿಯಮಗಳನ್ನು ಉಲ್ಲಂಘಿಸುತ್ತವೆ ಮತ್ತು ಪಕ್ಷಪಾತ ಧೋರಣೆಯನ್ನು ಬೆಳೆಸಿಕೊಳ್ಳುತ್ತವೆ. ಕೆಲವು ಪತ್ರಿಕೆಗಳು ಹೀಗೆ ಸಾಂಪ್ರದಾಯಿಕ ಬಣದ, ಉದಾರವಾದಿಗಳ, ಎಡಪಂಥೀಯರ ಕಡೆ ವಾಲಿರುವಂತೆ, ಮತ್ತು ಯಾವುದೆ ಪಕ್ಷದ ಅಥವಾ ಘಟನೆಯ ಪರ ಅಥವಾ ವಿರೋಧಿಯಾಗಿ ಗುರುತಿಸಿಕೊಂಡಿದೆ ಎಂದು ಜನರು ತಿಳಿಯಬಹುದು. ಆಗ ಸಹ ಹೆಚ್ಚು ಕಾಲ ಈ ಸುವರ್ಣ ನಿಯಮಗಳನ್ನು ಎತ್ತಿ ಹಿಡಿಯಲಾಗುತ್ತದೆ. ಯಾವುದೇ ದೊಡ್ಡ ಘಟನೆ ಪತ್ರಿಕೆ ಇಚ್ಛಿಸದ ಗುಂಪಿನಲ್ಲಿ ನಡೆದರೆ ಅದನ್ನು ಏಕಾಏಕಿ ತಳ್ಳಿಹಾಕಲು ಸಾಧ್ಯವಾಗುವುದಿಲ್ಲ. ಇದರ ಪರಿಣಾಮವಾಗಿ ಸಾಮಾಜಿಕ ಆಸಕ್ತಿ ಹೊಂದಿರುವ ಯಾವುದೆ ಘಟನೆಯ ವರದಿಗೆ ಸಂಬಂಧಪಟ್ಟಂತೆ ಹೆಚ್ಚು ಪತ್ರಿಕೆಗಳ ತಲೆಬರಹ ಒಂದೇ ತರ ಇರುತ್ತದೆ.

ದೃಶ್ಯ ಮಾಧ್ಯಮ ಇನ್ನೂ ಎಳೆಯದಾಗಿದೆ. ಅದರಲ್ಲೂ ಭಾರತದ ದೃಶ್ಯ ಮಾಧ್ಯಮ ಮತ್ತೂ ಎಳೆಯದು. ಭಾರತದ ದೃಶ್ಯ ಮಾಧ್ಯಮ ವಾರ್ತಾ ಮಾಧ್ಯಮದಂತೆ ಕಸುಬುದಾರಿಕೆಯನ್ನು ಬೆಳೆಸಿಕೊಳ್ಳಲು ಇನ್ನೂ ಕೆಲಕಾಲ ಬೇಕಾಗುತ್ತದೆ.

ಭಾರತದ ಮಾಧ್ಯಮದಲ್ಲಿನ ಕಸುಬುದಾರರ ಇತಿಹಾಸ ಅಂತಹ ಪ್ರಕಾಶಮಾನವಾದುದಲ್ಲ. ನನ್ನ ವಿಶ್ವವಿದ್ಯಾನಿಲಯದ ದಿನಗಳನ್ನೆ ಜ್ಞಾಪಿಸಿಕೊಂಡರೆ, ನಾಗರಿಕ ಸೇವಾ ಪರೀಕ್ಷೆಗಳಲ್ಲಿ ತಮ್ಮ ಅದೃಷ್ಟ ಪರೀಕ್ಷಿಸಿ, ಅಲ್ಲಿ ಸೋತು ಪತ್ರಿಕಾ ಮಾಧ್ಯಮವನ್ನು ತಮ್ಮ ಎರಡನೆಯ ಅಥವಾ ಮೂರನೆಯ ಅಥವಾ ನಾಲ್ಕನೆಯ ಆಯ್ಕೆಯಾಗಿ ಆರಿಸಿಕೊಂಡ ಅನೇಕರು ಇಲ್ಲಿದ್ದಾರೆ. ಭಾರತದ ಪತ್ರಿಕಾ ವರದಿಗಾರರಲ್ಲಿ ಹೆಚ್ಚು ಜನ ಪತ್ರಿಕಾ ಮಾಧ್ಯಮವನ್ನು ತಮ್ಮ ಮೊದಲನೆ ಅಥವಾ ತಮ್ಮ ಆಕಾಂಕ್ಷಿತ ಕಸುಬಾಗಿ ಕೈಗೊಂಡವರಲ್ಲ.

ವಾರ್ತಾ ವಾಹಿನಿಗಳಲ್ಲಿನ ದೃಶ್ಯ ಇದಕ್ಕಿಂತಲೂ ಕುರೂಪವಾದದ್ದು. ಹೆಚ್ಚು ಸಮಯ ದೃಶ್ಯ ಮಾಧ್ಯಮಗಳು ತಮ್ಮ ಸಿಬ್ಬಂದಿಯನ್ನು ಆಯ್ಕೆ ಮಾಡುವುದು ಸಂಬಂಧಗಳ ಮೂಲಕ, ಸ್ಪರ್ಧೆಯ ಮೂಲಕವಲ್ಲ. ಸ್ನೇಹಿತರು, ಸಂಬಂಧಿಗಳು, ಅಭ್ಯರ್ಥಿಯ ಸಹ ವರದಿಗಾರರು ಅಭ್ಯರ್ಥಿಯ ಹೆಸರನ್ನು ಶಿಫಾರಸ್ಸು ಮಾಡುತ್ತಾರೆ. ಇಂತಹ ಶಿಫಾರಸ್ಸಿನ ಅಭ್ಯರ್ಥಿಗೆ ಅರ್ಹತೆ ಎರಡನೆಯದಾಗುತ್ತದೆ. ಅವರ ಮುಖ ಲಕ್ಷಣ ಮತ್ತು ಭಾಷೆಯ ಉಚ್ಚಾರ ಮುಖ್ಯವಾಗುತ್ತದೆ. ಭಾರತದ ವಾರ್ತಾವಾಹಿನಿಗಳನ್ನು ಹೊರಗಿನವರಾರಾದರೂ ನೋಡುತ್ತಿದ್ದರೆ, ಭಾರತದಲ್ಲಿ ಕಪ್ಪು ವರ್ಣದವರು ಯಾರೂ ಇಲ್ಲ ಮತ್ತು ಭಾರತೀಯರೆಲ್ಲರೂ ಸುಂದರರು ಎಂಬುದಾಗಿ ತೀರ್ಮಾನಿಸಬಹುದು. ಯಾವುದೇ ಟಿ.ವಿ ಸ್ಟುಡಿಯೋಗೆ ನೀವು ಭೇಟಿ ನೀಡಿ. ನೀವು ಅಲ್ಲಿ ಪ್ರಸಾದನ ಕೊಠಡಿಯನ್ನು ಕಾಣುವಿರಿ. ವಾರ್ತಾ ವಾಚಕರು, ಮತ್ತು ನಿರೂಪಕರು ತಮ್ಮ ಮುಖಗಳು ಪ್ರಕಾಶಮಾನವಾಗಿರುವಂತೆ, ತಮ್ಮ ಕಣ್ಣುಗಳು ಬೆಳಗುವಂತೆ ಮತ್ತು ತಮ್ಮ ತುಟಿಗಳು ತೇವಾಂಶದಿಂದ ಕೂಡಿರುವಂತೆ ಪ್ರಸಾದನ ಸಾಮಗ್ರಿ ಬಳಿದುಕೊಳ್ಳುವುದು ಕಡ್ಡಾಯ.

ಇಂತಹ ಸಂದಿಗ್ದದಲ್ಲಿ ಭಾರತದ ದೃಶ್ಯ ಮಾಧ್ಯಮ ಮಾಧ್ಯಮ ನೀತಿಯನ್ನು, ಅದರ ಮಟ್ಟ ಎಷ್ಟೇ ಕನಿಷ್ಠವಾಗಿರಲಿ, ಪಾಲಿಸಬೇಕು ಎಂದು ಬಯಸುವುದು ಕ್ರೂರವಾಗುತ್ತದೆ.

ಎಲ್ಲಾ ಮನುಷ್ಯರಂತೆ ಟಿ.ವಿಯ ವರದಿಗಾರರು ಸಹ ತಮ್ಮ ಕರ್ತವ್ಯದಲ್ಲಿ ಸೋಲಬಹುದು ಮತ್ತು ನೀತಿ ಬಾಹಿರವಾಗಬಹುದು. ಆದರೆ ಅದಕ್ಕೊಂದು ಮಿತಿಯಿದೆ. ಒಂದು ಬಾವಿ ಇಪ್ಪತ್ತು ಅಡಿ ಆಳವಿದ್ದರೆ ಅಗರಲ್ಲಿ ಮೂವತ್ತು ಅಡಿ ಆಳಕ್ಕೆ ಬೀಳುವುದು ಹೇಗೆ ಸಾಧ್ಯ?

ನಮ್ಮ ಕಿರಿಯ ಗಾಂಧಿ ಇದೇ ಆಗಸ್ಟ್‌ನಲ್ಲಿ ದಹಲಿಯಲ್ಲಿ ಉಂಟುಮಾಡಿದ ದೃಶ್ಯಗಳ ರಂಪಾಟವನ್ನು ಜ್ಞಾಪಿಸಿಕೊಳ್ಳಿ. ವರದಿಗಾರರು ಮಾತ್ರವಲ್ಲದೆ ನಿರೂಪಕರು ಮತ್ತು ಚರ್ಚೆಗಳಲ್ಲಿ ಭಾಗವಹಿಸುವವರೂ ಪೂರ್ವಾಗ್ರಹದಲ್ಲಿ ಮುಳುಗಿ ಹೋಗಿದ್ದರು. ಅವರ ಅಭಿಪ್ರಾಯಗಳು ಅಣ್ಣಾಗಳ ಅಭಿಪ್ರಾಯಗಳಿಗಿಂತ ಸ್ವಲ್ಪವೂ ಭಿನ್ನವಾಗಿರಲಿಲ್ಲ. ಅವರು ಅಣ್ಣಾ ಮತ್ತು ಅವರ ಸುತ್ತಲಿನ ಹಾಗೂ ಅವರ ಜೊತೆಯ ಜನಜಂಗುಳಿಯನ್ನು ಹಾಡಿ ಹೊಗಳಿದರು. ಇವತ್ತಿನ ಭಾರತದಲ್ಲಿ ಇದು ಮಾಧ್ಯಮಗಳ ಅತಿದೊಡ್ಡ ಅನೀತಿಯ ಕೆಲಸ.

ವರದಿಗಾರರು ಕೇಳಿದಂತ ಪ್ರಶ್ನೆಗಳು ಅಣ್ಣಾನ ಕಿವಿಗಳಿಗೆ ಸಂಗೀತದಂತಿದ್ದುವು. ಸ್ಟುಡಿಯೋಗಳಲ್ಲ ಕುಳಿತಿದ್ದ ನಿರೂಪಕರು ಚಳವಳಿಗಾರರನ್ನು ವೈಭವೀಕರಿಸಿದರು.

ನಾನು ನಿರೂಪಕರುಗಳಿಗೆ ಎರಡು ಪ್ರಶ್ನೆಗಳನ್ನು ಕೇಳುವಂತೆ ತಮ್ಮ ವರದಿಗಾರರಿಗೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತಿದ್ದೆ. (1) ಶ್ರೀ ಗಾಂಧಿಯನ್ನು, ಜೈಲಿನಿಂದ ಬಿಡುಗಡೆಗೊಳಿಸಲು ಆದೇಶಿಸಿದ ಮೇಲೆ ಜೈಲಿನಿಂದ ಹೊರ ಹೋಗದಿದ್ದುದು ಜೈಲು ಸಂಹಿತೆಯ ಉಲ್ಲಂಘನೆಯಲ್ಲವೆ? (2) ಚಳವಳಿಗಾರರನ್ನು, ನೀವು ಯಾವಾಗಲಾದರೂ ಜಾತಿ ಪದ್ಧತಿಯಿಂದ ನೊಂದವರೆ? ಅವರ್‍ಯಾರೂ ಈ ಪ್ರಶ್ನೆಗಳನ್ನು ಕೇಳಲಿಲ್ಲ. ಅವರು ನನ್ನ ಮೇಲೆ ಕೋಪಗೊಂಡರು ಮತ್ತು ಅಲ್ಲಿಂದಾಚೆಗೆ ಮಾಧ್ಯಮದಿಂದ ಹೊರ ಇಟ್ಟರು.

ಪ್ರಜಾಪ್ರಭುತ್ವ ಒಂದು ಸುವರ್ಣ ನೀತಿಯ ಮೇಲೆ ಬದುಕುತ್ತದೆ. 'ಕಾನೂನಿನ ಆಳ್ವಿಕೆ' ಎನ್ನುವುದೇ ಆ ನೀತಿ. ಎರಡನೆ ಮಹಾಯುದ್ಧದ ಸಮಯದಲ್ಲಿ ಹಿಟ್ಲರ್ ಪ್ಯಾರಿಸನ್ನು ಆಕ್ರಮಿಸಿದ. ಲಂಡನ್ ಆಕ್ರಮಣದ ಭೀತಿಗೆ ಒಳಗಾಯಿತು. ವಿನ್‌ಸ್ಟನ್ ಚರ್ಚಿಲ್ ಯುದ್ಧದ ಸಚಿವ ಸಂಪುಟದ ಸಭೆಗೆ ಹೋಗುತ್ತಿದ್ದರು. ಅವರು ತುಂಬಾ ಆತುರದಲ್ಲಿದ್ದುದರಿಂದ ಅವರ ವಾಹನ ಚಾಲಕ ಟ್ರಾಫಿಕ್‌ನ ಕೆಂಪು ದೀಪದ ಸೂಚನೆಯನ್ನು ಉಲ್ಲಂಘಿಸಿದ. ಸಂಚಾರ ಪೊಲೀಸ್‌ನವನು ಅವರ ಕಾರು ನಿಲ್ಲಿಸಿ ಅವರ ಚಾಲಕನಿಗೆ ದಂಡ ಹಾಕಿದ. ಅಮೆರಿಕದ ಅಧ್ಯಕ್ಷರ ಸಂಬಂಧಿಯನ್ನು ಸಂಚಾರ ನಿಯಮದ ಉಲ್ಲಂಘನೆಗಾಗಿ ಶಿಕ್ಷಿಸಲಾಯಿತು ಎಂದು ನಾವು ಪತ್ರಿಕೆಗಳಲ್ಲಿ ಆಗಾಗ್ಗೆ ಓದುತ್ತಿರುತ್ತೇವೆ. ಇಲ್ಲಿ ತಾನೊಬ್ಬ ಗಾಂಧಿ ಎಂದು ಹೇಳಿಕೊಂಡವ ಜೈಲು ಸಂಹಿತೆಯನ್ನು ಉಲ್ಲಂಘಿಸುತ್ತಾನೆ. ಮಾಧ್ಯಮಗಳು ಅದನ್ನು ವೈಭವೀಕರಿಸುತ್ತವೆ.

ಖಂಡಿತವಾಗಿ ಟಿ.ವಿ. ವಾರ್ತಾವಾಹಿನಿಗಳು ಅಣ್ಣಾ ಚಳವಳಿಯ ಧ್ವನಿವರ್ಧಕಗಳಾಗಿ ಮಾರ್ಪಾಡುಗೊಂಡಿದ್ದುವು. ವರದಿಗಾರರಿಂದ ಹಿಡಿದು ನಿರೂಪಕರು ಮತ್ತು ಸಂಪಾದಕರವರೆಗೆ ಎಲ್ಲರು ಅಣ್ಣಾ ಚಳವಳಿಯ ಭಾಗವಾಗಿದ್ದರು. ತಾವು ನಿಷ್ಪಕ್ಷಪಾತವಾಗಿದ್ದೇವೆ ಅಥವಾ ಯಾರ ಕಡೆಗೂ ತಮ್ಮ ಒಲವಿಲ್ಲವೆಂಬುದಾಗಿ ತೋರಿಕೆಗೂ ಅವರು ನಡೆದುಕೊಳ್ಳಲಿಲ್ಲ. ಅವರು ಯಾರು ಅತ್ಯುತ್ತಮ ಧ್ವನಿವರ್ಧಕ ಎಂದು ತೋರಿಸಿಕೊಳ್ಳಲು ತಮ್ಮಲ್ಲೆ ಸ್ಪರ್ಧೆಗಿಳಿದಿದ್ದರು.

ಶೋಚನೀಯವೆಂದರೆ ಧ್ವನಿವರ್ಧಕಗಳ ಜೊತೆ ವಾದಕ್ಕಿಳಿಯುವುದು ಕಷ್ಟ ಮಾತ್ರವಲ್ಲ ಅಸಾಧ್ಯ. ಮೇಲ್ಜಾತಿಗಳ ಹಿಡಿತದಲ್ಲಿರುವ ಟಿ.ವಿ.ಮಾಧ್ಯಮ, ಮಾಧ್ಯಮದ ನೀತಿ ನಿಯಮಗಳನ್ನು ತಲೆಕೆಳಗೆ ಮಾಡಿತು. ಭಾರತದ ಮಾಧ್ಯಮಕ್ಕೆ ಜಯವಾಗಲಿ!

* * * * * * * *

ಅಣ್ಣಾ ಗ್ರಾಮ ರಾಜ್ಯಗಳು

ಯಾವುದೇ ನಾಯಕರ ವಿಚಾರಗಳು, ಕ್ರಿಯೆಗಳು ಅಥವಾ ಅಭಿಪ್ರಾಯಗಳನ್ನು ಅವರ ವಿಶಾಲ ಪ್ರಪಂಚ ದೃಷ್ಟಿಯ ಮೇಲೆ ಅಳೆಯಲಾಗುತ್ತದೆ. ಅವರ ಎಲ್ಲ ಕ್ರಿಯೆಗಳು ಮತ್ತು ಅಭಿಪ್ರಾಯಗಳು ಸಾಂದರ್ಭಿಕವಾಗಿರುತ್ತವೆ. ನಮಗೆ ತಿಳಿದಿರುವಂತೆ ಒಂದೇ ವಿಚಾರ, ಸಂದರ್ಭಕ್ಕೆ ತಕ್ಕಂತೆ ಭಿನ್ನ ಅರ್ಥಗಳನ್ನು ಹೊಂದಿರುತ್ತದೆ. ನಂತರ ಮಾದರಿಯ ವಿಚಾರ ಬರುತ್ತದೆ. ಉದಾಹರಣೆಗೆ ಸಾವಯವ ಆಹಾರದ ಮೇಲೆ ಪ್ರೀತಿಯುಳ್ಳ ಮನುಷ್ಯ ಆಧುನಿಕತೆಯ ಬಗ್ಗೆ ತಿರಸ್ಕಾರ ಹೊಂದಿರುತ್ತಾನೆ. ಆ ಬಗ್ಗೆ ಓದದೆ ಮತ್ತು ಆಧುನಿಕತೆಯ ಬಗ್ಗೆ ಅವರ ವಿಚಾರ ಏನು ಎಂದು ಕೇಳದೆಯೆ ಇದನ್ನು ನಾವು ತಿಳಿದುಕೊಳ್ಳಬಹುದು.

ಗ್ರಾಮ ಜೀವನ ಮತ್ತು ಪಂಚಾಯತ್‌ಗಳ ಬಗ್ಗೆ ಅಣ್ಣಾ ಅವರಿಗಿರುವ ಆಕರ್ಷಣೆ ಮತ್ತು ಅವರ ಭ್ರಷ್ಟಾಚಾರ ವಿರೋಧಿ ಆಂದೋಲನ ಇವು ಆಳವಾದ ಸಂಬಂಧ ಹೊಂದಿವೆ. ಅವರ ಒಂದು ಮುಖ್ಯ ಒತ್ತಾಯವೆಂದರೆ ಸಂಸತ್ತಿನಲ್ಲಿ ಅಂಗೀಕರಿಸಲಾಗುವ ಎಲ್ಲಾ ಕಾನೂನುಗಳೂ ದೇಶದ ಗ್ರಾಮ ಪಂಚಾಯಿತಿಗಳ ಒಪ್ಪಿಗೆಯನ್ನು ಪಡೆಯಬೇಕು ಎಂಬುದು.

ಡಾ॥ ಬಿ.ಆರ್.ಅಂಬೇಡ್ಕರ್ ಮತ್ತು ಗಾಂಧೀಜಿ ಗ್ರಾಮ ಸಮಾಜದ ಬಗ್ಗೆ ಒಂದು ದೊಡ್ಡ ಚರ್ಚೆಯನ್ನೇ ಮಾಡಿದರು. ಗಾಂಧೀಜಿಯವರಿಗೆ ಭಾರತದ ಆತ್ಮ ಗ್ರಾಮಗಳಲ್ಲಿದೆ "………. ತಮ್ಮ ಅತ್ಯಾವಶ್ಯಕ ಅವಶ್ಯಕತೆಗಳಿಗೆ ತಮ್ಮ ನೆರೆಯವರಿಂದ ಸ್ವತಂತ್ರವಾಗಿದ್ದು ಎಲ್ಲಿ ಅವಲಂಬನೆ ಅವಶ್ಯಕವೊ ಅಲ್ಲಿ ಇತರರ ಮೇಲೆ ಅವಲಂಬಿತವಾಗಿರುವಂತವು………." ಡಾ॥ ಅಂಬೇಡ್ಕರ್‌ರವರಿಗೆ ಗ್ರಾಮಗಳು ಪೀಡಕರ ಸ್ವರ್ಗ. "……… ಸ್ಥಳೀಯತೆಯ ಕೊಳಚೆ ತೊಟ್ಟಿ, ಮೌಢ್ಯ ಮತ್ತು ಸಣ್ಣತನದ ಅಡ್ಡೆ………"

ಪಂಡಿತ್ ಜವಹರ್‌ಲಾಲ್ ನೆಹರು ಸಹ ಗಾಂಧೀಜಿಯ ದೃಷ್ಟಿಯನ್ನು ಒಪ್ಪಿಕೊಳ್ಳಲಿಲ್ಲ. ಪಂಡಿತ್ ನೆಹರು ಅವರು ಭಾರತದ ವೇಗವಾದ ಕೈಗಾರೀಕರಣ ಮತ್ತು ನಗರೀಕರಣಕ್ಕಾಗಿ ಕರೆಕೊಟ್ಟರು.

ಗಾಂಧಿಯವರ ಪ್ರಾಪಂಚಿಕ ದೃಷ್ಟಿಯಲ್ಲಿ ಭಾರತ ಗ್ರಾಮ ರಾಜ್ಯಗಳ ಒಕ್ಕೂಟ. ಇಂತಹ ಗ್ರಾಮ ಜೀವನದ ವೈಭವೀಕರಣದಿಂದ ಗಾಂಧಿಯವರು ಭಾರತ ನಡೆಯಬೇಕೆಂದು ಬಯಸಿದ್ದ ದಾರಿ ತಿಳಿದುಬರುತ್ತದೆ. ಅವರಿಗೆ ಕೈಗಾರೀಕರಣವೆಂದರೆ ಚರಕವಲ್ಲದೆ ಮತ್ತೇನೂ ಅಲ್ಲ. ಗಾಂಧೀಜಿಯವರ ಇಂತಹ ನಂಬಿಕೆಗಳು ಅವರನ್ನು ಸಾಂಪ್ರದಾಯಸ್ಥರ ಬುಟ್ಟಿಯಲ್ಲಿ ಹಾಕುತ್ತವೆ. ಅವರ ಗ್ರಾಮ ಸ್ವರಾಜ್ಯದ ತತ್ವ ಅವರನ್ನು ಆಧುನಿಕ ಕಾಲಕ್ಕೆ ಅನರ್ಹರನ್ನಾಗಿ ಮಾಡುತ್ತದೆ. ಕಾಂಗ್ರೆಸ್ ಪಕ್ಷ ಗಾಂಧೀಜಿಯವರ ಎಲ್ಲ ನೀತಿ ನಿರೂಪಣೆಗಳನ್ನೂ ಕಡೆಗಣಿಸಿ ಕೈಗಾರೀಕರಣ ಮತ್ತು ನಗರೀಕರಣಗಳತ್ತ ನಡೆಯಿತು. ದೇಶ ನಿಚ್ಚಳವಾಗಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ತಿರಸ್ಕರಿಸಿತು.

ಈಗ ಕಿರಿಯ ಗಾಂಧಿ ಮತ್ತೆ ಸೋತ ಗ್ರಾಮರಾಜ್ಯಗಳ ಕಲ್ಪನೆಗೆ ಜೀವ ತುಂಬುತ್ತಿದ್ದಾರೆ. ಅವರ 'ಜನಸಂಸತ್ ವಿರುದ್ಧ ದೆಹಲಿಯ ಸಂಸತ್' ಘೋಷಣೆ ಅನೇಕ ವಾದಗಳಿಂದ ಕೂಡಿದೆ. ಅವರ ಸಂಸತ್ತಿನ ತುಚ್ಛೀಕರಣಕ್ಕೆ ಅನೇಕ ಕಾರಣಗಳಿವೆ. ನೂರ ಐವತ್ತು ಸಂಸತ್ ಸದಸ್ಯರು ಕ್ರಿಮಿನಲ್ ಕೇಸುಗಳಲ್ಲಿ ಭಾಗಿಯಾಗಿದ್ದಾರೆ. ಇದು ದುರದೃಷ್ಟಕರ. ಆದರೆ ಪಂಚಾಯತ್ ಮುಖ್ಯಸ್ಥರ ಸ್ಥಿತಿಯೇನು?

ಪಂಚಾಯತ್ ಚುನಾವಣೆಗಳು ಯಾವ ರೀತಿ ನಡೆಯುತ್ತವೆ? ಪಂಚಾಯತ್‌ಗೆ ಮುಖ್ಯವಾಗಿ ಎಂತಹ ಜನ ಚುನಾಯಿತರಾಗುತ್ತಾರೆ ಮತ್ತು ಹೇಗೆ ಕೆಲವು ವೇಳೆ ಪಂಚಾಯತ್‌ಗಳನ್ನು ಹರಾಜು ಮಾಡಲಾಗುತ್ತದೆ ಎಂಬುದನ್ನು ನಾನು ವಿವರಿಸಬೇಕೆ? ಹೇಗೆ ಪಂಚಾಯತ್ ಮುಖಂಡರು ಬಿ.ಪಿ.ಎಲ್ ಕಾರ್ಡುಗಳನ್ನು ಹಂಚುತ್ತಾರೆ? ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮ ಉದ್ಯೋಗ ಖಾತರಿ ಯೋಜನೆಯ ಕಾರ್ಡುಗಳನ್ನು ಏನು ಮಾಡುತ್ತಾರೆ ಎಂಬುದನ್ನು ನಾನು ಹೇಳಬೇಕೆ?

ಆದರೆ ಇಲ್ಲೊಬ್ಬ ನಾಯಕರಿದ್ದಾರೆ. ಅವರಿಗೆ ಸತ್ಯಾಂಶಗಳ ಬಗ್ಗೆ ಗೌರವವಿಲ್ಲ. ಅವರು ಲಜ್ಜೆಗೆಟ್ಟವರಂತೆ ಗ್ರಾಮ ಪಂಚಾಯಿತಿಗಳನ್ನು ವೈಭವೀಕರಿಸುತ್ತಾರೆ.

ಇದಕ್ಕೂ ಮೀರಿ ಗ್ರಾಮಗಳಿಗೆ ಅಣ್ಣಾ ಅವರು ಸೂಚಿಸಿರುವ ಸಾಮಾಜಿಕ ನೀತಿಗಳೇನು? ಯಾವ ರೀತಿಯ ಭಾರತವನ್ನು ಅಣ್ಣಾ ಕಟ್ಟಲಿಚ್ಛಿಸುತ್ತಾರೆ? ಅವರ ಗ್ರಾಮ ರಾಲೆಗಾಂಸಿದ್ಧಿಗೆ ಒಮ್ಮೆ ಭೇಟಿ ನೀಡಿ. ಅಲ್ಲಿ ಹೊಗೆಸೊಪ್ಪು, ಸಿಗರೇಟ್ ಮುಂತಾದವುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಲಾಗಿದೆ. ಯಾರೆ ಆಗಲಿ ಅಲ್ಲಿ ಮಾಂಸಹಾರವನ್ನು ತಯಾರಿಸುವ ಹಾಗಿಲ್ಲ. ಯಾರೂ ಧಾರ್ಮಿಕವಲ್ಲದ ಸಿನಿಮಾಗಳನ್ನು ನೋಡುವ ಹಾಗಿಲ್ಲ. ಮದುವೆ ಮುಂತಾದ ಸಂದರ್ಭಗಳಲ್ಲಿ ಭಜನೆಗಳ ಸಿ.ಡಿಗಳನ್ನು ಹಾಕುತ್ತಾರೆ. ಯಾರಾದರೂ ಈ ನಿಯಮಗಳನ್ನು ಉಲ್ಲಂಘಿಸಿದರೆ ಅವರನ್ನು ಹಿಡಿದು ತಂದು ಸಾರ್ವಜನಿಕವಾಗಿ ಚಾಟಿ ಏಟು ಕೊಡಲಾಗುತ್ತದೆ.

ಇನ್ನೊಂದು ಸಾಧ್ಯತೆಯನ್ನೂ ಊಹಿಸಿಕೊಳ್ಳಿ. ಅಣ್ಣಾ ಒಂದು ರಾಜಕೀಯ ಪಕ್ಷ ಕಟ್ಟಿ ಸಂಸತ್ತಿನಲ್ಲಿ ಅತಿ ಹೆಚ್ಚು ಸೀಟುಗಳನ್ನು ಗೆದ್ದರೆ ಅವರು 5 ವರ್ಷ ಆಳುತ್ತಾರೆ ಮತ್ತು ಮತ್ತೆ ಅಧಿಕಾರಕ್ಕೆ ಬರುತ್ತಾರೆ. ಆಗ ಅವರು ತಮ್ಮ ರಾಲೆ ಗಾಂಸಿದ್ದಿಯ ಪ್ರಯೋಗವನ್ನು ಇಡೀ ಭಾರತದಲ್ಲಿ ಮಾಡುತ್ತಾರೆ. ಅವರ ಹಿಂಬಾಲಕರಲ್ಲಿ ಎಷ್ಟು ಜನ ಮಾಂಸಾಹಾರ ಇಲ್ಲದಿರುವ, ರಮ್ಯ ಸಂಗೀತ ಸಿನಿಮಾಗಳಿಲ್ಲದ ದೇಶದಲ್ಲಿ ವಾಸಮಾಡಲು ಇಚ್ಛಿಸುತ್ತಾರೆ?

ಕಿರಿಯ ಗಾಂಧಿಯ ಮಹಿಳೆಯರ ಬಗೆಗಿನ ದೃಷ್ಟಿ ಕೂಡ ಜಮೀನುದಾರಿಕೆಯದು. ಅವರ ಪ್ರಕಾರ ಮಹಿಳೆಯರು ಎಷ್ಟೇ ಕಷ್ಟ ಕೋಟಲೆ ಅನುಭವಿಸಿಯಾದರೂ ತಮ್ಮ ಕೌಮಾರ್ಯವನ್ನು ರಕ್ಷಿಸಿಕೊಳ್ಳಬೇಕು. ಮದುವೆಯ ನಂತರ ಅವರು ದಿಟ್ಟ ಸೈನಿಕರನ್ನು ಹಡೆಯಬೇಕು. ಬೇರೆ ಯಾವುದಾದರೂ ಪ್ರಜಾಸತ್ತಾತ್ಮಕ ದೇಶದಲ್ಲಿ ಮಹಿಳೆಯರ ಬಗ್ಗೆ ಇಂತಹ ದೃಷ್ಟಿಯಿದೆಯೆ? ತಾವು ಮದುವೆಯಾಗದಿದ್ದುದಕ್ಕಾಗಿ ಅಥವಾ ಆ ಕಾಲದ ಹೆಣ್ಣು ಮಕ್ಕಳು, ಅಣ್ಣಾ ಅವರನ್ನು ತಿರಸ್ಕರಿಸಿದುದಕ್ಕಾಗಿ ಅಣ್ಣಾ ಮಹಿಳೆಯರ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದಾರೆಯೆ?

ಅಣ್ಣಾ ಅವರನ್ನು ಮತ್ತು ಅವರ ದೃಷ್ಟಿಕೋನವನ್ನು ಮರೆತುಬಿಡಿ. ಎಲ್ಲಾ ಪ್ರಜೆಗಳೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೊಂದಲು ಹಕ್ಕುದಾರರಾಗಿರುತ್ತಾರೆ. ನನ್ನ ಚಿಂತೆ ಎಂದರೆ ಅವರ ಹಿಂಬಾಲಕರಲ್ಲಿ ಹೆಚ್ಚು ಜನರು ಮೇಲ್ಜಾತಿಯವರು. ಅವರ ಹಿನ್ನೆಲೆಯನ್ನು ನೋಡಿದರೆ ಅಣ್ಣಾ ಅಂತಹ ಮನುಷ್ಯನಿಂದ ಯಾವುದೇ ಸೂಕ್ಷ್ಮತೆಯನ್ನು ಬಯಸುವ ಹಾಗಿಲ್ಲ.

ನಾವು ಪ್ರಶ್ನೆಗಳನ್ನು ಕೇಳಬಾರದೆ? ಅವರ ಹಿಂಬಾಲಕರಲ್ಲಿ ಎಷ್ಟು ಜನ ಅಣ್ಣಾ ಅವರ ಪ್ರಾಪಂಚಿಕ ದೃಷ್ಟಿಕೋನವನ್ನು ಅನುಸರಿಸಲು ತಯಾರಾಗಿದ್ದಾರೆ? ಎಷ್ಟು ಜನ ಅಣ್ಣಾ ಬೆಂಬಲಿಗರು ಹಳ್ಳಿಗಳಿಗೆ ಹಿಂತಿರುಗಿ ಗ್ರಾಮ ಪಂಚಾಯಿತಿಗಳನ್ನು ಹೊತ್ತು ಮೆರೆಸುತ್ತಾ ಅಲ್ಲಿ ತಮ್ಮ ಜೀವನ ಕಳೆಯಲು ತಯಾರಿದ್ದಾರೆ? ಎಷ್ಟು ಜನ ಅವರ ಹಿಂಬಾಲಕರು ರಾಲೆಗಾಂಸಿದ್ದಿಯಂತಹ ನಿಯಮಗಳನ್ನು ತಮ್ಮ ಮೇಲೆ ಹೇರಿಕೊಳ್ಳಲು ಸಿದ್ಧರಿದ್ದಾರೆ? ಈ ಪ್ರಶ್ನೆಗಳಿಗೆ ಉತ್ತರ ನಕಾರಾತ್ಮಕವಾಗಿದ್ದಲ್ಲಿ "ನಾನು ಅಣ್ಣಾ" ಕೂಗು ಭಾರತದ ಮೇಲ್ಜಾತಿಗಳು ಈಗ ಅನುಭವಿಸುತ್ತಿರುವ ಒಂದು ಗಂಭೀರ ಸಂದಿಗ್ಧವನ್ನು ಸೂಚಿಸುತ್ತದೆ. ಆ ಸಂದಿಗ್ಧ ಮೌಲ್ಯಗಳನ್ನು ಕಳೆದುಕೊಂಡಿರುವುದರ ಸುತ್ತ ಸುತ್ತುತ್ತಿದೆ.

ಎಷ್ಟೇ ಆದರೂ ಭಾರತದ ಮಧ್ಯಮ ವರ್ಗದ ಹೆಚ್ಚು ಜನ ಮೇಲ್ಜಾತಿಯವರು. ಯಾವಾಗಲಾದರೂ ಮತ್ತು

ಅಣ್ಣಾಗಳನ್ನು ನಿಭಾಯಿಸುವ ಬಗೆ?

ಎಲ್ಲಿಯಾದರೂ ಸಮಾಜದ ಮಧ್ಯಮ ವರ್ಗ ನೀತಿಯುತವಾಗಿಲ್ಲದಿದ್ದರೆ ಅಂತಹ ಸಮಾಜದ ಭವಿಷ್ಯ ಕರಾಳ. ಪ್ರಪಂಚದ ಚರಿತ್ರೆ ಅಂತಹ ಅನುಭವಗಳಿಂದ ತುಂಬಿದೆ. ಮೇಲ್ಜಾತಿಗಳು ಹಿಂದಿನ ಆಗಸ್ಟ್‌ನಲ್ಲಿ ತೋರಿದ ಸಾಮಾಜಿಕ ನಡತೆಯ ಬಗ್ಗೆ ಪುನರ್‌ಪರಿಶೀಲನೆ ಮಾಡುವುದಕ್ಕೆ ಇದು ಸಕಾಲ.

* * * * * * *

ಒಬ್ಬ ಓದುಗ "ರಾಲೆಗಾಂಸಿದ್ದಿ ಒಂದು ಕಾಯಿಲೆ, ಅಣ್ಣಾ ಹಜಾರೆ ಒಂದು ವೈರಸ್" ಎಂದು ಅಂತರ್ಜಾಲದಲ್ಲಿ ಬರೆದಿದ್ದಾನೆ. ಅದರರ್ಥ ಈ ವೈರಸ್ ಭಾರತದ ಇತರ ಭಾಗಗಳನ್ನು ತಲುಪಿ ಅವುಗಳನ್ನೂ ಕೊಳಕು ಮಾಡುವ ಮೊದಲು ಅದನ್ನು ತಡೆಯಬೇಕು ಎಂಬುದು. ನಾನು ಅದನ್ನು ಈ ರೀತಿ ಹೇಳುತ್ತೇನೆ. ಅಣ್ಣಾ ಹಜಾರೆ ನಿಜವಾದ ಸಮಸ್ಯೆಯಲ್ಲ. ಭಾರತ ಇಂದು ಹೆದುರಿಸುತ್ತಿರುವ ಸಮಸ್ಯೆಯ ಲಕ್ಷಣ ಅವರು. ಆ ಸಮಸ್ಯೆ ಎಂದರೆ ಭಾರತದಲ್ಲಿ ಕಂಡುಬರುತ್ತಿರುವ ಬದಲಾವಣೆಯ ಪ್ರಕೃತಿ ಅಥವಾ ಮಾರ್ಪಾಡು ಹಲವರಿಗೆ ಒಪ್ಪಿಗೆಯಾಗುತ್ತಿಲ್ಲ.

ದಲಿತ ಉದ್ಯಮಿ ಮತ್ತು ಸಾಧಕರೊಬ್ಬರನ್ನು ನಾನು ಭೇಟಿಮಾಡಿದ್ದೆ. 25 ಕೋಟಿ ರೂಪಾಯಿಗಳಿಗಿಂತ ಹೆಚ್ಚು ವಹಿವಾಟುಳ್ಳ ಅವರು ಚೆನ್ನಾಗಿ ನೆಲೆಯಾಗಿರುವ ತಯಾರಕರು. ಅವರು ಹೈಡ್ರಾಲಿಕ್ ಪಂಪುಗಳ ತಯಾರಕರಾಗಿದ್ದು ತಮ್ಮ ಉತ್ಪಾದನೆಯ ಹೆಚ್ಚು ಭಾಗವನ್ನು ರಫ್ತು ಮಾಡುತ್ತಾರೆ. ಅವರು ಇನ್ನೂ ದೊಡ್ಡದಾಗಿ ಬೆಳೆಯುತ್ತಾರೆ. ಆದರೆ ಅವರ ಸಾಧನೆ ಬಗ್ಗೆ ಬರೆಯುತ್ತೇನೆಂದಾಗ ಅದನ್ನು ಅವರು ತಿರಸ್ಕರಿಸಿದರು. 'ಒಂದು ಸಾರಿ ಮೇಲ್ಜಾತಿ ಹಿಂದೂಗಳಿಗೆ ನನ್ನ ಜಾತಿಯ ಬಗ್ಗೆ ತಿಳಿದರೆ ಅವರು ನನ್ನ ಫ್ಯಾಕ್ಟರಿಯನ್ನು ಸುಡುತ್ತಾರೆ' ಅವರೆಂದರು. ಒಂದು ಗಂಟೆಕಾಲ ನಾನು ಅವರ ಜೊತೆ ಚರ್ಚಿಸಿದರೂ ಈ ಬಗ್ಗೆ ಅವರನ್ನು ಒಲಿಸಲಾಗಲಿಲ್ಲ. ನಾನು ಅವರ ಫ್ಯಾಕ್ಟರಿಯನ್ನು ಬಿಡುತ್ತಿದ್ದಂತೆ ಅವರು ನಾನೂ ಒಬ್ಬ ಅಂಬೇಡ್ಕರೈಟ್ ಎಂದೂ ಬಾಮ್ಸೆಫ್ ಚಳವಳಿಯಲ್ಲಿ ಕ್ರಿಯಾತ್ಮಕವಾಗಿರುವುದಾಗಿಯೂ ಹೇಳಿದರು. ಮತ್ತಿಬ್ಬರು ದಲಿತ ಉದ್ಯಮಿಗಳೂ ಇದೇ ನಿಲುವು ತೆಗೆದುಕೊಂಡರು.

ನಾನು ಈ ದಲಿತ ಮಹನೀಯರನ್ನು ಭೇಟಿ ಮಾಡಿ ಒಂದು ವರ್ಷಕ್ಕಿಂತ ಹೆಚ್ಚು ಸಮಯವಾಗಿದೆ. ಅಲ್ಲಿಂದೀಚೆಗೆ ಮುಖ್ಯವಾಹಿನಿ ಮಾಧ್ಯಮಗಳು ಮತ್ತು ವಾರ್ತಾವಾಹಿನಿಗಳು ಡಜನ್‌ಗಟ್ಟಲೆ ದಲಿತ ಉದ್ಯಮಿಗಳ ಬಗ್ಗೆ ಬರೆದಿದ್ದಾರೆ ಮತ್ತು ಪ್ರಸಾರ ಮಾಡಿದ್ದಾರೆ. ಅವರ ಫ್ಯಾಕ್ಟರಿಗಳನ್ನು ಯಾರೂ ಬೆಂಕಿ ಹಾಕಿ ಸುಟ್ಟಿಲ್ಲ. ನಿಜ ಹೇಳಬೇಕೆಂದರೆ ಮಾಧ್ಯಮದಲ್ಲಿ ಅವರ ಬಗ್ಗೆ ಬಂದ ಮೇಲೆ ಅವರು ಅನೇಕ ಹೊಸ ಮೇಲ್ಜಾತಿ ಹಿಂದೂ ಸ್ನೇಹಿತರನ್ನು ಪಡೆದುಕೊಂಡಿದ್ದಾರೆ.

ಭಾರತ ಬದಲಾಗುತ್ತಿದೆ! ಇನ್ನೂ ಜಾತಿ ಸಂಪೂರ್ಣವಾಗಿ ಅಳಿಸಿಹೋಗಿಲ್ಲವಾದರೂ ಅದು ಅನೇಕ ದಶಕಗಳ ಹಿಂದೆ ಇದ್ದಂತೆ ಬಿಗಿಯಾಗಿಲ್ಲ. ದಲಿತನೊಬ್ಬ ಮರ್ಸಿಡೀಸ್ ಅಥವಾ ಬಿ.ಎಂ.ಡಬ್ಲ್ಯೂ ಕಾರ್‌ನಲ್ಲಿ ತಿರುಗಾಡುತ್ತಾನೆಂದರೆ ಅವನು ಮೇಲ್ಜಾತಿಯವರ ವಾಸದ ಕೊಠಡಿಗಳಿಗೆ ಸ್ವಾಗತಿಸಲ್ಪಡುತ್ತಾನೆ ಎಂಬುದನ್ನು ದಲಿತರು ಅರಿಯಬೇಕು. ದಲಿತರು ಜಾತಿ ಪದ್ಧತಿ ಇನ್ನೂ ತನ್ನ ಹಿಡಿತವನ್ನು ಸಡಿಲಗೊಳಿಸಿಲ್ಲ ಎಂದುಕೊಂಡರೆ ಅವರ ತಿಳುವಳಿಕೆ ತಪ್ಪು.

ಸಾಮಾನ್ಯವಾಗಿ ನಿಷ್ಠಾವಂತರಾದ ದಲಿತರು ಹೊಸ ಬೆಳವಣಿಗೆಗಳಿಗೆ ಸ್ಪಂದಿಸಬೇಕು. ಭಾರತ ಬದಲಾಗುತ್ತಿದೆ ಮತ್ತು ಜಾತಿ ಪದ್ಧತಿ ಬಿರುಕು ಬಿಟ್ಟುಕೊಳ್ಳುತ್ತಿದೆ. ಒಂದು ಕ್ರೂರ ಸಾಮಾಜಿಕ ಪದ್ಧತಿಯಿಂದ ನೊಂದವರಾದ ದಲಿತರು ತಮ್ಮ ಸುತ್ತಲ ಸ್ಥಿತಿಗತಿಗಳನ್ನು ಗುರುತಿಸುವಲ್ಲಿ ತಪ್ಪುಮಾಡಬಾರದು. ಬಹಳಷ್ಟು ಜನ ದಲಿತರಲ್ಲದವರು ಮನೆ ಪರಿಚಾರಕರಾಗಿ (ಗುಡಿಸುವವರು ಮತ್ತು ಸ್ವಚ್ಛಗೊಳಿಸುವವರು) ಶಾಪಿಂಗ್ ಮಾಲ್‌ಗಳಲ್ಲಿ, ಸ್ಟಾರ್ ಹೋಟೆಲ್‌ಗಳಲ್ಲಿ, ಕಾರ್ಪೊರೇಟ್ ಆಫೀಸ್‌ಗಳಲ್ಲಿ ಕೆಲಸ ಮಾಡುತ್ತಿರುವುದಕ್ಕೆ ನನ್ನಲ್ಲಿ ಸಾಕ್ಷಿ ಇದೆ. ಸಣ್ಣ ಸಣ್ಣ ಪಟ್ಟಣಗಳ ರಸ್ತೆ ಬದಿಯ ಬಜಾರ್‌ಗಳಲ್ಲಿ ಬ್ಯೂಟಿ ಪಾರ್ಲರ್‌ಗಳನ್ನು ನಡೆಸುವ, ಮೇಲ್ಜಾತಿಯ ಮಹಿಳೆಯರಿಗೂ ಸಹ ಮಸಾಜ್ ಮುಂತಾದವುಗಳನ್ನು ನೀಡುತ್ತಾರೆ ಎನ್ನುವುದಕ್ಕೆ ನನ್ನಲ್ಲಿ ಸಾಕ್ಷ್ಯವಿದೆ. ದಲಿತ ಚಳವಳಿಗಳು ಇಂತಹ ಬೆಳವಣಿಗೆಗಳನ್ನು ಗಮನಿಸಬೇಕು. ಸಾಮಾನ್ಯ ದಲಿತರನ್ನು ಹೆದರಿಕೆಗೆ ಒಳಪಡಿಸುವ ಬದಲು ಅವರು ಮುಖ್ಯವಾಹಿನಿಗೆ ಬಂದು ಆದಷ್ಟು ಲಾಭ ಪಡೆದುಕೊಳ್ಳುವಂತೆ ನಾವು ಅವರನ್ನು ಪ್ರೋತ್ಸಾಹಿಸಬೇಕು.

ಕೇಡೆಣಿಸುವ ಕೆಲವು ಮೇಲ್ಜಾತಿ ಹಿಂದೂಗಳೂ ಇದ್ದಾರೆ. ಸುಮಾರು ಅರ್ಧ ದಶಕದ ಹಿಂದೆ ನಾನು ದೆಹಲಿಯಿಂದ ಲಕ್ನೊಗೆ ಪ್ರಯಾಣ ಮಾಡುತ್ತಿದ್ದೆ. ನಾನು ಪ್ರಯಾಣ ಮಾಡುತ್ತಿದ್ದುದು ಅತಿ ವೇಗದ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಮತ್ತು ನಾನು ಮೊದಲ ದರ್ಜೆಯ ಕಂಪಾರ್ಟ್‌ಮೆಂಟ್‌ನಲ್ಲಿದ್ದೆ. ಕೆಳದರ್ಜೆಯ ಕಂಪಾರ್ಟ್‌ಮೆಂಟ್‌ಗಳಲ್ಲಿ ಸೀಟು ಸಿಗುತ್ತಿರಲಿಲ್ಲವೆಂದೇನಲ್ಲ. ನಾನು ಲಕ್ನೊದಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕಿತ್ತು.

ಭಾರತೀಯ ರೈಲ್ವೆಯ ಕ್ಷಮೆ ಯಾಚಿಸುತ್ತೇನೆ. ನಾನು ಸಿಗರೇಟ್ ಸೇದುತ್ತಿದ್ದೆ. ಮತ್ತೊಂದು ತುದಿಯಲ್ಲಿ ಪ್ರವೇಶ ದ್ವಾರ ಮತ್ತು ಟಾಯ್ಲೆಟ್ ಇತ್ತು. ಪ್ರಯಾಣದ ಆರು ಗಂಟೆಗಳ ಕಾಲ ನಾನು ಅನೇಕ ಬಾರಿ ಸಿಗರೇಟ್ ಸೇದಬೇಕಾಗಿತ್ತು. ನಾನು ಆ ದ್ವಾರದತ್ತ ನಡೆದೆ.

ಅಲ್ಲಿ ದಲಿತರಲ್ಲದ ಮೂರು ಜನ ಸಿಗರೇಟ್ ಸೇದುವವರೂ ಇದ್ದರು. ಅವರ ಮಾತುಗಳನ್ನು ಆಲಿಸಿದೆ. ಇಲ್ಲೊಬ್ಬ ದಲಿತ ಪ್ರತಿನಿಧಿ ಇದ್ದಾನೆ ಎಂಬುದು ಗೊತ್ತಿಲ್ಲದೆ ಅವರು ತಮ್ಮ ಮಾತು ಮುಂದುವರೆಸಿದರು. ಅವರು ದಲಿತರ ಬಗ್ಗೆ ಮಾತನಾಡುತ್ತಿದ್ದರು. 'ಅವರೂ ಸಹ ತಮ್ಮ ಮಕ್ಕಳ ಜನ್ಮದಿನಾಚರಣೆಯ ಮಟ್ಟಕ್ಕೆ ಬಂದಿದ್ದಾರೆ. ಅವನು 25,000/-ರೂಗಳಿಗೂ ಹೆಚ್ಚು ಖರ್ಚುಮಾಡಿದ' ಒಬ್ಬ ದಲಿತೇತರ ಹೇಳಿದ. 'ನನ್ನ ಸಹೋದ್ಯೋಗಿ ಅವನ ಮದುವೆಯ ವಾರ್ಷಿಕ ಆಚರಣೆಗೆ ಅದಕ್ಕಿಂತಲೂ ಹೆಚ್ಚು ಖರ್ಚುಮಾಡಿದ' ಮತ್ತೊಬ್ಬ ಹೇಳಿದ.

ನಾನು ಅವರ ಭಾಷೆಯನ್ನು ಮತ್ತು ದೇಹದ ಹಾವಭಾವಗಳನ್ನು ಗಮನಿಸಿದೆ. ಅವರು ಈ ಹೇಳಿಕೆಗಳನ್ನು ಹೆಮ್ಮೆಯಿಂದೇನು ಆಡುತ್ತಿರಲಿಲ್ಲ. ಅವರು ಸಂತೋಷ ಪಡುವುದಕ್ಕಿಂತ ಆತಂಕಕ್ಕೊಳಗಾಗಿದ್ದರು. ದಲಿತರೂ ಸಹ ಜನ್ಮ ದಿನಗಳು, ಮದುವೆಗಳನ್ನು ತಮ್ಮ ಹಾಗೇ ಆಚರಿಸುತ್ತಾ ತಮ್ಮ ದಾರಿಯಲ್ಲೇ ನಡೆಯುತ್ತಿದ್ದಾರೆ ಎಂದು ವ್ಯಾಕುಲರಾಗಿದ್ದರು. ದಲಿತರ ಹಿಂದಿನ ಯಜಮಾನರೂ ಮತ್ತು ಶೋಷಕರೂ ಆದ ಅವರು, ನಾವು ಎಂತಹ ಒಳ್ಳೆಯ ಕಾಲಕ್ಕೆ ಬಂದಿದ್ದೇವೆ, ನಮ್ಮ ಹಿಂದಿನ ಸೇವಕರೂ ಸಹ ಈಗ ಸ್ವತಂತ್ರರಾಗಿದ್ದಾರೆ ಮತ್ತು ಅವರಲ್ಲನೇಕರು ಜೀವನದ ಉತ್ತಮ ವಸ್ತುಗಳನ್ನು ಸವಿಯುತ್ತಿದ್ದಾರೆ ಎಂದು ಹೇಳುತ್ತ ಹೆಮ್ಮೆ ಪಡಬೇಕಾಗಿತ್ತು.

ಅಣ್ಣಾ ಹಜಾರೆಯವರ ಚಳವಳಿ ಮೇಲ್ಜಾತಿಯವರ ಈ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಈ ಮನಸ್ಥಿತಿ ಭಾರತದ ಬದಲಾಗುತ್ತಿದೆ ಎಂಬುದರಿಂದ ಚಿಂತೆಗೊಳಗಾಗಿದೆ

ಅಣ್ಣಾ ಹಿಂಬಾಲಕರೆ ನೀವು ಗುರುತ್ವಾಕರ್ಷಣ ನಿಯಮವನ್ನು ಪಲ್ಲಟಗೊಳಿಸುವ ಶಕ್ತಿ ಹೊಂದಿದ್ದೀರಿ ಮತ್ತು ಕೆಲವು ಕ್ಷಣಗಳಾದರೂ ಸತ್ಯಸಂಧರಾಗಿರುತ್ತೀರಿ ಎಂದು ನನಗೆ ಭಾಷೆಕೊಡಿ – ನಾನು ನನ್ನ ಮನೆಯ ಸೇವಕಿ ಸೆಲ್‌ಫೋನ್ ಹೊಂದಿರುವುದನ್ನು ಕಂಡು ಸಂತೋಷಗೊಂಡೆ ಎಂದು ಒಮ್ಮೆ ಹೇಳಿ! ಸೋತಿರಾ?

ಭಾರತ ಇಂದು ಎದುರಿಸುತ್ತಿರುವ ಸಮಸ್ಯೆ ಇದು. ನಮ್ಮನ್ನು ನಾವೇ ಕೇಳಿಕೊಳ್ಳೋಣ ಇಂದು ಮಿಶ್ರ ತಳಿಯ ಆಹಾರದ ಬಗ್ಗೆ ಯಾರು ಹೆದರುತ್ತಾರೆ? ನಮ್ಮನ್ನೆ ನಾವು ಕೇಳಿಕೊಳ್ಳೋಣ. ಸಾವಯವ ಆಹಾರದ ಬಗ್ಗೆ ಅತೀವ ಮೆಚ್ಚುಗೆ ವ್ಯಕ್ತಪಡಿಸುವವರು ಯಾರು? ನಮ್ಮನ್ನೆ ನಾವು ಕೇಳಿಕೊಳ್ಳೋಣ. ಪ್ರೇಮಿಗಳ ದಿನಾಚರಣೆ (ವ್ಯಾಲೆಂಟೈನ್ಸ್ ಡೇ)ಯಂದು ಪುಷ್ಪಗುಚ್ಛ ಹಂಚಿಕೊಳ್ಳುವ ಬಗ್ಗೆ ಭಯಭೀತರಾಗಿರುವವರು ಯಾರು? ನಮ್ಮನ್ನೆ ನಾವು ಕೇಳಿಕೊಳ್ಳೋಣ. ಯಾರು ದ್ವೇಷಕಾರುತ್ತಾರೆ ಮುಂತಾಗಿ.

ಹಿಂದಿನ ದಿನಗಳನ್ನು ಮೇಲ್ಜಾತಿಯ ಒಂದು ಗುಂಪು ಸತತವಾಗಿ ನೆನೆಸಿಕೊಳ್ಳುತ್ತದೆ. ದೇಶೀ ಆಹಾರ, ದೇಶೀ ತರಕಾರಿಗಳು, ಗ್ರಾಮೀಣ ಬದುಕು ಹೀಗೆ ಭೂತಕಾಲದ ಬಗ್ಗೆ ಬಹಳ ಹೆಮ್ಮೆಪಡುವ ಮೇಲ್ಜಾತಿಗಳ ಒಂದು ಗುಂಪು ಇದೆ ಎಂಬುದು ಸತ್ಯ. ಹಾಗೆಯೇ ಜಾತಿ ಪದ್ಧತಿಯಂತ ಹಿಂದಿನ ಸಾಮಾಜಿಕ ಸಂಸ್ಥೆಗಳನ್ನು ಬಹಳ ನೆನಪಿಸಿಕೊಳ್ಳುವ ಒಂದು ಮೇಲ್ಜಾತಿ ಗಳ ಗುಂಪು ಪ್ರಜಾಪ್ರಭುತ್ವದಿಂದ ಆತಂಕಕ್ಕೊಳಗಾಗಿದೆ. ಅಣ್ಣಾನಂತಹ ಒಬ್ಬ ಮನುಷ್ಯ ಸರಳತೆಯ ಆಯುಧವನ್ನು ಹಿಡಿದು ಸಂಸತ್ತು ಮತ್ತು ರಾಜಕಾರಣಿಗಳ ಮೇಲೆ ಹಲ್ಲೆ ಮಾಡಲು ಹೊರಟಾಗ ಮೇಲ್ಜಾತಿಗಳ ಈ ಗುಂಪು ಅವರನ್ನು ಸೇರಿಕೊಳ್ಳುತ್ತದೆ. ಇನ್ನೂ ಎಷ್ಟೊ ಜನ ಅಣ್ಣಾಗಳಿರಬಹುದು ನಮ್ಮ ನಡುವೆ. ಹಾಗೆಯೇ ಇನ್ನೂ ಅನೇಕ ಪ್ರಜಾಪ್ರಭುತ್ವ ವಿರೋಧಿ ಚಳವಳಿಗಳೂ ಬರಬಹುದು.

ಮೇಲ್ಜಾತಿಗಳಿಗೆ ಒಂದು ಬೃಹತ್ತಾದ ಸುಧಾರಣಾ ಚಳವಳಿಬೇಕಾಗಿದೆ. ಆ ಚಳವಳಿಯ ಮೂಲಕ ಆ ಸಮುದಾಯದ ಸುಶಿಕ್ಷಿತ ಸದಸ್ಯರು ಆ ಜಾತಿಗಳು ತಮ್ಮ ಹಿಂದಿನದನ್ನು ಮರೆತು ಪ್ರಜಾಪ್ರಭುತ್ವವನ್ನು ಅನುಭವಿಸಬೇಕೆಂದು ತಿಳಿಸಿಕೊಡಬೇಕು. ಅನೇಕರಿಗೆ ಭೂತಕಾಲ ಬಹಳ ಕ್ರೂರವಾಗಿತ್ತು. ಅಣ್ಣಾ ಅವರನ್ನು ನಿಭಾಯಿಸುವ ಅತ್ಯುತ್ತಮ ವಿಧಾನ ಇದು. □

ನಸ್ರುದ್ದೀನನ್ನು ಮಹಾರಾಜ ಮಾತನಾಡಿಸಿದ್ದಾರೆ ಎಂಬ ಅದ್ಭುತ ಸುದ್ದಿಯನ್ನು ಊರಿನ ಇತರರಿಗೆ ತಿಳಿಸಲು ಅವನನ್ನು ಸುತ್ತುವರಿದ ಹಳ್ಳಿಯ ಜನರೆಲ್ಲಾ ಓಡಿದರು. ಆದರೆ ಆ ಹಳ್ಳಿಯ ಗಮಾರನೊಬ್ಬ ಮಾತ್ರ ಅಲ್ಲೇ ಇದ್ದು ಮಹಾರಾಜರು ನಸ್ರುದ್ದೀನ್‌ನನ್ನು ಏನೆಂದು ಮಾತನಾಡಿಸಿದರು ಎಂಬುದನ್ನು ಹೇಳುವಂತೆ ಗೋಗರೆದ. ಅವನ ಕಾಟ ತಾಳಲಾರದೆ ನಸ್ರುದ್ದೀನ್ ಕೊನೆಗೆ, 'ಮಹಾರಾಜರು ಅಲ್ಲಿರುವ ಎಲ್ಲರಿಗೂ ಕೇಳಿಸುವಂತೆ, ಸ್ಪಷ್ಟವಾಗಿ ನನ್ನನ್ನು ಕುರಿತು – ದಾರಿಗೆ ಅಡ್ಡ ಬರಬೇಡ ತೊಲಗಾಚೆ ಕತ್ತೆ! ಎಂದರು' ಎಂದು ಹೇಳಿದ.

ತೈಮೂರನ ಕೊಡುಗೆ –೨

ದೊರೆ ತೈಮೂರನ ಆನೆಯ ಕೊಡುಗೆ ಕೆಲದಿನಗಳಲ್ಲಿ ಆ ಗ್ರಾಮಸ್ಥರಿಗೊಂದು ತಲೆನೋವಾಯಿತು. ಆ ಆನೆ ಗ್ರಾಮಸ್ಥರ ಹೊಲಗದ್ದೆಗಳಿಗೆ ನುಗ್ಗಿ ಎಲ್ಲ ಬೆಳೆಗಳನ್ನು ತಿಂದುಹಾಕುತ್ತಿತ್ತು. ಆದರೆ ತೈಮೂರನ ಕ್ರೌರ್ಯದ ಬಗ್ಗೆ ತಿಳಿದಿದ್ದ ಜನರು ಆ ಆನೆಗೆ ಏನೂ ಮಾಡುವಂತಿರಲಿಲ್ಲ. ಎಲ್ಲರೂ ಮುಲ್ಲಾ ನಸ್ರುದ್ದೀನ್‌ನಿಂದಾಗಿಯೇ ಈ ಕೊಡುಗೆಯ ಹೊರೆ ತಮ್ಮ ಮೇಲೆ ಬಿದ್ದಿದೆಯೆಂದು ಆತನನ್ನು ಶಪಿಸಿ ಆ ಆನೆಯನ್ನು ತೈಮೂರನಿಗೇ ಹಿಂದಿರುಗಿಸುವಂತೆ ಕೇಳಿಕೊಂಡರು.

ಗ್ರಾಮಸ್ಥರ ಪಾಡು ನೋಡಿದ್ದ ನಸ್ರುದ್ದೀನ್ ಒಪ್ಪಿಕೊಂಡ, ಆದರೆ ಒಂದು ಷರತ್ತು ಹಾಕಿದ. ಆ ಷರತ್ತು ಏನೆಂದರೆ, ತೈಮೂರನ ಬಳಿ ಹೋದಾಗ ಅವನ ಬೆಂಬಲಕ್ಕೆ ಅವರೂ ಆತನ ಜೊತೆಗೆ ಬರಬೇಕೆಂದು ಹೇಳಿದ. ಗ್ರಾಮಸ್ಥರೂ ಒಪ್ಪಿಕೊಂಡರು. ನಸ್ರುದ್ದೀನ್ ಮುಂದೆ ಹೊರಟಂತೆ ಜನರು ಹಿಂದೆ ಬಂದರು. ನಸ್ರುದ್ದೀನ್ ತೈಮೂರನ ಗುಡಾರದ ಬಳಿ ಹೋದ. ತೈಮೂರ್ ಆ ದಿನ ಬಹಳ ಸಿಟ್ಟಿನಿಂದ ಇರುವಂತಿದ್ದ. ನಸ್ರುದ್ದೀನ್‌ನನ್ನು ನೋಡಿದವನೆ, 'ಏನು ಬೇಕು?' ಎಂದು ಅರಚಿದ. ನಿಂತಲ್ಲೇ ನಡುಗಿದ ನಸ್ರುದ್ದೀನ್ ಧೈರ್ಯ ತಂದುಕೊಂಡು,

'ಅದು... ನೀವು ಕೊಡುಗೆಯಾಗಿ ಕೊಟ್ಟಿರುವ ಆನೆ...' ಎಂದ.

'ಹೌದು, ಏನಾಗಿದೆ ಆನೆಗೆ? ನನ್ನ ಕೊಡುಗೆ ಚೆನ್ನಾಗಿಲ್ಲವೇನು?' ತೈಮೂರ್ ಕೇಳಿದ.

ನಸ್ರುದ್ದೀನ್ ತಿರುಗಿ ನೋಡಿದ. ಅವನ ಹಿಂದೆ ಬಂದ ಗ್ರಾಮಸ್ಥರಲ್ಲಿ ಒಬ್ಬನೂ ಅಲ್ಲಿರಲಿಲ್ಲ. ಗ್ರಾಮಸ್ಥರು ತನಗೆ ಕೈಕೊಟ್ಟದ್ದರಿಂದ ನಸ್ರುದ್ದೀನ್‌ಗೆ ಅತೀವ ಸಿಟ್ಟು ಬಂತು. ಆ ಕ್ಷಣ ತೈಮೂರನಿಂದ ತಪ್ಪಿಸಿಕೊಳ್ಳಲು ಹಾಗೂ ಗ್ರಾಮಸ್ಥರಿಗೆ ಬುದ್ಧಿ ಕಲಿಸಲು ಒಂದೇ ಕಲ್ಲಿಗೆ ಎರಡು ಹಕ್ಕಿ ಬೀಳಿಸುವ ಉಪಾಯ ಹುಡುಕಿದ.

'ನೀವು ಕೊಟ್ಟ ಆನೆಯ ಬಗ್ಗೆ ತೊಂದರೆಯೇನಿಲ್ಲ... ಅದು ಪಾಪ ಒಂಟಿಯಾಗಿದೆ, ಅದಕ್ಕೂ ಬೇಸರ. ಆದ್ದರಿಂದ ಅದಕ್ಕೆ ಜೊತೆಯಾಗಿ ಒಂದು ಹೆಣ್ಣಾನೆ ಕೊಡು ವಿರೇನೋ ಎಂದು ಕೇಳಲು ಬಂದೆ' ಎಂದ ನಸ್ರುದ್ದೀನ್ ತೈಮೂರನಿಗೆ ಕೈ ಮುಗಿಯುತ್ತಾ.

ನೀನು ಹೇಳಿದ್ದು ಸರಿ

ಆ ಊರಿನ ನ್ಯಾಯಾಧೀಶ ತುರ್ತು ಕೆಲಸದ ಮೇಲೆ ಬೇರೆ ಊರಿಗೆ ಹೋಗಬೇಕಾಯಿತು. ಆ ದಿನಕ್ಕೆ ಮಾತ್ರ ನಸ್ರುದ್ದೀನ್‌ನನ್ನು ತಾತ್ಕಾಲಿಕವಾಗಿ ನ್ಯಾಯಾಧೀಶನ ಕಾರ್ಯ ನಿರ್ವಹಿಸುವಂತೆ ಕೋರಲಾಯಿತು. ನಸ್ರುದ್ದೀನ್ ನ್ಯಾಯಾಧೀಶರ ಕುರ್ಚಿಯ ಮೇಲೆ ಗತ್ತಿನಿಂದ ಕೂತು, ಸುತ್ತಲೂ ಆಸೀನರಾಗಿದ್ದ ಜನರನ್ನು ಒಮ್ಮೆ ಗಂಭೀರವಾಗಿ ನೋಡಿ, ಆ ದಿನದ ವಿಚಾರಣೆಯನ್ನು ಪ್ರಾರಂಭಿಸುವಂತೆ ಆದೇಶ ನೀಡಿದ.

ವಾದಿಯ ವಾದವನ್ನು ಆಲಿಸಿದ ನಂತರ 'ನೀನು ಹೇಳಿದ್ದು ಸರಿ' ಎಂದ ನ್ಯಾಯಾಧೀಶ ನಸ್ರುದ್ದೀನ್.

ಪ್ರತಿವಾದಿಯ ವಾದವನ್ನೂ ಆಲಿಸಿದ ನಂತರ 'ನೀನು ಹೇಳಿದ್ದು ಸರಿ' ಎಂದ.

ವಿಚಾರಣೆ ನೋಡುತ್ತಿದ್ದ ಜನರಲ್ಲಿ ಒಬ್ಬಾತ, 'ಇಬ್ಬರೂ ಹೇಳಿದ್ದು ಅದು ಹೇಗೆ ಸರಿಯಾಗಲು ಸಾಧ್ಯ?' ಎಂದು ಎದ್ದುನಿಂತು ಪ್ರಶ್ನಿಸಿದ.

'ಹೌದು, ನೀನು ಹೇಳಿದ್ದೂ ಸರಿ' ಎಂದ ನ್ಯಾಯಾಧೀಶ ನಸ್ರುದ್ದೀನ್.

ರಾಜನ ಭೇಟಿ

ರಾಜಧಾನಿಗೆ ಹೋಗಿದ್ದ ನಸ್ರುದ್ದೀನ್ ತನ್ನ ಹಳ್ಳಿಗೆ ಹಿಂದಿರುಗಿದ. ಹಳ್ಳಿಯ ಜನ ಎಲ್ಲಾ ನಗರದ ಆತನ ಅನುಭವಗಳನ್ನು ಹೇಳುವಂತೆ ಅವನನ್ನು ಸುತ್ತುವರಿದರು. 'ಈಗ ಸದ್ಯಕ್ಕೆ, ಮಹಾರಾಜರು ನನ್ನನ್ನು ಮಾತನಾಡಿಸಿದರು ಎಂದಷ್ಟೇ ಹೇಳಬಲ್ಲೆ' ಎಂದ ನಸ್ರುದ್ದೀನ್. ತಮ್ಮ ಹಳ್ಳಿಯ ನಸ್ರುದ್ದೀನನ್ನು ಮಹಾರಾಜ ಮಾತನಾಡಿಸಿದ್ದಾರೆ ಎಂಬ ಅದ್ಭುತ ಸುದ್ದಿಯನ್ನು ಊರಿನ ಇತರರಿಗೆ ತಿಳಿಸಲು ಅವನನ್ನು ಸುತ್ತುವರಿದ ಹಳ್ಳಿಯ ಜನರೆಲ್ಲಾ ಓಡಿದರು. ಆದರೆ ಆ ಹಳ್ಳಿಯ ಗಮಾರನೊಬ್ಬ ಮಾತ್ರ ಅಲ್ಲೇ ಇದ್ದು ಮಹಾರಾಜರು ನಸ್ರುದ್ದೀನ್‌ನನ್ನು ಏನೆಂದು ಮಾತ ನಾಡಿಸಿದರು ಎಂಬುದನ್ನು ಹೇಳುವಂತೆ ಗೋಗರೆದ. ಅವನ ಕಾಟ ತಾಳಲಾರದೆ ನಸ್ರುದ್ದೀನ್ ಕೊನೆಗೆ, 'ಮಹಾರಾಜರು ಅಲ್ಲಿರುವ ಎಲ್ಲರಿಗೂ ಕೇಳಿಸುವಂತೆ, ಸ್ಪಷ್ಟವಾಗಿ ನನ್ನನ್ನು ಕುರಿತು– ದಾರಿಗೆ ಅಡ್ಡ ಬರಬೇಡ ತೊಲಗಾಚೆ ಕತ್ತೆ! ಎಂದರು' ಎಂದು ಹೇಳಿದ. ಆ ಹಳ್ಳಿಯ ಗಮಾರ ನಿಗೆ ಮಹಾರಾಜರು ಮಾತನಾಡಿಸಿದ ವ್ಯಕ್ತಿಯನ್ನು ಕಂಡು ತಾನೇ ಮಹಾರಾಜನನ್ನು ಕಂಡ ಅನುಭವವಾಗಿ ಕೃತಾರ್ಥನಾದಂತಾಯಿತು.

ಯಾರೂ ಇಲ್ಲ

ದರ್ವೇಶಿ ನಸ್ರುದ್ದೀನ್ ಆ ವೈಭವೋಪೇತ ಕಾರ್ಯಕ್ರಮಕ್ಕೆ ಅದು ಪ್ರಾರಂಭವಾಗುವ ಮೊದಲೇ ಹೋಗಿ ಅಲ್ಲಿದ್ದ ಅತ್ಯಂತ ವೈಭವದ ಆಸನದ ಮೇಲೆ ಕುಳಿತುಕೊಂಡ. ಅಲ್ಲೇ ಪಕ್ಕದಲ್ಲೇ ಇದ್ದ ಸೇನಾಧಿಪತಿ ನಸ್ರುದ್ದೀನನ ಬಳಿ ಹೋಗಿ, 'ಸ್ವಾಮಿ ಆ ಆಸನಗಳನ್ನು ಸನ್ಮಾನ್ಯ ಅತಿಥಿಗಳಿಗೆ ಕಾಯ್ದಿರಿಸಲಾಗಿದೆ' ಎಂದ.

'ನಾನು ಆ ಅತಿಥಿಗಳಿಗಿಂತ ಹಿರಿಯವನು' ಎಂದ ನಸ್ರುದ್ದೀನ್ ಅತೀವ ಆತ್ಮವಿಶ್ವಾಸದಿಂದ.

'ಹಾಗಾದರೆ ನೀವು ರಾಜತಂತ್ರಜ್ಞರೆ?'

'ಅವರಿಗಿಂತ ಹೆಚ್ಚಿನವನು ನಾನು!'

'ಹೌದೆ? ಹಾಗಾದರೆ ನೀವು ಮಂತ್ರಿಗಳೇ ಆಗಿರಬೇಕು?'

'ಇಲ್ಲ, ಅದಕ್ಕಿಂತ ದೊಡ್ಡ ಹುದ್ದೆ ನನ್ನದು!'

'ಓಹ್! ಹಾಗಾದರೆ ನೀನು ರಾಜನೇ ಆಗಿರಬೇಕು,' ಎಂದ ಸೇನಾಧಿಪತಿ ಲೇವಡಿ ಮಾಡುವವನಂತೆ.

'ಇಲ್ಲ, ಅದಕ್ಕಿಂತ ಹೆಚ್ಚಿನದು!'

'ಏನು?! ನೀನು ರಾಜನಿಗಿಂತ ದೊಡ್ಡವನೆ?! ಈ ರಾಜ್ಯದಲ್ಲಿ ರಾಜನಿಗಿಂತ ದೊಡ್ಡವರು ಯಾರೂ ಇಲ್ಲ!' ಎಂದ ಸೇನಾಧಿಪತಿ.

'ಹಾ, ಈಗ ಸರಿಯಾಗಿ ಹೇಳಿದೆ. ನಾನೇ ಆ ಯಾರೂ ಇಲ್ಲ!' ಎಂದ ನಸ್ರುದ್ದೀನ್.

ಪವಾಡ

ಮತ್ತೊಂದು ಹಳ್ಳಿಗೆ ಪ್ರವಾಸ ಹೋಗಿದ್ದ ನಸ್ರುದ್ದೀನ್ ತನ್ನ ಬಳಿಯಿದ್ದ ಕುರಾನ್‌ನ ತನ್ನ ಅಚ್ಚುಮೆಚ್ಚಿನ ಪ್ರತಿಯನ್ನು ಎಲ್ಲೋ ಕಳೆದುಕೊಂಡ. ಕೆಲವು ವಾರಗಳ ನಂತರ ಮೇಕೆಯೊಂದು ನಸ್ರುದ್ದೀನನ ಮನೆ ಮುಂದೆ ಬಂದು ನಿಂತಿತು. ಅದರ ಬಾಯಲ್ಲಿ ನಸ್ರುದ್ದೀನ್ ಕಳೆದುಕೊಂಡ ಕುರಾನ್ ಗ್ರಂಥವಿತ್ತು.

ನಸ್ರುದ್ದೀನ್‌ಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಮೇಕೆಯ ಬಾಯಿಯಿಂದ ಆ ಅಮೂಲ್ಯ ಗ್ರಂಥವನ್ನು ತೆಗೆದುಕೊಂಡ ನಸ್ರುದ್ದೀನ್ ತನ್ನ ತಲೆ ಮೇಲೆತ್ತಿ ಆಕಾಶದೆಡೆಗೆ ನೋಡುತ್ತಾ, 'ಹೋ! ಎಂಥಾ ಪವಾಡ!' ಎಂದು ಉದ್ಗರಿಸಿದ.

'ಅದರಲ್ಲಿ ಪವಾಡವೇನಿಲ್ಲ,' ಹೇಳಿತು ಮೇಕೆ. 'ನೋಡು ಪುಸ್ತಕದ ಒಳರಕ್ಷಾಪುಟದ ಮೇಲೆ ನಿನ್ನ ಹೆಸರು ಬರೆದಿದೆ.' □

'SAMVADA' Kannada Monthly, Decmber 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಸಹಕಾರ ವಲಯದಲ್ಲಿ

ಐತಿಹಾಸಿಕ ಬದಲಾ

ಕರ್ನಾಟಕ ಮುನ್ನಡೆಯುತ್ತಿದೆ

ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಅನ್ನು ಮಂಡಿಸಲಾಗಿದೆ

- 2011-12ನೇ ಸಾಲಿನ ಕೃಷಿ ಬಜೆಟ್‌ನಲ್ಲಿ ರಾಜ್ಯದ ರೈತರಿಗೆ ಶೇ. 1ರ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲ ನೀಡುವ ಐತಿಹಾಸಿಕ ತೀರ್ಮಾನವನ್ನು ಕೈಗೊಂಡಿರುತ್ತಾರೆ.
- ಏಪ್ರಿಲ್ 2011ರ ಮಾಹೆಯಲ್ಲಿ ರಾಜ್ಯದ 1,51,533 ರೈತರಿಗೆ ಶೇ.1ರ ಬಡ್ಡಿದರದಲ್ಲಿ ರೂ.504 ಕೋಟಿಗಳ ಅಲ್ಪಾವಧಿ ಕೃಷಿ ಬೆಳೆಸಾಲ ನೀಡಲಾಗಿದೆ.
- 2011-12ನೇ ಸಾಲಿನಲ್ಲಿ 18 ಲಕ್ಷ ರೈತರಿಗೆ ಶೇ. 1ರ ಬಡ್ಡಿದರದಲ್ಲಿ ರೂ.5,900 ಕೋಟಿಗಳ ಬೆಳೆ ಸಾಲದ ಗುರಿ ಹೊಂದಲಾಗಿದೆ.
- ಸ್ವಸಹಾಯ ಗುಂಪುಗಳಿಗೆ ಶೇ. 4ರ ಬಡ್ಡಿದರದ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ರೂ. 1260.00 ಕೋಟಿಗಳ ಹಣವನ್ನು ಸಾಲವಾಗಿ ನೀಡಲಾಗಿದೆ.
- ಅಡಿಕೆ ಬೆಳೆಗಾರರ [illegible] ರೂ. 2 ಲಕ್ಷ [illegible] ಕಳೆದ 3 ವರ್ಷಗಳಲ್ಲಿ ಸರ್ಕಾರವು ರೂ.616.27 ಕೋಟಿಗಳನ್ನು ಬಿಡುಗಡೆ ಮಾಡಿದೆ.
- ಪ್ರೊ. ವೈದ್ಯನಾಥನ್ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಸಹಕಾರ ಕಾಯ್ದೆಗೆ ಸಮಗ್ರ ತಿದ್ದುಪಡಿ ತರಲಾಗಿದೆ.
- ವೈದ್ಯನಾಥನ್ ವರದಿ ಪ್ಯಾಕೇಜ್ ಅನುಷ್ಠಾನದಡಿ 4253 ಕೃಷಿ ಪತ್ತಿನ ಸಹಕಾರ ಸಂಘಗಳ ಪುನಶ್ಚೇತನಕ್ಕಾಗಿ [illegible] ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಅನುದಾನವನ್ನು [illegible] ರೂ. 712.52 ಕೋಟಿ ಹಣವನ್ನು ಕೃಷಿ ಪತ್ತಿನ ಸಂಘಗಳಿಗೆ ಬಿಡುಗಡೆ ಮಾಡಿದೆ.
- ರಾಜ್ಯದಲ್ಲಿ 18,16,019 ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು ರೈತರಿಗೆ ವಿತರಿಸಲಾಗಿದ್ದು, ಇವರೆಲ್ಲರನ್ನೂ ವೈಯಕ್ತಿಕ ಅಪಘಾತ ವಿಮೆಗೆ ಒಳಪಡಿಸಲಾಗಿದೆ.
- ಯಶಸ್ವಿನಿ ಯೋಜನೆಯಡಿ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ರೂ. 90.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 1,92,146 ರೈತ ಸಹಕಾರಿಗಳಿಗೆ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ.
- ಶೇ. 6ರ ಬಡ್ಡಿ ದರದಲ್ಲಿ ಹೈನುಗಾರಿಕೆ ಯೋಜನೆಗಳಿಗೆ ಹೈನುರಾಸು ಮತ್ತು ಕುರಿ ಸಾಕಾಣಿಕೆಗಾಗಿ ಮಧ್ಯಮಾವಧಿ ಸಾಲ ಯೋಜನೆಯನ್ನು ಜಾರಿಗೆ ತರಲಾಗಿದೆ.
- 350 [illegible] ಸಹಕಾರ ಸಂಘಗಳಲ್ಲಿ ರಾಜ್ಯದ 131 ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅಪೆಕ್ಸ್ ಬ್ಯಾಂಕಿನ 31 ಶಾಖೆಗಳಲ್ಲಿ ಇ-ಸ್ಟಾಂಪಿಂಗ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಶಾಖೆಗಳಲ್ಲಿ ಇ-ಸ್ಟಾಂಪಿಂಗ್ ಸದ್ಯದಲ್ಲೇ ಪ್ರಾರಂಭವಾಗಲಿದೆ.
- ಸಣ್ಣ ಮತ್ತು ಅತಿಸಣ್ಣ ಕಾಫಿ ಬೆಳೆಗಾರ ರೈತರಿಗೆ ಭಾರತ ಸರ್ಕಾರದ ಕಾಫಿ ಸಾಲ ಮನ್ನಾ ಪ್ಯಾಕೇಜಿನ [illegible]. ಹಾಸನ ಮತ್ತು ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ [illegible] ಬ್ಯಾಂಕಿಗೆ ಸರ್ಕಾರದ ವತಿಯಿಂದ ಒಟ್ಟು ರೂ.70.59 ಕೋಟಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ.
- ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘದಿಂದ ರೈತರಿಗೆ ಗ್ರೂಪ್ ಇನ್ಶೂರೆನ್ಸ್, ಆಕ್ಸಿಡೆಂಟ್ ಪಾಲಿಸಿ ಮತ್ತು ಮಹಿಳಾ ಸಾಲ ಪರಿಹಾರ ವಿಮಾ ಯೋಜನೆ ಎಂಬ 2 ಹೊಸ ಪಾಲಿಸಿಗಳನ್ನು ಜಾರಿಗೆ ತರಲಾಗಿದೆ.
- ರಾಜ್ಯದ ಅಸಂಘಟಿತ ವಲಯದ ಸಣ್ಣ ಮತ್ತು ಅತಿಸಣ್ಣ ವ್ಯಾಪಾರಸ್ಥರಿಗೆ ಸ್ವಸಹಾಯ ಗುಂಪುಗಳ ಮೂಲಕ ಶೇ.4ರ ದರದಲ್ಲಿ ಸಾಲ ವಿತರಣೆ ಮಾಡಲಾಗುತ್ತಿದೆ. ಇದಕ್ಕಾಗಿ ಸರ್ಕಾರವು ರೂ. 40.00 ಕೋಟಿಗಳ ಅನುದಾನ ನೀಡಿದೆ.

ಶ್ರೀ ಡಿ.ವಿ. ಸದಾನಂದಗೌಡ
ಸನ್ಮಾನ್ಯ ಮುಖ್ಯಮಂತ್ರಿಗಳು

2010-11ನೇ ಸಾಲಿನಲ್ಲಿ ಇಲಾಖೆಯಲ್ಲಿ ಪ್ರಪ್ರಥಮ ಬಾರಿಗೆ 8 ಜಿಲ್ಲೆಗಳಲ್ಲಿ ಶೇ.100ರಷ್ಟು ಲೆಕ್ಕಪರಿಶೋಧನಾ ಪ್ರಗತಿ ಸಾಧಿಸಲಾಗಿದೆ. ಈ ಪ್ರಕ್ರಿಯೆ ಮುಂದುವರೆದಂತೆ 2011-12ನೇ ಸಾಲಿನಲ್ಲಿ ಇನ್ನೂ 5 ಜಿಲ್ಲೆಗಳಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸುವ ಗುರಿಯನ್ನು ಹೊಂದಲಾಗಿದೆ. 2011-12ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿನ ಎಲ್ಲಾ ಕಾರ್ಯನಿರತ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ವರದಿಗಳು ಸರ್ವ ಸದಸ್ಯರ ಸಭೆಗೆ ಲಭ್ಯವಾಗುವಂತೆ ಸೆಪ್ಟೆಂಬರ್ 2011ರೊಳಗಾಗಿ ವರದಿ ನೀಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಾಧನೆಗಳು

ಸಹಕಾರ ತತ್ವಗಳ ಪ್ರಚಾರಕ್ಕಾಗಿ ಹಾಗೂ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಅಗತ್ಯವಾದ ಶಿಕ್ಷಣ, ತರಬೇತಿ ಮತ್ತು ಸಹಕಾರ ಕ್ಷೇತ್ರದ ಚಟುವಟಿಕೆಗಳಿಗೆ ಪ್ರಚಾರ ನೀಡುವುದು ಮಹಾಮಂಡಳದ ಮುಖ್ಯ ಉದ್ದೇಶವಾಗಿ[illegible] ಅವುಗಳಲ್ಲಿ ಮುಖ್ಯವಾದವುಗಳೆಂದರೆ:

- ಸಹಕಾರ ಶಿಕ್ಷಣ ಯೋಜನೆಯಡಿ ಸದಸ್ಯ ಶಿಕ್ಷಣ ಮತ್ತು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ, ಸದಸ್ಯರುಗಳಿಗೆ, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳಿಗೆ, ಮಹಿಳಾ ಮತ್ತು ಪರಿಶಿಷ್ಟ ಜಾ[illegible] ಪರಿಶಿಷ್ಟ ವರ್ಗದ ಸದಸ್ಯರುಗಳಿಗೆ ಶಿಕ್ಷಣ ನೀಡುವುದು.
- ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಪ್ರಚಾರ ನೀಡುವ ಕಾರ್ಯವನ್ನು ವಾರಪತ್ರಿಕೆ ಹೊರಡಿಸುವ ಮೂಲಕ ಮಾಡುವುದು ಇತ್ಯಾದಿ.

ಕಳೆದ 3 ವರ್ಷಗಳಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮುಖ್ಯ [illegible] ಸಾಧನೆಗಳು

- 2008-09, 2009-10 ಮತ್ತು 2010-11ನೇ ಸಾಲಿನಲ್ಲಿ ಮಹಾಮಂಡಳದ ವತಿಯಿಂದ ನಡೆಸಲಾದ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ 2013 ತರಗತಿಗಳನ್ನು ನಡೆಸಿದ್ದು, 90449 ಪ್ರತಿನಿಧಿಗಳು ಶಿಕ್ಷಣ ಪಡೆದಿರುತ್ತಾರೆ.
- ಮುಂದಿನ 5 ವರ್ಷಗಳಲ್ಲಿ ಸಹಕಾರ ಕ್ಷೇತ್ರದ ಎಲ್ಲಾ ಸದಸ್ಯರುಗಳಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುವ ಯೋಜನೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಹಮ್ಮಿಕೊಂಡಿರುತ್ತದೆ.

ಅಭಿವೃದ್ಧಿಯೇ ಸರ್ಕಾರದ ಮಂತ್ರ   ಸಹಕಾರ ರಂಗ – ಸಮಾಜದ ಅಂಗ   ಕರ್ನಾಟಕ ವಾರ್ತೆ